ಧಾರವಾಡ ಜಿಲ್ಲಾ

ಸ್ಕೂಲ ಬೋರ್ಡ ಪತ್ರಿಕೆ

DHARWAR DISTRICT SCHOOL BOARD PATRIKE

ಸಂಪುಟ ೧.	ಜಾನೇವರಿ ೧೯೨೯.	ಸಂಚಿಕೆ ೧೦

ಸಂಪಾದಕ ಮಂಡಲ.

೧. ಶ್ರೀ. ಎಸ್. ಕೆ. ಹೊಸಮನಿ, ಬಿ. ಎ., ಎಲ್ ಎಲ್. ಬಿ.
(ಚೇರಮನ್, ಡಿ. ಎಸ್. ಬಿ.

೨ ,, ಜೆ. ಆರ್ ನಲವಡಿ, ಬಿ. ಎ.. ಎಲ್ ಎಲ್. ಬಿ.
(ವ್ಹಾಯಿಸ್ ಚೇರಮನ್, ಡಿ. ಎಸ್. ಬಿ.

೩. ,, ಡಿ ಎಲ್. ಪಾಟೀಲ, ಬಿ ಎ., ಎಲ್ ಎಲ್. ಬಿ.
(ವ್ಹಾಯಿಸ್ ಪ್ರೆಸಿಡೆಂಟ, ಡಿ. ಎಲ್. ಬಿ.

೪ ,, ವ್ಹಿ. ಬಿ. ಜೋಶಿ, ಬಿ. ಎ. ರಿಟ್ಹಾಯರ್ಡ ಎಜ್ಯುಕೇಶನಲ್ ಇನ್ಸಪೆಕ್ಟರ.
೫. ಮೌ॥ ಸೈಯ್ಯದ ಫಕರುದ್ದೀನ ಸಾಹೇಬ.

ಮ್ಯಾನೇಜಿಂಗ ಎಡಿಟರ.

ಶ್ರೀ. ಎಚ್. ಎಫ್ ಕಟ್ಟೀಮನಿ, ಬಿ ಎ.

ಈ ಪತ್ರಿಕೆಯು ಶ್ರೀ. ಎಚ್. ಎಫ್. ಕಟ್ಟೀಮನಿ, ಇವರಿಂದ ತೋಂಟದಾರ್ಯ ಮುದ್ರಾಲಯ ಕೆಲ್ಲೆ ಧಾರವಾಡ ಇಲ್ಲಿ ಮುದ್ರಿಸಲ್ಪಟ್ಟು, ಧಾರವಾಡ ಜಿಲ್ಲಾ ಸ್ಕೂಲಬೋರ್ಡ ಕಚೇರಿಯಲ್ಲಿ ಪ್ರಸಿದ್ಧಿಸಲ್ಪಟ್ಟಿತು

ವಿಷಯಾನುಕ್ರಮಣಿಕೆ.

ವಿಷಯ.	ಲೇಖಕರು.
೧. ಶಿಕ್ಷಕರೂ, ಖಾಸಗೀ ಶಿಕ್ಷಣವೂ.	K. V. K
೨. ಜ್ಞಾನ.	ಶ್ರೀ. ಬಿ. ವಿ. ಮಂಕಣಿ ಮಾಸ್ತರು, ಶಿವಳ್ಳಿ.
೩. ತಪ್ಪು ಯಾರದು ?	,, ಸಂಪಾದಕರು.
೪. ರಾಷ್ಟ್ರಕಾರ್ಯಕ್ಕಾಗಿ ಶಿಕ್ಷಕರ ಕರ್ತವ್ಯ (ಹಿಂದಿನ ಸಂಚಿಕೆಯಿಂದ ಮುಂದೆ ಸಾಗಿದ್ದು).	,, ಸಂಗಮೇಶತನಯ, ಹುಬ್ಬಳ್ಳಿ.
೫. ನೋಟ ಬುಕ್	,, ಸಂಪಾದಕರು.
೬. ಆರೋಗ್ಯ ಪರೀಕ್ಷೆ	,, ,,
೭. ಆಹಾರ ಪದಾರ್ಥಗಳ ಚರಟದ ಉಪಯೋಗ	,, ,,
೮ ಧಾರವಾಡ ಡಿಸ್ಟ್ರಿಕ್ಟ ಲೋಕಲ್ ಬೋರ್ಡ, ಸ್ಕೂಲ ಬೋರ್ಡಿನ ಪ್ರೊವಿಜೆಂಟ ಫಂಡಿನ ನಿಯಮಗಳು.	,, ,,
೯. ಸರಕ್ಯುಲರಗಳು.	,, ,,
೧೦. ಗಂಡುಮಕ್ಕಳ ವ್ಹರ್ನ್ಯಾಕ್ಯೂಲರ ಫಾಯಿನಲ್ ಪರೀಕ್ಷೆಯ ಕಾರ್ಯಕ್ರಮಗಳು.	,, ,,
೧೧. ಸರಕ್ಯೂಲರ.	

ಪೀಠಿಕೆ.

ಈ ಸಂಚಿಕೆಯಲ್ಲಿ ಬೋರ್ಡಿನ ಸರಕ್ಯೂಲರ. ಮುಂತಾದ ಕಾರ್ಯಾ ವಿಷಯಗಳಿಗೆ ಹಚ್ಚಾಗಿ ಅನುವನ್ನು ಮಾಡಿಕೊಡಬೇಕಾದುದರಿಂದ ಸಾಲೆ ಸುದ್ದಿಯನ್ನು ಈ ಸಾರೆ ಹಾಕಲಿಕ್ಕಾಗಲಿಲ್ಲ. ಮುಂದಿನ ಸಂಚಿಕೆಯಲ್ಲಿ ಅವದಿಯಲ್ಲಿ ತಲುಪಿದವುಗಳನ್ನು ಪ್ರಕಟಿಸುವೆವು.

ಸಂಪಾದಕ.

॥ ವಿದ್ಯಾ ಗುರೂಣಾಂ ಗುರುಃ ॥

ಧಾರವಾಡ ಜಿಲ್ಲಾ
ಸ್ಕೂಲ ಬೋರ್ಡ ಪತ್ರಿಕೆ

ಸಂಪುಟ ೧ | ಜಾನೇವರಿ ೧೯೩೯ | ಸಂಚಿಕೆ ೧೦

ಶಿಕ್ಷಕರೂ, ಖಾಸಗೀ ಶಿಕ್ಷಣವೂ. *

ಸ್ಪ್ರಸ್ತುತ ಕಾಲದಲ್ಲಿ " ಶಿಕ್ಷಕ " ರೆನ್ನಿಸಿಕೊಳ್ಳುವವರ ಸಾಂಪತ್ತಿಕ ಸ್ಥಿತಿಯು ಶೋಚನೀಯ ವಾಗಿರುವದಲ್ಲದೆ ಸಾಮಾಜಿಕ ಸಂಸ್ಥಿತಿಯು (Social Status) ಕೂಡ " ಸಾಮಾನ್ಯ " ವಾಗಿರುವದೆಂಬವರಲ್ಲಿ ಸಂದೇಹವಿಲ್ಲ. ರಾಷ್ಟ್ರ ಸೇವೆಯ ಅಂಗವಾಗಿರುವ " ಶಿಕ್ಷಣ " ಕಾರ್ಯವನ್ನು ಮಾಡುತ್ತಿರುವಾಗ ತಮಗಾಗುವ ತೊಂದರೆಗಳ ವಿಷಯವಾಗಿ ಆಗಾಗ ಅವರು ಮೂರಿಕೊಳ್ಳುತ್ತಿರುವದಾವರೂ ಸಹಜವಾಗಿದೆ. ಈ ದೇಶದಲ್ಲಿ, " ವಕೀಲಿ " " ವೈದ್ಯಕಿ " ಗಳಂತೆ " ಶಿಕ್ಷಣ" ವು " ಧಂದೆ " ಯಾಗಿರಲಿಲ್ಲ; ಅದರಿಂದಲೇ ಶಿಕ್ಷಕರಿಗೆ ಈ ತರದ ದೀನಾವಸ್ಥೆಯು ಬಂದಿರುವದೆಂದೂ ಊಹಿಸಲು ಆಸ್ಪದವಿದೆ. " ಶಿಕ್ಷಣ"ಕ್ಕೆ " ಧಂದೆ"ಯ ಸ್ವರೂಪವು ಬಾರದಿರಲು ಕಾರಣಗಳಿಲ್ಲದಂತಲ್ಲ. " ಶಿಕ್ಷಣ"ಕಲೆಯು ಅನುಭವವಿಕಾರದವರಿಗೆ ಅಸಾಧ್ಯವಾಗದಂತಹ ಕಲೆಯಾಗಿಲ್ಲ.; ಹಾಗೂ

* ' ಖಾಸಗೀ ಶಿಕ್ಷಣ ' ವೆಂಬದನ್ನು Private tution ಎಂಬ ಅರ್ಥದಲ್ಲಿ ಉಪಯೋಗಿಸಲಾಗಿದೆ. ' ಖಾಸಗೀ ಶಿಕ್ಷಣ ' ಪದ್ಧತಿಯು ಮಾಧ್ಯಮಿಕ ಶಾಲೆಗಳಲ್ಲಿಯೂ ಈಚೀಚೆಗೆ ದೊಡ್ಡ ದೊಡ್ಡ ಪ್ರಾಥಮಿಕ ಶಾಲೆಗಳಲ್ಲಿಯೂ ವಿಶೇಷವಾಗಿ ಪ್ರಚಾರದಲ್ಲಿದೆ

"ಶಿಕ್ಷಕ"ರಿಗೆ ಆ ಕಲೆಯನ್ನು ನಾಕಷ್ಟು ಬೆಳೆಯಗೊಡಲು ಆಸ್ಪದವೂ ಸ್ವಾತಂತ್ರ್ಯವೂ ಇರುವದಿಲ್ಲ. "ಶಿಕ್ಷಣ"ಕ್ಕೆ "ಧಂ"ಯ ಸ್ವರೂಪವನ್ನುಂಟುಮಾಡಬಲ್ಲ ವಿವೇರಡೂ ಕಾರಣಗಳು ಅನ್ಯೋನ್ಯ ವಿರೋಧಿಗಳಾಗಿರದೆ ಪರಸ್ಪರಾವಲಂಬಿಗಳಾಗಿರುವವೆಂಬದೇನೋ ನಿಜ ಶಿಕ್ಷಕನಿಗೆ ಶಿಕ್ಷಣಕಲೆಯ ರಹಸ್ಯವೇ ಗೊತ್ತಿಲ್ಲದಿದ್ದರೆ, ಆ ಕಲೆಯ ಪರಿಪೋಷಣಮಾಡಲನುವಾದ ಸ್ವಾತಂತ್ರ್ಯವಾದರೂ ಅವನಿಗೇತಕ್ಕೆ ? ಅಥವಾ, ಸ್ವಾತಂತ್ರ್ಯದ ಅಭಾವವೇ ಇದ್ದಲ್ಲಿ, ಆ ಕಲೆಯು ಪರಿಪೂರ್ಣವಾಗಲೆಳಿಸುವದಾವರೂ ಅದೆಂತು ?

ಶಿಕ್ಷಣವು "ಧಂದೆ"ಯ ಸ್ವರೂಪವನ್ನು ತಾಳುವದೇ ಅದರೆ, ಈಗೀಗ "ಪ್ರಪಂಚ"ದ ಮುಖ್ಯ "ಧಂದೆ"ಗಳಾಗಿ ಕುಳಿತಿರುವ "ವಕೀಲಿ" ಹಾಗೂ "ವೈದ್ಯಕಿ" ಈ "ಧಂದೆ"ಗಳ ಪರಿಪೂರ್ಣಸ್ಥಿತಿಯೊಡನೆ ಶಿಕ್ಷಣದ ಸ್ಥಿತಿಯನ್ನು ಹೋಲಿಸಿ ನೋಡುವದು ಅವಶ್ಯವೆಂದು ಕಂಡುಬರುವದು. "ವಕೀಲ ರ 'ಧಂದೆ ಯ ಸಾಮರ್ಥ್ಯವು ಅವರ ಅನ್ಯೋನ್ಯ ಸ್ಪರ್ಧೆ ಮಾಲ, ಯಶಸ್ಸು ಸಂಪಾದಿಸಿ, ಹೊಂದಿಕೊಳ್ಳುವ (ಪಡೆಯುತ್ತಿರುವ 'ನಾಮೇಲು, ನೀಮೇಲು' ಏಂಬ ಸ್ಥಿತಿಯನ್ನು ಅವಲಂಬಿಸಿರುತ್ತದೆ. ವಕೀಲರ 'ವಕೀಲಿಯ ಲಾಭವನ್ನು ಪಡೆದು ಕೊಳ್ಳುವಂಥವರಿಂದಲೇ ನರಳವಾಗಿ—ಎರಡನೆಯವರ ಮುಖಾಂತರವಾಗಿಯಲ್ಲ, ವಕೀಲರಿಗೆ ತ ವು ಮಾಡುತ್ತಿರುವ ಕೆಲಸದ (Service) ಪ್ರತಿಫಲವು ದೊರೆಯುತ್ತದೆ. ಶಿಕ್ಷಕರ 'ಧಂದೆ ಯಾದ ಶಿಕ್ಷಣದ ಲಾಭವು ವಿದ್ಯಾರ್ಥಿಗಳಿಗೆ ಸಿಕ್ಕರೂ, ಅವರು ಮಾಡುವ ಕೆಲಸದ (Service) ಪ್ರತಿಫಲವು ಮಾತ್ರ ಬೇರೆಯವರಿಂದ—ವಿದ್ಯಾರ್ಥಿಗಳಿಂದಲ್ಲ, ಶಾಲೆಯನ್ನು ನಡೆಸುತ್ತಿರುವವರಿಂದ, ಸರಕಾರದಿಂದ, ಸರಕಾರನಿಯುಕ್ತ ಅಥವಾ 'ಖಾಸಗಿ ಸಂಸ್ಥೆಗಳಿಂದ—ದೊರೆಯುತ್ತಿರುತ್ತದೆ. ವಿದ್ಯಾರ್ಥಿಗಳಿಂದಲೇ ! ಮಾತ್ರ— ಅನ್ಯರಮುಖದಿಂದಲ್ಲ— ಶಿಕ್ಷಕರಿಗೆ ತಾವು ಮಾಡುವ ಕೆಲಸದ (Service) ಪ್ರತಿಫಲವು ದೊರೆಯಲನುವಾಗುವಂತೆ ಜಗತ್ತಿನ ಸ್ಥಿತಿಯಲ್ಲಿ 'ಅವಶ್ಯ ಬದಲು'ಗಳಾಗಬಹುದೆಂದು ಬಯಸುವದು ಸಮಂಜಸವಾಗದಿದ್ದರೂ, ಶಿಕ್ಷಕರಿಗೆ ಸಿಗುತ್ತಿರುವ ವ್ಯತಿಫಲವು ಕೆಲವಂಶವಲ್ಲಾದರೂ 'ವಿದ್ಯಾರ್ಥಿ'ಗಳಿಂದಲೇ ಸ್ಪರ್ಧಾತ್ಮಕ ರೀತಿಯಿಂದ ಬೆಳೆಯುವಂತೆ ಸ್ಥಿತಿಭೇದವಾಗುವದು ಪ್ರಶಸ್ಯವಾದದ್ದೆಂದು ಆಶಿಸುವದು ಯುಕ್ತವಾಗದಿರದು ಆಕ್ಸ್‌ಫೋರ್ಡ, ಕೆಂಬ್ರಿಜಗಳಲ್ಲಿ 'ಟ್ಯೂಟರ' (Tutor) ಎಂದು ಕರೆಯಿಡ್ಪಡುವ ಶಿಕ್ಷಕರಿರುವರು; ಕಾಲೇಜುಗಳ ವಿದ್ಯಾರ್ಥಿಗಳು—ಕಾಲೇಜುಗಳಿಗೆ ಕೊಡುವ 'ಫಿ'ಯಲ್ಲದೆ, ಅವರಿಗೇ ಯೋಗ್ಯ 'ಫಿ' ಕೊಟ್ಟು—ಅವರಿಂದ ಶಿಕ್ಷಣಲಾಭವನ್ನು ಪಡೆದುಕೊಳ್ಳುತ್ತಿರುವರು ಈ ವಿಧವಾದ 'ಖಾಸಗೀ ಶಿಕ್ಷಣ'ಕ್ಕಾಗಿ, ಈ ಬಗೆಯಾಗಿ ವಿದ್ಯಾರ್ಥಿಗಳು ಪ್ರಥಕ್ಕಾಗಿ ಕೊಡುತ್ತಿರುವ 'ಫಿ'ಯು 'ಶಿಕ್ಷಕರ ('Tutor) ಲೋಕಪ್ರಿಯತೆಯ ಹಾಗೂ ವರ್ಚಸ್ಸಿನ ಮಾನದಿಂದ ಭಿನ್ನ ಭಿನ್ನ ಪ್ರಮಾಣದಲ್ಲಿ ಕೊಡಲ್ಪಡುತ್ತಿರುತ್ತದೆಂದು ಬೇರೆ ಹೇಳಬೇಕಾಗಿಲ್ಲ.

'ವಕೀಲ'ರ ದೃಷ್ಟಾಂತಕ್ಕಿಂತ 'ಡಾಕ್ಟರ'ರ ದೃಷ್ಟಾಂತವು ಹೆಚ್ಚು ಸ್ವಮಂಜಸವಾಗುವದುಂಟು. 'ಡಾಕ್ಟರರಿಗೆ' 'ಆಸ್ಪತ್ರೆ'ಗಳಲ್ಲಿ ಕೆಲಸಮಾಡುವದರಿಂದ 'ಪಗಾರ'ವು ಸಿಗುವದಲ್ಲದೆ, 'ಖಾಸಗಿ' ರೀತಿಯಿಂದ ರೋಗಿಗಳಿಂದ 'ಫೀ'ಯು ಸೊರೆಯುತ್ತಿರುವದು. ಕಿಂಬಹುನಾ, 'ಖಾಸಗೀ ಕೆಲಸ'ದಿಂದ (Private Practice) ಲವಲೇಶವಾದರೂ ಗಳಿಸದಂತಿರುವ ಡಾಕ್ಟರ ಜನರ ಯೋಗ್ಯತೆಯು ಅಷ್ಟಕಷ್ಟೇ ಎಂದೂ ತಿಳಿಯುವದುಂಟು. 'ಆಸ್ಪತ್ರೆ'ಯಲ್ಲಿ 'ಡಾಕ್ಟರ'ರ ಕೆಲಸವು ತೀರಾ ಕಡಿಮೆಯಿರುವದೆಂದು ತಿಳಿಯಕೂಡದು; ಅದು ಸಾಕಷ್ಟಿದ್ದರೂ ಕೂಡ, ಹೊರಗಿನ 'ಖಾಸಗೀ ಸಂಪಾದನೆ'ಗೆ ಆಸ್ಪದವಿರುವದಲ್ಲದೆ, ವಿಶೇಷವಾದ ಉತ್ತೇಜನವೂ ಇರುವದು 'ಡಾಕ್ಟರ'ರಾದರೂ 'ಆಸ್ಪತ್ರೆ'ಯೊಳಗಿನ ತಮ್ಮ ನಿರ್ದಿಷ್ಟ ಕೆಲಸವನ್ನು ದಕ್ಷತೆಯಿಂದ ಮಾಡಿ ಹೊರಗಿನ ಉಪಾರ್ಜನೆಗೂ ಸಾಕಷ್ಟು ಲಕ್ಷ್ಯಪೂರ್ವಕವಾಗಿ ಸುತ್ತಿರುವರೆಂಬದು ಅಭಿಮಾನದ ಸಂಗತಿಯು!

ಖಾಸಗೀ ರೀತಿಯಿಂದ ಚಿಕಿತ್ಸೆಮಾಡಿ ರೋಗಿಗಳಿಂದ ದ್ರವ್ಯಾರ್ಜನೆ (Private Practice) ಮಾಡುತ್ತಿರುವ 'ಡಾಕ್ಟರ'ರಂತೆಯೇ ಶಿಕ್ಷಕರಸ್ಥಿತಿಯಿರುವದೆಂದು ಖಂಡಿತವಾಗಿ ಹೇಳಬಹುದು. 'ಡಾಕ್ಟರ'ರಂತೆ 'ಶಿಕ್ಷಕ'ನಾದರೂ ವಿದ್ಯಾರ್ಥಿಗಳಿಗೆ 'ಖಾಸಗೀ ಶಿಕ್ಷಣ'ವನ್ನು ಕೊಟ್ಟರೆ ಅದರಿಂದಾಗುವ ಅಪಾಯವಾದರೂ ಅಡ್ಡಾವದು? 'ಖಾಸಗೀ ರೀತಿಯಿಂದ ಚಿಕಿತ್ಸೆ ಮಾಡಿ ಗಳಿಸುತ್ತಿರುವ ಹಣದಿಂದ ಡಾಕ್ಟರರ ಯೋಗ್ಯತೆಯು ಹೆಚ್ಚೀತು ಕಂಡುಬರುವಂತೆ, 'ಖಾಸಗೀ ಶಿಕ್ಷಣ'ದ ಬಲದಿಂದ 'ಶಿಕ್ಷಕ'ನ ಯೋಗ್ಯತೆಯಾದರೂ ಹೆಚ್ಚೀತೆಂದು ಕಂಡುಬರುವದುಂಟು. 'ಡಾಕ್ಟರ'ರ ಯೋಗ್ಯತೆಯಂತೆ ಅವರ 'ಖಾಸಗೀ' ಉಪಾರ್ಜನೆಯು ಬೆಳೆಯುವಂತೆ, 'ಶಿಕ್ಷಕ'ರ ಯೋಗ್ಯತೆಗೆ ಅನುರೂಪವಾಗಿ ಅವರ 'ಖಾಸಗೀ ಶಿಕ್ಷಣ'ದ ಉತ್ಪನ್ನವಾದರೂ ಬೆಳೆಯುವದುಂಟು ಉಪಯೋಗಮಾತ್ರದಿಂದ ಜ್ಞಾನವು ಬೆಳೆಯುವದಲ್ಲದೆ, ಕ್ಷೀಣವಾಗಿ ನಾಶಹೊಂದಲರಿಯದು. 'ಖಾಸಗೀ ಶಿಕ್ಷಣ' ಕೊಡುವದರಿಂದ ಶಿಕ್ಷಕನಿಗಾಗುವ ಅನುಭವದ ಲಾಭವು ಅಷ್ಟಿಷ್ಟೆಂದು ತಿಳಿಯಲಾಗದು; ಅದರಿಂದ ಶಾಲೆಯ 'ಪಾಠ'ಗಳ ವೇಳೆಯಲ್ಲಿ ಕಂಡುಬರುತ್ತಿರುವ 'ಶಿಕ್ಷಕರ ಸಾವಧ್ಯ'ವು ದ್ವಿಗುಣಿತವಾಗುವದು. ಇದೂ ಅಲ್ಲದೆ, ತನ್ನ ವ್ಯವಸಾಯಕ್ಕೆ ಅವಶ್ಯವಾಗಿರುವ ಪುಸ್ತಕ ಮೊದಲಾದ ಉಪಕರಣಗಳ ಕೊರತೆಯನ್ನು ಆತನು ಯಾವಾಗಲೂ ದೂರಮಾಡಿಕೊಳ್ಳುತ್ತಿರುವದರಿಂದಲೂ ಶಾಲೆಯಲ್ಲೂ ಮನೆಯಲ್ಲೂ ಆತನು ಕೇವಲ ತನ್ನ ವ್ಯವಸಾಯಕ್ಕೇ ಲಕ್ಷ್ಯ ಪೂರೈಸುತ್ತಿರುವದರಿಂದಲೂ, ಆ ಶಿಕ್ಷಕನಿಂದ ಶಾಲೆಗೆ ಆಗುತ್ತಿರುವ ಲಾಭವು ಹೆಚ್ಚೆಚ್ಚಾಗುವದೆಂಬದರಲ್ಲಿ ಏನೂ ಸಂದೇಹವಿಲ್ಲ.

ಸರಕಾರೀ ನವಕರಿಯಲ್ಲಿ, ಶಿಕ್ಷಕರು 'ಖಾಸಗೀ ಶಿಕ್ಷಣ' ಕೊಡುವ ವಿಷಯವಾಗಿ ಅನೇಕ ತರದ ನಿರ್ಬಂಧಗಳುಂಟು; ಹಲವೊಂದುಸಾರೆ, 'ಖಾಸಗೀ ಶಿಕ್ಷ

ಶಾಲೆಯಗಳ ' ಚಾಲಕ'ರೂಸಹ ಈ ವಿಷಯದಲ್ಲಿ ಸರಕಾರೀ ಅಧಿಕಾರಿಗಳಿಗಿಂತ ಹೆಚ್ಚಿನ ನಿರ್ಬಂಧನೆಗಳನ್ನು ಹಾಕುತ್ತಿರವದಾದರೂ ಉಂಟು. ಕೇವಲ ' ಖಾಸಗೀ ಶಿಕ್ಷಣ'ಕ್ಕೇ ಲಕ್ಷಕೊಟ್ಟು ಶಾಲೆಯ ಕೆಲಸವು ಅಚ್ಚುಕಟ್ಟಾಗಿ ನಡೆಯಗೊಡದಂತಿರುವ ಶಿಕ್ಷಕರಾದರೂ ಇರಬಹುದು; ಆದರೆ, ಈ ಬಗೆಯಾಗಿ ತಪ್ಪು ತಡೆಗಳನ್ನು ಮಾಡುತ್ತಿರುವ ಒಬ್ಬಿಬ್ಬ ಶಿಕ್ಷಕರಿಗಾಗಿ ' ಖಾಸಗೀ ಶಿಕ್ಷಣ'ವನ್ನೆ ಪ್ರತಿಬಂಧ ಮಾಡುವದು ಯುಕ್ತವೆನಿಸದು. ಡಾಕ್ಟರರು ' ಖಾಸಗೀ ಚಿಕಿತ್ಸೆ'ಮಾಡಿ ಧನೋಪಾರ್ಜನ' ಮಾಡುವದರಿಂದ ಅವರ ಕೆಲಸಕ್ಕೆ ಹೇಗೆ ಭಂಗಬರುವದಿಲ್ಲವೋ, ಅವರಂತೆ ಶಾಲೆಯ ಕೆಲಸಕ್ಕೆ ಭಂಗಬಾರದಂತೆ— ಕಿಂಬಹುನಾ, ಅದಕ್ಕೆ ವಿಶಿಷ್ಟ ಗೌರವವು ಬರುವಂತೆ—' ಖಾಸಗೀ ಶಿಕ್ಷಣ'ವನ್ನು ಕೊಡಬಲ್ಲ ಶಿಕ್ಷಕರೂ ಇದ್ದೇ ಇರುವರು. ' ಖಾಸಗೀ ಶಿಕ್ಷಣ'ದ ಮೂಲಕವಾಗಿ ತಪ್ಪು ಮಾಡುತ್ತಿರುವ ಶಿಕ್ಷಕರಿಂದ ಶಾಲೆಯ ಕೆಲಸಕ್ಕೆ ಹೇಗೆ ಭಂಗಬರುತ್ತಿರುವದೆಂಬದನ್ನು ಕಂಡುಹಿಡಿಯದೇ, ಶಿಕ್ಷಕವರ್ಗಕ್ಕೆಲ್ಲ ' ಖಾಸಗೀ ಶಿಕ್ಷಣ'ವನ್ನು ಪ್ರತಿಬಂಧಮಾಡಲಿಳಿಸುವದು ಅಧಿಕಾರಿಗಳಿಗೆ ಶೋಭಿಸಲಾರದು. ಶಿಕ್ಷರು ' ಖಾಸಗೀ ಶಿಕ್ಷಣ'ವನ್ನು ಕೊಡುತ್ತಿರುವದು ಶಿಕ್ಷಣವ್ಯವಸಾಯದಲ್ಲಿ ಅವರಿಗೆ ಅವಶ್ಯವಾಗಿರುವದೊಂದು ಒಗೆಯ ಸ್ವಾತಂತ್ರ್ಯವೆಂದೇ ತಿಳಿಯಬಹುದಾಗಿದೆ.

K. V. K.

ಜ್ಞಾನ

ಲೇಖಕ—ಬ. ವಿ. ಮಠ, ಹೆ. ಮಾಸ್ತರ ಶಿವಳ್ಳಿ.

ಜ್ಞಾನೈಶ್ವರ್ಯಕೆ ಸಾಟಿ ಸೌಖ್ಯ ಮೊಳವೇ ರತ್ನಾಕರಾಧೀಶ್ವರಾ ।
ಜ್ಞಾನದಿಂದಲೆ ಇಹವು ಜ್ಞಾನದಿಂದಲೆ ಪರವು ।
ಜ್ಞಾನವಿಲ್ಲದಲೆ ಸಕಲವು ತನಗಿದ್ದು ।
ಹಾನಿಕಾಣಯ್ಯ ಸರ್ವಜ್ಞ ॥ ೧ ॥

ಪ್ರತಿಯೊಂದು ವಿಷಯದ ಯಥಾರ್ಥವಾದ ತಿಳುವಳಿಕೆಗೆ ಜ್ಞಾನವೆನ್ನುವರು. ಜ್ಞಾನದ ಅಭಾವವೇ ಅಜ್ಞಾನವು. ಲೌಕಿಕ, ಪಾರಮಾರ್ಥಿಕ ಸುಖ

ಸಂಪತ್ತು ಸಂಪಾದಿಸಲಿಕ್ಕೆ ಜ್ಞಾನವೇ ಮೂಲವು. ಜ್ಞಾನವಿಲ್ಲದಿದ್ದರೆ ಯಾವತ್ತೂ ಇದ್ದೂ ಇಲ್ಲದಂತೆಯೇ ಸರಿ ಎಂದ ಸರ್ವಜ್ಞನ ವಚನ ಸಾರುವ ದು. 'ನ ಹಿ ಜ್ಞಾನೇನ ಸದೃಶಂ ಪವಿತ್ರಮಿಹ ವಿದ್ಯತೇ ಜ್ಞಾನದ ಸಮಾನ ಪರಮ ಪವಿತ್ರವಾದ ವಸ್ತು ಬೇರೊಂದಿಲ್ಲ ಎಂದು ಗೀತೆಯೂ ಗರ್ಜಿಸುವದು. ಆನೆ, ಸಿಂಹಗಳು ಮನುಷ್ಯನಿಗಿಂತ ಶಕ್ತಿ, ಪರಾಕ್ರಮಗಳಲ್ಲಿ ಶ್ರೇಷ್ಠವಾಗಿ ತೋರುತ್ತಿದ್ದರೂ ಅವುಗಳ ಜ್ಞಾನವು ಮನುಷ್ಯನ ಜ್ಞಾನಕ್ಕಿಂತ ಕಡಿಮೆ ಇರುವ ಮೂಲಕ. ಮನುಷ್ಯನ ವಶವಾಗಿ ವರ್ತಿಸುತ್ತಿರುವವು. ಪತಂಗವು ಅಜ್ಞಾನದ ಮೂಲಕ ದೀಪದಲ್ಲಿ ಬಿದ್ದು ಮರಣಹೊಂದುವದು. ಜ್ಞಾನಸಂಯೋಗದಿಂದ ನೀಚನು ಊಚನಾಗುವನು. ಕನಿಷ್ಠನು ಶ್ರೇಷ್ಠನಾಗುವನು. ಅಪವಿತ್ರನು ಪವಿತ್ರನಾಗುವನು. ಮನುಷ್ಯ ಪ್ರಾಣಿಯು ವಿನಿಮಯದ ಅಜ್ಞಾನವಸ್ಥೆಯಲ್ಲಿದ್ದಾಗ್ಗೆ ಸುವರ್ಣಾದಿ ಧಾತು ದ್ರವ್ಯಗಳು ನಿದ್ರಿಸುತ್ತಿದ್ದವು ಶಾಸ್ತ್ರೀಯಜ್ಞಾನಸಂಗದಿಂದ ಕಳೆಗೊಂಡು ನಾಡಿನಲ್ಲಿ ಬಾಹ್ಯಪ್ರಾಣವೆನಿಸಿ ನಡೆಯಹತ್ತಿದವು. ಪೃಥ್ವ್ಯಾದಿ ಪಂಚಭೂತಗಳು ಜ್ಞಾನಿಯಾದ ಮನುಷ್ಯನ ವಶವಾಗಿ ವರ್ತಿಸುತ್ತಿರುವವು. 'ಜ್ಞಾನಾನ್ಮುಕ್ತಿಃ !' ಜ್ಞಾನವು ಮೋಕ್ಷಪ್ರದವಾಗಿದೆಯೆಂದು ಶ್ರುತಿಮತವಿದೆ ಇದರಮೇಲಿಂದ ಅಜ್ಞಾನ, ಸುಜ್ಞಾನಗಳಲ್ಲಿಯ ಅಭ್ಯಂತರವು ಎಷ್ಟೆಂಬುವದು ತಾನೇ ಗೋಚರವಾಗುವದು.

ಜ್ಞಾನವು ಜೀವನಲ್ಲಿಯ ಸ್ವಾಭಾವಿಕ ಶಕ್ತಿಯು 'ಅಜ್ಞಾನೇನಾವೃತಂ ಜ್ಞಾನಂ ತೇನ ಮುಹ್ಯಂತಿ ಜಂತವಃ' ಅಜ್ಞಾನವೆಂಬ ಪರದೆಯು ಜ್ಞಾನದ ಮೇಲೆ ಮುಚ್ಚಲು, ಮನುಷ್ಯನು ಮೂಢನಾಗುವನು. ಮನುಷ್ಯನು ಮೂಢಸ್ಥಿತಿಯಲ್ಲಿದ್ದಾಗ್ಗೆ ಯುಕ್ತಾಯುಕ್ತ ವಿಚಾರಗಳು ತೋಚದೆ, ಕಾರ್ಯದ ಮರ್ಮವು ಗುರ್ತಿಸದೆ ಹೋಗುವದು. ಈ ಕಾರಣದಿಂದಲೇ ಅಜ್ಞಾನಿಗಳು ಕೈಕೊಂಡ ಕಾರ್ಯಗಳು ಕಡೆಗಾಣವು. ತನು-ಮನ-ಧನ ಶಕ್ತಿಗಳು ಹಾಳಾಗಿ ಹೋಗುವವು. 'ಸುಜ್ಞಾನವಿಲ್ಲದ ಮೌನಮೊದಲಾಗಿರ್ದ ವ್ರತದಲ್ಲೇನು ಫಲವೆಂದ' ಎಂದರೆ ಜ್ಞಾನವಿಲ್ಲದೆ ಮೌನಮೊದಲಾದ ವ್ರತಗಳು ಮೆರೆಯವೆಂದು ಸುಜ್ಞಾನಿಗಳ ಮತವಿದೆ.

ಮರಣಸಮಾನವಾದ ಅಜ್ಞಾನ ನಾಶವಾಗಲಿಕ್ಕೆ ಅರ್ಥಾತ್ ಜ್ಞಾನ ಸಂಪಾದನೆಯಾಗಲಿಕ್ಕೆ ಪ್ರತ್ಯಕ್ಷ, ಪ್ರಯೋಗ, ಅನುಭವಗಳೆಂಬ ಜ್ಞಾನಾರ್ಜನೆಯ ಅಂಗಗಳು. ಇವುಗಳ ಮೂಲಕ ಒಳ-ಹೊರಗಿನ ವಿಷಯಗಳನ್ನು ವಿಮರ್ಶಿಸಬೇಕಾಗುವದು. ಕಠಿಣವಾದ ವಿಷಯಗಳನ್ನು ಕ್ರಮಕ್ರಮವಾಗಿ ಸತತ ಅಭ್ಯಾಸಿಸುತ್ತ ಸಾಗಿದರೆ, ಅಂತರಂಗ ಶಕ್ತಿಯು ಜಾಗ್ರತವಾಗುವದು. ಅಜ್ಞಾನ ತಿಮಿರ ನಾಶವಾಗಿ, ಜ್ಞಾನ ಜ್ಯೋತಿಯು ಬೇಗ ಪ್ರಖರವಾಗುವದು; ಆಗ ಸೂಕ್ಷ್ಮ ಸಂಗತಿಗಳ ಗುಟ್ಟು ಗೋಚರವಾಗುವದು.

ಜೀವನು ಜ್ಞಾನ ಜ್ಯೋತಿಯ ಸಹಾಯದಿಂದ ಮುಕ್ತಿ ಸಂಪಾದಿಸುವದಕ್ಕಾಗಿ, ಹಗಲಿರುಳು ಪ್ರಯತ್ನ ಪಡುವನು. ಈ ಪ್ರಯತ್ನದ ಮೂಲಕ ಒಂದಿಲ್ಲೊಂದು ದಿನ ತನ್ನ ಅಂತಿಮೋದ್ದೇಶವನ್ನು ಸಾಧಿಸುವನು ಹಿಂದಿನ ಜನ್ಮದ ಜ್ಞಾನ ಕರ್ಮದ ಮೂಲಕ ಮುಂದಿನ ಜನ್ಮದಲ್ಲಿ ಸ್ವಯಂ ಜ್ಞಾನ ಮೂರ್ತಿಗಳಾಗಿ ಹೋಗುವರು. ಸರ್ವಜ್ಞನು ಇಂಥ ಮಣಿಮಾಲಿಕೆಯೊಳಗಿನವನೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ ಕೆಲವು ಯೋಗಿಗಳು ಜ್ಞಾನಯುಕ್ತ ಕರ್ಮಮಾರ್ಗದಿಂದ ತಾರಕ ದಿವ್ಯ ಜ್ಞಾನವನ್ನು ಸಂಪಾದಿಸುವರು. ಇಂಥವರ ಅವತಾರವು ಅಜ್ಞಾನಿಗಳ ಗರ್ವಹರಣಕ್ಕೂ, ಅಖಂಡವೂ ಅಪಾರವೂ ಅನಂತವೂ ಆದ ಜ್ಞಾನಾಮೃತವನ್ನು ಪಾನಮಾಡಿಸುವದಕ್ಕೂ ಕಾರಣವಾಗುವದು.

ಇನ್ನು ಸಾಮಾನ್ಯರ ಸಂಖ್ಯೆಯೇ ನೂರಕ್ಕೆ ನೂರು. ಇವರ ಅಜ್ಞಾನ ಅಳಿಯುವದಕ್ಕಾಗಿ ವಿದ್ಯಾಮಂದಿರಗಳೂ, ಗುರುವರ್ಗವೂ, ರಾಜ-ಪ್ರಜಾಜನರ ಆಶ್ರಯದಿಂದ ಪೂರ್ವಕಾಲದಿಂದ ನಡೆಯುತ್ತ ಬಂದಿರುವವು. ಆಯಾ ಮಂದಿರಗಳಲ್ಲಿ ಇತಿಹಾಸ ಜ್ಞಾನ, ಗಣಿತಜ್ಞಾನ, ಖಗೋಲ ಜ್ಞಾನ, ಭಾಷಾ ಜ್ಞಾನ, ಇತ್ಯಾದಿ, ಜ್ಞಾನ ಕ್ಷೇತ್ರದಲ್ಲಿ ಹಲವು ವಿಭಾಗಗಳನ್ನು ಮಾಡಿ, ಶಿಕ್ಷಣ ಕೊಡುತ್ತಿರುವರು. ಅದರಲ್ಲಿ ಜ್ಞಾನವಯೋಮಾನಕ್ಕನುಸರಿಸಿ, ಪ್ರಾಥಮಿಕ, ಮಾಧ್ಯಮಿಕ, ಉಚ್ಚತರಗಳುಂಬಾಗಿವೆ. ಎಲ್ಲ ವಿಷಯಗಳನ್ನು ಕಲಿಸುವ ಉದ್ದೇಶವು, ಇಂದ್ರಿಯಗಳ ಶಕ್ತಿಯನ್ನು ಅಭಿವೃದ್ಧಿಗೊಳಿಸುವದು; ಸ್ಮರಣ, ಕಲ್ಪನೆ, ತರ್ಕ, ವಿಚಾರ, ಸಿದ್ಧಾಂತ ಶಕ್ತಿಗಳನ್ನು ಬೆಳಿಸುವದಾಗಿದೆ. ನೈತಿಕ ಶಕ್ತಿಯನ್ನು ಹೆಚ್ಚಿಸಿ ಸಾಮಾನ್ಯ ಧರ್ಮಜ್ಞಾನವನ್ನುಂಟುಮಾಡಿಕೊಡುವದಾಗಿದೆ.

ಸ್ತ್ರೀಯು, ಸ್ವಭಾವ-ಅಂಗದೃಷ್ಟಿಯಿಂದ ಪುರುಷರಿಗಿಂತ ಸ್ವಾಭಾವಿಕವಾಗಿಯೇ ಬೇರೆಯಾಗಿರುವಳು; ಆದ್ದರಿಂದ ಕೆಲ ಪ್ರಸಂಗದಲ್ಲಿ ಅವಳಿಗೆ ಕೊಡುವ ಶಿಕ್ಷಣವು ಭಿನ್ನವಾಗಿಯೇ ಇರಬೇಕಾಗಿದೆ ಅವಳು ಗೃಹರಾಜ್ಯದ ರಾಣಿಯಾಗುವದಕ್ಕೆ ಅರ್ಹಳೆಂದು ನಮ್ಮ ಆರ್ಯರು ಶಿಸುಸಂಗೋಪನ, ಸೂಪಶಾಸ್ತ್ರವಿಚಾರಾದಿಗಳ ಬಗ್ಗೆ ಲಕ್ಷಕೊಡುತ್ತಿದ್ದರು ಜ್ಞಾನವಿಲ್ಲದ ನಾರಿ ಮಹಾಮಾರಿ! ಜ್ಞಾನವುಳ್ಳ ನಾರಿ ಕುಲೋದ್ಧಾರಿ. !!

ಜ್ಞಾನ ಸಂಗ್ರಹವು ಸದಾ ಸ್ವಾರ್ಥಕ್ಕಲ್ಲ. ಅನ್ಯರನ್ನು ಹಿಂಸಿಸಲಿಕ್ಕೂ ಅಲ್ಲ. ಹೆಮ್ಮೆಪಡುವದಕ್ಕೂ ಅಲ್ಲ. ನರರಸ್ತುತಿ, ನಿಂದೆ ಮಾಡಲಿಕ್ಕೂ ಅಲ್ಲ ತಾನು ಕಲಿತ ಜ್ಞಾನವನ್ನು ವ್ಯವಹಾರದಲ್ಲಿ ಉಪಯೋಗಿಸಿ. ಪ್ರಪಂಚದಲ್ಲಿಯ ಪ್ರತಿಯೊಂದು ಪ್ರಾಣಿಯ ಕ್ಷೇಮ, ಸಮಾಧಾನವನ್ನುಂಟು ಮಾಡುವದಾಗಿದೆ. ಪ್ರಪಂಚದಿಂದ ಪಾರಮಾರ್ಥಗಳನ್ನು ಸಾಧಿಸುವದಾಗಿದೆ. ಅಜ್ಞ, ಜನಾಂಗದ

ಲ್ಲಿಯ ಜ್ಞಾನಾಂಕುರವನ್ನು ಬೆಳಿಸಿ ಮಾನವೀ ಸುಜ್ಞಾನ ಸಂಗ್ರಹವನ್ನು ಹೆಚ್ಚಿಸುವದಕ್ಕಾಗಿದೆ. ದೋಷಾತ್ಮಕ ಶಿಕ್ಷಣ ಕೊಟ್ಟು; ಅಥವಾ ಶಿಕ್ಷಣ ಕೊಡದೆ ಅಜ್ಞಜನರನ್ನು ಮೋಸ ಪಡಿಸಿ ಮೆರೆಯುವದು, ಸ್ವ-ರ ಅಧೋಗತಿಗೆ ಕಾರಣವಾಗಿದೆ. ರಾಷ್ಟ್ರ ಹಿತೈಕಾತ್ಮಕ ದೃಷ್ಟಿಯಿಂದ ತುಂಬಾ ಹಾನಿಕಾರಿಯಾಗಿದೆ.

" ವಿದ್ಯೆಯಲ್ಲಿ ಹಿಂದುಳಿದ ದೇಶವು ದುಃಖದಾಗರವೂ ಹಿಂಸಾತ್ಮಕ ಜ್ಞಾನವು ಅನವಶ್ಯಕವು ನೋಡಿರಿ! ಅನ್ಯ ದೇಶದ ವಿತ್ತಾದಿ ದ್ರವ್ಯವನ್ನು ಅನ್ಯಾಯದಿಂದ ಅಪಹರಿಸಲಿಕ್ಕೆ ಹೊರಟ ಜರ್ಮನ್ ಜ್ಞಾನವು ತನ್ನ ಪ್ರಾಣಹರಣವನ್ನೇ ಮಾಡಿಕೊಂಡಿತು. ತನಗಭಿಮತವಾದ ಜ್ಞಾನಸಂಗ್ರಹಾತ್ಮಕ ವಿಚಾರವೂ ಕೃತಿಯೂ ಸದಾ ಇದ್ದೇ ಇರಬೇಕು. ಕಡೆ ಪರೀಕ್ಷೆ ಪಾಸಾದಾ ಕ್ಷಣಕ್ಕೆ ಜ್ಞಾನದ ಕೊನೆ ಮುಟ್ಟಿದಂತಾಗಲಿಲ್ಲ ಪರೀಕ್ಷೆಗಳು ಕಲಿತ ಜ್ಞಾನವನ್ನ ಪರೀಕ್ಷಿಸತಕ್ಕವುಗಳಾಗಿವೆಯೇ ಹೊರತು, ಜ್ಞಾನ ಸಂಗ್ರಹವು ಇಷ್ಟಕ್ಕೆ ತೀರಿತೆಂದು ಎಂದೂ ಬೋಧಿಸಲು ಜ್ಞಾನದೃಷ್ಟಿ ಹೆಚ್ಚಾದಂತೆ ಜ್ಞಾನ ಮಂದಿರವು ಸ್ಪಷ್ಟ ತೋರುವದು ಅಗಾಧ ಜ್ಞಾನಿಯಾದ ನ್ಯೂಟನ್ನನ ತನ್ನ ಜ್ಞಾನವು ಜ್ಞಾನಾಂಬುಧಿಯೆಲ್ಲಿಯ ಒಂದು ಮುಳಲ ಕಣದಷ್ಟಿಲ್ಲೆಂದು ಹೇಳಿರುವನು. " ಭಾನುವಿಗೆ ನೆಲೆಯಿಲ್ಲ ಜ್ಞಾನಕ್ಕೆ ಕೊನೆಯಿಲ್ಲೆಂದು" ಸರ್ವಜ್ಞನ ಹೇಳಿಕೆ.

ಬಾಲ್ಯವೇ ವಿದ್ಯೆ ಸಂಗ್ರಹಿಸತಕ್ಕ ತಕ್ಕ ಕಾಲವು ಇಂಥ ಕಾಲವು ಅಶ್ರಮದೃಷ್ಟಿಯಿಂದ ೨೫ ವರ್ಷವಾಗಿದೆ ಆಗ್ಗೆ ಶರೀರ ಅನಕೂಲವೂ, ಪರಿಸ್ಥಿತಿಯ ಸಹಾಯವೂ ಹೆಚ್ಚಿರುವದು ಗೃಹಸ್ಥಾಶ್ರಮಕಾಲದಲ್ಲಿ ಹಲವು ತೊಡಕುಗಳು ತೊಡಕಾಗಿ ಅಡ್ಡಿ ಮಾಡುವವು. ದಾರಿದ್ರ-ಅನೈಕ್ಯ-ಯುದ್ಧ-ಪಾಲಕರ ಅಜ್ಞಾನಗಳಿಂದ ಕೆಲವರು ಅಜ್ಞಾನಾವಸ್ಥೆಯಲ್ಲಿ ಉಳಿಯುವರು ಗೃಹ-ಗ್ರಾಮ-ಸಮಾಜ-ದೇಶಹಿತಾತ್ಮಕ ದೃಷ್ಟಿಯಿಂದ ಬಲು ಹಾನಿಕರವಾಗಿದೆ.

ತೀವ್ರತರವಾದ ವಾಹನ, ಮುದ್ರಣಾದಿ ಯಂತ್ರ ಸಹಾಯದಿಂದ, ವೃತ್ತ ಪತ್ರಾದಿ ಮೂಲಕ ದೇಶ ವಿದೇಶಗಳಲ್ಲಿಯ ಜ್ಞಾನವು ಅಲ್ಪವಕಾಶದಲ್ಲಿ ಅಗ್ಗ ಬೆಲೆಗೆ ಇದ್ದಲ್ಲಿಗೆ ಬೋಧಿಸಲು ಹೊರಟಿರುವದು. ಪ್ರಾಚೀನ ಕಾಲದಲ್ಲಿ ಈ ಅನಕೂಲಗಳಿರಲಿಲ್ಲ. ನಿಜಜ್ಞಾನದಾಯಕಮಾರ್ಗದಲ್ಲಿ ಸೇರಿ, ಐಚ್ಛಿಕ ವಿಷಯ ಜ್ಞಾನದ ಮೂಲವನ್ನು ಪುಟ್ಟುವದಕ್ಕೆ ದೇಶ, ವಿದೇಶಗಳಲ್ಲಿ ಬಹಳ ಅನಕೂಲಗಳಾಗಿವೆ.

ಪ್ರಾಚೀನರು ವಿದ್ಯೆಯ ಮಹತ್ವವನ್ನು ಬಹಳವಾಗಿ ಕೊಂಡಾಡಿರುವರು. ಹಾಗು ಅದನ್ನು ಸಂಪಾದಿಸುವದಕ್ಕಾಗಿ, ಯುಕ್ತ ಮಾರ್ಗಗಳನ್ನು ಶೋಧಿಸಿರುವರು. ಅವರು ಮುಖ್ಯವಾಗಿ ಧನಕ್ಕೆ ದಾನ-ಅಗ್ನಿ-ದಾಯದ್ಯರ ಅರಸರುಗಳ ಭಯ

ವಿರುವಂತೆ ಜ್ಞಾನಧನಕ್ಕೆ ಇರುವದಿಲ್ಲ. ತಾಯಿ ತಂದೆ ಮೊದಲಾದ ಹಿತ ಬಂಧು ಬಾಂಧವರಂತೆ ಜ್ಞಾನವು ರಕ್ಷಿಸುವದು. ಸದಾ ಭೋಗ, ಸುಖ, ಗೌರವ ಕೀರ್ತಿ, ಸುಗುಣಗಳಿಗೆ ಆಶ್ರಯವಾಗಿದೆ. ಕಾಮಧೇನು, ಕಲ್ಪವೃಕ್ಷ, ಚಿಂತಾಮಣಿ ಕೂಡಿ ಕೊಡುವ ಫಲವನ್ನು ಜ್ಞಾನ ಒಂದರಿಂದಲೇ ಸಂಪಾದಿಸಲಿಕ್ಕೆ ಬರುವದು. ಶರೀರ ಶುದ್ಧೀಕರಣಕ್ಕೂ ಕಾರಣವಾಗಿ ಮೋಕ್ಷಪ್ರದವಾಗಿದೆಯೆಂದು ಅನ್ನುವರು. ಈ ಮಾತುಗಳೆಲ್ಲವೂ ಸತ್ಯವಾಗಿವೆ. " ಬರೆಯುವದು-ಓದುವದು ಪರಿಭಾವಿಸುವದು ಸರಸಪ್ರಸಂಗನನ್ನಂಟುಮಾಡಿಕೊಳ್ಳುವದು ವಿದ್ಯೆ ಸಂಪಾದೆಯ " ಅಂಗಗಳು.

ನೋಡಿರಿ! ಸರ್ ರವೀಂದ್ರನಾಥ ಟಾಗೋರರವರು ಗೀತಾಂಜಲಿ ಎಂಬ ಗ್ರಂಥವನ್ನು ಬರೆದು ಸಕಲ ದೇಶ ವಿದೇಶಗಳಲ್ಲಿ ಹೆಸರುವಾಸಿಯಾದರು. ಬೆಲೆಯುಳ್ಳ ಪಾರಿತೋಷಕಕ್ಕೆ ಪಾತ್ರರಾದರು. ಸ್ವದೇಶ, ಪರದೇಶಗಳ ಸ್ವಾಗತ ಪತ್ರ ಪರಾಮರಿಕೆಗಳಿಗೆ ಕಾರಣರಾದರು. ರಾಜರಿಂದ ಸರ್ ಪದವಿ ಸಂಪಾದಿಸಲಿಕ್ಕೆ ಹೇತುವಾದರು ವಾ ಸ, ಮನು, ಶಂಕರಾಚಾರ್ಯ ರೇಣುಕ, ವಶಿಷ್ಠ ಕಾಳಿದಾಸಾದಿಗಳ ಕೀರ್ತಿಗೆ ಅವರವರ ಜ್ಞಾನವೇ ಕಾರಣವಲ್ಲದೆ; ಬೇರೆ ಏನೂ ಇಲ್ಲ ಬುದ್ಧ, ಬಸವ, ಮಧ್ವ, ವಿದ್ಯಾರಣ್ಯಾದಿ ವಿದ್ಯಾ ಮೂರ್ತಿಗಳ ಸುಜ್ಞಾನಸಂಗದಿಂದ ಐಹಿಕ ಪರಲೌಕಿಕ ಸಂಬಂಧದ ಸುಖಸಂಪತ್ತು ಸಂಗ್ರಹವಾಗುವದು ಮೋಟಾರ ವಿದ್ಯಾ ಪ್ರಸಾರಕ ಸರ್ ಹೇನ್ರೀ ಫೋರ್ಡ, ವಿದ್ಯುದ್ದೀಪಾದಿ ಶೋಧಕ ಶಿಖಾಮಣಿ ಎಡಿಸನ್, ಪ್ರಾಣಿಶಾಸ್ತ್ರಾದಿಸುಧಾರಕ ಸರ್ ಭೋಸರವರೆಲ್ಲರೂ ಇದೇ ಮಾಲಿಕೆಯೊಳಗಿನವರೇ!

ಜ್ಞಾನ, ಅಜ್ಞಾನಗಳು ಕ್ರಮವಾಗಿ ಬೆಳಕು, ಕತ್ತಲೆಗಳಂತೆ ಒಂದಕ್ಕೊಂದು ವಿರುದ್ಧಸ್ಥಿತಿಯಲ್ಲಿರುವದರಿಂದ; ಅವುಗಳ ಫಲಗಳಾದರೂ ಬೇವು, ಬೆಲ್ಲಗಳಂತೆ ವಿರುದ್ಧಾವಸ್ಥೆಯಲ್ಲಿಯೇ ಇರುವವು ಇನ್ನು ಕನ್ನಡ ಗಾದೆಯ ಭಾಷೆಯಲ್ಲಿ ಸಾರಾಂಶ ಸಂಬಂಧವನ್ನು ಹೇಳಿ ಈ ವಿಷಯವನ್ನು ಪರಿಸಮಾಪ್ತಿಗೊಳಿಸುವೆ.

ಸದ್ವಿದ್ಯೆಯು ಸುಜ್ಞಾನದ ತಾಯಿ, ಸುಜ್ಞಾನವು ಸುಖದ ತಾಯಿ; ವಿದ್ಯೆ ಇಲ್ಲದವ ಹೆದ್ದಿಗಿಂತ ಕಡೆ; ಜಾಣ ಜಗತ್ರಾಣ; ಓದಿದವ ಛೇದ ತಿಳಿದಾನು; ಅಲಗಿನ ಶಕ್ತಿಗಿಂತ ಗಲಗಿನ ಶಕ್ತಿ ಮೇಲು; ಬುದ್ಧಿವಂತನೇ ಬಲವಂತನು.

———

ತಪ್ಪು ಯಾರದು ?

ಸಂಪಾದಕ

ನಮ್ಮೀ ಪ್ರಪಂಚವು ಪೂರ್ಣಾವಸ್ಥೆಗೆ ಮುಟ್ಟಿಲ್ಲವೆಂದು ಸರ್ವರೂ ಒಪ್ಪುವರು. ಇದರಲ್ಲಿ ಅನೇಕ ನ್ಯೂನತೆಗಳು ಅಡಕವಾಗಿರುವವು ಅಸಮತೆಯು ಸರ್ವತ್ರ ಕಂಡು ಬರುವದು. ಈ ಪ್ರಪಂಚವನ್ನು ಬೇರೆ ಬೇರೆ ಜನರು ಬೇರೆ ಬೇರೆ ವಿಧವಾಗಿ ಕಾಣುವರು. ವೇದಾಂತಿಗಳ ಕಲ್ಪನೆಯು ಬೇರೆ; ಚಾರ್ವಾಕರ ಕಲ್ಪನೆಯು ಬೇರೆ, ಶಾಸ್ತ್ರಜ್ಞರ ಕಲ್ಪನೆಯು ಬೇರೆ, ವ್ಯವಹಾರವಿದರ ಕಲ್ಪನೆಯು ಬೇರೆ, ಬಡವನ ಕಲ್ಪನೆಯು ಬೇರೆ, ಶ್ರೀಮಂತನ ಕಲ್ಪನೆಯು ಬೇರೆ, ಹೀಗೆ ಪ್ರತಿಯೊಬ್ಬರು ಈ ಜಗತ್ತನ್ನು ಕಾಣುವ ದೃಷ್ಟಿಕೋಣವು ಬೇರೆ ಬೇರೆಯಾಗಿರುವದು. ಆದರೆ ಇದು ನ್ಯೂನತೆಗಳಿಂದಲೂ, ಅಸಮತೆಯಿಂದಲೂ ತುಂಬಿರುವದೆಂದು ಸರ್ವರೂ ತಿಳಿಯುವರು ಇದು ಪ್ರತಿ ನಿಮಿಷ ಸ್ಥಿತ್ಯಂತರವನ್ನು ಹೊಂದುತ್ತ ಇರುವದು. ಒಮ್ಮೆ ಸುಧಾರಿಸಿದ ಹಾಗೆ ತೋರುವದು. ಇನ್ನೊಮ್ಮೆ ಅಧೋಗತಿಗೆ ಇಳಿದ ಹಾಗೆ ಕಾಣುವದು ಕೆಲವರು ಇದರ ಇರುವಿಕೆಯನ್ನು ಸುಧಾರಿಸಬೇಕೆಂದು ಹಗಲಿರುಳು ಚಿಂತಿಸುವರು. ಕೆಲವರು ಸ್ವಾರ್ಥಪರಾಯಣರಾಗಿ ಇದರ ಅವನತಿಗೆ ಕಾರಣರಾಗುವರು. ಕೆಲವರು ಹಾಗೂ ಹೀಗೂ ಇರುವರು. ಆದರೆ ಇದನ್ನು ಸುಧಾರಿಸಲೆಳಿಸುವ ಜನರಲ್ಲಿ ಶಿಕ್ಷಕ ವರ್ಗವು ಒಂದಾಗಿರುವದು. ಶಿಕ್ಷಣ ಕಾರ್ಯವು ಜಗತ್ತಿನ ಸರ್ವತೋಮುಖವಾದ ಸುಧಾರಣೆಯ ಮುಖ್ಯ ಸಾಧನವಾಗಿರುವದು ಆದ್ದರಿಂದ ಈ ಉದ್ದೇಶವು ಪವಿತ್ರ ಕಾರ್ಯವೆಂದು ಸರ್ವರೂ ಒಪ್ಪುವರು

ಶಿಕ್ಷಣ ಕಾರ್ಯವು ಪವಿತ್ರವಾದಾಗ್ಯೂ ಇದರಲ್ಲಿಯೂ ಕೂಡ ಒಳ್ಳೆಯ ಶಿಕ್ಷಣ, ಕೆಡಕಾದ ಶಿಕ್ಷಣವೆಂದು ಎರಡು ಭೇದಗಳನ್ನು ಮಾಡಬಲ್ಲರು. ಒಳ್ಳೆಯದಾದ ಶಿಕ್ಷಣವು ದೇಶದಲ್ಲಿ ನೆಲಿಸಬೇಕೆಂದು ದೇಶಾಭಿಮಾನಿಗಳೆಲ್ಲರೂ ಬಯಸುವರು. ಆದರೆ ಅದರಲ್ಲಿ ಸಹ ತೀವ್ರತರ ಮತಭೇದವುಂಟು. ಒಬ್ಬರಿಗೆ ಸರಿಯಾಗಿ ತೋರುವ ಶಿಕ್ಷಣ ಪದ್ಧತಿಯು ಇನ್ನೊಬ್ಬರಿಗೆ ಸರಿಯಾಗಿ ತೋರುವದಿಲ್ಲ. ರೂಢಿಯಲ್ಲಿರುವ ಶಿಕ್ಷಣ ಪದ್ಧತಿಯಲ್ಲಿ ಆಯಾಯ ಜನರು ದೋಷಗಳನ್ನು ಕಂಡು ಹಿಡಿದು ತಮತಮಗೆ ತಿಳಿದ ರೀತಿಯಲ್ಲಿ ತಿದ್ದಲೆತ್ನಿಸುವರು

ಪ್ರತಿಯೊಬ್ಬರ ತಿಳುವಳಿಕೆಯಲ್ಲಿ ಒಂದು ಸಾಮಾನ್ಯ ವಿಚಾರವಿರುವದು ಅದೇನೆಂದರೆ, ತನ್ನನ್ನು ಬಿಟ್ಟು ಉಳಿದ ಜನರಲ್ಲಿಯೇ ದೋಷಗಳಿರುವವು ತನ್ನ

ವಿಚಾರಗಳೇ ಹೆಚ್ಚು ಸಮಂಜಸವಾದವುಗಳು. ಸರ್ವ ದೋಷಗಳಿಗೂ ಇತರರೇ ಕಾರಣರು. ಆದ್ದರಿಂದ ಅನ್ಯರನ್ನು ತಿದ್ದುವದೇ ಅವಶ್ಯವಾದದ್ದು.

ಈ ಬಗೆಯ ಕಲ್ಪನೆಗಳು ನಮ್ಮ ಶಿಕ್ಷಕ ವರ್ಗದಲ್ಲಿ ಕೂಡ ಕಂಡು ಬರುವವು. ಶಿಕ್ಷಕರಲ್ಲಿ ಮೂರು ವರ್ಗಗಳನ್ನು ಮಾಡಬಹುದು. ಪ್ರಾಥಮಿಕ ಶಾಲೆಯ ಶಿಕ್ಷಕರು, ಮಾಧ್ಯಮಿಕ ಶಾಲೆಯ ಶಿಕ್ಷಕರು, ಕಾಲೇಜುಗಳ ಶಿಕ್ಷಕರು. ಕಾಲೇಜುಗಳ ಶಿಕ್ಷಕರು---ಪ್ರೊಫೆಸರರು ಮತ್ತು ಪ್ರಿನ್ಸಿಪಾಲರು--ವಿದ್ಯಾರ್ಥಿಗಳಲ್ಲಿಯ ನ್ಯೂನತೆಗೆ ಹಾಯಸ್ಕೂಲುಗಳ ಶಿಕ್ಷಕರೇ ಕಾರಣರೆಂದು ದೋಷಿಸುತ್ತಿರುವರು. ತಾವು ಎಷ್ಟು ಪ್ರಯತ್ನ ಬಟ್ಟರೂ ವಿದ್ಯಾರ್ಥಿಗಳ ದಡ್ಡತನವನ್ನು ತೆಗೆದು ಹಾಕಲು ಅವರಿಗೆ ಸಾಧ್ಯವಾಗದಂತೆ ತಮ್ಮಲ್ಲಿ ಏನೂ ದೋಷವಿಲ್ಲವಂತೆ. ಹಾಯಸ್ಕೂಲುಗಳಲ್ಲಿ ಶಿಕ್ಷಣವು ಸರಿಯಾಗಿ ಆಗಿದ್ದರಿಂದ ನೂರಕ್ಕೆ ನೂರು ವಿದ್ಯಾರ್ಥಿಗಳ್ಳ ಪರೀಕ್ಷೆಗಳಲ್ಲಿ ಉತ್ತೀರ್ಣರಾಗುವದು ಅಸಾಧ್ಯವಾಗಿದೆಯಂತೆ. ಅವರು ಮಾಡುವ ಪ್ರಯತ್ನವನ್ನು ನೋಡಿದರೆ ಇಷ್ಟು ಒಳ್ಳೇ ಪರಿಣಾಮವು ಆಗತಕ್ಕದ್ದಂತೆ. ಹೀಗೆ ತಮ್ಮ ಮೇಲೆ ಯಾವ ದೋಷವನ್ನು ಇಟ್ಟುಕೊಳ್ಳದಲೆ ಹಾಯಸ್ಕೂಲುಗಳ ಶಿಕ್ಷಕರ ಮೇಲೆ ಎಲ್ಲ ಭಾರವನ್ನು ಹಾಕುವರು. - ಇದರಂತೆ ಹಾಯಸ್ಕೂಲುಗಳ ಶಿಕ್ಷಕರು ಪ್ರಾಥಮಿಕ ಶಾಲೆಗಳ ಶಿಕ್ಷಕರ ಮೇಲೆ ಎಲ್ಲ ತಪ್ಪನ್ನು ಹೊರಿಸುವರು ಅಂದರೆ ಬುಡದಿಂದ ತುದಿಯ ವರೆಗೆ ಹಿಡಿದುಕೊಂಡು ಎಲ್ಲ ದೋಷಗಳು ಪ್ರತ್ಯಕ್ಷಾಪ್ರತ್ಯಕ್ಷ ರೀತಿಯಿಂದ ಪ್ರಾಥಮಿಕ ಶಿಕ್ಷಕರ ಮೇಲೆಯೇ ಹೊರಿಸಲ್ಪಡುವದು.

ಪ್ರಾಥಮಿಕ ಶಿಕ್ಷಕರಾದರೂ ಈ ತಪ್ಪು ತಮ್ಮದೆಂದು ಬಗೆಯದೆ ಬಾಲಕರ ತಂದೆ-ತಾಯಿಗಳ ಮತ್ತು ನೆರೆಹೊರೆಯ ಮೇಲೆ ಹಾಕುವದುಂಟು. ಗೃಹ ಶಿಕ್ಷಣವೂ, ಸುತ್ತುಮುತ್ತಲಿನ ಪರಿಸ್ಥಿತಿಯೂ ಸರಿಯಾಗಿಲ್ಲದಿದ್ದರೆ ತಾವು ಮಾಡುವ ಭಗೀರಥ ಪ್ರಯತ್ನವು ಕೂಡ ನಿಷ್ಫಲವಾಗುವದು. ಹೀಗೆ ತಮ್ಮನ್ನು ದೋಷಮುಕ್ತರನ್ನಾಗಿ ಮಾಡಿಕೊಳ್ಳುವರು.

ಪಾಲಕರಂತೂ ಶಿಕ್ಷಕರನ್ನೂ ಶಾಲೆಗಳನ್ನೂ ಹಳಿಯುವರು. ತಮ್ಮ ತಮ್ಮ ಹುಡುಗರು ಬುದ್ಧಿವಂತರೆಂದೇ ಭಾವಿಸುವರು. ಅವರು ಸ್ವಾಭಾವಿಕವಾಗಿ ಚತುರರಿರುವರು. ಆದರೆ ಅವರು ಮುಂದೆ ಬುದ್ಧಿವಂತರಾಗುವದು ಅಥವಾ ದಡ್ಡರಾಗುವದು ಶಿಕ್ಷಕರನ್ನೇ ಅವಲಂಬಿಸಿರುವದೆಂದು ಮನದಟ್ಟಾಗಿ ತಿಳಿದಿರುವರು. ಹೀಗೆ ಒಬ್ಬರು ಇನ್ನೊಬ್ಬರ ಮೇಲೆ ತಪ್ಪನ್ನು ಹೊರಿಸುವರು.

ಕಾಲೇಜದ ಪಂಡಿತರು ದೊಡ್ಡ ಪರೀಕ್ಷೆಗಳನ್ನು ಕೊಟ್ಟವರೂ, ದೊಡ್ಡ ಸಂಬಳದವರೂ, ಸಮಾಜದಲ್ಲಿ ಬಹಳ ಗೌರವದ ಸ್ಥಾನವನ್ನು ಹೊಂದಿದವರೂ,

ವರ್ಚಸ್ಸಿಗಳೂ ಇರುವದರಿಂದ ಅವರು ನಿರ್ಭಯದಿಂದ ಎಲ್ಲ ತಪ್ಪನ್ನು ತಮ್ಮ ಕೆಳಗಿನ ತರಗತಿಯ ಶಿಕ್ಷಕರ ಮೇಲೆ ಹೊರಿಸಲು ಸಮರ್ಥರಿರುವರು. ಅವರ ಅಭಿಪ್ರಾಯವನ್ನು ಅಲ್ಲಗಳೆಯುವ ಸಾಮರ್ಥ್ಯವು ಯಾರಲ್ಲುಂಟು? ಇದೇ ರೀತಿಯಲ್ಲಿ ಹಾಯಸ್ಕೂಲುಗಳ ಶಿಕ್ಷಕರು ತಮ್ಮ ಶಕ್ತಿಗೆ ಸರಿಯಾಗಿ ಪ್ರಾಥಮಿಕ ಶಾಲೆಗಳನ್ನು ಹಿಂಜರಿಯುವ ೨. ಪಾಲಕರೂ ಕೂಡ ಈ ಶಿಕ್ಷಕರನ್ನು ದನಗಾಹಿಗಳಂತೆ ಬಗೆಯುವರು. ಹೀಗೆ ಎಲ್ಲ ತಪ್ಪಿಗೂ ಪ್ರಾಥಮಿಕ ಶಾಲೆಯ ಶಿಕ್ಷಕರೇ ಗುರಿಯಾಗುವರು. ಅವರನ್ನು ತಿದ್ದುವದೂ, ಅವರಿಂದ ಸರಿಯಾದ ಕೆಲಸವನ್ನು ತೆಗೆದುಕೊಳ್ಳುವದೂ ಮೇಲಧಿಕಾರಿಗಳ ಕರ್ತವ್ಯವೆಂದು ಸಾಮಾನ್ಯ ತಿಳುವಳಿಕೆ.

ಹೀಗೆ ಎಲ್ಲರ ತಪ್ಪಿಗೂ ತಾವೇ ಹೊಣೆಯಾದ ಪ್ರಾಥಮಿಕ ಶಾಲೆಯ ಶಿಕ್ಷಕರ ಸ್ಥಿತಿಗತಿಗಳೇನೆಂಬದನ್ನು ಯಾರೂ ವಿಚಾರಿಸುವದಿಲ್ಲ. ಅವರ ಮೇಲಿರುವ ಭಾರವಾದರೋ ಸಾಮಾನ್ಯವಾಗಿಲ್ಲ. ಚಿಕ್ಕ ಬಾಲಕರ ಬೌದ್ಧಿಕ, ಶಾರೀರಕ, ನೈತಿಕ ಸುಧಾರಣೆಯನ್ನು ತೃಪ್ತಿಕರವಾಗಿ ಮಾಡುವದಲ್ಲದೆ ಅವರನ್ನು ಸರ್ವಜ್ಞರನ್ನೂ, ವ್ಯವಹಾರಚತುರರನ್ನೂ ಮಾಡತಕ್ಕದ್ದು. ಇಷ್ಟೊಂದು ಅಗಾಧ ಕಾರ್ಯವನ್ನು ಅವರು ಹಸಿವು ತೃಷೆಗಳ ಪರಿವೆಯಿಲ್ಲದೆ ಮಾಡಬೇಕು. ಅವರು ಸಾಮಾನ್ಯವಾಗಿ ದೊಡ್ಡ ಕುಟುಂಬವುಳ್ಳವರಿದ್ದು ತಿಂಗಳೊಂದಕ್ಕೆ ೧೫—೨೫ ರೂಪಾಯಿಗಳಲ್ಲಿ ತಮ್ಮ ಪ್ರಪಂಚವನ್ನು ಸಾಗಿಸಿಕೊಂಡು ಅರೆಹೊಟ್ಟೆ, ಹರಕು ಬಟ್ಟೆಗಳಿಂದ ಹುಡುಗರಿಗೆ ಮಾದರಿಯ ಶಿಕ್ಷಕರಾಗಿ, ಜನರಿಗೆ ಆದರ್ಶಭೂತರಾಗಿ, ಹೊನ್ನು-ಮಣ್ಣುಗಳ ಸೆಳವಿಗೆ ಒಳಗಾಗದೆ ಯೋಗಿಗಳಿಗೆ ಮಿಗಿಲಾದ ಮನೋಬಲದಿಂದ ತಮ್ಮ ಪವಿತ್ರ ಕಾರ್ಯವನ್ನು ಸಾಗಿಸತಕ್ಕದ್ದೆಂಬ ಕಲ್ಪನೆಯು ಬೇರೂರಿದೆ.

ಒಬ್ಬ ಕಾಲೇಜದ ಪ್ರಿನ್ಸಿಪಾಲರ ಸಂಬಳದಲ್ಲಿ ನೂರು ಜನ ಪ್ರಾಥಮಿಕ ಶಿಕ್ಷಕರು ಹೊಟ್ಟೆ ಹೊರೆದುಕೊಳ್ಳುವರು. ಅವರ ಕೈಯಲ್ಲಿ ಸುಮಾರು ೩೦೦೦ ಜನ ವಿದ್ಯಾರ್ಥಿಗಳು ಶಿಕ್ಷಣ ಹೊಂದುತ್ತಿರುವರು. ಇಷ್ಟು ವಿದ್ಯಾರ್ಥಿಗಳಲ್ಲಿ ಎಷ್ಟು ಜನ ವಿದ್ಯಾರ್ಥಿಗಳು ಪ್ರಾಥಮಿಕ ಶಿಕ್ಷಕರಿಂದ ಉದ್ಧಾರವಾಗುತ್ತಿರಬಹುದು? ಒಬ್ಬ ಪ್ರಿನ್ಸಿಪಾಲನಿಂದ ಎಷ್ಟು ಜನ ವಿದ್ಯಾರ್ಥಿಗಳು ಉದ್ಧಾರ ಹೊಂದುತ್ತಿರಬಹುದು? ಮೇಲಾಗಿ ಪ್ರಾಥಮಿಕ ಶಾಲೆಗಳಲ್ಲಿ ಉತ್ತಮ ಶಿಕ್ಷಣವನ್ನು ಹೊಂದಿ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳೇ ಹಾಯಸ್ಕೂಲುಗಳನ್ನು ಸೇರುವರು. ಅಲ್ಲಿ ೭—೮ ವರ್ಷ ಅಭ್ಯಾಸ ಮಾಡಿ ಕಡೆಯ (ಕಾಲೇಜದ ಪಂಡಿತರು ತೆಗೆದುಕೊಂಡ) ಪರೀಕ್ಷೆಯಲ್ಲಿ ಪಾಸಾಗಿ ಕಾಲೇಜ ಸೇರಿದ ವಿದ್ಯಾರ್ಥಿಗಳನ್ನು ೧೦೦ಕ್ಕೆ ೫೦ರಂತೆ ಕೂಡ ತಿದ್ದಲಸಮರ್ಥರಾದ ಪಂಡಿತರು ಎತ್ತ; ದೈನ್ಯಾವಸ್ಥೆಯಲ್ಲಿದ್ದು ದುಡಿಯುತ್ತಿರುವ ಪ್ರಾಥಮಿಕ ಶಿಕ್ಷಕರೆತ್ತ?

ಕಲ್ಲಿನಲ್ಲಿ ಮೂರ್ತಿಯನ್ನು ಮಾಡುವ ಕಾರ್ಯವು ಪ್ರಾಥಮಿಕ ಶಿಕ್ಷಕರದು. ಬಂಗಾರದಲ್ಲಿ ಕೆಲಸ ಮಾಡುವದು ಕಾಲೇಜದ ಪಂಡಿತರದು. ಕಾಲೇಜದಲ್ಲಿ ಬೇಕಾದ ಉಪಕರಣಗಳುಂಟು. ಪ್ರಾಥಮಿಕ ಶಾಲೆಗಳಿಗೆ ಸರಿಯಾದ ಕಟ್ಟಡವಿರುವದು ಸಹ ಕಷ್ಟ. ಈ ರೀತಿಯಲ್ಲಿ ಅನೇಕ ಕಷ್ಟನಷ್ಟಗಳಿಗೆ ಈಡಾಗಿ, ಅನೇಕ ನ್ಯೂನತೆಗಳುಳ್ಳ ಶಾಲೆಗಳಲ್ಲಿ ಕೆಲಸ ಮಾಡುವ ಪ್ರಾಥಮಿಕ ಶಿಕ್ಷಕರಿಗೆ ತಮ್ಮ ಅಧ್ಯಾಪನ ಕಾರ್ಯದಲ್ಲಿ ಯಾವ ಸ್ವಾತಂತ್ರ್ಯವು ಕೂಡ ಇರುವದಿಲ್ಲ. ಪ್ರಪಂಚದ ಅಡಚಣೆಗಳು ಅವರನ್ನು ಬಾಧಿಸುತ್ತಿರುವದರಿಂದ ಅವರಲ್ಲಿ ಸಮಾಧಾನವೆಂಬುದು ಕಂಡು ಬರುವದು ಅಪರೂಪ. ಆದಾಗ್ಯೂ ಅವರಲ್ಲಿ ಅನೇಕರು ತಮ್ಮ ಕಾರ್ಯದಲ್ಲಿ ಅಭಿಮಾನ ವಹಿಸಿ ದಕ್ಷತೆಯಿಂದ ಕೆಲಸ ಮಾಡುತ್ತಿರುವರು. ಅದಕ್ಕೆ ಪ್ರತಿಫಲವು ಬಹಳವಾದರೆ " ಶಾಭಾಶ್ ".

ವಸ್ತುಸ್ಥಿತಿಯು ಹೀಗಿರಲು ತಪ್ಪು ಯಾರದು ?

ರಾಷ್ಟ್ರಕಾರ್ಯಕ್ಕಾಗಿ ಶಿಕ್ಷಕರ ಕರ್ತವ್ಯ.

ಲೇಖಕರು :—ಸಂಗಪೋಶತನಯ, ಹುಬ್ಬಳ್ಳಿ.

[ಹೋದ ಸಂಚಿಕೆಯಿಂದ ಮುಂದೆ ಸಾಗಿದ್ದು].

ಲ್ಲ ಶೋಭೆಯುಳ್ಳ ಖಾದಿಯ ಸ್ವಚ್ಛವಾದ ಬಿಳೀ ಟೊಪ್ಪಿಗೆಗಳನ್ನು ಧರಿಸಲು ಎಲ್ಲರಿಗೂ ಅನುಕೂಲವಿರುವದು.

ಹುಡುಗರು ತಲೆಗೆ ಸುತ್ತುವ ರುಮಾಲವಾಗಲಿ, ಮುಂಡಾಸವಾಗಲಿ (ಪೇಟಾ) ಬೇರೆ ಯಾವ ತರದ ಟೊಪ್ಪಿಗೆಗಳಾಗಲಿ ಖಾದಿಯ ಟೊಪ್ಪಿಗೆಯಷ್ಟು ಕಡಿಮೆ ಬೆಲೆಯಲ್ಲಿ ಬರುವದಿಲ್ಲ; ಇದರಷ್ಟು ಶೋಭೆಯೂ ಉಂಟಾಗುವದಿಲ್ಲ. ಕಾರಣ ಕಡಿಮೆಯ ಕಿಮ್ಮತ್ತಿನಲ್ಲಿ ಸ್ವಚ್ಛವಾಗಿಯೂ ಅಚ್ಚುಕಟ್ಟಾಗಿಯೂ ಶೋಭಿಸುವ ಖಾದಿಯ ಟೊಪ್ಪಿಗೆಗಳನ್ನು ಹುಡುಗರು ಬೇಡಿದರೆ, ತಂದೆತಾಯಿಗಳು ತಪ್ಪದೇ ಕೊಡಿಸಿಬಿಡುವರು. ಈ ಪ್ರಕಾರ ಹುಡುಗರಿಗೆ ತಿಳಿಸಿ ಹೇಳುವದು ಮಾತ್ರ ನಮ್ಮ ಶಿಕ್ಷಕರಕಡಿಗದೆ. ಮತ್ತು ಅದು ಅವರ ಕರ್ತವ್ಯವೂ ಆಗಿದೆ.

ಯಾಕಂದರೆ, " ಸ್ವದೇಶಪ್ರೀತಿಯ ಪಾಠನ್ನು ಕಲಿಸಲು ಸರಕಾರದವರೇ ನಿರ್ಣಯಿಸಿಬ್ಬಾರೆ.

" ಅಳಲಿಯಭಕ್ತಿ" ಯಂತೆ ದೇಶದ ದಾರಿದ್ರ್ಯವನ್ನು ನೀಗುವ ಈ ಪುಣ್ಯ ಕಾರ್ಯದಲ್ಲಿ ಶಿಕ್ಷಕರಿಗೂ ಕೆಲವಂಶದಿಂದ ಕೆಲಸಮಾಡಲು ಬರುವಂತಿದೆ; ಅವರು ಹೆದರುವಂತಿಲ್ಲ. ಪುಣ್ಯಮಾತ್ರ ಲಭಿಸುವದು.

ಕಾರಣ ಶಿಕ್ಷಕಮಹಾಶಯರೇ! ವಿದ್ಯಾರ್ಥಿಗಳಿಗೆ ಖಾದಿಯನ್ನು ಧರಿಸಲು ಉಪದೇಶ ಮಾಡಿರಿ; ಕನಿಷ್ಟಪಕ್ಷಕ್ಕೆ ಬರೇ ಒಂದೇ ಒಂದು ಖಾದಿಯ ಟೊಪ್ಪಿಗೆಯನ್ನಾದರೂ ಧರಿಸಬೇಕೆಂದು ಹೇಳಿದರೆ, ಉದ್ಯೋಗವಿಲ್ಲದೆ ಉಪವಾಸದಿಂದ ಬಳಲುವ ನಮ್ಮ ಜನರಿಗೆ ಉಪಜೀವನದ ಮಾರ್ಗಕ್ಕೆ ಹೆಚ್ಚಿದಂತಾಗಿ ರಾಷ್ಟ್ರ ಕಲ್ಯಾಣ ಕಾರ್ಯದ ಪುಣ್ಯಭಾಗಿಗಳಾದಂತಾಗಲಿಲ್ಲವೆ ?

ನೋಟ ಬುಕ್.

ವಿದ್ಯಾರ್ಥಿಯ ನೋಟ ಬುಕ್ಕ—ಬರಹದ ಹೊತ್ತಿಗೆಯ—ನ್ನು ನೋಡಿದರೆ ಅವನು ಯಾವ ತರಹದವನಿರುವನೆಂಬುದು ಒಡೆದು ಕಾಣುವದು. ನೋಟ ಬುಕ್ಕಿನ ಮೇಲಿಂದ ಅವನ ವರ್ಗದ ಶಿಕ್ಷಕನ, ಹೆಡ್ ಮಾಸ್ತರನ ಮತ್ತು ಇಡೀ ಸಾಲೆಯ ಯೋಗ್ಯತೆಯೇ ಗೊತ್ತಾಗುವದು ಹೊಲಸಾದ ನೋಟ ಬುಕ್ಕಿನಿಂದ ಅವನಲ್ಲಿ ಸ್ವಚ್ಛತೆಯ ಅಭಾವವು ಇರಲಿಕ್ಕೇ ಬೇಕೆಂಬುದು ಧ್ವನಿತವಾಗುವದು. ಅವನ ಅರಿವೆಗಳು ಹೊಲಸು, ಕೈ-ಮೈಗಳು ಹೊಲಸು, ಆಟಗಳು ಹೊಲಸು, ಇಂತು ಎಲ್ಲ ತರದ ವ್ಯಾಪಾರಗಳಲ್ಲಿ ಹೊಲಸು ಕಂಡು ಬರುವದು. ನೋಟ ಬುಕ್ಕು ಸ್ವಚ್ಛವಾಗಿದ್ದರೆ ಆ ಹುಡುಗನು ತನ್ನ ಯಾವ ಕಾರ್ಯವನ್ನಾಗಲಿ ಅಚ್ಚುಕಟ್ಟಾಗಿ ಮಾಡುವವನೆಂಬುದು ತಿಳಿದು ಬರುವದು. ಹುಡುಗರಲ್ಲಿಯ ಹೊಲಸುತನಕ್ಕೆ ತಂದೆ-ತಾಯಿಗಳು ಬಹುಮಟ್ಟಿಗೆ ಕಾರಣರಿರುವರು. ಪರಿಸ್ಥಿತಿ ಯಾದರೂ ಕಾರಣವಿರುವದು. ಇದು ಅವರ ಓದು-ಬರಹದಲ್ಲಿ ಪ್ರತಿಬಿಂಬಿಸುವದು. ಶಿಕ್ಷಣದ ಧ್ಯೇಯವು ಕೇವಲ ಓದು-ಬರಹವನ್ನು ಕಲಿಸುವದಿರುವದಿಲ್ಲ.

ವಿದ್ಯಾರ್ಥಿಗಳಿಗೆ ನೀತಿ-ನಡಾವಳಿಗಳನ್ನು ಕಲಿಸುವದೂ ಇರುತ್ತದೆ. ಇದೇ ಶಿಕ್ಷಣದ ಮುಖ್ಯವಾದ ಧ್ಯೇಯ. ಅಂದ ಮೇಲೆ ಹೊಲಸುತನದ ನಡಾವಳಿಗಳು ಹುಡುಗರಲ್ಲಿ ಮನೆಮಾಡದಂತೆ ಶಿಕ್ಷಕರು ಜಾಗ್ರತರಾಗಿರತಕ್ಕದ್ದು. ವಿದ್ಯಾರ್ಥಿಗಳ ನೋಟ ಬುಕ್ಕನ್ನು ಮೊದಲಿನಿಂದ ಕಡೆಯ ವರೆಗೆ ಪರಿಶೀಲಿಸಿದರೆ ಶಿಕ್ಷಕನು ಹುಡುಗರಲ್ಲಿ ಅಚ್ಚುಕಟ್ಟುತನವನ್ನು ಬೆಳೆಯಿಸಲಿಕ್ಕೆ ಮಾಡಿದ ಪ್ರಯತ್ನವು ಚನ್ನಾಗಿ ಕಂಡು ಬರುವದು. ಮೊದಲಿನಿಂದ ಕಡೆಯ ವರೆಗೆ ನೋಟ ಬುಕ್ಕಿನಲ್ಲಿ ಅವೇ ತಪ್ಪುಗಳು ಹೆಚ್ಚೆಚ್ಚಾಗಿ, ಹೊಲಸು ಮುಂತಾದವು ಕಂಡುಬಂದರೆ ಶಿಕ್ಷಕನು ಹುಡುಗರ ತಿದ್ದುಪಡೆಯಲ್ಲಿ ಎಳ್ಳಷ್ಟೂ ದಕ್ಷತೆಯನ್ನು ತೋರಿಸಿಲ್ಲವೆಂಬದು ಕಾಣುವದು. ಅದರಿಂದ ಶಿಕ್ಷಕನು ಸ್ವತಃ ಸೋಮಾರಿಯೂ, ಕರ್ತವ್ಯಹೀನನೂ ಇರುವನೆಂಬುದು ತಿಳಿದು ಬರುವದು. 'ತನಗಿಲ್ಲದ ಪಾಪಿ ಪರರಿಗಿನ್ನೇನು ಕೊಟ್ಟೀತೆ' ಂಬ ಗಾದೆಯಂತೆ ತನ್ನಲ್ಲಿಯೇ ಅಚ್ಚುಕಟ್ಟುತನ, ಪದ್ಧತಿ, ದಕ್ಷತೆ ಮುಂತಾದ ಮಾದರಿಯ ಅವಶ್ಯ ಗುಣಗಳು ಇಲ್ಲದಿದ್ದರೆ ಶಿಕ್ಷಕನು ತನ್ನ ವಿದ್ಯಾರ್ಥಿಗಳನ್ನಾದರೂ ತಿದ್ದುವ ಬಗೆ ಹೇಗೆ? ನೋಟ ಬುಕ್ಕುಗಳ ಮೇಲಿಂದ ಶಾಲೆಯ ಹೆಡ್ ಮಾಸ್ತರನಾದರೂ ಈ ಬಗ್ಗೆ ಎಷ್ಟು ಶ್ರಮ ವಹಿಸಿರುವನೆಂಬುದು ಗೊತ್ತಾಗುತ್ತದೆ. ನೋಟ ಬುಕ್ಕಿನ ಮೇಲೆ ತನ್ನ ಶರವನ್ನು ಮೇಲೆ ಮೇಲೆ ಬರೆಯುತ್ತ ತನ್ನ ಕೈಕೆಳಗಿನ ಶಿಕ್ಷಕರಿಂದ ಸರಿಯಾಗಿ ಕೆಲಸ ತೆಗೆದುಕೊಳ್ಳುವನೋ ಇಲ್ಲವೋ ಎಂಬುದು ತಿಳಿದು ಬರುವದು. ಇದರಿಂದ ತನ್ನ ತನ್ನ ಶಾಲೆಯ ಅಚ್ಚುಕಟ್ಟುತನವನ್ನು ಎಷ್ಟು ದಕ್ಷತೆಯಿಂದ ಜತನ ಮಾಡಿರುವನೆಂಬುದು ತಿಳಿದು ಬರುವದು.

ಪರೀಕ್ಷಕರು ಈ ನೋಟ ಬುಕ್ಕುಗಳನ್ನು ನೋಡಿದೊಡನೆಯೇ ಆ ವರ್ಗದ ಸಾಮಾನ್ಯ ಸ್ಥಿತಿಯನ್ನು ಕಂಡು ಹಿಡಿಯಬಹುದು. ಆದುದರಿಂದ ಕಾಪೀ ಪುಸ್ತಕ, ಶಬ್ದಾರ್ಥ, ನೋಟ ಬುಕ್ಕು ಮೊದಲಾದವುಗಳನ್ನು ಶಿಕ್ಷಕನು ಬಹು ದಕ್ಷತೆಯಿಂದ ಬರೆಯಿಸಬೇಕು. ಹುಡುಗರ ಪ್ರಗತಿಯನ್ನು ಕ್ರಮೇಣ ಪರೀಕ್ಷಿಸುತ್ತ ಹೋಗಬೇಕು. ಹೆಡ್ ಮಾಸ್ತರರು ಆಗಾಗ್ಗೆ ಈ ನೋಟ ಬುಕ್ಕುಗಳನ್ನು ಪರೀಕ್ಷಿಸಿ ವರ್ಗದ ಶಿಕ್ಷಕರಿಗೆ ಸರಿಯಾದ ಸೂಚನೆಗಳನ್ನು ಕೊಡಬೇಕು. ಆರಂಭದಲ್ಲಿ ಇದು ಹುಡುಗರಿಗೂ, ಶಿಕ್ಷಕರಿಗೂ, ಹೆಡ್ ಮಾಸ್ತರರಿಗೂ ಬಹಳ ಶ್ರಮದ ಕೆಲಸವೆಂದು ಅನಿಸಿದರೂ ಬರಬರುತ್ತ ರೂಢಿಯಾಗಿ ಅಚ್ಚುಕಟ್ಟುತನದ ಸ್ವಭಾವವು ಹುಡುಗರಲ್ಲಿಯೂ, ಶಿಕ್ಷಕರಲ್ಲಿಯೂ ನೆಲಿಸಿ, ನಿರಾಯಾಸವಾಗಿ ಶಾಲೆಯನ್ನು ಉತ್ತಮ ಸ್ಥಿತಿಯಲ್ಲಿ ಇಡಲಿಕ್ಕಾಗುವದು. ಈ ಬಗ್ಗೆ ಶಿಕ್ಷಕರು ಮಾದರಿಯ ಶಾಲೆಗಳನ್ನು ನೋಡಿಕೊಂಡು ಕಲಿತುಕೊಳ್ಳಬೇಕು.

—ಸಂಪಾದಕ.

ಆರೋಗ್ಯ ಪರೀಕ್ಷೆ.

ಸಂಪಾದಕ.

ಹಿಂದುಸ್ಥಾನದಲ್ಲಿ ಪೂರ್ವದಿಂದ ನಡೆದು ಬಂದ ಆಯುರ್ವೇದವೆಂಬ ವೈದ್ಯ ಶಾಸ್ತ್ರವು ಈಗ ತೀರ ಅಳಿವು ಹೋಗಿದೆ. ಹಿಂದುಸ್ಥಾನವೇ ಆಯುರ್ವೇದಕ್ಕೆ ತವರು ಮನೆಯು. ಇದರಿಂದಲೇ ಉಳಿದ ದೇಶಗಳು ಈ ವಿದ್ಯೆಯನ್ನು ಕಲಿತು ಕೊಂಡವು. ಪೂರ್ವದಲ್ಲಿ ಸಾಮಾನ್ಯ ಜನರಿಗೆ ಸಹ ವೈದ್ಯಶಾಸ್ತ್ರವು ತಕ್ಕ ಮಟ್ಟಿಗೆ ಗೊತ್ತಿತ್ತು. ಅನೇಕ ತರಹದ ಸಾಮಾನ್ಯ ರೋಗಗಳಿಗೆ ಬಗೆಬಗೆಯ ಉಪಾಯ ಗಳ ಅನುಭವವು ಜನಸಮುದಾಯಕ್ಕೆ ಇತ್ತು. ಸಣ್ಣ ಪುಟ್ಟ ಬೇನೆಗಳಿಗೆ ಡಾಕ್ಟರ ರನ್ನು ಹುಡುಕುವ ಅವಶ್ಯವು ಇದ್ದಿಲ್ಲ ಪ್ರಸವಸಮಯೋಪಚಾರ. ಶಿಶುಸಂಗೋ ಪನ ಮೊದಲಾದ ವಿದ್ಯೆಯು ಸಾಮಾನ್ಯ ಜನರಿಗೆ ಸಹ ಇತ್ತು. ಆವರೆ ಈಗ ಪಾಶ್ಚಿಮಾತ್ಯರ ವೈದ್ಯಶಾಸ್ತ್ರವು ಬೆಳವಣಿಗೆಗೆ ಬಂದು ತದ್ವಿದ್ಯೆಯಲ್ಲಿ ಉತ್ತೀರ್ಣ ರಾದ ಡಾಕ್ಟರರು ಅಲ್ಲಲ್ಲಿ ತಮ್ಮ "ದವಾಖಾನೆ" ಗಳನ್ನು ಸ್ಥಾಪಿಸಿ ಜನರಿಗೆ ಔಷ ಧೋಪಚಾರದ ಸೌಕರ್ಯಗಳನ್ನು ಉಂಟು ಮಾಡಿದ್ದರಿಂದ ಜನತೆಯ ಪ್ರಾಚೀನ ಅನುಭವವು ಕ್ರಮೇಣ ಕ್ಷೀಣತ್ವವನ್ನು ಹೊಂದುತ್ತ ಈಗ ತೀರ ಶೂನ್ಯಾವಸ್ಥೆಗೆ ಬಂದಿರುವದು. ಆದ್ದರಿಂದ ಬಡವರೂ, ಶ್ರೀಮಂತರೂ ಸಣ್ಣ ಪುಟ್ಟ ಬೇನೆಗಳಿಗೆ ಸಹ ಈ ಡಾಕ್ಟರರನ್ನೇ ಅವಲಂಬಿಸಿರುವರು ಅವರು ಕೊಡುವ ಔಷಧವಾದರೂ ಪಾಶ್ಚಿಮಾತ್ಯ ದೇಶಗಳಲ್ಲಿ ತಯಾರಾದವುಗಳಿರುವದರಿಂದ ಅವುಗಳನ್ನು ಕೇವಲ ಅವುಗಳ ಜೊತೆಯಲ್ಲಿ ಬರುವ ಅನುಪಾನ ಪತ್ರಿಕೆಗಳ ಸಹಾಯದಿಂದಲೇ ಉಪ ಯೋಗಿಸಬೇಕಾಗುವದು. ಅವುಗಳ ಯಥಾರ್ಥ ಜ್ಞಾನವು ನಮಗೆ ಲಭಿಸದೇ ಇರುವದರಿಂದ, ನಮ್ಮ ದೇಶೀಯ—ಆಯುರ್ವೇದ ಮತ್ತು ಯೂನಾನಿ—ಔಷಧೋ ಪಚಾರದಲ್ಲಿ ಶ್ರದ್ಧೆ ಇಲ್ಲದ್ದರಿಂದ, ನಾವು ಅಂಧರಂತೆ ವರ್ತಿಸುತ್ತಿರುವೆವು. ಮತ್ತು ಅಲ್ಪ ಸ್ವಲ್ಪ ಬೇನೆಗೆ ಸಹ ಪರಾವಲಂಬಿಗಳಾಗಿರುವೆವು. ಪ್ರಥಮ ಚಿಕಿತ್ಸೆಯ ಜ್ಞಾನವು ಕೂಡ ನಮ್ಮಲ್ಲಿಲ್ಲ. ಆದುದರಿಂದ ನಮ್ಮ ಮಕ್ಕಳಲ್ಲಿ ಯಾವ ರೋಗ ಗಳು ಮನೆಮಾಡಿಕೊಂಡಿರುವವೆಂಬ ಪರಿವೆಯು ಕೂಡ ನಮಗೆ ಇರುವದಿಲ್ಲ.

ಶಾಲೆಯ ಚಿಕ್ಕ ಬಾಲಕರಲ್ಲಿ ಕಣ್ಣಿನ ದೋಷ, ಹಲ್ಲಿನ ದೋಷ, ಮೂಗಿನ ದೋಷ ಮೊದಲಾದ ಅನೇಕ ದೋಷಗಳಿದ್ದು ಅವುಗಳ ಬಗ್ಗೆ ತಾತ್ಕಾಲಿಕ ಉಪಾ

ಯಗಳನ್ನು ನಾವು ಕಲ್ಪಿಸದೇ ಇರುವದರಿಂದ ಅವು ಚನ್ನಾಗಿ ಬಲಿತು ವ್ಯಕ್ತವಾಗುವವು. ಕೆಲವು ಹುಡುಗರಲ್ಲಿ ಸಾಂಸರ್ಗಿಕ ರೋಗಗಳಿರುವದರಿಂದ, ಶಾಲೆಯು ಉಳಿದ ಹುಡುಗರಿಗೆ ಅವುಗಳು ಅಂಟಿಕೊಳ್ಳುವ ಸಂಭವವುಂಟು. ಕೆಲವು ಹುಡುಗರಲ್ಲಿ ಅನುವಂಶಿಕ ರೋಗಗಳಿರುವದರಿಂದ ಅವು ವಯೋಮಾನಕ್ಕನುಸರಿಸಿ ವಿಕಾಶ ಹೊಂದಿ ಬಹಳ ಮುಖಕ್ಕೆ ಅವರನ್ನು ಗುರಿ ಮಾಡುವವು. ಆದ್ದರಿಂದ ಹುಡುಗರ ಆರೋಗ್ಯ ಚಿಕಿತ್ಸೆಯನ್ನು ಅನುಭವಿಕ ಡಾಕ್ಟರರಿಂದ ಮಾಡಿಸುವದು ಒಳ್ಳೆಯದು. ಈ ವಿಷಯವು ಪಾಶ್ಚಿಮಾತ್ಯ ದೇಶಗಳಲ್ಲಿ ಬಹಳ ಮಹತ್ವದ್ದೆಂದು ತಿಳಿಯಲ್ಪಟ್ಟಿದೆ. ಕಾರಣ ಈ ಬಗ್ಗೆ ಅಲ್ಲಿಯ ಸಂಸ್ಕಾರವು ಸಾಧ್ಯವಾದ ಎತ್ತುಗಡೆಗಳನ್ನು ಮಾಡುತ್ತಿದೆ ವಿದ್ಯಾರ್ಥಿಗಳ ಪ್ರಕೃತಿಯ ಪರಾಮರ್ಶವನ್ನು ಡಾಕ್ಟರರು ವೇಳೆವೇಳೆಗೆ ಬಂದು ಮಾಡುವರು. ಹುಡುಗರ ಪಾಲಕರಿಗೆ ಅವರವರ ಪ್ರಕೃತಿಯ ಗುಣವನ್ನು ತಿಳುಹಿಸುವರು. ಯಾವನಾದರೊಬ್ಬ ವಿದ್ಯಾರ್ಥಿಯು ಮೊಡ್ಡ ರೋಗಕ್ಕೆ ಗುರಿಯಾಗಿದ್ದರೆ ಕೂಡಲೆ ಅತನ ಪಾಲಕರನ್ನು ಕರೆಯಿಸಿ ಆ ಹುಡುಗನಿಗೆ ಸರಿಯಾದ ಔಷಧೋಪಚಾರದ ವ್ಯವಸ್ಥೆಯನ್ನು ಇಡಿಸುವರು. ಪ್ರತಿನಿತ್ಯ ಶಾಲೆಗೆ ಬರುತ್ತಿರುವ ಹುಡುಗನೊಬ್ಬನು ಒಂದೆರಡು ದಿನ ಕಾರಣವಿಲ್ಲದೆ ಶಾಲೆಗೆ ಬಾರದೇ ಹೋದರೆ ಕೂಡಲೆ ಅತನು ಮನೆಯಲ್ಲಿ ಕ್ಷೇಮದಿಂದ ಇರುವನೋ ಅಥವಾ ಬೇನೆ ಬಿದ್ದಿರುವನೋ ಎಂಬವನ್ನು ಪಾಲಕರಿಂದ ಶಾಲೆಯ ಶಿಕ್ಷಕರು ತಿಳಿದುಕೊಂಡು ಬೇನೆ ಬಿದ್ದಲ್ಲಿ ಡಾಕ್ಟರರನ್ನು ಕಳುಹಿಸಿ ಸರಿಯಾದ ವ್ಯವಸ್ಥೆಯನ್ನು ಮಾಡುವರು; ಹೀಗೆ ಹುಡುಗರ ಆರೋಗ್ಯತೆಯ ಬಗ್ಗೆ ಅಪಷ್ಟು ಎಚ್ಚರ ಪಡುವರು. ಹುಡುಗರಲ್ಲಿಯ ಸಾಂಸರ್ಗಿಕ, ಅನುವಂಶಿಕ ಇಲ್ಲವೆ ವಿಕಸ್ಮಿಕ ರೋಗಗಳು ಕಂಡು ಬಂದಲ್ಲಿ ಸರಿಯಾದ ಔಷಧೋಪಚಾರವನ್ನು ಕೂಡಲೆ ಮಾಡುವರು. ಅದರಿಂದ ಪಾಶ್ಚಿಮಾತ್ಯ ದೇಶಗಳ ಪ್ರಾಥಮಿಕ ಶಾಲೆಗಳಲ್ಲಿಯ ಹುಡುಗರು ಬಹಳ ಪ್ರಮಾಣದಿಂದ ನಿರೋಗಿಗಳಾಗಿರುವರು. ನಮ್ಮ ದೇಶದಲ್ಲಿ ಈ ಬಗ್ಗೆ ಬಹಳೇ ದುರ್ಲಕ್ಷ್ಯವುಂಟು. ಆರೋಗ್ಯತೆಯ ಬಗ್ಗೆ ಎಷ್ಟು ಲಕ್ಷ್ಯ ಪೂರೈಸಿದರೂ ಕಡಿಮೆಯೇ. ದೇಶವೂ ಬಡತನದ್ದು, ಸರಕಾರವೂ ಬರಿಗೈಯನ್ನು ತೋರಿಸುವದು. ಅದರಲ್ಲಿ ಸರಕಾರವಾಗಲಿ, ಜನತೆಯಾಗಲಿ ಅನ್ಯಥಾ ಖರ್ಚನ್ನು ಮಾಡುವದು. ಆದ್ದರಿಂದ ಶಾಲೆಯ ಚಿಕ್ಕ ಮಕ್ಕಳ ರೋಗಚಿಕಿತ್ಸೆಯ ಬಗ್ಗೆ ಯಾವ ತರದ ಯೋಜನೆಯೂ ಇಲ್ಲ.

ಇತ್ತೀಚಿಗೆ ಡಿ. ಎಲ್. ಬಿ. ಯವರು ಹೆಲ್ತ ಆಫೀಸರನೆಂಬ ಒಬ್ಬ ದೊಡ್ಡ ವೈದ್ಯಕೀ ಪರೀಕ್ಷೆಯನ್ನು ಕೊಟ್ಟು ಅಧಿಕಾರಿಯನ್ನು ನಿಯಮಿಸಿಕೊಂಡಿರುವರು. ಈ ಅಧಿಕಾರಿಯು ಹೋದ ಹೋದಲ್ಲಿ ಗ್ರಾಮಗಳ ಆರೋಗ್ಯ ವಿಷಯವನ್ನಷ್ಟೇ ಮಾಡದೆ ಆಯಾ ಗ್ರಾಮಗಳಲ್ಲಿಯ ಶಾಲೆಯ ವಿದ್ಯಾರ್ಥಿಗಳ ಪ್ರಕೃತಿ ಪರೀಕ್ಷೆ

ಯನ್ನು ಮಾಡಿ ರೋಗಗ್ರಸ್ಥರಾದ ಹುಡುಗರ ಪಾಲಕರಿಗೆ ಯೋಗ್ಯ ವ್ಯವಸ್ಥೆ ಮಾಡಲಿಕ್ಕೆ ಉಪದೇಶಿಸಿದರೆ ಒಳಿತಾಗುವದು. ಎಲ್ಲ ಸಂಪತ್ತುಗಳಲ್ಲಿ ಆರೋಗ್ಯ ಸಂಪತ್ತು ಪ್ರಪಂಚದಲ್ಲಿ ಶ್ರೇಷ್ಠವಾದದ್ದು. ಈ ಬಗ್ಗೆ ಆವಷ್ಟು ಮಟ್ಟಿಗೆ ಸರಿಯಾದ ಯೋಜನೆಯನ್ನು ಮಾಡುವದು ಸ್ಥಾನಿಕ ಸಂಸ್ಥೆಗಳಿಗೂ, ಸರಕಾರಕ್ಕೂ ಭೂಷಣಾಸ್ಪದವು ದುಡ್ಡಿನ ಅಡಚಣಿಯು ಆರೋಗ್ಯರಕ್ಷಣೆಗೆ ಆತಂಕವಾಗ ಕೂಡದು. ರಾಷ್ಟ್ರದ ನಿಜವಾದ ಕರ್ತವ್ಯವನ್ನು ಬಯಸುವ ಮುಂದಾಳುಗಳು ಇತ್ತ ಕಡೆಗೆ ಗಮನ ಕೊಡುವರೆಂದು ಆಶಿಸುವೆವು.

ಆಹಾರ ಪದಾರ್ಥಗಳ ಚರಟದ ಉಪಯೋಗ.

ಸಂಪಾದಕ.

ಶಾರೀರಕ ಸಂವರ್ಧನೆಗೆ ಹವೆ, ನೀರು, ಆಹಾರ ಮೊದಲಾದವು ಅವಶ್ಯ. ಶುದ್ಧವಾದ ಹವೆಯೂ, ಹಗುರಾದ ನೀರೂ ಶರೀರದ ಆರೋಗ್ಯವನ್ನು ಪಾಲಿಸುವವು

೧ ಸಮೀಚೀನ ಆಹಾರ.
೨. ಸಮೀಚೀನ ವ್ಯಾಯಾಮ.
೩. ಸಮೀಚೀನ ಹವೆ.
೪. ಸಮೀಚೀನ ನಿದ್ರೆ.
೫. ಸಮೀಚೀನ ಭಾವನೆ.

ಇವು ಆರೋಗ್ಯ ರಕ್ಷಣೆಗೆ ಮುಖ್ಯ ಕಾರಣಗಳು ಇವುಗಳಲ್ಲಿ ಆಹಾರವು ಬಲವಾದದ್ದು. ನಾವು ಆಹಾರವನ್ನು ಸೇವಿಸುವಲ್ಲಿ ನಾಲಿಗೆಗೆ ರುಚಿ ಹತ್ತಿದ್ದನ್ನು ಹೊಟ್ಟೆ ತುಂಬ ತಿನ್ನುವದು ಪಥ್ಯಾಹಾರವೆನಿಸುವದಿಲ್ಲ. ಅದರಿಂದ ಅಜೀರ್ಣ, ಅಗ್ನಿಮಾಂದ್ಯ ಮೊದಲಾದ ರೋಗಗಳು ಜನಿಸಿ, ಆರೋಗ್ಯದಿಂದ ಜನಿಸುವ ಸುಖವನ್ನು ಹಾಳುಗೆಡವಿ ಮನುಷ್ಯನನ್ನು ಅಜೀವ ದುಃಖಕ್ಕೆ ಗುರಿ ಮಾಡುವವು. ಆದ್ದರಿಂದ ಆಹಾರವನ್ನು ಸೇವಿಸುವಲ್ಲಿ ನಾವು ಬಹಳ ಜಾಗ್ರತರಾಗಿರತಕ್ಕದ್ದು.

ಸ್ವಾಭಾವಿಕವಾದ ಪದಾರ್ಥಗಳು ದೇಹಕ್ಕೆ ಬಹಳೇ ಹಿತಕರ. ಪದಾರ್ಥಗಳನ್ನು ಸುಟ್ಟು, ಹುರಿದು, ಬೇಯಿಸಿ, ಕುದಿಸಿ, ಕರಿದು, ಹಿಂಡಿ, ಹೀಗೆ ಅನೇಕ ವಿಧದಿಂದ ಪಾಕಗಳನ್ನು ಸಿದ್ಧಿಸಿ ಸೇವಿಸುವದು ತಪ್ಪೆಂದು ಎಲ್ಲ ಪಂಡಿತರು ಹೇಳು

ವರು. ಪದಾರ್ಥಗಳಲ್ಲಿ ಸ್ವಾಭಾವಿಕವಾಗಿ ಇರುವ ಶಕ್ತಿವರ್ಧಕ ದ್ರವ್ಯ [ವಿಟಾಮಿನ್] ಗಳು ಪಾಕಗಳಲ್ಲಿ ನಷ್ಟವಾಗಿರುವವು. ಶರೀರ ಸಂವರ್ಧನೆಗೆ ಯಾವ ಪದಾರ್ಥಗಳಲ್ಲಿ ಈ ದ್ರವ್ಯಗಳು ಮತ್ತು ಕ್ಷಾರಗಳು ಹೆಚ್ಚಾಗಿ ಇರುವವೋ ಅಂಥ ಪದಾರ್ಥಗಳು ಪಮೊಜೀನವಾದವುಗಳು.

ಹಾಲಿನಲ್ಲಿ, ಹಣ್ಣಿನಲ್ಲಿ, ಕಾಯಿಪಲ್ಲೆಗಳಲ್ಲಿ, ಹಸಿಯ ಕಾಳುಗಳಲ್ಲಿ ಈ ವಿಟಾಮಿನ್ ಎಂಬ ಶಕ್ತಿವರ್ಧಕ ದ್ರವ್ಯಗಳೂ, ಕ್ಷಾರಗಳೂ ಹೇರಳವಾಗಿ ಇರುವವು. ಆದ್ದರಿಂದ ಇಂಥ ಪದಾರ್ಥಗಳನ್ನೇ ವಿಶೇಷವಾಗಿ ಸೇವಿಸತಕ್ಕದ್ದು. ಇನ್ನು ಪದಾರ್ಥಗಳೊಳಗಿನ ರಸವನ್ನೇ ಹೀರಿಕೊಳ್ಳೋಣ ಆವುಗಳ ಚರಟವನ್ನು ಬಿಸುಟೋಣವೆಂದು ಕೆಲವರು ಭಾವಿಸಬಹುದು. ಚರಟಗಳನ್ನು ಬಿಸುಟಿ ರಸವನ್ನೇ ಸ್ವೀಕರಿಸುವದರಿಂದ ಶರೀರಕ್ಕೆ ಶಕ್ತಿವರ್ಧಕ ಪದಾರ್ಥಗಳು ಸಾಕಷ್ಟು ದೊರೆತಾಗ್ಯೂ ಚರಟವನ್ನು ತ್ಯಜಿಸುವದರಿಂದ ತಿಂದ ಪದಾರ್ಥಗಳನ್ನು ಜೀರ್ಣ ಮಾಡಿ ಅದರಲ್ಲಿ ಅಪಾಚಕ ಭಾಗವನ್ನು ಹೊರಗೆ ಹಾಕುವ ಸಾಮರ್ಥ್ಯವು ಇಲ್ಲದಂತಾಗಿ ಮಲಬದ್ಧತೆಯು ಉಂಟಾಗುವದು. ಆದ್ದರಿಂದ ಚರಟವನ್ನು ಬಿಡದಲೆ ಪದಾರ್ಥಗಳನ್ನು ಸೇವಿಸಬೇಕು. ಈ ಚರಟಗಳು ಕರುಳಿನಲ್ಲಿ ಸೇರಿ ಅಪಾಚಕ ದ್ರವ್ಯಗಳಲ್ಲಿ ಬೆರೆತು ಅವುಗಳನ್ನು ತಸ್ಮೊಜನೆ ಹೊರದೂಡುವವು. ಪಿಟ್ಟೀದ ಹಿಟ್ಟಿನ ಚಪಾತಿಗಳನ್ನು ತಿನ್ನುವದಕ್ಕಿಂತ ತೌಡು ಕೂಡಿದ ಚಪಾತಿಗಳನ್ನು ತಿನ್ನುವದು ಹಿತಕರವು. ಹಣ್ಣುಗಳ ಬರಿಯ ತಿಳಲನ್ನು ತಿನ್ನುವದಕ್ಕಿಂತ ಆದಷ್ಟು ತೊಗಟೆ ಸಹಿತ ತಿನ್ನುವದು ಲೇಸು. ಕಂದಮೂಲಗಳನ್ನು ತಿನ್ನುವ ಪ್ರಾಣಿಗಳು ವಿನೋದಿಯಾಗಿರುವವು.

ಆದರೆ ಈಗ ಜಗತ್ತಿನ ಸುಧಾರಿಸಿದ ಜನರು ಬಗೆಬಗೆಯ ಪಾಕಗಳನ್ನು, [ಅಡಿಗೆಗಳನ್ನು] ಮಾಡಿಕೊಂಡು ಆರೋಗ್ಯದ ಕಡೆಗೆ ಲಕ್ಷ್ಯ ಕೊಡದೆ, ನಾಲಿಗೆಯ ರುಚಿಗೆ ಮರುಳಾಗಿ ಭಕ್ಷಿಸಿ ದೇಹದ ಆರೋಗ್ಯವನ್ನು ಹಾಳು ಮಾಡಿಕೊಳ್ಳುವರು. "ಮಾತು ಬಲ್ಲವನಿಗೆ ಜಗಳವಿಲ್ಲ, ಊಟ ಬಲ್ಲವನಿಗೆ ರೋಗವಿಲ್ಲ" ಎಂಬ ಹಿರಿಯರ ಉಕ್ತಿಯಂತೆ ಪಮೊಜೀನವಾದ ಆಹಾರವನ್ನು ಅಂದರೆ ಸ್ವಾಭಾವಿಕವಾದ, ಶಕ್ತಿವರ್ಧಕ ದ್ರವ್ಯಗಳೂ, ಕ್ಷಾರ ಪದಾರ್ಥಗಳೂ, ಹೇರಳವಾಗಿರುವ ಪದಾರ್ಥಗಳನ್ನು ಚರಟ ಸಹಿತ ಸೇವಿಸುವದು ಆರೋಗ್ಯರಕ್ಷಣೆಯ ಮುಖ್ಯ ಸಾಧನವು. ಚರಟಗಳ ಮಹತ್ವವನ್ನು ತಿಳಿಯದ ಅಸಂಖ್ಯಾಕ ಜನರು ಅವುಗಳನ್ನು ತಿಪ್ಪಿಗೆ ಇಲ್ಲವೆ ದನಕರಗಳಿಗೆ ಯೋಗ್ಯವಾದವೆಂದು ತ್ಯಜಿಸಿ ಪದಾರ್ಥಗಳ ತಿಳಲನ್ನೇ ಸೇವಿಸುವರು. ಹಾಲಿನಲ್ಲಿರುವ ನೀರು ಮುಂತಾದ್ದನ್ನು ಕಾಸಿ, ಸುಟ್ಟ ಕೆನೆಯನ್ನೇ ಸೇವಿಸುವದಾದರೂ ತಪ್ಪು. ಅದೇ ಕರೆದ ಹಾಲು ಅತ್ಯಂತ ಆರೋಗ್ಯಕರವಾದದ್ದು. ಅದನ್ನು ಕಾಸುವದು ಅನಾವಶ್ಯಕವು.

ಒಟ್ಟಿನ ಮೇಲೆ ಸ್ವಾಭಾವಿಕವಾದ ಆಹಾರವು ದೇಹಕ್ಕೆ ಬಹಳೇ ಹಿತಕರವು

———

ಧಾರವಾಡ ಡಿಸ್ಟ್ರಿಕ್ಟ ಲೋಕಲ್ ಬೋರ್ಡ ಸ್ಕೂಲ ಬೋರ್ಡಿನ ಪ್ರೊವಿಡೆಂಟ ಫಂಡಿನ ನಿಯಮಗಳು.

೧. ಈ ನಿಯಮಗಳು ತಾ|| ೧--೪--೧೯೨೯ರಿಂದ ಅಮಲಿನಲ್ಲಿ ಬರುವವು. ಮತ್ತು ಆ ಮಿತಿಗೆ ಅಥವಾ ತದನಂತರ ಸ್ಕೂಲಬೋರ್ಡಿನ ನೌಕರಿಯಲ್ಲಿ ತಿಂಗಳೊಂದಕ್ಕೆ ೮ ರೂಪಾಯಿ ಅಥವಾ ಹೆಚ್ಚು ನಿವಳಿ ಪಗಾರದ ಮೇಲೆ ಇರುವ ಅಥವಾ ಬರುವ ನೌಕರದಾರರಿಗೆ ಲಾಗೂ ಆಗುವವು.

೨. ಯಾವ ನೌಕರನ ಪೆನ್‌ಶನ್ ಫಂಡಿಗೆ ಸ್ಕೂಲ ಬೋರ್ಡಿನವರು ಹಣ ತುಂಬುವರೋ ಅಂಥವನಿಗೆ ಬೋರ್ಡಿನ ಪ್ರೊವಿಡೆಂಟ ಫಂಡಿಗೆ ಸೇರಿಕೊಳ್ಳಲಿಕ್ಕೆ ಪರವಾನಿಗೆ ಇಲ್ಲ.

೩. ಈ ನಿಯಮಗಳು ಅಮಲಿನಲ್ಲಿ ಬರುವ ಮುಂಚಿ ನೌಕರಿಯಲ್ಲಿ ಸೇರಿಕೊಂಡ ನೌಕರರ ವಿಷಯದಲ್ಲಿ, ಈಗ ಅಮಲಿನಲ್ಲಿದ್ದ ನಿಯಮಗಳ ಪ್ರಕಾರ ಈ ನಿಯಮಗಳು ಅಮಲಿನಲ್ಲಿ ಬರುವ ದಿವಸದ ವರೆಗೆ ಅಂಥ ಪ್ರತಿಯೊಬ್ಬ ನೌಕರನಿಗೆ ದೊರೆಯಬಹುದಾದ ಗ್ರಾಚುಯಿಟಿಯು ಅವನು ಕೆಲಸದಿಂದ ನಿವೃತ್ತನಾದಾಗ್ಗೆ, ಪ್ರೊವಿಡೆಂಟ ಫಂಡಿನ ಬುಕ್ಕಿನಲ್ಲಿ ಅವನ ಹೆಸರಿಗೆ ಜಮಾ ಇದ್ದ ರಕಮು ಅಲ್ಲದೆ, ಈ ಗ್ರಾಚುಯಿಟಿಯ ಹಣವು ಕೊಡಲ್ಪಡುವದು.

೪. ಸ್ಕೂಲ ಬೋರ್ಡಿನ ಪೆನಶನ್ ಇಲ್ಲದ ಹೆಚ್ಚಿನ ತರಗತಿಯ ಕಾಯಮು ನೌಕರರು ಅವಶ್ಯವಾಗಿ ಈ ಫಂಡಿಗೆ ತಮ್ಮ ವರ್ಗಣಿಯನ್ನು ಕೊಡತಕ್ಕದ್ದು.

೫. ವರ್ಗಣಿದಾರರ ವರ್ಗಣಿಯು ಒಟ್ಟು ಪಗಾರದ ಮೇಲೆ [ಅದರಲ್ಲಿ ಜಾಗಾದ ಪಗಾರ ಸಹಿತ] ೧೦೦ಕ್ಕೆ ೬। ಇರುವದು. ಮತ್ತು ಚಾಲತಿ ವರ್ಗಣಿಯು ಪ್ರತಿ ತಿಂಗಳ ಅವರವರ ಪಗಾರದಲ್ಲಿ ಮುರಿಯಲ್ಪಡುವದು. ಯಾವನಾದರೊಬ್ಬ ನೌಕರನು ರಜೆಯ ಮೇಲೆ ಇದ್ದರೆ ಈ ವರ್ಗಣಿಯು ಅವನ ಜಾಗಾದ ಪಗಾರದ ಮೇಲೆ ಆಕರಣಿ ಮಾಡಲ್ಪಡದೆ ಅವನಿಗೆ ನಿವಳಸಲ್ಲಿದ ಹಣದ ಮೇಲೆ ಆಕರಣಿ ಮಾಡಲ್ಪಡುವದು.

೬. ಸ್ಕೂಲ ಬೋರ್ಡಿನ ವರ್ಗಣಿಯು ವರ್ಗಣಿದಾರನ ವರ್ಗಣಿಯಷ್ಟು ಇರುವದು. ಮತ್ತು ಈ ಹಣವು ಪ್ರತಿ ವರ್ಷ ವಾಡಿಕೆಯಾಗಿ ೩೧ನೆಯ ಮಾರ್ಚ ದಿವಸ ಸೇರಿಸಲ್ಪಡುವದು. ಆದರೆ ಅಷ್ಟರಲ್ಲಿ ವರ್ಗಣಿದಾರನು ಮರಣ

ಹೊಂದಿದರೆ ಇಲ್ಲವೆ ರಿಟಾಯರ ಆದರೆ ಸ್ಕೂಲ ಬೋರ್ಡಿನ ವರ್ಗಣಿಯು ಆ ಆ ಮಿತಿಯ ವರೆಗೆ ಆಕರಣಿ ಮಾಡಲ್ಪಡುವದು.

೭. ಪ್ರತಿಯೊಬ್ಬ ವರ್ಗಣಿದಾರನ ಪ್ರತ್ಯೇಕ ಖಾತೆಯು ಇಡಲ್ಪಡುವದು. ಅದರಲ್ಲಿ ಅವನು ಸ್ವಂತ ತುಂಬಿದ ಹಣ ಮತ್ತು ಆದ ಆದ ಹಾಗೆ ಅದರ ಮೇಲಿನ ಬಡ್ಡಿ ಮತ್ತು ಅವನ ಹಿಸೆಗೆ ಬಂದ ಸ್ಕೂಲ ಬೋರ್ಡಿನ ವಾರ್ಷಿಕ ವರ್ಗಣಿ ಮತ್ತು ಅದರ ಮೇಲೆ ಆದ ಬಡ್ಡಿ ಇವುಗಳು ತೋರಿಸಲ್ಪಡುವವು. ಪ್ರತಿಯೊಬ್ಬ ವರ್ಗಣಿದಾರನಿಗೆ ಕಳೆದ ವರ್ಷದ ಅವನ ಲೆಕ್ಕದ ಪತ್ರಿಕೆಯು ಪ್ರತಿ ವರ್ಷ ೩೧ ನೆಯ ಜುಲ್ಯೆದ ಒಳಗಾಗಿ ಕೊಡಲ್ಪಡುವದು.

೮. ವರ್ಗಣಿದಾರನು ತುಂಬಿದ ಹಣದ ಮೇಲೆ ಮತ್ತು ಸ್ಕೂಲ ಬೋರ್ಡಿನವರು ತುಂಬಿದ ಹಣದ ಮೇಲೆ ಸ್ಕೂಲ ಬೋರ್ಡಿನವರು ವರ್ಷಕ್ಕೆ ನೂರಕ್ಕೆ ೪ರಂತೆ ಬಡ್ಡಿಯನ್ನು ಆಕರಣಿ ಮಾಡಿ ಪ್ರತಿ ವರ್ಷ ೩೧ನೆಯ ಮಾರ್ಚಕ್ಕೆ ಅಥವಾ ಮರಣಾದ ದಿವಸ ಅಥವಾ ರಿಟಾಯರ ಆದ ದಿವಸ ಅವರವರ ಖಾತೆಗೆ ಬಡ್ಡಿಯ ರಕಮು ಜಮಾಮಾಡಲ್ಪಡುವದು.

೯. ಈ ನಿಯಮಗಳು ಅಮಲಿನಲ್ಲಿ ಬರುವ ಪೂರ್ವದಲ್ಲಿ ಸ್ಕೂಲ ಬೋರ್ಡಿನ ನೌಕರಿಯಲ್ಲಿ ನಿಂತ ನೌಕರರು ಹತ್ತು ವರ್ಷ ನೌಕರಿ ಮಾಡಿದ ಮೇಲೆ ಸ್ಕೂಲ ಬೋರ್ಡಿನ, ಬಡ್ಡಿ ಸಹಿತ, ವರ್ಗಣಿಗೆ ಬಾಧ್ಯರಾಗುವರು.

೧೦. ಉಳಿದ ವರ್ಗಣಿದಾರರು ನೌಕರಿಯ ಮೇಲೆ ತೆಗೆದುಕೊಂಡಂದಿನಿಂದ ೧೫ ವರ್ಷ ನೌಕರಿ ಮಾಡಿದ ಮೇಲೆ ಸ್ಕೂಲ ಬೋರ್ಡಿನ ಬಡ್ಡಿ ಸಹಿತ ವರ್ಗಣಿಯನ್ನು ಪಡೆದುಕೊಳ್ಳಲಿಕ್ಕೆ ಬಾಧ್ಯರಾಗುವರು.

(೧೧) ೯ ಮತ್ತು ೧೦ ನೆಯ ನಿಯಮಗಳಲ್ಲಿ ಹೇಳಿದ ಅವಧಿಯು ಪೂರ್ತಿ ಸುವದರೊಳಗಾಗಿ ರಿಟಾಯರ ಆದರೆ ವರ್ಗಣಿದಾರರು ತಾವು ತುಂಬಿದ ಹಣ ಮತ್ತು ಅದರ ಮೇಲಿನ ಬಡ್ಡಿ ಇಷ್ಟಕ್ಕೆ ಬಾಧ್ಯರಾಗುವದು. ಬೋರ್ಡು ತುಂಬಿದ ಹಣವು ಬೋರ್ಡಿಗೆ ಸಲ್ಲುವದು. ಆದರೆ ವರ್ಗಣಿದಾರರು ಮುಂದೆ ನೌಕರಿ ಮಾಡಲಿಕ್ಕೆ ಸಮರ್ಥರಿರುವದಿಲ್ಲೆಂದು ಸರ್ಟಿಫಿಕೇಟಿನ ಮೂಲಕವಾಗಿ ಯಾಗಲಿ, ವರ್ಗಣಿದಾರರ ಕೈವಿಾರಿದ ಕಾರಣದಿಂದಾಗಲಿ ನಿವೃತ್ತರಾಗುವದು ಅವಶ್ಯವಾದಲ್ಲಿ ಬೋರ್ಡಿಗೆ ತಾವು ತುಂಬಿದ ಹಣವನು ಕೊಕಲಿಕ್ಕೆ ಅಧಿಕಾರವುಂಟು.

(೧೨) ಯಾವನಾದರೊಬ್ಬ ವರ್ಗಣಿದಾರನು ಅವನ ಕೆಟ್ಟ ನಡತೆಯ ಬಗ್ಗೆ ಕೆಲಸದಿಂದ ತೆಗೆದು ಹಾಕಲ್ಪಟ್ಟರೆ ಅವನ ಬಗ್ಗೆ ಬೋರ್ಡು ತುಂಬಿದ ಹಣಕ್ಕೆ ಮತ್ತು ಅದರ ಮೇಲಿನ ಬಡ್ಡಿಗೆ ಆತನ ಹಕ್ಕು ಉಳಿಯುವದಿಲ್ಲ. ಆದರೆ

ಕೆಟ್ಟ ನಡತೆಯ ಬಗ್ಗೆ ಕೆಲಸದಿಂದ ತೆಗೆಯಲ್ಪಟ್ಟ ವರ್ಗಣಿದಾರನ ಕೆಟ್ಟ ನಡತೆಯು ಗುನ್ಹೆ (ಕ್ರಿಮಿನಲ್) ಇರದೆ ಇದ್ದ ಪಕ್ಷದಲ್ಲಿ ಬೋರ್ಡು ಅತನ ಬಗ್ಗೆ ತುಂಬಿದ ಹಣ ಮತ್ತು ಅದರ ಬಡ್ಡಿ ಇವುಗಳ ಪೈಕಿ ಸ್ಕೂಲಬೋರ್ಡಿನ ಮನಸ್ಸಿಗೆ ಬಂದಷ್ಟು ಅತನಿಗೆ ಕೊಡಲ್ಪಡುವದು. ಬಾಕೀ ಉಳಿದ ಹಣವು ಬೋರ್ಡಿಗೆ ಜಮಾ ಆಗುವದು.

(೧೩) ಸ್ಕೂಲಬೋರ್ಡಿನ ಯಾವದೇ ನೌಕರನು ತನ್ನ ನೌಕರಿಯ ಅವಧಿಯಲ್ಲಿ ಪ್ರೊವಿಡೆಂಟ ವರ್ಗಣಿದಾರನಿದ್ದು, ಮಾಡಿದ ತಜವೀಜಿಗೆ ಅಥವಾ ಸಾಲಕ್ಕೆ ಸ್ಕೂಲಬೋರ್ಡಿನವರು ಒಪ್ಪದಿದ್ದರಲ್ಲ ಮತ್ತು ಅದನ್ನು ಒಪ್ಪುವದಿಲ್ಲ.

೧೪. (೧) ಸ್ಕೂಲಬೋರ್ಡಿನವರು ತಮ್ಮ ಮರ್ಜಿಯ ಪ್ರಕಾರ ಅಗತ್ಯದ ಪ್ರಸಂಗಗಳಲ್ಲಿ ವರ್ಗಣಿದಾರರಿಗೆ ಅಡ್ವಾನ್ಸುಗಳನ್ನು ಫಂಡಿನೊಳಗಿಂದ ಕೆಳಗೆ ಕಾಣಿಸಿದ ಉದ್ದೇಶಕ್ಕೆ ಕೊಡಬಹುದು :—

(ಅ) ವರ್ಗಣಿದಾರನಾಗಲಿ ಅಥವಾ ಅವನ ಕುಟುಂಬದ ಪೈಕಿ ಯಾರಾಗಲಿ ಬೇನೆ ಬಿದ್ದಲ್ಲಿ ಆರೈಕೆಗೆ ತಗಲಿದ ಖರ್ಚಿಗೆ.

(ಬ) ಲಗ್ನಗಳು; ಅಂತ್ಯ ವಿಧಿಗಳು ಅಥವಾ ವರ್ಗಣಿದಾರನು ತನ್ನ ಧರ್ಮದ ಕಟ್ಟಳೆಯ ಪ್ರಕಾರ ಮಾಡೇ ತೀರಬೇಕಾದ ಮತ್ತು ಆ ಬಗ್ಗೆ ಖರ್ಚು ಮಾಡಲೇ ಬೇಕಾದ ವಿಧಿಗಳ ಖರ್ಚಿನ ಬಗ್ಗೆ.

(೨) ಅಡ್ವಾನ್ಸುಗಳು ವಾರಿಕೆಯಾಗಿ ಅವನ ೩ ತಿಂಗಳ ಪಗಾರಕ್ಕಿಂತ ಹೆಚ್ಚು ಆಗಲಾರದು. ಮತ್ತು ಯಾವದೇ ಕಾರಣದಿಂದ ವರ್ಗಣಿದಾರನು ತುಂಬಿದ ಹಣ ಅದರ ಮೇಲಿನ ಬಡ್ಡಿ ಸಹಿತ ಆದ ಹಣಕ್ಕಿಂತ ಹೆಚ್ಚು ಆಗತಕ್ಕದ್ದಲ್ಲ.

(೩) ಒಬ್ಬ ವರ್ಗಣಿದಾರನಿಗೆ ಒಮ್ಮೆ ಅಡ್ವಾನ್ಸು ಕೊಡಲ್ಪಟ್ಟಿದ್ದರೆ ಪುನಃ ಅಡ್ವಾನ್ಸು ಅತ್ಯಂತ ವಿಶೇಷ ಕಾರಣಗಳ ಹೊರತು ಮತ್ತು ಆ ಮುಂಜಿ ತೆಗೆದು ಕೊಂಡು ಅಡ್ವಾನ್ಸುದ ಹಣವನ್ನು ಪೂರಾ ಕೊಟ್ಟನಂತರ ನಿಭಾನ ೧೨ ಕ್ಯಾಲೆಂಡರ ತಿಂಗಳಗಳು ಆಗಿದ್ದ ಹೊರತು ಕೊಡಲಾಗುವದಿಲ್ಲ.

(೪] ಈ ನಿಯಮದ ಪ್ರಕಾರ ಕೊಟ್ಟ ಅಡ್ವಾನ್ಸುದ ಹಣವು ಆ ವರ್ಗಣೀದಾರನ ಹೆಸರಿಗೆ ಜಮಾ ಇದ್ದ ಅವನ ಸ್ವಂತ ತುಂಬಿದ ಹಣಕ್ಕೆ ಪ್ರತಿಯಾಗಿ ಅವನ ಹೆಸರಿಗೆ ಪ್ರತ್ಯೇಕ ಖರ್ಚು ಬೀಳುವದು. ಮತ್ತು ಅವನ ಹೆಸರಿಗೆ ವೇಳೆ ವೇಳೆಗೆ ಜಮಾ ಇದ್ದ ರಕಮಿನಲ್ಲಿ ಅಡ್ವಾನ್ಸು ಪೂರ್ತಿ ಮುಟ್ಟುವವರೆಗೆ ವಜಾ ಹಿಡಿಯಲ್ಪಡುವದು. ಅವನು ಕೊಟ್ಟ ಹಣವನ್ನು ಆಗಿಂದಾಗ್ಗೆ ಜಮಾ ಹಿಡಿಯಲ್ಪಡುವದು. ಯಾವದೇ ಕಾರಣದಿಂದ ಅಡ್ವಾನ್ಸು ಪಡೆಕೊಂಡ ವರ್ಗಣಿದಾರನ ಹೆಸರಿಗೆ ಅಡ್ವಾನ್ಸುದ ಹಣ ಅವನ ಮೇಲೆ ಇರುವವರೆಗೆ ಬಡ್ಡಿ ಜಮಾ ಮಾಡಲಿಕ್ಕಾಗುವದಿಲ್ಲ.

(೫) ಸ್ಕೂಲಬೋರ್ಡಿನವರು ಅಡ್ವಾನ್ಸ ತೆಗೆದುಕೊಂಡ ವರ್ಗಣಿದಾರನ ಪಗಾರದೊಳಗಿಂದ ಪ್ರತಿತಿಂಗಳು ಬೋರ್ಡಿನವರು ನಿರ್ಣಯಿಸಿದ, ೨೪ ಕಂತುಗಳಿಗೆ ಹೆಚ್ಚಾಗದ ಹಾಗೆ ಕಂತಿನಂತೆ ಹಣವನ್ನು ಮುರಕೊಳ್ಳುವರು. ಅಡ್ವಾನ್ಸ ತೆಗೆದುಕೊಂಡ ನಂತರ ವರ್ಗಣಿದಾರನು ಪೂರ್ಣ ಪಗಾರ ಪಡಕೊಳ್ಳುವ ಮೊದಲನೆಯ ತಿಂಗಳಿಗೆ ಕಂತು ವಸೂಲ ಮಾಡುವದು ಆರಂಭವಾಗುವದು.

ಟೀಪು—ವರ್ಗಣಿದಾರನು ಸ್ಕೂಲಬೋರ್ಡಿನವರು ಗೊತ್ತು ಮಾಡಿದ ಕಂತುಗಳಕ್ಕಿಂತ ಕಡಿಮೆ ಕಂತುಗಳಲ್ಲಿ ತನ್ನ ಇಚ್ಛೆಯ ಪ್ರಕಾರ ಹಣವನ್ನು ಮುಟ್ಟಿಸಬಹುದು. ಪೂರ್ಣ ಪಗಾರಿಯಿಂದ ದೊರೆತ ರಜೆ ಇರದ ಪಕ್ಷದಲ್ಲಿ ರಜೆಯ ಮೇಲೆ ಹೋದ ವರ್ಗಣಿದಾರನಿಂದ ಕಂತುಗನ್ನು ವಸೂಲ ಮಾಡುವದಿಲ್ಲ ಎರಡು ಅಥವಾ ಹೆಚ್ಚು ಅಡ್ವಾನ್ಸುಗಳು ಕೊಡಲ್ಪಟ್ಟಿದ್ದಲ್ಲಿ ಪ್ರತಿಯೊಂದು ಅಡ್ವಾನ್ಸು ಪ್ರತ್ಯೇಕ ಗಣಿಸಲ್ಪಡುವದು ಮತ್ತು ಪ್ರತಿಯೊಂದು ೧/೨೪ ಕ್ಕೆ ಕಡಿಮೆ ಯಾಗದಷ್ಟ ಹಣವು ಪ್ರತಿತಿಂಗಳ ಅಡ್ವಾನ್ಸನ್ನು ಮುಟ್ಟುವವರೆಗೆ ವಸೂಲ ಮಾಡಲ್ಪಡುವದು.

(೬) ಪ್ರೊವಿಡೆಂಟ ಫಂಡಿನ ಕಂತುಗಳಲ್ಲದೆ ಈ ಕಂತುಗಳು ನಿಮ್ಮ ಪಗಾರದೊಳಗಿಂದ ಅವಶ್ಯವಾಗಿ ಮುರಕೊಳ್ಳಲ್ಪಡುವವು.

೧೫. ಪ್ರತಿಯೊಬ್ಬ ವರ್ಗಣಿದಾರನು ತಾನು ಕದಾಚಿತ್ ಸ್ಕೂಲ ಬೋರ್ಡಿನ ನೌಕರಿಯಲ್ಲಿ ಇರುವಾಗ್ಗೆ ಇಲ್ಲವೆ ತನಗೆ ಸಲ್ಲತಕ್ಕ ಫಂಡಿನ ಠಕವು ಮುಟ್ಟುವ ಪೂರ್ವದಲ್ಲಿ ಕಾಲಾಧೀನನಾದರೆ ತನ್ನ ಹೆಸರಿಗೆ ಜಮಾ ಇದ್ದ ಹಣವನ್ನು ಯಾರಿಗೆ (Nomine) ಕೊಡತಕ್ಕದ್ದೆಂಬದನ್ನು ಬರಕೊಟ್ಟಿರಬೇಕು. ಮತ್ತು ಇದನ್ನು ಅಬಾಧಿತವಾಗಿ ಇಟ್ಟಿರಬೇಕು. ಆದರೆ ಇಂಥ ಮನುಷ್ಯನು ಅಜ್ಞಾನನಿದ್ದರೆ ಇಂಥವನ ಹೆಸರನ್ನು ಬರೆಮುಕೊಡುವಾಗ್ಗೆ ವರ್ಗಣಿದಾರನು ತಾನು ಅಜ್ಞಾನ ಸಾಮಿನಿಯು ಸಜ್ಞಾನನಾಗುವ ಪೂರ್ವದಲ್ಲಿ ಕದಾಚಿತ್ ಕಾಲಾಧೀನನಾದಲ್ಲಿ ಆ ಅಜ್ಞಾನ ನಾಮಿನಿಯ ಪರವಾಗಿ ತನ್ನ ಹೆಸರಿಗೆ ಜಮಾ ಇದ್ದ ಠಕಮನ್ನು ಯಾರಿಗೆ ಕೊಡಬೇಕೆಂಬ ಬಗ್ಗೆ ಒಬ್ಬ ಸಜ್ಞಾನನಾದ ಮನುಷ್ಯನನ್ನು ನಿಯಮಿಸಬೇಕು. ಮತ್ತು ಅಜ್ಞಾನ ನಾಮಿನಿಯು ಸಜ್ಞಾನನಾಗುವ ಪೂರ್ವದಲ್ಲಿ, ವರ್ಗಣಿದಾರನು ಜೀವಂತನಿರುವಾಗ್ಗೆ, ಹೀಗೆ ನಿಯಮಿಸಿದ ಮನುಷ್ಯನು ಕಾಲಾಧೀನನಾದರೆ ವರ್ಗಣಿದಾರನು ಆ ಕೂಡಲೆ ಇನ್ನೊಬ್ಬ ಸಜ್ಞಾನ ಮನುಷ್ಯನನ್ನು ಅಜ್ಞಾನ ನಾಮಿನಿಯ ಸಲುವಾಗಿ ಹಣವನ್ನು ಸ್ವೀಕರಿಸಲಿಕ್ಕೆ ನಿಯಮಿಸಲಿಕ್ಕೇ ಬೇಕು. ಹೀಗೆ ನಿಯಮಿಸಿದ ಮನುಷ್ಯನು ಮೇಲೆ ಹೇಳಿದ ಅವಧಿಯಲ್ಲಿ ಸತ್ತರೆ ಪುನಃ ಹೊಸಬನನ್ನು ಕಾಲನಿಲಂಬನನಿಲ್ಲದೆ ನಿಯಮಿಸಲಿಕ್ಕೇ ಬೇಕು.

೧೬. ವರ್ಗಣಿದಾರನ ಮರಣಾನಂತರ ಅವನ ಹೆಸರಿಗೆ ಜಮಾ ಇದ್ದ, ಸ್ಕೂಲಬೋರ್ಡಿನವರು ಅವನ ಹೆಸರಿಲೆ ತುಂಬಿದ ಹಣ ಸಹಿತ ಎಲ್ಲ ರಕಮನ್ನು ಏನೂ ಮುರಕೊಳ್ಳದೆ ಅವನ ಮೇಲೆ ವಿವರಿಸಿದಂತೆ ನೇಮಿಸಿದ ನಾಮಿನಿ ಗಾಗಲಿ ಇಲ್ಲವೆ (ಆ ನಾಮಿನಿಯು ಅಜ್ಞಾನನಿದ್ದಲ್ಲಿ) ಅವನ ಪರವಾಗಿ ಹಣವನ್ನು ಸ್ವೀಕರಿಸಲಿಕ್ಕೆ ಆ ಕಾಲಕ್ಕೆ ನೇಮಿಸಲ್ಪಟ್ಟಿದ್ದ ಮನುಷ್ಯನಿಗಾಗಲಿ ಕೊಡಲ್ಪಡ್ಡವದು. ಆ ಕಾಲಕ್ಕೆ ವರ್ಗಣಿದಾರನು ಎಷ್ಟು ದಿವಸ ನೌಕರಿ ಮಾಡಿರುವನೆಂಬದ್ದ ಗಣನೆಗೆ ತರಲ್ಪಡುವದಿಲ್ಲ. ಆದರೆ ೨೦ ನೆಯ ನಿಯಮದನ್ವಯ ಕೊಡತಕ್ಕದ್ದು ಮಾತ್ರ ಮುರಿಯಲ್ಪಡುವದು.

೧೭. (೧) ವರ್ಗಣಿದಾರನು ತನ್ನ ಮರಣದ ಕಾಲದಲ್ಲಿ ಯಾರನ್ನೂ ನಾಮಿನೇಟ ಮಾಡದೇ ಇದ್ದಲ್ಲಿ ಅಥವಾ ಅದನ್ನು ಅಬಾಧಿತವಾಗಿ ಇಡದೇ ಇದ್ದಲ್ಲಿ ಅಥವಾ ನಾಮಿನಿಯು ಅಜ್ಞಾನನಿದ್ದಲ್ಲಿ ೧೫ ನೆಯ ನಿಯಮದ ಪ್ರಕಾರ ಸಜ್ಞಾನ ನಾದ ಒಬ್ಬನನ್ನು ನೇಮಿಸದೇ ಇದ್ದಲ್ಲಿ ಅಥವಾ ಆ ನಿಯಮದಲ್ಲಿ ಹೇಳಿದಂತೆ ಅದ ನ್ನು ಕಾಯ್ದುಕೊಳ್ಳದೇ ಇದ್ದಲ್ಲಿ ಆ ವರ್ಗಣೀದಾರನ ಹೆಸರಿಗೆ ಜಮಾ ಇದ್ದ ರಕ ಮು ಅವನ ಕುಟುಂಬದವರಲ್ಲಿ ಹಂಚಲ್ಪಡುವದು. ಆದರೆ ಅವನ ಗಂಡುಮಕ್ಕಳು ಮತ್ತು ಅವನ ಮೈತ ಗಂಡುಮಗನ ಗಂಡುಮಕ್ಕಳು ಇವರು ಕಾಯಿದೇಶೀರ ಸುಜ್ಞಾನ ವಯಸ್ಸಿಗೆ ಬಂದಿದ್ದಲ್ಲಿ ಮತ್ತು ಅವನ ವಿವಾಹಿತರಾದ ಹೆಣ್ಣು ಮಕ್ಕಳು ಮತ್ತು ಮೈತ ಮಗನ ವಿವಾಹಿತ ಹೆಣ್ಣು ಮಕ್ಕಳು ಇವರ ಗಂಡಂದಿರು ಜೀವಂತ ಇದ್ದ ಪಕ್ಷದಲ್ಲಿ ಇವರೆಲ್ಲರಿಗೆ ಪಾಲು ಕೊಡಲ್ಪಡುವದಿಲ್ಲ.

ಪಾಲಿಗೆ ಬಾಧ್ಯರಾದ ಜನರಲ್ಲಿ ಸರಿ ಪಾಲಾಗಿ ಹಣವು ಹಂಚಲ್ಪಡುವದು. ಆದರೆ ಮೈತಮಗನ ವಿಧವೆ ಅಥವಾ ವಿಧವೆಯರು, ಸಂತತಿ ಅಥವಾ ಸಂತತಿ ಗಳು ಆ ಮಗನು ಒಂದು ವೇಳೆ ವರ್ಗಣಿದಾರನು ಸತ್ತಾಗ ಜೀವಂತನಿದ್ದರೆ ಎಷ್ಟು ಪಾಲನ್ನು ಪಡೆಯುತ್ತಿದ್ದನೋ ಅಷ್ಟನ್ನೇ ಇವರೆಲ್ಲರು ತಮ್ಮೊಳಗೆ ಸರಿಯಾಗಿ ಹಂಚಿಕೊಳ್ಳತಕ್ಕದ್ದು.

೧೭ [೧] ನಿಯಮದ ಕೇವಲ ಈ ಭಾಗದ ದೆಸೆಯಿಂದ ವರ್ಗಣಿದಾರನ ಪಶ್ಚಾತ್ ಕೆಳಗೆ ಕಾಣಿಸಿದವರು ಅವನ ಕುಟುಂಬದವರೆಂದು ಗ್ರಹಿಸಲಾಗು ವದು:—

[೧] ವಿಧವೆ ಅಥವಾ ವಿಧವೆಯರು.

[೨] ಮಕ್ಕಳು.

[೩] ಮೈತಮಗನ ವಿಧವೆ ಅಥವಾ :

ಟೀಪು :— ವರ್ಗಣಿದಾರರು ಸ್ತ್ರೀಯರಿದ್ದ ಪಕ್ಷದಲ್ಲ (೧) ವಿಧವ ಅಥವಾ ವಿಧವೆಯರು ಎಂಬುದರ ಬದಲು (೧) ವಿಧುರ ಎಂದೂ ವರ್ಗಣಿದಾರಳು ಅವಿವಾ ಹಿತ ಇದ್ದರೆ ಅವಳ ತಂದೆ ಜೀವಂತ ಅವನಿಲ್ಲವಿದ್ದರೆ ತಾಯಿಯೆಂದೂ ಓದತಕ್ಕದ್ದು.

(೫) ಸ್ಕೂಲಬೋರ್ಡಿನವರು ಅಡ್ವಾನ್ಸ ತೆಗೆದುಕೊಂಡ ವರ್ಗಣಿದಾರನ ಪಗಾರದೊಳಗಿಂದ ಪ್ರತಿತಿಂಗಳು ಬೋರ್ಡಿನವರು ನಿರ್ಣಯಿಸಿದ, ೨೪ ಕಂತುಗಳಿಗೆ ಹೆಚ್ಚಾಗದ ಹಾಗೆ ಕಂತಿನಂತೆ ಹಣವನ್ನು ಮುರಕೊಳ್ಳುವರು. ಅಡ್ವಾನ್ಸ ತೆಗೆದುಕೊಂಡ ನಂತರ ವರ್ಗಣಿದಾರನು ಪೂರ್ಣ ಪಗಾರ ಪಡಕೊಳ್ಳುವ ಮೊದಲನೆಯ ತಿಂಗಳಿಗೆ ಕಂತು ವಸೂಲ ಮಾಡುವದು ಆರಂಭವಾಗುವದು.

ಟೀಪು—ವರ್ಗಣಿದಾರನು ಸ್ಕೂಲಬೋರ್ಡಿನವರು ಗೊತ್ತು ಮಾಡಿದ ಕಂತುಗಳಕ್ಕಿಂತ ಕಡಿಮೆ ಕಂತುಗಳಲ್ಲಿ ತನ್ನ ಇಚ್ಛೆಯ ಪ್ರಕಾರ ಹಣವನ್ನು ಮುಟ್ಟಿಸಬಹುದು. ಪೂರ್ಣ ಪಗಾರಿಯಿಂದ ದೊರೆತ ರಜೆ ಇರದ ಪಕ್ಷದಲ್ಲಿ ರಜೆಯ ಮೇಲೆ ಹೋದ ವರ್ಗಣಿದಾರನಿಂದ ಕಂತುಗನ್ನು ವಸೂಲ ಮಾಡುವದಿಲ್ಲ ಎರಡು ಅಥವಾ ಹೆಚ್ಚು ಅಡ್ವಾನ್ಸುಗಳು ಕೊಡಲ್ಪಟ್ಟಿದ್ದಲ್ಲಿ ಪ್ರತಿಯೊಂದು ಅಡ್ವಾನ್ಸು ಪ್ರತ್ಯೇಕ ಗಣಿಸಲ್ಪಡುವದು ಮತ್ತು ಪ್ರತಿಯೊಂದು ೧/೨೪ ಕ್ಕೆ ಕಡಿಮೆ ಯಾಗದಷ್ಟ ಹಣವು ಪ್ರತಿತಿಂಗಳ ಅಡ್ವಾನ್ಸನ್ನು ಮುಟ್ಟುವವರೆಗೆ ವಸೂಲ ಮಾಡಲ್ಪಡುವದು.

(೬) ಪ್ರೊವಿಡೆಂಟ ಫಂಡಿನ ಕಂತುಗಳಲ್ಲದೆ ಈ ಕಂತುಗಳು ನಿಮಿತ್ತ ಪಗಾರದೊಳಗಿಂದ ಅವಶ್ಯವಾಗಿ ಮುರಕೊಳ್ಳಲ್ಪಡುವವು.

೧೫. ಪ್ರತಿಯೊಬ್ಬ ವರ್ಗಣಿದಾರನು ತಾನು ಕದಾಚಿತ್ ಸ್ಕೂಲ ಬೋರ್ಡಿನ ನೌಕರಿಯಲ್ಲಿ ಇರುವಾಗ್ಗೆ ಇಲ್ಲವೆ ತನಗೆ ಸಲ್ಲತಕ್ಕ ಫಂಡಿನ ರಕಮು ಮುಟ್ಟುವ ಪೂರ್ವದಲ್ಲಿ ಕಾಲಾಧೀನನಾದರೆ ತನ್ನ ಹೆಸರಿಗೆ ಜಮಾ ಇದ್ದ ಹಣವನ್ನು ಯಾರಿಗೆ (Nomine) ಕೊಡತಕ್ಕದ್ದೆಂಬದನ್ನು ಬರಕೊಟ್ಟಿರಬೇಕು ಮತ್ತು ಇದನ್ನು ಅಬಾಧಿತವಾಗಿ ಇಟ್ಟಿರಬೇಕು. ಆದರೆ ಇಂಥ ಮನುಷ್ಯನು ಅಜ್ಞಾನಿದ್ದರೆ ಇಂಥವನ ಹೆಸರನ್ನು ಬರೆದುಕೊಡುವಾಗ್ಗೆ ವರ್ಗಣಿದಾರನು ತಾನು ಅಜ್ಞಾನ ನಾಮಿನಿಯು ಸಜ್ಞಾನನಾಗುವ ಪೂರ್ವದಲ್ಲಿ ಕದಾಚಿತ್ ಕಾಲಾಧೀನನಾದಲ್ಲಿ ಆ ಅಜ್ಞಾನ ನಾಮಿನಿಯ ಪರವಾಗಿ ತನ್ನ ಹೆಸರಿಗೆ ಜಮಾ ಇದ್ದ ರಕಮನ್ನು ಯಾರಿಗೆ ಕೊಡಬೇಕೆಂಬ ಬಗ್ಗೆ ಒಬ್ಬ ಸಜ್ಞಾನನಾದ ಮನುಷ್ಯನನ್ನು ನಿಯಮಿಸಬೇಕು. ಮತ್ತು ಅಜ್ಞಾನ ನಾಮಿನಿಯು ಸಜ್ಞಾನನಾಗುವ ಪೂರ್ವದಲ್ಲಿ, ವರ್ಗಣಿದಾರನು ಜೀವಂತನಿರುವಾಗ್ಗೆ, ಹೀಗೆ ನಿಯಮಿಸಿದ ಮನುಷ್ಯನು ಕಾಲಾಧೀನನಾದರೆ ವರ್ಗಣಿದಾರನು ಆ ಕೂಡಲೆ ಇನ್ನೊಬ್ಬ ಸಜ್ಞಾನ ಮನುಷ್ಯನನ್ನು ಅಜ್ಞಾನ ನಾಮಿನಿಯ ಸಲುವಾಗಿ ಹಣವನ್ನು ಸ್ವೀಕರಿಸಲಿಕ್ಕೆ ನಿಯಮಿಸಲಿಕ್ಕೇ ಬೇಕು. ಹೀಗೆ ನಿಯಮಿಸಿದ ಮನುಷ್ಯನು ಮೇಲೆ ಹೇಳಿದ ಅವಧಿಯಲ್ಲಿ ಸತ್ತರೆ ಪುನಃ ಹೊಸಬನನ್ನು ಕಾಲನಿಲಂಬನವಿಲ್ಲದೆ ನಿಯಮಿಸಲಿಕ್ಕೇ ಬೇಕು.

೧೬. ವರ್ಗಣಿದಾರನ ಮರಣಾನಂತರ ಅವನ ಹೆಸರಿಗೆ ಜಮಾ ಇದ್ದ, ಸ್ಕೂಲಬೋರ್ಡಿನವರು ಅವನ ಹೆಸರಿಲಿ ತುಂಬಿದ ಹಣ ಸಹಿತ ಎಲ್ಲ ರಕಮನ್ನು ಏನೂ ಮುರಕೊಳ್ಳದೆ ಅವನ ಮೇಲೆ ವಿವರಿಸಿದಂತೆ ನೇಮಿಸಿದ ನಾಮಿನಿ ಗಾಗಲಿ ಇಲ್ಲವೆ (ಆ ನಾಮಿನಿಯು ಅಜ್ಞಾನನಿದ್ದಲ್ಲಿ) ಅವನ ಪರವಾಗಿ ಹಣವನ್ನು ಸ್ವೀಕರಿಸಲಿಕ್ಕೆ ಆ ಕಾಲಕ್ಕೆ ನೇಮಿಸಲ್ಪಟ್ಟಿದ್ದ ಮನುಷ್ಯನಿಗಾಗಲಿ ಕೊಡಲ್ಪಡ್ಡವದು. ಆ ಕಾಲಕ್ಕೆ ವರ್ಗಣಿದಾರನು ಎಷ್ಟು ದಿವಸ ನೌಕರಿ ಮಾಡಿರುವನೆಂಬದ್ಕ ಗಣನೆಗೆ ತರಲ್ಪಡುವದಿಲ್ಲ. ಆದರೆ ೨೦ ನೆಯ ನಿಯಮದನ್ವಯ ಕೊಡತಕ್ಕದ್ದು ಮಾತ್ರ ಮುರಿಯಲ್ಪಡುವದು.

೧೭. (೧) ವರ್ಗಣಿದಾರನು ತನ್ನ ಮರಣದ ಕಾಲದಲ್ಲಿ ಯಾರನ್ನೂ ನಾಮಿನೇಟ ಮಾಡದೇ ಇದ್ದಲ್ಲಿ ಅಥವಾ ಅದನ್ನು ಅಬಾಧಿತವಾಗಿ ಇಡದೇ ಇದ್ದಲ್ಲಿ ಅಥವಾ ನಾಮಿನಿಯು ಅಜ್ಞಾನನಿದ್ದಲ್ಲಿ ೧೫ ನೆಯ ನಿಯಮದ ಪ್ರಕಾರ ಸಜ್ಞಾನ ನಾದ ಒಬ್ಬನನ್ನು ನೇಮಿಸದೇ ಇದ್ದಲ್ಲಿ ಅಥವಾ ಆ ನಿಯಮದಲ್ಲಿ ಹೇಳಿದಂತೆ ಅದನ್ನು ಕಾಯ್ದುಕೊಳ್ಳದೇ ಇದ್ದಲ್ಲಿ ಆ ವರ್ಗಣೀದಾರನ ಹೆಸರಿಗೆ ಜಮಾ ಇದ್ದ ರಕಮು ಅವನ ಕುಟುಂಬದವರಲ್ಲಿ ಹಂಚಲ್ಪಡುವದು. ಆದರೆ ಅವನ ಗಂಡುಮಕ್ಕಳು ಮತ್ತು ಅವನ ಮೈತ ಗಂಡುಮಗನ ಗಂಡುಮಕ್ಕಳು ಇವರು ಕಾಯಿದೇಶೀರ ಸುಜ್ಞಾನ ವಯಸ್ಸಿಗೆ ಬಂದಿದ್ದಲ್ಲಿ ಮತ್ತು ಅವನ ವಿವಾಹಿತರಾದ ಹೆಣ್ಣುಮಕ್ಕಳು ಮತ್ತು ಮೈತ ಮಗನ ವಿವಾಹಿತ ಹೆಣ್ಣು ಮಕ್ಕಳು ಇವರ ಗಂಡಂದಿರು ಜೀವಂತ ಇದ್ದ ಪಕ್ಷದಲ್ಲಿ ಇವರೆಲ್ಲರಿಗೆ ಪಾಲು ಕೊಡಲ್ಪಡುವದಿಲ್ಲ.

ಪಾಲಿಗೆ ಬಾಧ್ಯರಾದ ಜನರಲ್ಲಿ ಸರಿ ಪಾಲಾಗಿ ಹಣವು ಹಂಚಲ್ಪಡುವದು. ಆದರೆ ಮೈತಮಗನ ವಿಧವೆ ಅಥವಾ ವಿಧವೆಯರು, ಸಂತತಿ ಅಥವಾ ಸಂತತಿಗಳು ಆ ಮಗನು ಒಂದು ವೇಳೆ ವರ್ಗಣಿದಾರನು ಸತ್ತಾಗ ಜೀವಂತನಿದ್ದರೆ ಎಷ್ಟು ಪಾಲನ್ನು ಪಡೆಯುತ್ತಿದ್ದನೋ ಅಷ್ಟನ್ನೇ ಇವರೆಲ್ಲರು ತಮ್ಮೊಳಗೆ ಸರಿಯಾಗಿ ಹಂಚಿಕೊಳ್ಳತಕ್ಕದ್ದು.

೧೭ [೧] ನಿಯಮದ ಕೇವಲ ಈ ಭಾಗದ ದೆಸೆಯಿಂದ ವರ್ಗಣಿದಾರನ ಪಶ್ಚಾತ್ ಕೆಳಗೆ ಕಾಣಿಸಿದವರು ಅವನ ಕುಟುಂಬದವರೆಂದು ಗ್ರಹಿಸಲಾಗುವದು:—

[೧] ವಿಧವೆ ಅಥವಾ ವಿಧವೆಯರು.

[೨] ಮಕ್ಕಳು.

[೩] ಮೈತಮಗನ ವಿಧವೆ ಅಥವಾ ವಿಧವೆಯರು ಮತ್ತು ಮಕ್ಕಳು.

ಟೀಪು :— ವರ್ಗಣಿದಾರರು ಸ್ತ್ರೀಯರಿದ್ದ ಪಕ್ಷದಲ್ಲಿ (೧) ವಿಧವೆ ಅಥವಾ ವಿಧವೆಯರು ಎಂಬುದರ ಬದಲು (೧) ವಿಧುರ ಎಂದೂ ವರ್ಗಣಿದಾರಳು ಅವಿವಾಹಿತ ಇದ್ದರೆ ಅವಳ ತಂದೆ ಜೀವಂತ ಇರುವನಿಲ್ಲವಿದ್ದರೆ ತಾಯಿಯೆಂದೂ ಓದತಕ್ಕದ್ದು.

(೨) ಮೇಲಿನ ೧೩ನೆಯ ಭಾಗದ ಪ್ರಕಾರ ಸ್ವೀಕರಿಸುವವರು ಯಾರೂ ಇಲ್ಲದಿದ್ದರೆ, ವರ್ಗಣಿದಾರನ ಕಾಯಿದೇಶೀರ ಪ್ರತಿನಿಧಿಗೆ ಅಥವಾ ಈ ಬಗ್ಗೆ ಆರ್ಡರ ಮಾಡಲಿಕ್ಕೆ ಅಧಿಕಾರವಿದ್ದ ಸಿವ್ಹಿಲ್ ಕೋರ್ಟಿನಿಂದ ತರಾಯಿಸಲ್ಪಟ್ಟ ಮನುಷ್ಯ ಅಥವಾ ಮನುಷ್ಯರಿಗೆ ಈ ಹಣವು ಕೊಡಲ್ಪಡುವದು. ಆದರೆ ವರ್ಗಣಿದಾರನ ಖಾತೆಕ್ಕೆ ಜಮಾ ಇದ್ದ ರಕಮು ೫೦೦ ರೂಪಾಯಿ ಮಿಕ್ಕದಿದ್ದಲ್ಲಿ ಸ್ಕೂಲಬೋರ್ಡಿನವರು ತಮಗೆ ಯೋಗ್ಯ ಎಂದು ಕಂಡು ಬಂದ ಮನುಷ್ಯನಿಗೆ ಅಥವಾ ಮನುಷ್ಯರಿಗೆ ಕೊಡಲ್ಪಡುವದು.

೧೮. ಯಾವನೊಬ್ಬ ವರ್ಗಣಿದಾರನಿಗೆ ಸ್ಕೂಲ ಬೋರ್ಡಿನವರು ತುಂಬಿದ ವರ್ಗಣಿ ಹಣದ (ಬಡ್ಡಿ ಸಹಿತ) ಪೂರ್ಣ ಭಾಗವಾಗಲಿ ಅಥವಾ ಕೆಲವು ಭಾಗವಾಗಲಿ ೧೧ನೆಯ ಅಥವಾ ೧೭ನೆಯ ನಿಯಮಗಳನ್ವಯ ಬೋರ್ಡಿಗೆ ಜಮಾ ಮಾಡಲ್ಪಡುವದೋ ಆಗ್ಗೆ ವರ್ಗಣಿದಾರನ ಖಾತೆಗೆ ವರ್ಗಣಿ ಹಣವು ತುಂಬಲ್ಪಡುವಾಗ್ಗೆ ಆ ಬಗ್ಗೆ ವೇಳೆ ವೇಳೆಗೆ ಸರಕಾರದಿಂದ ಗ್ರ್ಯಾಂಟ-ಇನ್-ಏಡ ಹಣ ದೊರೆತದ್ದನ್ನು ಅದರ ಮೇಲಿನ ಬಡ್ಡಿ ಸಹಿತ ಸರಕಾರಕ್ಕೆ ವಾಪಸ ಮಾಡುವದು ಬೋರ್ಡಿನವರ ಜವಾಬುದಾರಿಯದೆ

೧೯. ವರ್ಗಣಿದಾರನು ರಿಟಾಯರ ಆದ ಅಥವಾ ಕಾಲಾಧೀನನಾದ ದಿವಸದಿಂದ ೩ ತಿಂಗಳೊಳಗಾಗಿ ಹಣವು ಕೊಡಲ್ಪಡತಕ್ಕದ್ದು. ಮತ್ತು ಇದರಲ್ಲಿ ಹಣವು ಕೊಟ್ಟ ದಿವಸದ ವರೆಗೆ ಬಡ್ಡಿಯು ಕೊಡಲ್ಪಡುವದು. ಮತ್ತು ಹಣವನ್ನು ೩ ತಿಂಗಳ ಅವಧಿಯಲ್ಲಿ ಪಡೆದುಕೊಳ್ಳದಿದ್ದರೆ ಆ ಅವಧಿಯು ಮುರಿದ ನಂತರ ಬಡ್ಡಿಯು ಕೊಡಲ್ಪಡುವದಿಲ್ಲ.

೨೦. ಸ್ಕೂಲ ಬೋರ್ಡಿನ ವಹಿಗಳಲ್ಲಿ ವರ್ಗಣಿದಾರನ ಹೆಸರಿಗೆ ಜಮಾ ಇದ್ದ ರಕಮಿನಲ್ಲಿ ಅವನಿಂದ ಸ್ಕೂಲ ಬೋರ್ಡಿಗೆ ಬರತಕ್ಕ ಹಣವನ್ನು ಸ್ಕೂಲ ಬೋರ್ಡಿನವರಿಗೆ ಮುರಿದುಕೊಳ್ಳಲಿಕ್ಕೆ ಅಧಿಕಾರವದೆ.

೨೧ ಈ ನಿಯಮಗಳನ್ನು ಸ್ಕೂಲ ಬೋರ್ಡಿನವರಿಗೆ ವೇಳೆ ವೇಳೆಗೆ ತಮಗೆ ಅವಶ್ಯ ಕಂಡಂತೆ, ಸರಕಾರದ ಮಂಜೂರಿಯಿಂದ, ಹೆಚ್ಚುಕಡಿಮೆ ಮಾಡಲಿಕ್ಕೆ ಬರುವದು.

ಸರಕ್ಯೂಲರಗಳು.

ಸರ್ಕ್ಯೂಲರ ನಂ. ೨೪.

ಅಜಂ—ಲೊ. ಬೋ. ವ ನಾನ್ ಲೋಕಲ್ ಅಥಾರಿಟಿ ಮುನಶಿಪಾಲ್ಟಿ ಶಾಳಾ ಮಾಸ್ತರ ವ ಮಿಸ್ಟ್ರೆಸ್ ಜನರಿಗೆ—ಈ ಸರಕ್ಯೂಲರ ಮೂಲಕ ತಿಳಿಸುವದೇನಂದರೆ—ಪೆನ್‌ಶನ್ ಬದಲಾಗಿ ಪ್ರೊವ್ಹಿಡೆಂಟ ಫಂಡ ಪದ್ಧತಿಯನ್ನು ತಾ॥ ೧-೪-೧೯೨೯ರಿಂದ ಅಮಲಿನಲ್ಲಿ ತರತಕ್ಕದ್ದು ಇರುತ್ತದೆ. ಆದ್ದರಿಂದ,

(ಅ) ತಾ॥ ೧-೪-೧೯೧೯ ರಿಂದ ಅಥವಾ ಅದಕ್ಕೂ ಮೊದಲು ಯಾರ ಕಾಯಂ ನವಕರಿಯು ಪ್ರಾರಂಭವಾಗಿದೆ ಅಂದರೆ ಯಾರ ನವಕರಿಯು ತಾ॥ ೧-೪-೧೯೨೯ಕ್ಕೆ ಹತ್ತು ಅಥವಾ ಹತ್ತರಕ್ಕಿಂತ ಹೆಚ್ಚು ವರ್ಷ ಆಗುವದೋ ಅಂಥ ವರಿಗೆ ಪ್ರೊವ್ಹಿಡೆಂಟಫಂಡ ನೇಮಗಳು ಲಾಗು ಆಗುವದಿಲ್ಲ. ಅವರ ನವಕರಿಯನ್ನು ಪೆನ್‌ಶನ್ ಪದ್ಧತಿಯಂತೆ ಹಿಡಿಯಲ್ಪಡುವದು.

[ಬ] ೧-೪-೧೯೨೯ ರಿಂದ ಅಂದರೆ ಪ್ರಾಥಮಿಕ ಶಿಕ್ಷಣದ ಅಮಲ ಬಜಾವಣೆಯು ಈ ಬೋರ್ಡಿನ ತಾಬಾಕ್ಕೆ ಬಂದಂದಿನಿಂದ ಬೋರ್ಡಿನಿಂದ ನೇಮಿಸಲ್ಪಟ್ಟ ಹಾಗು ಮುಂದೆ ನೇಮಿಸಲ್ಪಡುವ ಕಾಯಂ ಮಾಸ್ತರ ವ ಮಿಸ್ಟ್ರೆಸ್ ಜನರಿಗೆ ಪ್ರೊವ್ಹಿಡೆಂಟ ಫಂಡ ನೇಮಗಳು ಲಾಗು ಇರುತ್ತವೆ. ಪೆನ್‌ಶನ್ ಪದ್ಧತಿ ಲಾಗು ಆಗುವದಿಲ್ಲ.

[ಕ] ಯಾವ ಮಾಸ್ತರರ ಅಥವಾ ಮಿಸ್ಟ್ರೆಸ್‌ರ ನವಕರಿಯು ತಾ॥ ೧-೪-೧೯೨೯ಕ್ಕೆ ಹತ್ತುವರ್ಷಕ್ಕಿಂತ ಕಡಿಮೆ ಆಗುತ್ತದೆಯೋ ಅಂದರೆ ಯಾರ ಕಾಯಂ ನವಕರಿಯು ತಾ॥ ೧-೪-೧೯೧೯ ನಂತರ ಸುರು ಆಗಿರುತ್ತದೆಯೋ ಅಂಥವರಿಗೆ ಮಾತ್ರ ಅವರ ಪಸಂದಿ ಪ್ರಕಾರ ಪ್ರೊವ್ಹಿಡೆಂಟ ಫಂಡ ಪದ್ಧತಿಯಂತೆ ಎಣಿಸಲಿಕ್ಕೆ ಬರುವದು.

ಆದ್ದರಿಂದ ಮೇಲಿನ ಕ, ಕಲಮಿನಲ್ಲಿ ವಿವರಿಸಿದ ನೇಮಗಳು ಲಾಗು ಅಗುವ ಯಾವತ್ತು ಮಾಸ್ತರ ವ ಮಿಸ್ಟ್ರೆಸ್ ಜನರಿಗೆ ಇದರ ಮೂಲಕ ತಿಳಿಸುವದೇನಂದರೆ—ಅವರು ತಮ್ಮ ನವಕರಿಯನ್ನು ಪ್ರೊವ್ಹಿಡೆಂಟ ಫಂಡ ಪದ್ಧತಿಯಂತೆ ಎಣಿಸಬೇಕೋ ಅಥವಾ ಪೆನ್‌ಶನ್ ಪದ್ಧತಿಯಂತೆ ಎಣಿಸಬೇಕೋ ಎಂಬ ಬಗ್ಗೆ ತಮ್ಮ ತಮ್ಮ ಅಭಿಪ್ರಾಯಗಳನ್ನು ತಮ್ಮ ಸಹಿ ನಿಶಿ ನಮ್ಮ ಕಡೆಗೆ ತಾ॥ ೧

೪-೧೯೨೯ನೇ ಒಳಗಾಗಿ ಮುಟ್ಟುವಂತೆ ಕಳಿಸಿಕೊಡತಕ್ಕದ್ದು. ಒಂದುಸಾರೆ ಯಾವ ದೊಂದು ಪದ್ಧತಿಗೆ ಒಪ್ಪಿಗೆ ಕೊಟ್ಟನಂತರಾ ಅದನ್ನು ಯಾವಕಾರಣದಿಂದಲೂ ಬದಲಾಯಿಸಲಿಕ್ಕೆ ಬರುವದಿಲ್ಲ

ಮೇಲೆ ನಿವರಿಸಿದಂತೆ ಒಟ್ಟು ನವಕರಿಯು ೧-೪-೨೯ಕ್ಕೆ ಹತ್ತುವರ್ಷ ಕಡಿಮೆ ಇದ್ದು ಪ್ರೊವ್ಹಿಡೆಂಟ ಫಂಡ ಪದ್ಧತಿಗೆ ಒಪ್ಪಿಗೆ ಕೊಟ್ಟಂಥವರಿಗೆ ತಾ॥ ೧-೪-೧೯೨೯ರಿಂದ ಮುಂಬೆ ಅವರು ರಿಟಾಯರ ಆಗಿ ಹೋಗುವ ತಾರೀಖಿನವರೆಗೆ. ಅವರ ಪ್ರೊವ್ಹಿಡೆಂಟ ಫಂಡ ಖಾತೆಕ್ಕೆ ಜಮಾ ಆದಷ್ಟು [ನೇನು ಪ್ರಕಾರ] ರಕಮು ಹಾಗು ಮೊದಲಿನ ಹತ್ತು ವರ್ಷ ಕಡಿಮೆ ನವಕರಿಯ ಬಗ್ಗೆ ನೇಮು ಪ್ರಕಾರ ದೊರೆಯಬಹುದಾದಷ್ಟು ಗ್ರಾಚ್ಯುಯಿಟಿಯು ಸಹ ಸಿಗುವದು.

ಈ ಮೊದಲೀ ಕ್ಕ ಕಲಮಿನಲ್ಲಿಯ ನಿಯಮಗಳು ಲಾಗು ಆಗುವ ಮಾಸ್ತರರು ಜನರಲ್ ಪ್ರೊವ್ಹಿಡೆಂಟ ಫಂಡಿಗೆ ವರ್ಗಣಿದಾರಿಂದ ಪ್ರೊವ್ಹಿಡೆಂಟ ಫಂಡ ಪದ್ಧತಿಗೆ ಒಪ್ಪಿಗೆ ಕೊಟ್ಟರೆ ಅಂಥವರು ಪ್ರೊವ್ಹಿಡೆಂಟ ಫಂಡ ಪದ್ಧತಿ ಲಾಗು ಆದ ತಾರೀಖಿನಿಂದ ಜನರಲ್ ಪ್ರೊವ್ಹಿಡೆಂಟ ಫಂಡಿಗೆ ವರ್ಗಣಿ ಕೊಡಲಿಕ್ಕೆ ಬರುವದಿಲ್ಲ. ಮತ್ತು ಈ ಮೊದಲು ಅವರ ಹೆಸರಿಲೆ ಜನರಲ್ ಪ್ರೊವ್ಹಿಡೆಂಟ ಫಂಡ ಜಮಾ ಇದ್ದಷ್ಟು ಹಣವನ್ನು ಅವರಿಗೆ ಪರತ ಕೊಡಲಿಕ್ಕೆ ಬರುವದಿಲ್ಲ. ಆದರೆ ಆ ಹಣವು ಅವರು ಒಪ್ಪಿಗೆ ಕೊಡುವ ಪ್ರೊವ್ಹಿಡೆಂಟ ಫಂಡಿಗೆ ಅವರ ಖಾತೆಕ್ಕೆ ಟ್ರಾನ್ಸಫರ ಮಾಡಲ್ಪಡುವದು.

ಹಂಗಾಮಿ ತರೀಕ ಅಥವಾ ಬದಲು ನೇಮಿಸಿರುವ ಮಾಸ್ತರ ವ ಮಿಸ್ಟ್ರೆಸರಿಗೆ ಪ್ರೊವ್ಹಿಡೆಂಟ ಫಂಡ ನೇಮಗಳು ಲಾಗು ಇರುವದಿಲ್ಲ.

ಪ್ರೊವ್ಹಿಡೆಂಟ ಫಂಡ ನೇಮಗಳನ್ನು ಸನ್ ೧೯೨೯ನೇ ಜಾನೇವರಿ ತಿಂಗಳ ಡಿ॥ ಸ್ಕೂಲಬೋರ್ಡ ಪತ್ರಿಕೆಯಲ್ಲಿ ಎಲ್ಲ ಮಾಸ್ತರ ವ ಮಿಸ್ಟ್ರೆಸ್ ಜನರ ಮಾಹಿತಿಗಾಗಿ ಭಾಷಾಂತರಿಸಿ ಪ್ರತ್ಯೇಕವಾಗಿ ಪ್ರಸಿದ್ಧಮಾಡಲ್ಪಟ್ಟದೆ— ತಿಳಿಯುವದು ತಾ॥ ೫-೩-೧೯೨೯ ಇಸ್ವಿ.

S K. Hosmani,
ಚೇರಮನ್,
ಡಿ. ಸ್ಕೂ. ಬೋ. ಧಾರವಾಡ.

ಸರಕ್ಯೂಲರ ನಂ. ೨೫

ಅಜಂ— ಜಿಲ್ಹೆಯೊಳಗಿನ ಯಾವತ್ತು ಲೋ. ಬೊ. ವ ನಾನ್ ಲೋಕಲ್ ಅಥಾರಿಟಿ ಮುನಸಿಪಾಲ್ಟಿ ಶಾಳಾ ಮಾಸ್ತರ ವ ಮಿಸ್ಟ್ರೆಸರಿಗೆ—

ಈ ಸರಕ್ಯೂಲರ ಮೂಲಕ ತಿಳಿಸುವದೇನಂದರೆ – ಪ್ರತಿಯೊಂದು ಶಾಲೆಯ ಮಾಸ್ತರರು ತಮ್ಮ ತಮ್ಮ ಶಾಲೆಗಳ ಹಾಜರಿ ಸರಾಸರಿಯನ್ನು ಸನ್ ೧೯೨೫ನೇ ಮಾರ್ಚ ಹಿಡಿದು ೧೯೨೬ನೇ ಫೆಬ್ರುವರಿ ಪೂರಾದವರೆಗೆ ತಯಾರಿಸಿ ತಾಲೂಕ ಶಾಳಾ ಮಾಸ್ತರರ ಕಡೆಗೆ ಈ ಸರಕ್ಯೂಲರ ಮುಟ್ಟದ ಕೂಡಲೆ ತಪ್ಪದೆ ಕಳಿಸಿಕೊಬೇಕು. ಮತ್ತು ತಮ್ಮ ತಮ್ಮ ಶಾಲೆಯ ಹಾಜರಿ ಸರಾಸರಿಯನ್ನು ತಮ್ಮ ಶಾಲೆಯ ರಿಕಾರ್ಡಿನ ಮೇಲಿಂದ ಬರೋಬರಿ ತಯಾರಿಸಿ ಕಳಿಸತಕ್ಕದ್ದು. ಮಾಸ್ತರರು ಕಳಿಸಿನ ಹಾಜರಿ ಸರಾಸರಿಗೂ ನಮ್ಮ ಆಫೀಸಿನಲ್ಲಿರುವ ರಿಕಾರ್ಡಿಗೂ ಹೆಚ್ಚು ಕಡಿಮೆಯಾದಲ್ಲಿ ಈ ಬಗ್ಗೆ ಆಯಾ ಶಾಲೆಯ ಮಾಸ್ತರರನ್ನೇ ಜವಾಬದಾರಿಯಾಗಿ ಹಿಡಿಯಲಾಗುವದು. ಆದ್ದರಿಂದ ಈ ಬಗ್ಗೆ ಪ್ರತಿಯೊಂದು ಶಾಲೆಯ ಮಾಸ್ತರರು ಹಾಜರಿ ಸರಾಸರಿ ಮಾಹಿತಿಯನ್ನು ಕಾಳಜಿ ಪೂರ್ವಕವಾಗಿ ತಯಾರಿಸಿ ಕಳಿಸಿಕೊಡತಕ್ಕದ್ದು.

೨ ತಾಲೂಕ ಶಾಳಾ ಮಾಸ್ತರರು ಆಯಾ ಶಾಲೆಗಳಿಂದ ಬಂದ ಪತ್ರಿಕೆಗಳ ಮೇಲಿಂದ ತಾಲೂಕಿನ ಒಟ್ಟು ಪತ್ರಿಕೆಯನ್ನು ಕೆಳಗೆ ತೋರಿಸಿದಂತೆ ಕೋಷ್ಟಕ ಹಾಕಿ ತಯಾರಿಸಿ ನಮ್ಮ ಕಡೆಗೆ ತಾ ೧-೪-೧೯೨೬ಕ್ಕೆ ತಪ್ಪದೆ ಕಳಿಸಿಕೊಡತಕ್ಕದ್ದು. ಮತ್ತು ಈ ಒಟ್ಟು ಪತ್ರಿಕೆಯ ಸಂಗಡ ಆಯಾ ಶಾಲೆಗಳಿಂದ ಪತ್ರಿಕೆಗಳನ್ನು ಸಹ ಕಳಿಸಿಕೊಡತಕ್ಕದ್ದು.

೩ ಯಾವಕಾರಣದಿಂದಲೂ ಯಾವಶಾಲೆಯ ಮಾಸ್ತರನು ಹಾಜರಿ ಸರಾಸರಿ ಮಾಹಿತಿಯನ್ನು ತಾಲೂಕ ಶಾಲೆಯ ಮಾಸ್ತರರಕಡೆಗೆ ವೇಳೆಗೆ ಸರಿಯಾಗಿ ಕಳಿಸದೆ ಇರಬಾರದು. ಅಂಥವರು ಯಾರಾದರು ಕಂಡು ಬಂದಲ್ಲಿ ಅಥವಾ ತಾಲೂಕ ಶಾಳಾ ಮಾಸ್ತರರು ಅವರ ಬಗ್ಗೆ ರಿಪೋರ್ಟುಮಾಡಿದಲ್ಲಿ ಅಂಥ ಮಾಸ್ತರರ ಬಗ್ಗೆ ಯೋಗ್ಯ ಇಲಾಜ ಮಾಡುವದರಲ್ಲಿ ಬರುವದು. ತಿಳಿಯುವದು—

ತಾ. ೫-೩-೧೯೨೫ ಇಶ್ವಿ.

ಸಂ.	ಶಾಲೆಯ ಹೆಸರು.	ಸನ್ ೧೯೨೫ನೇ ಮಾರ್ಚ ಹಿಡಿದು ಸನ್ ೧೯೨೬ನೇ ಫೇಬ್ರುವರಿ ವರೆಗೆ ಆಗುವ ಹಾಜರಿ ಸರಾಸರಿ		ಶರಾ.
೧	೨	೩	೪	೫

ಡಿ. ಸ್ಕೂ. ಬೋ. ಆಫೀಸ
ಧಾರವಾಡ
೪-೩-೧೯೨೫

S. K. Hosmani,

ಚೇರಮನ್.

ವಾರ, ತಾರೀಖು.	ವೇಳೆ	ವಿಷಯ.	ಗುಣಗಳು.
ಸೋಮವಾರ, ೮ ಎಪ್ರಿಲ ೧೯೨೯	೧೧—೩೦ರಿಂದ ೧೪—೩೦	ಪರೀಕ್ಷೆಗೆ ಕೂಡ್ರುವ ಉಮೇದವಾರರ ಹೆಸರನ್ನು ರಜಿಸ್ಟರ ಮಾಡುವದು	
	೧೫—೩೦ರಿಂದ ೧೭—೩೦	೭ನೆಯ ವಿಷಯ (ಅ) ಮತ್ತು (ಬ) ನಿಬಂಧ ಅಥವಾ ಅರ್ಜಿ ಮತ್ತು ಬರವಣಿಗೆ.	[ಅ] ೫೦ [ಬ] ೨೫
ಮಂಗಳವಾರ, ೯ ಎಪ್ರಿಲ ೧೯೨೯	೧೧ ರಿಂದ ೧೪	೩ನೆಯ ವಿಷಯ (ಅ) ಅಂಕಗಣಿತ.	[ಅ] ೧೦೦
	೧೫ ರಿಂದ ೧೭	೪ನೆಯ ವಿಷಯ (ಅ) ಮತ್ತು (ಬ) ಇತಿಹಾಸ ಮತ್ತು ಭೂಗೋಲ.	[ಅ] ೫೦ [ಬ] ೫೦
ಗುರುವಾರ, ೧೧ ಎಪ್ರಿಲ ೧೯೨೯	೧೧ ರಿಂದ ೧೪	೩ನೆಯ ವಿಷಯ (ಬ) ಮತ್ತು (ಕ) ಭೂಮಿತಿ ಮತ್ತು ದೇಶೀ ಜಮಾಖರ್ಚು.	[ಬ] ೫೦ [ಕ] ೫೦
	೧೫ ರಿಂದ ೧೭	೧ನೆಯ ವಿಷಯ (ಬ) ಮತ್ತು (ಕ) ವ್ಹಾನ್ಯಾಕ್ಯುಲರ ಅಥವಾ ಉರ್ದು.	[ಬ] ೪೫ (ಪದ್ಯ ೨೦ ಗದ್ಯ ೨೫) [ಕ] ೩೦

ಶುಕ್ರವಾರ, ೧೨ ಏಪ್ರಿಲ್ ೧೯೨೯	೭—೩೦	ರಿಂದ ೧೦—೩೦	೫ನೆಯ ವಿಷಯ ಆರೋಗ್ಯವಿಜ್ಞಾನ ಮತ್ತು ಶಾಸ್ತ್ರೀಯ ವಿಷಯ.	೧೦೦
ಶನಿವಾರ, ೧೩ ಏಪ್ರಿಲ್ ೧೯೨೯	೧೧	ರಿಂದ ೧೩	೬ನೆಯ ವಿಷಯ (ಅ) ಉರ್ದು ಅಥವಾ ವ್ಹರ್ನ್ಯಾಕ್ಯುಲರ.	[ಅ] ೫೦ (೪೦ ಬರಹ, ೧೦ ತೋಂಡಿ)
	೧೫	ರಿಂದ ೧೬	೬ನೆಯ ವಿಷಯ ಪತ್ರ ಅಥವಾ ಅರ್ಜಿ*	
			* ವ್ಹರ್ನ್ಯಾಕ್ಯುಲರ ಉರ್ದು ಉಮೇದವಾರರಿಗೆ ಉರ್ದುದಲ್ಲಿ. ಉರ್ದು ಉಮೇದವಾರರಿಗೆ ವ್ಹರ್ನ್ಯಾಕ್ಯುಲರದಲ್ಲಿ ವ್ಹರ್ನ್ಯಾಕ್ಯುಲರ ತೋಂಡಿ ಪರೀಕ್ಷೆಯು (ಮೊದಲನೆಯ ವಿಷಯ (ಅ) ಮತ್ತು (ಡ) ಮತ್ತು ೬ನೆಯ ವಿಷಯ (ಅ) ಮತ್ತು (ಕ ಬರಹದಿಂದ ಪರೀಕ್ಷೆಯು ನಡೆದ ಕಾಲದಲ್ಲಿ ತೆಗೆದುಕೊಳ್ಳತಕ್ಕದ್ದು. (ಅ) ೩೦ (ಡ) ೨೦ (ಅ) ೧೦ (ಕ) ೧೫.	

ಗಂಡುಬುದ್ಧಿಯ ಪರೀಕ್ಷೆಯ ಕಾರ್ಯಕ್ರಮ.

೧೯೧೯ನೆಯ ಎಪ್ರಿಲದಲ್ಲಿ ಜರುಗುವ ಶೇತಕೀ ವಿಷಯವನ್ನು ತೆಗೆದುಕೊಂಡ ಗಂಡು ಮಕ್ಕಳ ಮುಲ್ಕೀ ಪರೀಕ್ಷೆಯ ಕಾರ್ಯಕ್ರಮ.

ವಾರ, ತಾರೀಖು.	ವೇಳೆ.	ವಿಷಯ.	ಗುಣಗಳು.
ಸೋಮವಾರ, ೮ ಎಪ್ರಿಲ ೧೯೧೯	೧೧—೩೦ರಿಂದ ೧೪—೩೦	ಪರೀಕ್ಷೆಗೆ ಕೂಡ್ರುವ ಉಮೇದವಾರರ ಹೆಸರನ್ನು ರಜಿಸ್ಟರ ಮಾಡುವದು.	
	೧೫—೩೦ರಿಂದ ೧೭—೩೦	೨ನೆಯ ವಿಷಯ (ಅ) ಮತ್ತು (ಬ) ನಿಬಂಧ ಅಥವಾ ಅರ್ಜಿ ಮತ್ತು ಬರವಣಿಗೆ.	[ಅ] ೫೦ [ಬ] ೨೫
ಮಂಗಳವಾರ, ೯ ಎಪ್ರಿಲ ೧೯೧೯	೧೧ ರಿಂದ ೧೪	೩ನೆಯ ವಿಷಯ (ಅ) ಅಂಕಗಣಿತ (ಬ) ಕ್ಷೇತ್ರ ಫಲ ಮತ್ತು (ಕ) ದೇಶೀ ಜಮಾಖರ್ಚು.	[ಅ] ೫೦ [ಬ] ೨೫ [ಕ] ೨೫
	೧೫ ರಿಂದ ೧೭	೪ನೆಯ ವಿಷಯ (ಅ) ರಾಜ್ಯಭಾರ ಪದ್ಧತಿ (ಬ) ಸಹಕಾರ (ಕ) ಭೂಗೋಲ.	[ಅ] ೨೫ [ಬ] ೨೫ [ಕ] ೫೦
ಗುರುವಾರ, ೧೧ ಎಪ್ರಿಲ ೧೯೧೯	೧೧ ರಿಂದ ೧೪	೫ನೆಯ ವಿಷಯ (ಅ) ಒಕ್ಕಲತನ (ಬ) ನೇಚರ ಸ್ಟಡಿ (ಸೃಷ್ಟಿಜ್ಞಾನ).	[ಅ] ೩೫ [ಬ] ೩೦
	೧೫ ರಿಂದ ೧೯	೧ನೆಯ ವಿಷಯ (ಬ) ಮತ್ತು (ಕ) ದೇಶಭಾಷೆ.	[ಬ] ೪೫ [ಕ] ೩೦

ಶುಕ್ರವಾರ, ೧೨ ನೆಪ್ರಲ ೧೯೫೯	೮	೦೦ದ ೯೦	ಸಿನೆಯ ವಿಷಯ (೪) ಪಾಪ್ಟೀಯ ವಿಷಯ (೮) (೪) ೫೫ (೮) ೫೫ ಲಿಪೋಗ್ರಫಿ ೫೫ ನೆ. *೭ನೆಯ ವಿಷಯದ ಮೇಲೆ ಪ್ರಾಕ್ಟೆಕಲ್ ಪರೀಕ್ಷೆ. ೫೦ *೭ನೆಯ ವಿಷಯದ ಮೇಲೆ ಪ್ರಾಕ್ಟೆಕಲ್ ಪರೀಕ್ಷೆ. ೫೫
ಶನಿವಾರ, ೧೩ ನೆಪ್ರಲ ೧೯೫೯			* ಪರೀಕ್ಷಾ ಕಮಿಟಿಯು ಅಧ್ಯಕ್ಷರು ತೀರ್ಮಾನಿಸಿದ ಸಮಯದಲ್ಲಿ ಅಗತ್ಯವೆಂದು ಕಂಡರೆ ಒಮ್ಮೆ ಪರೀಕ್ಷೆಯಾದವರನ್ನೆ ಮತ್ತೆ ಪರೀಕ್ಷಿಸಬಹುದು. ಮೊದಲನೆಯ ವಿಷಯದ ಮೇಲೆ (೪) ನಮ್ಮ (೮) ಪೋಂಡಿಚೇರಿಯ ಬರಹಗಾರರಿಂದ ಪರೀಕ್ಷೆಯು ನಡೆಯುವ ಕಾಲದಲ್ಲಿ ತಿಳಿಸುವುದು. (೪) ೧೦ ನಮ್ಮ (೮) ೧೦.

೧೯೨೯ನೆಯ ಎಪ್ರಿಲದಲ್ಲಿ ಜರುಗುವ ಗಂಡುಮಕ್ಕಳ ಮುಲ್ಕೀ ಪರೀಕ್ಷೆಯ ಪ್ರೋಗ್ರ್ಯಾಮ.

ವಾರ, ತಾರೀಖು.	ವೇಳೆ.	ವಿಷಯ.	ಗುಣಗಳು.
ಸೋಮವಾರ, ೮ ಎಪ್ರಿಲ ೧೯೨೯	೧೧--೩೦ರಿಂದ ೧೪--೩೦	ಪರೀಕ್ಷೆಗೆ ಕೂಡ್ರುವ ಉಮೇದವಾರರ ಹೆಸರನ್ನು ರಜಿಸ್ಟರ ಮಾಡುವದು.	
	೧೫--೩೦ರಿಂದ ೧೭--೩೦	೨ನೆಯ ವಿಷಯ (ಅ) ಮತ್ತು (ಬ) ನಿಬಂಧ ಅಥವಾ ರಿಪೋರ್ಟ ಮತ್ತು ಬರಪ.	[ಅ] ೫೦ [ಬ
ಮಂಗಳವಾರ, ೯ ಎಪ್ರಿಲ ೧೯೨೯	೧೧ ರಿಂದ ೧೪	೩ನೆಯ ವಿಷಯ (ಅ) ಅಂಕಗಣಿತ.	[ಅ] ೧೦೦
	೧೫ ರಿಂದ ೧೮	೪ನೆಯ ವಿಷಯ (ಅ) ಮತ್ತು (ಬ) ಇತಿಹಾಸ ಮತ್ತು ಭೂಗೋಲ.	[ಅ] ೫೦ [ಬ] ೫೦
ಗುರುವಾರ, ೧೧ ಎಪ್ರಿಲ ೧೯೨೯	೧೧ ರಿಂದ ೧೪	೩ನೆಯ ವಿಷಯ (ಬ) ಮತ್ತು (ಕ) ಭೂಮಿತಿ ಮತ್ತು ದೇಶೀ ಜಮಾ ಖರ್ಚು	[ಬ] ೫೦ [ಕ] ೫೦
	೧೫ ರಿಂದ ೧೮	೧ನೆಯ ವಿಷಯ (ಬ) ಮತ್ತು (ಕ) ದೇಶಭಾಷೆ.	[ಬ] ೪೫ (ಪದ್ಯ ೨೦ ಗದ್ಯ ೨೫) [ಕ] ೩೦ ೧೦೦
ಶುಕ್ರವಾರ, ೧೨ ಎಪ್ರಿಲ ೧೯೨೯	೭--೩೦ರಿಂದ ೧೦--೩೦	೫ನೆಯ ವಿಷಯ ಆರೋಗ್ಯವಿಜ್ಞಾನ ಮತ್ತು ೫ನೆಯ ಕ್ರಮಿಕ ಪುಸ್ತಕದಲ್ಲಿಯ ಶಾಸ್ತ್ರೀಯ ಪಾಠಗಳು	

ಟೀಪು:—ತೋಂಡಿ ಪರೀಕ್ಷೆಯು [ಮೊದಲನೆಯ ಭಾಗದ (ಅ) ಮತ್ತು (ಬ) ಇವುಗಳ ಮೇಲೆ] ಬರಹದಿಂದ ಪರೀಕ್ಷೆಯು ನಡೆಯುವಾಗ್ಗೆ ತೆಗೆದುಕೊಳ್ಳಲಾಗುವವು.

REGD. NO. B. ೨೬೯೨.

DHARWAR DISTRICT SCHOOL BOARD PATRIKE.

DHARWAR.

ವಾರ್ಷಿಕ ವರ್ಗಣಿ ೨—೦—೦

ಬಿಡಿ ನಂಬಿಕೆ ೦—೪—೦.

ಮುದ್ದಾದ ಮುದ್ರಣ! ಸುಲಭ ದ

ತೋಂಟದಯ್ಯ ವಿದ್ಯಾಲಯ

ಕೆಲ್ಲೆ, ಧಾರವಾಡ.

—:೦:—

ಈ ಮುದ್ರಾಲಯವನ್ನು ಕರ್ನಾಟಕ ಲಿಂಗಾಯತ ಸಬ್ಸ್ಯುಕೇಶನ್ ಸೊಸೈಟಿಯವರು ಧಾರವಾಡದಲ್ಲಿ ನಡೆಸುತ್ತಿರುವರು ಈ ಮುದ್ರಾಲಯದಲ್ಲಿ ಕನ್ನಡ, ಇಂಗ್ಲೀಷ, ಮತ್ತು ಮರಾಠಿ ಭಾಷೆಗಳಲ್ಲಿ ಎಲ್ಲ ಬಗೆಯ ಮುದ್ರಣ ಅಚ್ಚು ಕಟ್ಟಾಗಿಯೂ, ಅಂದವಾಗಿಯೂ ಸುಲಭದರದಿಂದಲೂ ಪದವೀಧರರಿಂದ ಲ್ಯಿಹಾರಣೆಯಲ್ಲಿ ಸಕಾಲದಲ್ಲಿ ನೆರವೇರಿಸಲ್ಪಡುವದು. ಇದರ ಲಾಭವು ಅಭಿವೃದ್ಧಿಯ ಪವಿತ್ರ ಕಾರ್ಯಕ್ಕೆ ಮದರಿಂದ ವಿದ್ಯಾಭಕ್ತ್ಯಾಪಾತಿಗಳಾದ ಹೆಸರು ಆಶ್ರಯವನ್ನು ಕೊಡಬೇಕೋರಿಕೆ.

ಇಲ್ಲಿ ಕನ್ನಡ, ಶಾಲೆಗಳ, ವಿದ್ಯಾ ಇಯತ್ತೆಗಳ ಕಾಪಿ ಪುಸ್ತಕಗಳು ಸಾಯಿಪು ಬುಕ್ಕುಗಳು ಮತ್ತು ಬುಕ್ಕುಗಳು ಸುಲಭದರದಿಂದ ತ್ಯಾರಿಸಿ.

ಎಚ್ ಎಫ್ ಕಟ್ಟೀಮನಿ,

ಮ್ಯಾನೇಜರ

To,

The Head Master,

Hanumase School,

AT Taluk Navalgund

TAL Navalgund

ಸ್ಕೂಲ ಬೋರ್ಡ ಪತ್ರಿಕೆ

DHARWAR DISTRICT SCHOOL BOARD PATRIKE

ಸಂಪುಟ ೧.	ಫೆಬ್ರುವರಿ–ಮಾರ್ಚ ೧೯೩೯.	ಸಂಚಿಕೆಗಳು ೧೧–೧೩

ಸಂಪಾದಕ ಮಂಡಲ.

೧. ಶ್ರೀ. ಎಸ್. ಕೆ ಹೊಸಮನಿ, ಬಿ. ಎ, ಎಲ್ಎಲ್. ಬಿ.
(ಚೇರಮನ್, ಡಿ. ಎಸ್. ಬಿ.)

೨ ,, ಜಿ. ಆರ್. ನಲವಡಿ, ಬಿ. ಎ.. ಎಲ್ಎಲ್ ಬಿ.
(ವ್ಹಾಯಿಸ್ ಚೇರಮನ್, ಡಿ. ಎಸ್. ಬಿ)

೩. ,, ಡಿ ಎಲ್. ಪಾಟೀಲ, ಬಿ ಎ., ಎಲ್ಎಲ್. ಬಿ

೪ ,, ಪ್ಹಿ. ಬಿ. ಜೋಶಿ, ಬ ಎ ರಿಟಾಯರ್ಡ ಎಜ್ಯುಕೇಶನಲ್ ಇನ್ಸಪೆಕ್ಟರ.

೫. ಮೆ॥ ಸೈಯ್ಯದ ಫಕರುದ್ದೀನ ಸಾಹೇಬ.

ಮ್ಯಾನೇಜಿಂಗ ಎಡಿಟರ.

ಶ್ರೀ. ಎಚ್. ಎಫ್ ಕಟ್ಟೀಮನಿ, ಬಿ. ಎ.

ಈ ಪತ್ರಿಕೆಯು ಶ್ರೀ. ಎಚ್ ಎಫ್. ಕಟ್ಟೀಮನಿ, ಇವರಿಂದ ತೋಂಟದಾರ್ಯ ಮುದ್ರಾಲಯ ಕೆಲ್ಲೆ ಧಾರವಾಡ ಇಲ್ಲಿ ಮುದ್ರಿಸಲ್ಪಟ್ಟು, ಇವರಿಂದಲೇ ಧಾರವಾಡ ಜಿಲ್ಲಾ ಸ್ಕೂಲಬೋರ್ಡ ಕಚೇರಿಯಲ್ಲಿ ಪ್ರಸಿದ್ಧಿಸಲ್ಪಟ್ಟಿತು.

ವಿಷಯಾನುಕ್ರಮಣಿಕೆ.

	ವಿಷಯ	ಲೇಖಕರು
	ಫೆಬ್ರುವರಿ	
೧	ರಾಷ್ಟ್ರವೂ, ಬಾಲಕರೂ.	ಸಂಪಾದಕ
೨	ಮುಲ್ಕೀಪರೀಕ್ಷೆಯ ವಿದ್ಯಾರ್ಥಿಯ ಚಿಂತೆ ನಿವಾರಣೆ	ಓರ್ವ ಅಗ್ರಿ. ಟ್ರೇನಿಂಗ ಸ್ಕೂಲ ವಿದ್ಯಾರ್ಥಿ ದೇವಿಹೊಸೂರ
೩	ಕಾಬೂಲಿ ವಾಲಾ	ಸಂಪಾದಕರು
೪	ಔದ್ಯೋಗಿಕ ಶಿಕ್ಷಣ	,,
೫	ವಿವಿಧ ವಿಷಯಗಳು	,,
೬	ಸಾಲೆಗಳ ಸುದ್ದಿ.	,,
೭	ಸರಕ್ಯೂಲರಗಳು	
	ಮಾರ್ಚ	
೧	ಬೃಹತ್-ಕರ್ನಾಟಕ	ಸಂಪಾದಕ
೨	ಕರ್ನಾಟಕ ರಾಷ್ಟ್ರೀಯ ಗೀತೆ	—
೩	ಒಕ್ಕಲತನದ ಮುಲ್ಕೀಪರೀಕ್ಷೆಯ ಯೋಗ್ಯತೆ	ಓರ್ವವಿದ್ಯಾರ್ಥಿ ಒಕ್ಕಲತನದ ಶಾಲೆ ದೇವಿಹೊಸೂರ
೪	ಹುಬ್ಬಳ್ಳಿ ಕ. ಗೂ. ಲನೇ ನಂ. ಶಾಲೆ	ಸಂಪಾದಕ
೫	ಸಾಲೆಗಳ ಸುದ್ದಿ	,,
೬	ಸಾಭಾರ ಸ್ವೀಕಾರ ಹಂಗೂ ಅಭಿಪ್ರಾಯ	,,
೭	ಪದಗಳು	,,
೮	ಸ್ತ್ರಥವು ಸಂಪುಟದ ಕಡೆಯ ನುಡಿ	ಆರ್. ಪಿ. ಮಾನವಿ ಅ. ವ್ಯಾ. ಹೆಬ್ಬಳ್ಳಿ. ಸಂಪಾದಕ

॥ ವಿದ್ಯಾ ಗುರೂಣಾಂ ಗುರುಃ ॥

ಧಾರವಾಡ ಜಿಲ್ಲಾ

ಸ್ಕೂಲ ಬೋರ್ಡ ಪತ್ರಿಕೆ.

ಸಂಪುಟ ೧. | ಫೆಬ್ರುವರಿ ೧೯೨೯. | ಸಂಚಿಕೆ ೧೧.

ರಾಷ್ಟ್ರದ್ದು ಬಾಲಕರೂ.

ಸಂಪಾದಕರು.

ಶಿಕ್ಷಣವೇ ಯಾವದೊಂದು ರಾಷ್ಟ್ರದ ಉನ್ನತಿಗಾಗಲಿ, ಅವನತಿಗಾಗಲಿ ಕಾರಣವು. ಯಾವ ರಾಷ್ಟ್ರದಲ್ಲಿ ಶಿಕ್ಷಣ ಪದ್ಧತಿಯು ಆ ರಾಷ್ಟ್ರದ ಪರಿಸ್ಥಿತಿಗೆ ಅನುಗುಣವಾಗಿರುವದೋ ಆ ರಾಷ್ಟ್ರವು ನಿಶ್ಚಯವಾಗಿ ಉನ್ನತಿಯನ್ನು ಹೊಂದುವದು. ಶಿಕ್ಷಣವು ಪರಿಸ್ಥಿತಿಗೆ ವಿಪರೀತವಾಗಿದ್ದಲ್ಲಿ ತಪ್ಪದೆ ಆ ರಾಷ್ಟ್ರವು ಅವನತಿಯನ್ನು ಹೊಂದುವದು. ಆದ್ದರಿಂದ ಪಾಶ್ಚಾತ್ಯ ರಾಷ್ಟ್ರಗಳು ತಮ್ಮ ತಮ್ಮ ದೇಶದ ಬಾಲಕ ಶಿಕ್ಷಣದ ಕಡೆಗೆ ತುಂಬಾ ಲಕ್ಷ್ಯವನ್ನು ಪೂರೈಸುತ್ತಿರುವರು. ನಮ್ಮ ದೇಶದ ಪ್ರಾಚೀನ ಶಿಕ್ಷಣ ಪದ್ಧತಿಯಾದರೂ ಅಪ್ರತಿಮವಾಗಿತ್ತು.

ಯಾವ ರಾಷ್ಟ್ರವು ತನ್ನ ಹಿತವರ್ಧಕ ಯೋಜನೆಗಳಲ್ಲಿಯಾಗಲಿ, ರಾಜ್ಯದಾಡಳಿತದಲ್ಲಿಯಾಗಲಿ, ವ್ಯವಸಾಯ ಉದ್ಯೋಗಗಳಲ್ಲಿಯಾಗಲಿ, ಆಚಾರ-ವಿಚಾರ, ಶೀಲ-ಸ್ವಭಾವಗಳಲ್ಲಿಯಾಗಲಿ ಬಾಲಕರ ವಿಷಯವನ್ನೇ ಅಗ್ರಸ್ಥಾನದಲ್ಲಿ ಇಟ್ಟಿರುವದೋ, ಅದು ನಿಜವಾಗಿ ಘನತೆಯನ್ನು ಹೊಂದಲೇ ಬೇಕು. ಬಾಲಕರ ಉದ್ಧಾರ ಕಾರ್ಯದಲ್ಲಿ ಯಾವ ರಾಷ್ಟ್ರವು ಹೆಚ್ಚಾಗಿ ತೊಡಗಿರುವದೋ ಅದು ಜಗತ್ತಿನ ಉಳಿದ ರಾಷ್ಟ್ರಗಳಿಗಿಂತ ಶಾರೀರಕ, ಬೌದ್ಧಿಕ, ನೈತಿಕ ಸುಧಾರಣೆಗಳಲ್ಲಿಯೂ,

ಸುಖಸಂಪತ್ತುಗಳಲ್ಲಿಯೂ ಮಿಗಿಲಾಗುವದು. ಲೌಕಿಕ ಮತ್ತು ಪಾರಮಾರ್ಥಿಕ ಉನ್ನತಿಯ ಶಿಖರವನ್ನು ಅಪರುವದು ಅರ್ಥಾತ್ ರಾಷ್ಟ್ರವೇ ಆಗಲಿ, ಜನಾಂಗವೇ ಆಗಲಿ, ಮಾನವ ವರ್ಗವೇ ಆಗಲಿ, ಬಾಲಕರ ಸರ್ವತೋಮುಖವಾದ ಅಭಿವೃದ್ಧಿಯಿಂದಲೇ ಮುಂದಾಗುವದು. ಆದುದರಿಂದ ಲೋಕವೂ, ಲೋಕನಾಯಕರೂ, ಲೋಕಪಾಲಕರೂ ಬಾಲಕರ ಕಡೆಗೆ ಅದಷ್ಟು ಲಕ್ಷ್ಯ ಪೂರೈಸಬೇಕು. ಇದು ಅವರವರ ಆದ್ಯ ಕರ್ತವ್ಯವು. ಇದರಲ್ಲಿ ದುರ್ಲಕ್ಷ್ಯವು ಆತ್ಮಘಾತಕವೂ, ರಾಷ್ಟ್ರದ್ರೋಹವೂ ಎನಿಸುವದು.

ಪಾಶ್ಚಾತ್ಯ ದೇಶಗಳು ಈ ತತ್ವವನ್ನು ಕಂಡು ಹಿಡಿದಿರುವರಲ್ಲದೆ ಅವರು ಇದನ್ನು ಯಥಾಶಕ್ತಿ ವ್ಯವಹಾರದಲ್ಲಿ ತಂದಿರುವದು ಇಂಗ್ಲಂಡದ ಶಿಕ್ಷಣವನ್ನು ಪರಿಶೀಲಿಸಿದಲ್ಲಿ, ಜರ್ಮನಿಯ ಶಿಕ್ಷಣವನ್ನು ವಿವೇಚಿಸಿದಲ್ಲಿ, ಇಲ್ಲವೆ ಅಮೇರಿಕಾದ ಶಿಕ್ಷಣವನ್ನು ನಿರೀಕ್ಷಿಸಿದಲ್ಲಿ, ಆಯಾ ದೇಶದ ಮುಂದಾಳುಗಳು ಈ ವಿಷಯದಲ್ಲಿ ಎಷ್ಟು ಜಾಗ್ರತರೂ, ತಲ್ಲೀನರೂ ಆಗಿರುವರೆಂಬುದು ಒಡೆದು ಕಾಣುವದು.

ಜರ್ಮನಿಗೆ ಮಹಾಯುದ್ಧದ ಪೂರ್ವದಲ್ಲಿ ದೇಶದಲ್ಲೆಲ್ಲ ವೀರರೂ, ವೈದ್ಯೋಗಿಕ ಕಲಾಕೋವಿದರೂ, ಶಾಸ್ತ್ರಜ್ಞರೂ ಬೇಕಾಗಿದ್ದರು ಅದಕ್ಕೆ ಸರಿಯಾದ ಶಿಕ್ಷಣ ಪದ್ಧತಿಯು ರೂಢಿಯಲ್ಲಿ ಇತ್ತು. ಜಪಾನವು ಪಾಶ್ಚಾತ್ಯ ರಾಷ್ಟ್ರಗಳ ಜೋಡಿಗೆ ಬರಬೇಕಾದರೆ ಜಪಾನದ ಯುವಕರು ಪಾಶ್ಚಾತ್ಯ ದೇಶಗಳಲ್ಲಿ ನಿಂತು ಕಲಾಕೋವಿದರಾಗಿ ಬಂದುದೇ ಕಾರಣವು ಅದು ಕಾರಣ ನಮ್ಮ ದೇಶದ ಉನ್ನತಿಯು ಆಗಬೇಕಾದರೆ ನಮ್ಮ ಬಾಲಕರ ಶಿಕ್ಷಣವು ನಮ್ಮ ದೇಶದ ಇರುವಿಕೆಗೆ, ಬೇಡಿಕೆಗೆ ಮತ್ತು ಸಂಸ್ಕೃತಿಗೆ ಹೊಂದಿಕೆಯಾದದು ಇರಬೇಕು. ಕಬ್ಬಿಣ, ಕಲ್ಲಿದ್ದಲಿಯ ಸೌಕರ್ಯಗಳು ಇಂಗ್ಲಂಡದಂತೆ ನಮಗೆ ಇಲ್ಲ. ಆದರೆ ಸೃಷ್ಟಿಕರ್ತನ ಕೃಪಾಬಲದಿಂದ ನಮ್ಮ ದೇಶವು ಫಲವತ್ತಾದ ಭೂಮಿಯಿದ್ದು, ಭೂಮಾತೆಯು ನಮಗೆ ಬೇಕಾದ ಆಹಾರ ಪದಾರ್ಥಗಳನ್ನು ಬೇಕಾದಷ್ಟು ಕೊಡಲು ಸಮರ್ಥಳಿದ್ದಾಳೆ. ಕೃಷಿಕರ್ಮವೇ ನಮ್ಮ ದೇಶದ ಮುಖ್ಯ ಉದ್ಯೋಗವದೆ. ಆದುದರಿಂದ ನಮ್ಮ ಬಾಲಕರಿಗೆ ಕೃಷಿಕರ್ಮದ ಉದ್ಯೋಗಕ್ಕೆ ಹೆಚ್ಚಿಚ್ಚು ಕಳೆ ಬರುವಂಥ ಶಿಕ್ಷಣವು ಅವಶ್ಯವಾದ್ದದೆ. ಈಗಿರುವ ಶಿಕ್ಷಣವು ಕಾರಕೂನರಾಗಬೇಕೆಂಬುವವರಿಗೆ ಸಲ್ಲುವದು. ವ್ಯವಹಾರ ಉದ್ಯೋಗಗಳಿಗಾದರೂ ನಮಗೆ ಕೆಲವೊಂದು ಸೌಕರ್ಯಗಳುಂಟು. ಆದ್ದರಿಂದ ಉದ್ಯೋಗದ ಶಿಕ್ಷಣವೂ ಅವಶ್ಯವಾಗಿರುವದು. ಸಾಮಾನ್ಯ ಶಿಕ್ಷಣಕ್ಕೆ ನಮ್ಮಲ್ಲಿ ಗಮನವು ಕೊಡಲ್ಪಟ್ಟಿದೆ. ಆದರೆ ದೇಶದ ಮುಖ್ಯ ಉದ್ಯೋಗಗಳ ಶಿಕ್ಷಣವು ಎಳ್ಳಷ್ಟೂ ದೊರೆಯದೆ ಇದ್ದುದರಿಂದ ಈಗಿನ ಶಿಕ್ಷಣದಿಂದ ಕಲಿತ

ವರ್ಗದಲ್ಲಿ ನಿರುತ್ಸಾಹವೂ, ನಿರುದ್ಯೋಗವೂ ಮನೆಮಾಡಿಕೊಂಡಿವೆ. ಮತ್ತು ಈಗಿನ ಶಿಕ್ಷಣದ ಬಗ್ಗೆ ಸರ್ವತ್ರ ಅನಾದರವು ಉಂಟಾಗಹತ್ತಿದೆ. ಇಂಥ ಶಿಕ್ಷಣ ಪಡೆದ ಜನರ ಸಂಖ್ಯೆಯು ಹೆಚ್ಚಾದ ಹಾಗೆ ರಾಷ್ಟ್ರದ ಸಾಂಪತ್ತಿಕ ಸ್ಥಿತಿಯು ಕೆಡುತ್ತ ಹೋಗುವದು. ಆದುದರಿಂದ ಶಿಕ್ಷಣ ಪದ್ಧತಿಯು ತುಂಬಾ ಮಾರ್ಪಾಡು ಹೊಂದಬೆ ಕಾಗಿದೆ

ಕನ್ನಡ ನಾಲ್ಕನೆಯ ಇಯತ್ತ್ತಿಯ ವರೆಗೆ ದೊರೆಯುವ ಶಿಕ್ಷಣದಿಂದ ವಿದ್ಯಾರ್ಥಿಗಳಿಗೆ ಚನ್ನಾಗಿ ಓದಲಿಕ್ಕೂ, ಬರೆಯಲಿಕ್ಕೂ ಬರಬೇಕಲ್ಲದೆ, ವ್ಯವಹಾರಕ್ಕೆ ಉಪಯೋಗವಾಗುವ ಹಾಗೆ ಲೆಕ್ಕ (ಬರಹ-ಬಾಯಿ) ಗಳು ಬರಬೇಕು. ಹಿಂದು ಸ್ಥಾನದ ಸಂಕ್ಷಿಪ್ತ ಇತಿಹಾಸ, ಭೂವರ್ಣನೆ, ಚಿತ್ರಕಲೆ ಇವುಗಳು ಕಲಿಸಲ್ಪಡ ಬೇಕು. ಕ್ರಮಿಕ ಪುಸ್ತಕದ ಮೂಲಕ ಹಳ್ಳಿಯ ನಿವಾಸಿಗಳ ಇರುವಿಕೆ ಮತ್ತು ವ್ಯವಸಾಯ, ಪಟ್ಟಣದ ನಿವಾಸಿಗಳ ಇರುವಿಕೆ ಹಾಗು ವ್ಯವಸಾಯ, ಪರರಾಷ್ಟ್ರಗಳ ಇರುವಿಕೆ,ಆರೋಗ್ಯ ವಿಷಯ, ಸೃಷ್ಟಿಜ್ಞಾನ ಮೊದಲಾದ ಪ್ರಾಪಂಚಿಕ ವಿಷಯಗಳ ಜ್ಞಾನವು ಸ್ಥೂಲವಾನದಿಂದ ದೊರೆಯಬೇಕು.

ಐದನೆಯ ಇಯತ್ತ್ತಿಯಿಂದ ಏಳನೆಯ ಇಯತ್ತ್ತಿಯ ವರೆಗೆ ದೊರೆಯುವ ಶಿಕ್ಷಣದಿಂದ ವಿದ್ಯಾರ್ಥಿಗಳಿಗೆ ಮಾತೃಭಾಷೆಯ ಜ್ಞಾನವು ಚನ್ನಾಗಿ ಆಗಬೇಕು. ತಕ್ಕಮಟ್ಟಿಗೆ ಇಂಗ್ಲೀಷ ಭಾಷಾಜ್ಞಾನವು ಆಗುವದು ಅವಶ್ಯವಾದದ್ದು. ಲೆಕ್ಕ ಪತ್ರಗಳ ಜ್ಞಾನವು ದೊರೆಯಬೇಕು. ಹಿಂದುಸ್ಥಾನದ ಇತಿಹಾಸ, ಇಂಗ್ಲಂಡದ ಇತಿಹಾಸ, ಭೂವರ್ಣನೆ, ಶಾಸ್ತ್ರೀಯ ವಿಷಯ, ಮುಖ್ಯ ಮುಖ್ಯ ಸಂಗತಿಗಳು. ಹೆಚ್ಚಿನ ಚಿತ್ರಕಲೆ ಮುಂತಾದ ಸಾಮಾನ್ಯ ಜ್ಞಾನವು ದೊರೆಯುವವಲ್ಲದೆ, ವಿದ್ಯಾರ್ಥಿಗಳಿಗೆ ಒಕ್ಕಲತನದ ಜ್ಞಾನವು ಸಾಕಷ್ಟು ಆಗತಕ್ಕದ್ದು ಸಾಧ್ಯವಿದ್ದಲ್ಲಿ ಪ್ರಾಕ್ಟಿಕಲ್ ಟ್ರೇನಿಂಗ ದೊರೆಯತಕ್ಕದ್ದು. ಈ ವಿಷಯದಲ್ಲಿ ಪುಸ್ತಕೀ ವಿದ್ಯೆಯಿಂದ ಅಷ್ಟೊಂದು ಲಾಭವು ದೊರೆಯಲಾರದು. ಹುಡುಗರಲ್ಲಿ ಮೈಮುರಿದು ದುಡಿಯುವ ಅಭ್ಯಾಸವು ದೊರೆಯಬೇಕು ಒಕ್ಕಲತನದ ಉದ್ಯೋಗದ ಬಗ್ಗೆ ಅವರಲ್ಲಿ ಚನ್ನಾಗಿ ಆಸಕ್ತಿಯು ಉಂಟಾಗುವಷ್ಟು ದುಡಿತವು ಆಗಬೇಕು. ಇಷ್ಟು ಶಿಕ್ಷಣವು ದೊರೆಯುವದಕ್ಕೆ ಸಾಮಾನ್ಯವಾಗಿ ಎಂಟು-ಒಂಭತ್ತು ವರ್ಷಗಳು ಹತ್ತುತವವು. ಮತ್ತು ವಿದ್ಯಾರ್ಥಿಗಳಿಗೆ ಹದಿನಾಲ್ಕು ಹದಿನೈದು ವರ್ಷ ವಯಸ್ಸು ಆಗುವದು.ಈ ಅವಧಿಗೆ ಈಗ ಇಂಗ್ಲಿಷ ಸಾಲೆಗಳ ಮೊದಲಿನ ಮೂರು ಇಯತ್ತ್ತಿಗಳಷ್ಟು ಅಭ್ಯಾಸವು ಆಗತಕ್ಕದ್ದು ಆ ಮೇಲೆ ಹೆಚ್ಚಿನ ಶಿಕ್ಷಣವನ್ನು ಪಡೆಯಲಿಕ್ಕೆ ಹಾಯಸ್ಕೂಲುಗಳಿಗೆ ಸೇರಬೇಕಾಗುವದು. ಅವುಗಳಲ್ಲಿ ನಾಲ್ಕು ಪ್ರಕಾರಗಳಾಗಬೇಕು. (೧) ಒಕ್ಕಲತನದ ಹಾಯಸ್ಕೂಲು, (೨) ವ್ಯವಹಾರದ ಹಾಯಸ್ಕೂಲು (೩) ಔದ್ಯೋಗಿಕ (ಕಲಾಕೌಶಲ್ಯ ಸಹಿತ) ಹಾಯಸ್ಕೂಲು ಮತ್ತು (೪) ಸಾಮಾನ್ಯ ವಿದ್ಯಾರ್ಜನೆಯ ಹಾಯಸ್ಕೂಲು. ೧ನೆಯ ಪ್ರಕಾರದ ಹಾಯಸ್ಕೂಲುಗಳು ತಾಲೂಕು

ಗಳಿಗೆ ಹೊಂದುವಂತೆ ಇರಬೇಕು. ೨ನೆಯ ಪ್ರಕಾರದ ಹಾಯಸ್ಕೂಲುಗಳು ದೊಡ್ಡ ಶಹರಗಳಲ್ಲಿ ಇರಬೇಕು. ೩ನೆಯ ತರಗತಿಯ ಹಾಯಸ್ಕೂಲುಗಳು ಔದ್ಯೋಗಿಕ ಕೇಂದ್ರಗಳಲ್ಲಿ ಇರಬೇಕು. ೪ನೆಯ ಪ್ರಕಾರದ ಹಾಯಸ್ಕೂಲುಗಳು ಜಿಲ್ಲೆಗೊಂದೆರಡಾದರೆ ಸಾಕು. ಈ ಹಾಯಸ್ಕೂಲುಗಳಲ್ಲಿ ನಿಧಾನ ಮೂರು ವರ್ಷ ಅಧ್ಯಯನವು ಆಗತಕ್ಕದ್ದು. ಈ ಎಲ್ಲ ಬಗೆಯ ಸಾಲೆಗಳಲ್ಲಿ ಕೆಲವೊಂದು ಸಾಮಾನ್ಯ ವಿಷಯಗಳು ಅಂದರೆ ಭಾಷಾವಿಷಯ, ಶಾಸ್ತ್ರೀಯ ವಿಷಯ, ಆರೋಗ್ಯ ವಿಷಯ ಮುಂತಾದವುಗಳು ಕಲಿಸಲ್ಪಡಬೇಕು. ಮತ್ತು ಒಂದು ಸಾಲೆಯಿಂದ ಮತ್ತೊಂದು ಸಾಲೆಗೆ ಸಹಜವಾಗಿ ಹೋಗಲಿಕ್ಕೆ ಬರುವಂತೆ ಏರ್ಪಾಡು ಇರತಕ್ಕದ್ದು.

ಹೀಗೆ ಬೇರೆ ಬೇರೆ ತರದ ಶಿಕ್ಷಣ ಸಂಸ್ಥೆಗಳು ದೇಶದಲ್ಲೆಲ್ಲ ಅಸ್ತಿತ್ವದಲ್ಲಿ ಬಂದರೆ ಲೋಕಕ್ಕೆ ಬೇಕಾದ ವಿದ್ಯೆಯು ದೊರೆತು ಶಿಕ್ಷಣದಿಂದ ಹಿತವೇ ಆಗುವದಲ್ಲದೆ ಅಸಂತೋಷವು ಜನಿಸಲಾರದು. ಒಕ್ಕಲಿಗರ ಮಕ್ಕಳು ನೌಕರಿಯ ಸಲುವಾಗಿ ವಿದ್ಯೆಯನ್ನು ಕಲಿಯಲಿಕ್ಕೆ ಹಂಬಲಿಸುವದಿಲ್ಲ; ಮತ್ತು ತಮ್ಮ ಒಕ್ಕಲತನದ ಕೈಬಿಡುವದಿಲ್ಲ. ವರ್ತಕರ ಮಕ್ಕಳು ತಮ್ಮ ಉದ್ಯೋಗದಲ್ಲಿಯೇ ಉಚ್ಚ ತರದ ಶಿಕ್ಷಣ ಹೊಂದಿದವರಾಗಿ ಪ್ರವೃತ್ತರಾಗುವರು ಕೈಗಾರಿಕೆಯ ವರ್ಗದವರಾದರೂ ತಮಗೆ ಸಾಧ್ಯವಾದ ಕೆಲಸಗಳಲ್ಲಿ ತೊಡಗುವರು. ಕೆಲವರು ಮಾತ್ರ ಕಾರಕೂನಿಕೆ ವಿದ್ಯೆಗೆ ತಬ್ಬಿಕೊಂಡು ಉದರನಿರ್ವಾಹವನ್ನು ಸಾಗಿಸುವರು.

ಆದರೆ ಈಗ ಎಲ್ಲ ವರ್ಗಗಳ ವಿದ್ಯಾರ್ಥಿಗಳಿಗೆ ಒಂದೇ ಬಗೆಯ ಶಿಕ್ಷಣವು ದೊರೆಯುತ್ತಿರುವದರಿಂದ ಮತ್ತು ಅದು ಅವರವರ ಉದ್ಯೋಗಗಳಿಗೆ ಅನನುಕೂಲವಾದದ್ದು ಇದ್ದುದರಿಂದ ದೇಶದಲ್ಲಿ ಅಸಂತುಷ್ಟರೂ, ನಿರುದ್ಯೋಗಿಗಳೂ, ನಿರುತ್ಸಾಹಿಗಳೂ ಆದ ಜನರ ಸಂಖ್ಯೆಯು ಕ್ರಮೇಣ ಬೆಳೆಯಹತ್ತಿದೆ ಶಿಕ್ಷಣವೂ, ಸಂಸ್ಕೃತಿಯೂ ಯಾವತ್ತರಿಗೂ ಬೇಕಾಗಿದೆ. ಅವರವರಿಗೆ ಇರತಕ್ಕ ಶಿಕ್ಷಣದ ಸೌಕರ್ಯವು ಇಲ್ಲದ್ದರಿಂದ ಇದ್ದಬಿದ್ದ ಶಿಕ್ಷಣಕ್ಕೆಯೇ ಎಲ್ಲರೂ ಮುಗಿಬಿದ್ದಿರುವರು.

ಈ ಪರಿಸ್ಥಿತಿಯು ಬೇಗನೆ ಮೂರಾಗಿ ಸರಿಯಾದ ಶಿಕ್ಷಣವು ಪ್ರಚಾರದಲ್ಲಿ ಬಂದು, ದೇಶದ ಉದ್ಯೋಗಗಳಿಗೆ ಕಳಿಯೇರಿ ಸಾಂಪತ್ತಿಕ ಸ್ಥಿತಿಯು ಸುಧಾರಿಸುವದೆಂದು ಹಾರೈಸುತ್ತೇವೆ.

ಮುಲ್ಕೀ ಪರೀಕ್ಷೆಯ ವಿದ್ಯಾರ್ಥಿಯ ಚಿಂತೆ ನಿವಾರಣೆ

ಲೇಖಕ :— ಒಬ್ಬ ಅಗ್ರಿ ಟ್ರೇನಿಂಗ ಸ್ಕೂಲ ವಿದ್ಯಾರ್ಥಿ, ದೇವೀಹೊಸೂರು.

ತಾ।। ೮—೪—೧೯೩೯ನೆಯ ದಿವಸ ಧಾರವಾಡದಲ್ಲಿ ಮುಲ್ಕೀ ಪರೀಕ್ಷೆಗೆ ಸುಮಾರು ೧೬೦೦ ವಿದ್ಯಾರ್ಥಿಗಳು ಕುಳಿತಿದ್ದರು. ಅವರಲ್ಲಿ ಒಕ್ಕಲತನದ ಮುಲ್ಕೀ ಪರೀಕ್ಷೆಗೆ ೧೯ ವಿದ್ಯಾರ್ಥಿಗಳು ಕುಳಿತಿದ್ದರು ಇವರಲ್ಲಿಯ ಒಕ್ಕಲತನದ ಮುಲ್ಕೀ ಪರೀಕ್ಷೆಯ ವಿದ್ಯಾರ್ಥಿ ಬಸಪ್ಪನಿಗೂ, ಸಾದಾ ಮುಲ್ಕೀ ಪರೀಕ್ಷೆಯ ವಿದ್ಯಾರ್ಥಿ ಮಲ್ಲಪ್ಪನಿಗೂ ನಡೆದ ಭಾಷಣವು ಕೆಳಗಿನಂತೆ :—

ಒಕ್ಕಲತನ ಮುಲ್ಕೀ ಪರೀಕ್ಷೆಯ ವಿದ್ಯಾರ್ಥಿ ಬಸಪ್ಪ :—ಮಲ್ಲಪ್ಪ ನೀನು ಮುಲ್ಕೀ ಪರೀಕ್ಷೆ ಪಾಸಾಗಿ ಹೋದ ನಂತರ ಏನು ಮಾಡತಕ್ಕವನು ?

ಸಾದಾ ಮುಲ್ಕೀ ಪರೀಕ್ಷೆ ವಿದ್ಯಾರ್ಥಿ ಮಲ್ಲಪ್ಪ :—ಮುಂದೆ ನಾನು ಏನು ಮಾಡಬೇಕೆಂಬುದು ನನ್ನ ಬುದ್ಧಿಗೆ ಹರಿಯದಾಗಿದೆ ಮುಲ್ಕೀ ಪರೀಕ್ಷೆ ಪಾಸಾದವರನ್ನು ಮೊದಲು ಟ್ರೇನಿಂಗ ಕಾಲೇಜದಲ್ಲಿ ಸ್ಕಾಲರಶಿಪ್ಪು ಕೊಟ್ಟು ದೊಡ್ಡ ಪ್ರಮಾಣದಿಂದ ತೆಗೆದುಕೊಳ್ಳುತ್ತಿದ್ದರು. ಮತ್ತು ಅಲ್ಲಿಂದ ಪಾಸಾಗಿ ಬಂದ ಬಳಿಕ ನೌಕರಿಯನ್ನು ಕೊಡುವದಕ್ಕೆ ಸರಕಾರದವರು ಹೊಣೆಗಾರರಿದ್ದರು ಆದರೆ ಈಗ ಮುಲ್ಕೀ ಪರೀಕ್ಷೆ ಪಾಸಾದವರಲ್ಲಿ ಟ್ರೇನಿಂಗ ಕಾಲೇಜಕ್ಕೆ ಬಹು ಸ್ವಲ್ಪ ಜನರನ್ನು ತೆಗೆದುಕೊಳ್ಳುವರು. ತೆಗೆದುಕೊಂಡರೂ ಅವರಿಗೆ ಸ್ಕಾಲರಶಿಪ್ಪಿಲ್ಲ. ಮತ್ತು ಸರಕಾರದವರು ನೌಕರಿಯನ್ನು ಕೊಡುವ ಹೊಣೆಯನ್ನು ಹೊರಲಾರರು ಆದುದರಿಂದ ನನಗೆ ಈ ಮಾರ್ಗವು ಅಸಾಧ್ಯವು. ಇನ್ನು ಬೋರ್ಡಿನಲ್ಲಿ ಸಣ್ಣ ಪುಟ್ಟ ಮಾಸ್ತರ ಜಾಗೆಗಳು ಅಲ್ಪ ಸ್ವಲ್ಪ ದೊರೆಯುವವು. ಆದರೆ ಒಂದು ಸ್ಥಳ ವಿದ್ದರೆ ಸಾವಿರಾರು ಅರ್ಜಿಗಳು ಬರುತ್ತಿರುವದರಿಂದ ಅವುಗಳಾದರೂ ವಶೀಲಿಯ ವರಿಗೇ ದೊರೆಯುವದರಿಂದ ನಮ್ಮಂಥವರನ್ನು ಕೇಳುವವರಾರು? ಇನ್ನು ವ್ಯಾಪಾರಸ್ಥರಲ್ಲಿ ನೌಕರಿ ನಿಲ್ಲಬೇಕೆಂದರೆ, ಅವರಲ್ಲಿಯೂ ಎಷ್ಟೋ ಜನರು ನೌಕರಿಗಾಗಿ ಎಡತಾಕುತ್ತಿರುವದರಿಂದ ಅಲ್ಲಿಯೂ ಸಾಧ್ಯವಿಲ್ಲ. ಅಂತೂ ಈಗಿನ ಕಾಲದಲ್ಲಿ ನೌಕರೀ ಸಿಗುವದು ಕಠಿಣವಾಗಿದೆ.

ಬಸಪ್ಪ :—ಮಲ್ಲಪ್ಪ ನೀನು ಮನೆಯ ಉದ್ಯೋಗವಾವ ಒಕ್ಕಲತನವನ ಮಾಡಬೇಕು.

ಮಲ್ಲಪ್ಪ :—ಮಹಾರಾಯಾ, ಏಳೆಂಟು ವರ್ಷಗಳ ವರೆಗೆ ಕಲಿತು ಹಳ್ಳಿಯ ಕೆಂಚನಂತೆ ಒಕ್ಕಲತನವನ್ನು ಮಾಡಬೇಕೆ? ಬಿಸಿಲು-ಮಳೆ-ಗಾಳಿಗಳಲ್ಲಿ ಕೆಲಸ ಮಾಡುವದು, ಗುವ್ವಲಿಯಿಂದ ನೆಲವನ್ನು ಅಗಿಯುವದು, ಭಾರವುಳ್ಳ ರೆಂಟಿಕುಂಟಿಗಳನ್ನು ಎತ್ತಾಡುವದು, ದನಗಳ ಕೂಡ ಗುದ್ದಾಡುವದು ಇವು ನನ್ನ ಮನಸ್ಸಿಗೆ ಬರಲಾರವು. ಇನ್ನು ಮೇಲೆ ಒಕ್ಕಲತನ ಮಾಡಬೇಕೆಂದರೆ ನನಗೆ ನಾಚಿಕೆ ಬರುತ್ತದೆ. ಒಂದು ವೇಳೆ ನಾಚಿಕೆ ಬಿಟ್ಟು ಮಾಡಲಿಕ್ಕೆ ಹೋದರೂ ನನ್ನಂಥ ನಾಜೂಕ ಪ್ರಕೃತಿಯವನಿಂದ ಅವು ಹೇಗೆ ನೀಗಬೇಕು. ಮತ್ತು ಅವುಗಳ ರೂಢಿಯೂ, ಜ್ಞಾನವೂ ನನಗೆ ಇರುವದಿಲ್ಲ

ಬಸಪ್ಪ :—ಮಲ್ಲಪ್ಪ ನಿನಗೆ ನೌಕರಿ ಸಿಗುವದಂತೂ ಕಠಿಣವಾಗಿದೆ. ಮತ್ತು ಒಕ್ಕಲತನ ಮಾಡಲಿಕ್ಕೂ ದುರಭಿಮಾನ ಪಡೆಯುವೆ. ಮತ್ತು ಅದ್ಯ ನಿನ್ನ ಕೈಯಿಂದ ನೀಗುವದಿಲ್ಲವೆಂದೂ, ಮತ್ತು ಅದರ ರೂಢಿಯೂ, ಜ್ಞಾನವೂ ಇಲ್ಲವೆಂದೂ ಹೇಳುತ್ತಿರುವಿ. ಹಾಗಾದರೆ ನಿನ್ನ ಮುಂದಿನ ಗತಿ ಏನು?

ಮಲ್ಲಪ್ಪ :—"ಅಗಸರ ನಾಯಿಯು ಇತ್ತ ಹಳ್ಳವನ್ನೂ ಕಾಣಲಿಲ್ಲ, ಅತ್ತ ಮನೆಯನ್ನೂ ಕಾಣಲಿಲ್ಲ" ಎಂಬಂತೆ ನನ್ನ ಗತಿಯಾಗಿದೆ. ಮನೆಯ ಉದ್ಯೋಗವಾದ ಒಕ್ಕಲತನವು ಬರುವದಿಲ್ಲ ಮತ್ತು ನೌಕರಿಯಂತೂ ಸಿಗುವದಿಲ್ಲ. ಆದಕ್ಕಾಗಿ ನಾನು ಮುಂಬೆ ಏನು ಮಾಡಬೇಕೆಂದು ಚಿಂತೆಗೊಳಗಾಗಿರುವೆನು ನನ್ನಂತೆಯೇ ಹಿಂದಿನವರು ಸಾವಿರಾರು ಜನರು ಮುಲ್ಕೀ ಪರೀಕ್ಷೆ ಪಾಸಾಗಿ ನಿರುದ್ಯೋಗಗಳಾಗಿ ಮನೆಯಲ್ಲಿ ಕುಳಿತಿರುವರು. ಬಸಪ್ಪಾ, ನಿನ್ನ ಒಕ್ಕಲತನದ ಮುಲ್ಕೀ ಪರೀಕ್ಷೆಯಿಂದ ಈ ತರದ ಚಿಂತೆಯು ತಪ್ಪುವದೇ ಹೇಗೆ?

ಬಸಪ್ಪ :—ನಾವು ಒಕ್ಕಲತನ ಮುಲ್ಕೀ ಪರೀಕ್ಷೆಯ ಅಭ್ಯಾಸ ಮಾಡುವಾಗ್ಗೆ ೫ನೆಯ ಇಯತ್ತೆಯಿಂದ ೩ ವರ್ಷಗಳ ವರೆಗೆ ಒಕ್ಕಲತನಕ್ಕೆ ಸಮ್ಬಂಧವಾದ ಭೂಮಿ ಅದರ ಪ್ರಕಾರ ಮತ್ತು ಗುಣಧರ್ಮ, ಕೆಟ್ಟ ಅಥವಾ ಬೀಳು ಭೂಮಿಗಳನ್ನು ಸುಧಾರಿಸುವ ಬಗೆ. ಕಡಿಮೆ ಮಳೆ ಬೀಳುವ ಪ್ರದೇಶದಲ್ಲಿ ಉತ್ತಮವಾದ ಬೆಳೆಗಳನ್ನು ಹೇಗೆ ತೆಗೆದುಕೊಳ್ಳಬೇಕು: ಮತ್ತು ಸುಧಾರಿಸಿದ ಬೀಜ, ರೆಂಟಿಕುಂಟಿಗಳು ಮತ್ತು ಅವುಗಳ ಉಪಯೋಗ, ವನಸ್ಪತಿಗಳ ಬೆಳವಣಿಗೆಗೆ ಅವಶ್ಯ ಸಂಗತಿಗಳು, ದನಗಳ ಹಾಗು ಬೆಳೆಗಳ ರೋಗಗಳು, ಮತ್ತು ಅವುಗಳ ಸಾಮಾನ್ಯ ಉಪಾಯಗಳು ಯಾವವು? ಎಂಬುವುಗಳನ್ನು ಶಾಸ್ತ್ರೀಯ ದೃಷ್ಟಿ

ಯಿಂದ ಕಲಿಯುವೆವಲ್ಲದೆ, ಕೆಲವು ಬೆಳೆಗಳನ್ನು ನಮ್ಮ ಕೈಯಿಂದಲೇ ಸ್ವತಃ ಬೆಳೆಯಿಸುವದರಿಂದ ದುಡಿಯಲಿಕ್ಕೆ ಘಟ್ಟಿಮುಟ್ಟಾಗಿ, ಒಕ್ಕಲತನದಲ್ಲಿ ಪ್ರೇಮವುಳ್ಳವರಾಗುವೆವು. ಮತ್ತು ನಮ್ಮ ಹೊಲಗಳಲ್ಲಿ ದುಡಿಯಲಿಕ್ಕೆ ನಮ್ಮ ತಾಯಿ ತಂದೆಗಳಿಗೆ ನೆರವಾಗಲು ಸಮರ್ಥರಾಗುವೆವು. ಇಷ್ಟಲ್ಲದೆ ಬಡಿಗತನ, ಕಮ್ಮಾರಿಕೆ, ಗುಡಾರ ನೆಯ್ಯುವದು, ಹಗ್ಗ, ಕಣ್ಣಿ, ಜತಿಗೆ ಇತ್ಯಾದಿಗಳನ್ನು ಮಾಡುವದು. ಇನೇ ಮೊದಲಾದ ಉಪದಂಧೆಗಳ ಶಿಕ್ಷಣವು ದೊರೆಯುವದರಿಂದ ಇವುಗಳನ್ನೇ ಮುಂದೆ ಹೆಚ್ಚಿಗೆ ಬೆಳೆಯಿಸಿಕೊಳ್ಳಲು ಅನುಕೂಲವಾಗುವದು. ಇದರಿಂದ ನನಗೆ ನೌಕರಿಯ ಆಶೆ ಮಾಡುತ್ತ ಕೂಡುವ ಕಾರಣವಿಲ್ಲ. ಅಲ್ಲದೆ ಯಾರ ಆಳುಕನಲ್ಲಿರದೆ ಸ್ವತಃ ನನ್ನ ಉಪಜೀವನ ಸಾಗಿಸಿಕೊಳ್ಳಲು ಶಕ್ತನಾಗುವೆನು.

ಮಲ್ಲಪ್ಪ :—ಬಸಪ್ಪ ನಿಮ್ಮ ಒಕ್ಕಲತನ ಮುಲ್ಕೀ ಪರೀಕ್ಷೆಯಲ್ಲಿ ಮತ್ತೆ ಯಾವ ಯಾವ ವ್ಯವಹಾರಕ್ಕೆ ಉಪಯುಕ್ತವಾದ ವಿಷಯಗಳನ್ನು ಕಲಿಸುವರು. ಮತ್ತು ಅವುಗಳಿಂದ ವ್ಯವಹಾರಕ್ಕೆ ಎಷ್ಟರಮಟ್ಟಿಗೆ ಉಪಯೋಗವಾಗುವದು ಹೇಳು ನೋಡುವಾ ?

ಬಸಪ್ಪ :—ಒಕ್ಕಲತನಕ್ಕೆ ಉಪಯುಕ್ತವಾದ ಗಣಿತ, ಪ್ರಚಲಿತ ರಾಜ್ಯ ದಾಡಳಿತೆಯ ಪದ್ಧತಿ, ಸಹಕಾರಿತೆ, ಗ್ರಾಮಕಾಯಿದೆ, ಒಕ್ಕಲತನಕ್ಕೆ ಸಮ್ಮಂಧವಾದ ಭೂಗೋಲ, ಆರೋಗ್ಯಶಾಸ್ತ್ರ, ಪೇಟೆಯಲ್ಲಿ ನಡೆಯುವ ವ್ಯವಹಾರಜ್ಞಾನ ಇವೆಲ್ಲ ವಿಷಯಗಳನ್ನು ಕಲಿಯುವೆವಾದ್ದರಿಂದ ನಮಗೆ ಮುಂದೆ ಪ್ರಪಂಚಕ್ಕೆ ಬೇಕಾಗುವ ವ್ಯವಹಾರಿಕ ಜ್ಞಾನವು ಆಗಿ, ಉತ್ತಮನಾದ ನಾಗರಿಕನಾಗಲು ಈ ಒಕ್ಕಲತನದ ಮುಲ್ಕೀ ಪರೀಕ್ಷೆಯು ಸಹಾಯಕರವಾಗುವದು

ಮಲ್ಲಪ್ಪ :—ಬಸಪ್ಪ ನಿನ್ನ ಒಕ್ಕಲತನ ಮುಲ್ಕೀ ಪರೀಕ್ಷೆಯು ನನ್ನ ಸಾದಾ ಮುಲ್ಕೀ ಪರೀಕ್ಷೆಗಿಂತ ವ್ಯವಹಾರಿಕ ದೃಷ್ಟಿಯಿಂದ ಹೆಚ್ಚು ಉಪಯುಕ್ತವಾದದ್ದೂ, ಮೇಲಾದದ್ದೂ ಎಂದು ನನಗೆ ತಿಳಿಯಿತು.

ಬಸಪ್ಪ :—ನಾನು ಇಷ್ಟಕ್ಕೆ ಶಾಲೆಯನ್ನು ಬಿಡದೆ ದೇವೀಹೊಸೂರಲ್ಲಿರುವ ಅಗ್ರಿಕಲ್ಚರಲ್ ಟ್ರೇನಿಂಗ ಸ್ಕೂಲಿಗೆ ಹೋಗಿ ಅಲ್ಲಿ ೨ ವರ್ಷಗಳ ವರೆಗೆ ಈ ಒಕ್ಕಲತನದ ಸಮ್ಮಂಧವಾದ ಹೆಚ್ಚಿನ ಮಾಹಿತಿಯನ್ನೂ ರೂಢಿಯನ್ನೂ ಮಾಡಿಕೊಂಡು ಬರುವೆನು. ಆ ಬಗ್ಗೆ ಈ ತಿಂಗಳ ಅಂತ್ಯದೊಳಗಾಗಿಯೇ ಅಲ್ಲಿಯ ಮೇಲ್ಮ ಹೆಡ್ ಮಾಸ್ತರ ಸಾಹೇಬರ ಕಡೆಗೆ ಅರ್ಜಿಯನ್ನು ಮಾಡಿಕೊಳ್ಳುವೆನು

ಮಲ್ಲಪ್ಪ :—ಅಲ್ಲಿ ಮತ್ತೆ ಹೆಚ್ಚಿಗೆ ಯಾವ ಯಾವ ವಿಷಯಗಳನ್ನು ಕಲಿಸುವರು ? ಮತ್ತು ಅಲ್ಲಿ ಕಲಿಯುವವರಿಗೆ ಸರಕಾರದಿಂದ ಸ್ಕಾಲರಶಿಪ್ ಸಿಗುವದೇ ಹೇಗೆ ?

ಬಸಪ್ಪ :—ಆ ಶಾಲೆಯಲ್ಲಿ ನಮ್ಮ ಬಾಯಸ ಕ್ಲಾಸಿನಲ್ಲಿ ಆದ ವಿಷಯ ಗಳನ್ನು ಮತ್ತಿಷ್ಟು ಹೆಚ್ಚಿಗೆ ತಿಳಿಸುವರಲ್ಲದೆ, ನಮ್ಮ ಕೈಯಿಂದ ಹೆಚ್ಚಿಗೆ ರೂಢಿ ಯನ್ನು ಮಾಡಿಸುವರು ಮತ್ತು ಅಲ್ಲಿಂದ ಬಂದೊಡನೆಯೇ ಒಬ್ಬರ ಸಹಾಯ ವಿಲ್ಲದೆ ಸ್ವತಃ ಒಕ್ಕಲತನ ನೀಗಿಸಲಿಕ್ಕೆ ಶಕ್ತರಾಗುವೆವು. ಮತ್ತು ಬಡಿಗತನ, ಕಮ್ಮಾರಿಕೆಗಳನ್ನು ಜನ್ನಾಗಿ ಕಲಿಸುವರು ಇಷ್ಟಲ್ಲದೆ ಎಂಜಿನ್ನ ನಡಿಸಲಿಕ್ಕೂ ಅರಿವೆ, ಗುಡಾರ, ಜಮಖಾನೆ, ಬಟಾರ ಮೊದಲಾದವುಗಳನ್ನು ನೆಯ್ಯಲಿಕ್ಕೂ ಕಲಿಸುವರು. ಮತ್ತು ಹಗ್ಗ, ಕಣ್ಣಿ, ಜತಿಗೆ, ಬಾರಕೋಲು ಮೊದಲಾದ ಒಕ್ಕ ಲತನದ ಉಪಯೋಗೀ ಸಾಮಾನುಗಳನ್ನು ಮಾಡಲಿಕ್ಕೆ ಚನ್ನಾಗಿ ಕಲಿಸುವರು

ಎರಡು ವರ್ಷಗಳವರೆಗೆ ಅಲ್ಲಿ ಪ್ರತಿ ತಿಂಗಳಿಗೆ೯ ರೂಪಾಯ ಸ್ಕಾಲರಸಿಪ್ ಕೊಡುವರು. ಮನೆಯಿಂದ ತಿಂಗಳಿಗೆ ೧ ೧।। ರೂಪಾಯಿಗಿಂತ ಹೆಚ್ಚಿಗೆ ಖರ್ಚು ಬೀಳುವದಿಲ್ಲ.

ಮಲ್ಲಪ್ಪ :—ದೇವೀಹೊಸೂರ ಒಕ್ಕಲತನ ಶಾಲೆಯಲ್ಲಿ ಕಲಿತು ಬಂದವರಿಗೆ ಯಾವವಾದರೂ ನೌಕರೀ ಸಿಗುವವೇ ಹೇಗೆ? ಮತ್ತು ಅವರಿಗೆ ಹೆಚ್ಚಿನ ಸವಲ ತ್ತುಗಳೇನಾದರೂ ಇರುವವೇ ಹೇಗೆ?

ಬಸಪ್ಪ :—ಅಲ್ಲಿ ಕಲಿತು ಬಂದ ಕೆಲವರು ಬಾಯಸ ಕ್ಲಾಸಿನಲ್ಲಿ ಅಸಿಸ್ಟಂಟ ಮಾಸ್ತರರಾಗಿಯೂ, ತಾಲೂಕಾ ಡೆವ್ಹಲಪ್‌ಮೆಂಟದಲ್ಲಿ ಫೀಲ್ಡ ಮನ್ನರಾಗಿಯೂ, ಸೊಸಾಯಟಿಗಳಲ್ಲಿ ಸೆಕ್ರೆಟರಿಗಳಾಗಿಯೂ, ಗೊಬ್ಬರ ಮೊದಲಾವ ಕಾರಖಾನೆಗಳಲ್ಲಿ ಕ್ಲಾರ್ಕರಾಗಿಯೂ, ತಿಂಗಳೊಂದಕ್ಕೆ ೩೦–೫೫ ರೂಪಾಯಿಗಳವರೆಗೆ ಪಗಾರವನ್ನು ಪಡೆಯುತ್ತಿರುವರು. ಮತ್ತು ಆಯಾ ಜಿಲ್ಲೆಗಳಲ್ಲಿ ಪಡಭೂಮಿಗಳನ್ನು ರೈತರಿಗೆ ಸಾಗು ಮಾಡಲಿಕ್ಕೆ ಕೊಡುವದಾದಲ್ಲಿ ಈ ಶಾಲೆಯಿಂದ ಕಲಿತು ಹೋದವರು ಅರ್ಜಿ ಮಾಡಿಕೊಂಡಲ್ಲಿ ಇವರಿಗೆಯೇ ಮೊದಲು ಕೊಡುವರು

ಮಲ್ಲಪ್ಪ :—ನಾನು ದೇವೀಹೊಸೂರ ಶೇತಕೀ ಶಾಲೆಗೆ ಬರುವೆನು ನನ್ನನ್ನು ತೆಗೆದುಕೊಳ್ಳಬಹುದೋ?

ಬಸಪ್ಪ :- ಓಹೋ! ಸ್ಥಳಗಳು ಖಾಲೀ ಇದ್ದರೆ ಕನ್ನಡ ೫ನೆಯ ಇಯತ್ತ್ರೆಯಿಂದ ಸಾದಾ ಮುಲ್ಕೀ ಪರೀಕ್ಷೆಯ ವರೆಗೆ ಪಾಸಾದವರನ್ನೂ ಒಕ್ಕಲತನ ಮುಲ್ಕೀ ಪರೀಕ್ಷೆ ಪಾಸಾದವರನ್ನೂ ಇಂಗ್ಲೀಷ ೬–೭ನೆಯ ಇಯತ್ತ್ರೆಯ ವರೆಗೆ ಕಲಿತವರನ್ನೂ ಸಹ ತೆಗೆದುಕೊಳ್ಳುವರು. ಮನೆಯಿಂದ ಜಖಾನು ಹಾಗು ಒಕ್ಕ ಲತನವು ಮಾತ್ರ ಇರಬೇಕು.

ಮಲ್ಲಪ್ಪ :—ಹಾಗಾದರೆ ಈಹೊತ್ತೇ ಇಬ್ಬರೂ ಮೆ।। ಅಗ್ರಿಕಲ್ಚರಲ್ ಟ್ರೇನಿಂಗ ಸ್ಕೂಲ ಹೆಡ್ ಮಾಸ್ತರ ಸಾಹೇಬರ ಕಡೆಗೆ ಅರ್ಜೀ ಮಾಡಿಕೊಳ್ಳುವಾ ಮತ್ತು ಅಲ್ಲಿ ಭಾವೀ ಸುಖಸಂಪಾದನೆಯ ವಿದ್ಯೆಯನ್ನು ಕಲಿತು ಮನಸ್ಸಿನ ಚಿಂತೆಯನ್ನು ಕಳೆದುಕೊಳ್ಳುವಾ

ಕಾಬೂಲಿವಾಲಾ.

ಸಂಪಾದಕರು.

ವಿದ್ಯಾಸಾಗರನೆಂಬುವನು ಬಹು ದೊಡ್ಡ ಪಂಡಿತನು. ಆತನು ಅನೇಕ ಇಂಪಾದ ಕಥೆಗಳನ್ನು ಬರೆದಿದ್ದನು. ಮತ್ತೊಂದು ಹೊಸದಾದ ಕಥೆಯನ್ನು ಬರೆಯಹತ್ತಿದ್ದನು. ಹದಿನೈದು ಪ್ರಕರಣಗಳು ಮುಗಿದಿದ್ದವು. ಹದಿನಾರನೆಯ ಪ್ರಕರಣವು ನಡೆದಿತ್ತು. ತಂದೆಮಕ್ಕಳ ಪ್ರೇಮದ ವರ್ಣನೆಯನ್ನು ಮಾಡಬೇಕಾಗಿತ್ತು. ಆ ಸಮಯದಲ್ಲಿ ಅವನ ಖೋಲಿಯ ಬಾಗಿಲವು ತೆರೆಯಿತು. ಅವನ ಐದು ವರ್ಷದ ಮಗಳು ಒಳಗೆ ಬಂದಳು. ಅವಳ ಹೆಸರು ಸುಶೀಲೆ. ಆಕೆಯು ಬಹಳ ಮಾತಿನವಳು. ಮಾತಿಲ್ಲದೆ ಒಂದು ನಿಮಿಷವಾದರೂ ಹೋಗುತ್ತಿದ್ದಿಲ್ಲ. ಸೊಲ್ಲು ಸೊಲ್ಲಿಗೆ ಅದು ಏನು? ಇದು ಏನು? ಅದು ಹೀಗೇಕೆ ಅದೆ? ಇದು ಹಾಗೇಕೆ ಅದೆ? ಏನು ಬರೆಯುತ್ತಿರುವಿ? ಯಾಕೆ ಬರೆಯುತ್ತಿರುವಿ? ಇತ್ಯಾದಿ ಪ್ರಶ್ನೆಗಳನ್ನು ತೆರಪಿಲ್ಲದೆ ಮಾಡುವಳು. ಅವಳಿಗೆ ಉತ್ತರ ಕೊಟ್ಟು ಕೊಟ್ಟು ಬೇಸರಿಯುವನು. ಚಿಕ್ಕ ಮಕ್ಕಳಲ್ಲಿ ಸ್ವಾಭಾವಿಕವಾಗಿ ಚಿಕಿತ್ಸಕ ಬುದ್ಧಿಯು ಇರುವದು. ಕಂಡಕಂಡದ್ದನ್ನೆಲ್ಲ ತಿಳಿದುಕೊಳ್ಳುವ ಕುತೂಹಲವು ಉಂಟಾಗುವದು. ಅದೇ ಕಾಲಕ್ಕೆ ಅವರ ನಿಜವಾದ ಶಿಕ್ಷಣವು ಆರಂಭವಾಗುವದು.

ಅಂದಿನ ದಿನ ಅವಳು ತಂದೆಯ ಕೂಡ ಮಾತಾಡುತ್ತ ಕಿಡಿಕೆಯಲ್ಲಿ ಕುಳಿತಳು. ಅವನು ಬರೆಯುವದರಲ್ಲಿ ತೊಡಗಿದ್ದನು ಅವಳು ಕೂಡಲೆ ಕಾಬೂಲಿವಾಲಾ! ಕಾಬೂಲಿವಾಲಾ!! ಎಂದು ಒದರಿದಳು. ಅವಳ ಧ್ವನಿಯನ್ನು ಕೇಳಿ ಒಬ್ಬ ಲಠ್ಠ ಪಠಾಣನು ಜಿನ್ನೆಯನ್ನು ಏರಿ ಬಂದನು. ಅವನ ಭೀಕರ ಸ್ವರೂಪವನ್ನು ನೋಡಿ ಸುಶೀಲೆಯು ಅಂಜಿ ಒಳಗೆ ಓಡಿದಳು. ಅವನ ಲಗಳ ಚೊಣ್ಣ

ಬಸಪ್ಪ :—ಆ ಶಾಲೆಯಲ್ಲಿ ನಮ್ಮ ಬಾಯಸ ಕ್ಲಾಸಿನಲ್ಲಿ ಆದ ವಿಷಯ ಗಳನ್ನು ಮತ್ತಿಷ್ಟು ಹೆಚ್ಚಿಗೆ ತಿಳಿಸುವರಲ್ಲದೆ, ನಮ್ಮ ಕೈಯಿಂದ ಹೆಚ್ಚಿಗೆ ರೂಢಿ ಯನ್ನು ಮಾಡಿಸುವರು ಮತ್ತು ಅಲ್ಲಿಂದ ಬಂದೊಡನೆಯೇ ಒಬ್ಬರ ಸಹಾಯ ವಿಲ್ಲದೆ ಸ್ವತಃ ಒಕ್ಕಲತನ ನೀಗಿಸಲಿಕ್ಕೆ ಶಕ್ತರಾಗುವೆವು. ಮತ್ತು ಬಡಿಗತನ, ಕಮ್ಮಾರಿಕೆಗಳನ್ನು ಚನ್ನಾಗಿ ಕಲಿಸುವರು ಇಷ್ಟಲ್ಲದೆ ಎಂಜಿನ್ನ ನಡಿಸಲಿಕ್ಕೂ ರಿವೆ, ಗುದಾರ, ಜಮಖಾನೆ, ಬಟಾರ ಮೊದಲಾದವುಗಳನ್ನು ನೆಯ್ಯಲಿಕ್ಕೂ ಕಲಿಸುವರು. ಮತ್ತು ಹಗ್ಗ, ಕಣ್ಣಿ, ಜತಿಗೆ, ಬಾರಕೋಲು ಮೊದಲಾದ ಒಕ್ಕ ಲತನದ ಉಪಯೋಗೀ ಸಾಮಾನುಗಳನ್ನು ಮಾಡಲಿಕ್ಕೆ ಚನ್ನಾಗಿ ಕಲಿಸುವರು

ಎರಡು ವರ್ಷಗಳವರೆಗೆ ಅಲ್ಲಿ ಪ್ರತಿ ತಿಂಗಳಿಗೆ ೮ ರೂಪಾಯಿ ಸ್ಕಾಲರಶಿಪ್ ಕೊಡುವರು. ಮನೆಯಿಂದ ತಿಂಗಳಿಗೆ ೧ ೧॥ ರೂಪಾಯಿಗಿಂತ ಹೆಚ್ಚಿಗೆ ಖರ್ಚು ಬೀಳುವದಿಲ್ಲ.

ಮಲ್ಲಪ್ಪ :—ದೇವೀಹೊಸೂರ ಒಕ್ಕಲತನ ಶಾಲೆಯಲ್ಲಿ ಕಲಿತು ಬಂದವರಿಗೆ ಯಾವದಾದರೂ ನೌಕರೀ ಸಿಗುವವೇ ಹೇಗೆ? ಮತ್ತು ಅವರಿಗೆ ಹೆಚ್ಚಿನ ಸವಲ ತ್ತುಗಳೇನಾದರೂ ಇರುವವೇ ಹೇಗೆ?

ಬಸಪ್ಪ :—ಅಲ್ಲಿ ಕಲಿತು ಬಂದ ಕೆಲವರು ಬಾಯಸ ಕ್ಲಾಸಿನಲ್ಲಿ ಅಸಿಸ್ಟಂಟ ಮಾಸ್ತರರಾಗಿಯೂ, ತಾಲೂಕಾ ಡೆವ್ಹಲಪ್‌ಮೆಂಟದಲ್ಲಿ ಫೀಲ್ಡ ಮನ್ನರಾಗಿಯೂ, ಸೊಸಾಯಟಿಗಳಲ್ಲಿ ಸೆಕ್ರೆಟರಿಗಳಾಗಿಯೂ, ಗೊಬ್ಬರ ಮೊದಲಾವ ಕಾರಖಾನೆಗಳಲ್ಲಿ ಕ್ಲಾರ್ಕರಾಗಿಯೂ, ತಿಂಗಳೊಂದಕ್ಕೆ ೩೦–೩೫ ರೂಪಾಯಿಗಳವರೆಗೆ ಪಗಾರವನ್ನು ಪಡೆಯುತ್ತಿರುವರು. ಮತ್ತು ಆಯಾ ಜಿಲ್ಲೆಗಳಲ್ಲಿ ಪಡಭೂಮಿಗಳನ್ನು ರೈತರಿಗೆ ಸಾಗು ಮಾಡಲಿಕ್ಕೆ ಕೊಡುವದಾದಲ್ಲಿ ಈ ಶಾಲೆಯಿಂದ ಕಲಿತು ಹೋದವರು ಅರ್ಜಿ ಮಾಡಿಕೊಂಡಲ್ಲಿ ಇವರಿಗೆಯೇ ಮೊದಲು ಕೊಡುವರು

ಮಲ್ಲಪ್ಪ :—ನಾನು ದೇವೀಹೊಸೂರ ಶೇತಕೀ ಶಾಲೆಗೆ ಬರುವೆನು ನನ್ನನ್ನು ತೆಗೆದುಕೊಳ್ಳಬಹುದೋ?

ಬಸಪ್ಪ :- ಓಹೋ! ಸ್ವಲಗಳು ಖಾಲೀ ಇದ್ದರೆ ಕನ್ನಡ ಶಾಲೆಯ ಇಯತ್ತೆ ಯಿಂದ ನಾದಾ ಮುಲ್ಕೀ ಪರೀಕ್ಷೆಯ ವರೆಗೆ ಪಾಸಾದವರನ್ನೂ ಒಕ್ಕಲತನ ಮುಲ್ಕೀ ಪರೀಕ್ಷೆ ಪಾಸಾದವರನ್ನೂ ಇಂಗ್ಲೀಷ ೬–೭ನೆಯ ಇಯತ್ತೆಯ ವರೆಗೆ ಕಲಿತವರನ್ನೂ ಸಹ ತೆಗೆದುಕೊಳ್ಳುವರು. ಮನೆಯಿಂದ ಜಮಿನು ಹಾಗು ಒಕ್ಕ ಲತನವು ಮಾತ್ರ ಇರಬೇಕು.

ಮಲ್ಲಪ್ಪ :—ಹಾಗಾದರೆ ಈಹೊತ್ತೇ ಇಬ್ಬರೂ ಮೆ।। ಅಗ್ರಿಕಲ್ಚರಲ್ ಟ್ರೇನಿಂಗ ಸ್ಕೂಲ ಹೆಡ್ ಮಾಸ್ತರ ಸಾಹೇಬರ ಕಡೆಗೆ ಅರ್ಜೀ ಮಾಡಿಕೊಳ್ಳುವಾ· ಮತ್ತು ಅಲ್ಲಿ ಭಾವೀ ಸುಖಸಂಪಾದನೆಯ ವಿದ್ಯೆಯನ್ನು ಕಲಿತು ಮನಸ್ಸಿನ ಚಿಂತೆಯನ್ನು ಕಳೆದುಕೊಳ್ಳುವಾ

ಕಾಬೂಲಿವಾಲಾ.

ಸಂಪಾದಕರು.

ವಿದ್ಯಾಸಾಗರನೆಂಬುವನು ಬಹು ದೊಡ್ಡ ಪಂಡಿತನು. ಅತನು ಅನೇಕ ಇಂಪಾದ ಕಥೆಗಳನ್ನು ಬರೆದಿದ್ದನು. ಮತ್ತೊಂದು ಹೊಸದಾದ ಕಥೆಯನ್ನು ಬರೆಯಹತ್ತಿದ್ದನು. ಹದಿನೈದು ಪ್ರಕರಣಗಳು ಮುಗಿದಿದ್ದವು. ಹದಿನಾರನೆಯ ಪ್ರಕರಣವು ನಡೆದಿತ್ತು. ತಂದೆಮಕ್ಕಳ ಪ್ರೇಮದ ವರ್ಣನೆಯನ್ನು ಮಾಡಬೇಕಾಗಿತ್ತು. ಆ ಸಮಯದಲ್ಲಿ ಅವನ ಖೋಲಿಯ ಬಾಗಿಲವು ತೆರೆಯಿತು. ಅವನ ಐದು ವರ್ಷದ ಮಗಳು ಒಳಗೆ ಬಂದಳು. ಅವಳ ಹೆಸರು ಸುಶೀಲೆ. ಆಕೆಯು ಬಹಳ ಮಾತಿನವಳು. ಮಾತಿಲ್ಲದೆ ಒಂದು ನಿಮಿಷವಾದರೂ ಹೋಗುತ್ತಿದ್ದಿಲ್ಲ. ಸೊಲ್ಲು ಸೊಲ್ಲಿಗೆ ಅದು ಏನು? ಇದು ಏನು? ಅದು ಹೀಗೇಕೆ ಅದೆ? ಇದು ಹಾಗೇಕೆ ಅದೆ? ಏನು ಬರೆಯುತ್ತಿರುವಿ? ಯಾಕೆ ಬರೆಯುತ್ತಿರುವಿ? ಇತ್ಯಾದಿ ಪ್ರಶ್ನೆಗಳನ್ನು ತೆರಪಿಲ್ಲದೆ ಮಾಡುವಳು. ಅವಳಿಗೆ ಉತ್ತರ ಕೊಟ್ಟು ಕೊಟ್ಟು ಬೇಸರಿಯುವನು. ಚಿಕ್ಕ ಮಕ್ಕಳಲ್ಲಿ ಸ್ವಾಭಾವಿಕವಾಗಿ ಚಿಕಿತ್ಸಕ ಬುದ್ಧಿಯು ಇರುವದು. ಕಂಡಕಂಡದ್ದನ್ನೆಲ್ಲ ತಿಳಿದುಕೊಳ್ಳುವ ಕುತೂಹಲವು ಉಂಟಾಗುವದು. ಅದೇ ಕಾಲಕ್ಕೆ ಅವರ ನಿಜವಾದ ಶಿಕ್ಷಣವು ಆರಂಭವಾಗುವದು.

ಅಂದಿನ ದಿನ ಅವಳು ತಂದೆಯ ಕೂಡ ಮಾತಾಡುತ್ತ ಕಿಡಿಕೆಯಲ್ಲಿ ಕುಳಿತಳು. ಅವನು ಬರೆಯುವದರಲ್ಲಿ ತೊಡಗಿದ್ದನು ಅವಳು ಕೂಡಲೆ ಕಾಬೂಲಿವಾಲಾ! ಕಾಬೂಲಿವಾಲಾ!! ಎಂದು ಒದರಿದಳು. ಅವಳ ಧ್ವನಿಯನ್ನು ಕೇಳಿ ಒಬ್ಬ ಲಠ್ಠ ಪಠಾಣನು ಜಿನ್ನೆಯನ್ನು ಏರಿ ಬಂದನು. ಅವನ ಭೀಕರ ಸ್ವರೂಪವನ್ನು ನೋಡಿ ಸುಶೀಲೆಯು ಅಂಜಿ ಒಳಗೆ ಓಡಿದಳು. ಅವನ ಲಗಳ ಜೊಣ್ಣ

ವಲ್ಲಿ ಅನಾಯಾಸವಾಗಿ ನಾಲ್ಕೈದು ಹುಡುಗರು ಸೇರಬಹುದು. ಹುರಿಯಾದ ಗಡ್ಡ-ಮೀಸೆಗಳಿಂದಲೂ, ದೊಡ್ಡ ಮುಂಡಾಸದಿಂದಲೂ ರಾಕ್ಷಸನಂತೆ ಕಾಣುವನು. ಅವನ ಬಗಲಲ್ಲಿ ಒಂದು ಚೀಲವಿತ್ತು. ಅದರಲ್ಲಿ ಹುಡುಗರನ್ನು ಬಚ್ಚಿಡುವನೆಂದು ಚಿಕ್ಕ ಮಕ್ಕಳು ತಿಳಿದು ಅಂಜುತ್ತಿದ್ದರು. ಆದರೆ ಸುಶೀಲೆಯ ಅಂಜಿಕೆಯನ್ನು ತೆಗೆದುಹಾಕಬೇಕೆಂದು ವಿದ್ಯಾಸಾಗರನು ಯೋಚಿಸಿದನು. ಅವಳನ್ನು ಕರೆದು ಕೊಂಡು ಬಂದನು. ಅವಳು ಸ್ವಭಾವದಿಂದ ದಿಟ್ಟ ಹುಡಿಗೆಯು; ಎಂದೂ ಅಂಜದವಳು ಅಂದು ಅಂಜಿದಳು. ತಂದೆಯ ಪಕ್ಕದಲ್ಲಿ ಸೇರಿ ಅವನನ್ನು ಮಿಕಿ ಮಿಕಿ ನೋಡಹತ್ತಿದಳು. ಅವನ ಚೊಣ್ಣವನ್ನು ನೋಡಿ ಆಕೆಗೆ ನಡುಗು ಬಂದಿತು. ಅವನು ಚೀಲದ ಬಾಯಿ ಬಿಚ್ಚಹತ್ತಲು ಅವಳ ಎದೆಯು ಹಾರಹತ್ತಿತು. ಆದರೆ ತಂದೆಯ ಪಕ್ಕದಲ್ಲಿ ಇರುವದರಿಂದ ಅವಳಿಗೆ ಅಷ್ಟೊಂದು ಭಯವಿರಲಿಲ್ಲ. ಆ ಪಠಾಣನು ಚೀಲದಿಂದ ಉತ್ತಮವಾದ ದ್ರಾಕ್ಷಿಯ ಹಣ್ಣುಗಳನ್ನು ತೆಗೆದು ಸುಶೀಲೆಗೆ ಕೊಡಹೋದನು. ತವಳು ಅವನ್ನು ಹಿಡಿಯಲಿಕ್ಕೆ ಅಂಜಿದಳು. ಕಡೆಗೆ ತಂದೆಯ ಅಗ್ರಹದಿಂದ ತೆಗೆದುಕೊಂಡಳು. ಒಂದೆರಡು ಕೂಡಲೆ ತಿಂದಳು. ಅವು ಬಹಳ ರುಚಿ ಹತ್ತಿದವು. ಅಂಥ ಹಣ್ಣನ್ನ ಅವಳು ಎಂದೂ ತಿಂದಿರಲಿಲ್ಲ. ತಡವಿಲ್ಲದೆ ಎಲ್ಲ ಹಣ್ಣುಗಳನ್ನು ತಿಂದು ಬಿಟ್ಟಳು. ಮತ್ತಿಷ್ಟು ತಿನ್ನುವ ಲವಲವಿಕೆಯಾಯಿತು. ತಂದೆಗೆ ಇನ್ನಿಷ್ಟು ಹಣ್ಣುಗಳನ್ನು ಕೊಡಿಸು ಅಂತಾ ಮೆಲ್ಲನೆ ಕೇಳಿದಳು. ಅದನ್ನು ಕೇಳಿ ಪಠಾಣನು ಮತ್ತೆ ಕೆಲವು ಹಣ್ಣುಗಳನ್ನು ಕೊಟ್ಟನು. ಸುಶೀಲೆಯ ಮುಖಮುದ್ರೆಯನ್ನು ನೋಡಿ ಅವನಿಗೆ ಬಹಳ ಆನಂದವಾಯಿತು. ವಿದ್ಯಾಸಾಗರನೊಡನೆ ಒಂದೆರಡು ಮಾತುಗಳನ್ನು ಆಡಿ ಅವನು ಹೋದನು. ಆತನ ಹೆಸರು ರಹಮಾನ ಎಂದು ತಿಳಿಯಿತು ಅವನು ದಿನಾಲು ಹಣ್ಣನ್ನು ಮಾರುತ್ತಿದ್ದನು. ಮರುದಿವಸ ಹಣ್ಣನ್ನು ಮಾರುತ್ತ ವಿದ್ಯಾಸಾಗರನ ಮನೆಯ ಕಡೆಗೆ ಬಂದನು ಅವನ ಧ್ವನಿಯನ್ನು ಕೇಳಿ ಸುಶೀಲೆಯು ತಲಬಾಗಿಲಿಗೆ ಓಡಿ ಬಂದಳು ಅವಳನ್ನು ಕಂಡು ಆ ಪಠಾಣನು ಅವಳ ಬಳಿಗೆ ಬಂದನು. ಅವಳಿಗೆ ಹಿಡಿತುಂಬ ಹಣ್ಣನ್ನು ಕೊಟ್ಟು ಅವಳ ಬಳಿಯಲ್ಲಿ ಕೂತುಕೊಂಡನು. ಸುಶೀಲೆಯ ಅಂಜಿಕೆಯು ಎಲ್ಲಿಯೂ ಹೋಗಿತ್ತು. ತುಸು ಹೊತ್ತು ಕೂತು ಏನೇನೋ ಮಾತಾಡಿದರು. ಮರುದಿವಸ ಅದೇ ಓಣಿಗೆ ಹಣ್ಣು ಮಾರುತ್ತ ಬಂದನು. ಸುಶೀಲೆಯು ಕೂಡಲೆ ಓಡಿ ಬಂದಳು. ತುದಿಗಟ್ಟೆಯ ಮೇಲೆ ಇಬ್ಬರೂ ಕುಳಿತುಕೊಂಡು ಮಾತಾಡುತ್ತಿದ್ದರು. ಸುಶೀಲೆಯ ಉಡಿಯ ತುಂಬ ಹಣ್ಣುಗಳಿದ್ದವು. ಏನೇನೋ ಮಾತು ನಡಿಸಿದ್ದರು. ನೋಡುವವರಿಗೆ ಅವರಲ್ಲಿ ಅಪೂರ್ವವಾದ ಪ್ರೇಮವು ಕಂಡು ಬಂದಿತು.

ಅಷ್ಟರಲ್ಲಿ ವಿದ್ಯಾಸಾಗರನು ಹೊರಗೆ ಬಂದನು. ಅವರಿಬ್ಬರು ಅಷ್ಟು ಸಖ್ಯದಿಂದ ಕುಳಿತಿರುವದನ್ನು ನೋಡಿದನು. ಪಠಾಣನು ವಿದ್ಯಾಸಾಗರನನ್ನು ಕಂಡು

ಸಲಾಮು ಮಾಡಿದನು. ವಿದ್ಯಾಸಾಗರನಿಗೆ, ಸುಶೀಲೆಯು ಅವನಿಗೆ ಅಂಜದೆ ಅವನೊಡನೆ ಜೇಷ್ಟೆ ಮಾಡುತ್ತ ಕುಳಿತಿರುವಳು. ಅದನ್ನು ಕಂಡು ಅವನಿಗೆ ಆನಂದವಾಯಿತು. ಹೆಂಡತಿಯನ್ನು ಕರೆದು ತೋರಿಸಿದನು. ಆಕೆಯು ಅದನ್ನು ನೋಡಿ ಅಂಜಿದಳು. ಗಂಡನನ್ನು ಒಳಗೆ ಸನ್ನೆ ಮಾಡಿ ಕರೆದಳು. ಪಠಾಣನು ತಮ್ಮ ಹುಡಿಗೆಯನ್ನು ಅಪಹರಿಸಲಿಕ್ಕೆ ಬಂದಿರುವನೆಂದು ಹೇಳಿದಳು ಪಠಾಣರು ಎಷ್ಟೋ ಹುಡುಗರನ್ನು ಕದ್ದೊಯ್ದಿರುವರೆಂದು ಅವಳ ಕೇಳಿಕೆಯಲ್ಲಿತ್ತು. ಆ ಪಠಾಣನನ್ನು ತಮ್ಮ ಮನೆಗೆ ಎಂದೂ ಬರಗೊಡಬೇಡಿರಿ ಎಂದು ಹೇಳಿದಳು. ಅದಕ್ಕೆ ವಿದ್ಯಾಸಾರನು ಒಪ್ಪಲಿಲ್ಲ. ಆ ಪಠಾಣನ ಬಗ್ಗೆ ಅವನಿಗೆ ಎಷ್ಟೂ ಸಂಶಯ ಬರಲಿಲ್ಲ. ಅವನ ಉದ್ದೇಶವು ಹಾಗಿದ್ದಲ್ಲಿ ತನ್ನನ್ನು ಕಂಡ ಕೂಡಲೆ ಆತನು ಭಯಪಡುತ್ತಿದ್ದನೆಂದು ವಿಚಾರಿಸಿದನು. ಸುಶೀಲೆಯ ಉಡಿಯಲ್ಲಿಯ ಹಣ್ಣುಗಳನ್ನು ನೋಡಿ, ಆತನಿಗೆ ಅರ್ಧ ರೂಪಾಯಿಯನ್ನು ಕೊಟ್ಟನು. ಅದನ್ನು ಪಠಾಣನು ಪ್ರೀತಿಯಿಂದ ಸ್ವೀಕರಿಸಿದನು. ವಿದ್ಯಾಸಾಗರನು ಒಳಗೆ ಬಂದನು. ಆ ಪಠಾಣನು ತುಸು ಹೊತ್ತು ಕಳೆದು ಆ ಅರ್ಧ ರೂಪಾಯಿಯನ್ನು ಸುಶೀಲೆಯ ಕೈಯಲ್ಲಿ ಕೊಟ್ಟು ತನ್ನ ಕೆಲಸಕ್ಕೆ ಹೋದನು. ಆ ನಾಣ್ಯವು ಅವಳ ಕೈಯಲ್ಲಿದ್ದದ್ದನ್ನು ನೋಡಿ, ಗಂಡಹೆಂಡಂದಿರಿಗೆ ಆಶ್ಚರ್ಯವಾಯಿತು ಆ ಪಠಾಣನು ಸುಶೀಲೆಯನ್ನು ಇಷ್ಟೇಕೆ ಪ್ರೀತಿಸುವನೆಂಬುದು ತಿಳಿಯದಾಯಿತು. ಊರಲ್ಲಿ ಅನೇಕ ಹುಡುಗರಿದ್ದು ಇವಳನ್ನೇ ಏಕೆ ಇಷ್ಟು ಪ್ರೀತಿಸುತ್ತಿರಬಹುದು? ವಿದ್ಯಾಸಾಗರನಿಗಂತೂ ಏನೂ ತಿಳಿಯದಾಯಿತು ಅವನ ಹೆಂಡತಿಯು ಮಾತ್ರ ಅಂಜಿಕೆಯಲ್ಲಿಯೇ ಇದ್ದಳು ಪ್ರತಿನಿತ್ಯ ಅವನು ಅಲ್ಲಿಗೆ ತಪ್ಪದೆ ಬರುವನು. ಹಣ್ಣುಗಳನ್ನು ಕೊಡುವನು. ಏನೇನೋ ಮಾತಾಡುವನು. ಒಮ್ಮೊಮ್ಮೆ ಅವಳಿಗೆ ನೀನು ನಿನ್ನ ಮಾವ (ಗಂಡ) ನ ಮನೆಗೆ ಎಂದು ಹೋಗುವೆ ಎಂದು ಕೇಳುವನು. ಚಿಕ್ಕವಳಾದ ಸುಶೀಲೆಗೆ ಅದರ ಅರ್ಥವು ತಿಳಿಯದೆ ಪ್ರತಿಯಾಗಿ ನೀನು ನಿನ್ನ ಮಾವನ ಮನೆಗೆ ಎಂದು ಹೋಗುವೆ ಎಂದು ಕೇಳುವಳು. ಅದಕ್ಕೆ ಅವನು ಕೈಮುಷ್ಟಿಯನ್ನು ಮಾಡಿ ಇಗೋ, ನಾನು ಆ ಮಾವನನ್ನು ಗುದ್ದಿ ಕೊಲ್ಲುವೆನು ಎಂದು ಬೀದಿಯ ಕಡೆಗೆ ಕೈಮಾಡಿ ಆವೇಶದಿಂದ ಮಾತಾಡುವನು. ಮಾವನ ಮನೆಯೆಂದರೆ ಅವನು ಸೆರೆಮನೆಯೆಂದು ಅರ್ಥ ಮಾಡುವನು. ಪೋಲೀಸರು ಪಠಾಣರ ಮೇಲೆ ಕಾವುಲ ಇದ್ದು ಅವರನ್ನು ಕಳವು, ಹೊಡೆದಾಟ ಮೊದಲಾದ ಆರೋಪದಿಂದ ವಾಡಿಕೆಯಾಗಿ ಸೆರೆಮನೆಗೆ ಕಳಿಸುವರು. ಅಲ್ಲಿ ಅವರಿಗೆ ಮಾವನ ಮನೆಯಲ್ಲಿ ಇದ್ದಂತೆ ಊಟಕ್ಕೆ ಸಿಗುವದು. ಅದರಿಂದ ಅವನು ಮಾವ (ಪೋಲೀಸ) ನನ್ನು ಗುದ್ದಿ ಕೊಲ್ಲುವೆನು ಎಂದು ರೋಷದಿಂದ ಅನ್ನುವನು. ಅದಕ್ಕೆ ಸುಶೀಲೆಯು ಬಿದ್ದು ಬಿದ್ದು ನಗುವಳು.

ಹೀಗೆ ಕೆಲವೊಂದು ಕಾಲವು ಸಂದಿದ ಮೇಲೆ ಆ ಪಠಾಣನು ತನ್ನ ಊರಿಗೆ ಹೋಗಲಿಕ್ಕೆ ಸಿದ್ಧತೆಯನ್ನು ನಡೆಯಿಸಿದನು. ತನಗೆ ಬರತಕ್ಕ ಹಣವನ್ನು ಕೂಡಿಸಹತ್ತಿದನು ಅವನ ಸಾಲಗಾರರಲ್ಲಿ ಒಬ್ಬನು ಅವನಿಂದ ಯಾವ ಹಣವನ್ನೂ ತೆಗೆದುಕೊಂಡಿಲ್ಲವೆಂದು ಸಾಧಿಸಹತ್ತಿದನು. ಎಷ್ಟು ಪರಿಯಿಂದ ಬೇಡಿದರೂ ಕೊಡದಾದನು. ಕಡೆಗೆ ಆ ಪಠಾಣನು ಸಿಟ್ಟಿಗೆದ್ದು ಅವನನ್ನು ಚೂರಿಯಿಂದ ಇರಿದನು ಬೀದಿಯಲ್ಲಿ ನೂರಾರು ಜನರು ಕೂಡಿದರು ಪೋಲೀಸರು ಬಂದರು. ಪಠಾಣನನ್ನು ಹಿಡಿದರು ಅವನ ಮೇಲೆ ಕಟ್ಟಳೆಯನ್ನು ಹಾಕಿದರು. ಅವನಿಗೆ ಕಾರಾಗೃಹದ ಶಿಕ್ಷೆಯಾಯಿತು ಆದರೆ ಆ ಪಠಾಣನು ಸೆರೆಮನೆಗೆ ಹೋಗುವ ಮೊದಲು ಸುಶೀಲೆಯನ್ನೆ ಮಾತನಾಡಿಸಲು ಅಪ್ಪಣೆಯನ್ನು ಪಡೆದು ಅವಳಿಗೆ ದ್ರಾಕ್ಷಿಯ ಹಣ್ಣುಗಳನ್ನು ಕೊಟ್ಟು, ಎರಡು ಸಲ ಮುದ್ದು ಕೊಟ್ಟು ಉಪಾಯವಿಲ್ಲದೆ ನಮ್ಮ ಮಾವನ ಮನೆ (ಸೆರೆಮನೆ) ಗೆ ಹೋಗುವ ಸರತಿ ಬಂದಿತು. ಹೋಗಿ ಬರುವೆನು ಅಂತಾ ಹೇಳಿ ಹೋದನು

ಸುಶೀಲೆಯೂ ಅವನನ್ನು ಕ್ರಮೇಣ ಮರೆತು ಬಿಟ್ಟಳು. ಅವಳು ಸಾಲೆಗೆ ಹೋಗಹತ್ತಿದಳು ವಿದ್ಯಾಭ್ಯಾಸದಲ್ಲಿ ಎಂಟು-ಹತ್ತು ವರ್ಷಗಳು ಸಂದಿದವು ಯೌವ್ವನವು ಅವಳಲ್ಲಿ ತಲೆದೋರಿತು ಅವಳು ಬಹಳೇ ರೂಪವತಿಯು, ನಿಜವಾಗಿ ಸುಶೀಲೆಯು, ವಿದ್ಯಾವತಿಯು, ದೊಡ್ಡ ಮನೆತನದವಳು ಅವಳಿಗೆ ತಕ್ಕ ವರನನ್ನು ಹುಡುಕಲು ವಿದ್ಯಾಸಾಗರನಿಗೆ ಅವನ ಹೆಂಡತಿಯಾದ ಸ್ನೇಹಲತೆಯು ಬಹಳ ಒತ್ತಾಯಪಡಿಸಿದಳು. ಎಂಥ ವರ ಬಂದರೂ ವಿದ್ಯಾಸಾಗರನಿಗೆ ಸರಿಬರಲಿಲ್ಲ. ಕಡೆಗೆ ಸಂಪನ್ನನೂ, ವಿದ್ಯಾವಂತನೂ, ಸತ್ಕುಲೋತ್ಪನ್ನನೂ, ದೈವುಳ್ಳವನೂ, ತರುಣನೂ, ಸುರೂಪಿಯೂ ಆದ ವರನು ದೊರಕಿದನು. ಲಗ್ನದ ಸಮಾರಂಭವು ನಡೆಯಿತು. ತಳಿರು-ತೋರಣಗಳನ್ನು ಕಟ್ಟಿದರು ವಿಶಾಲವಾದ ಹೆಂದರವನ್ನು ಹಾಕಿದರು ಮಂಗಲ ವಾದ್ಯಗಳು ಮೊಳಗಹತ್ತಿದವು. ಬೀಗರನ್ನು ಸತ್ಕರಿಸುವ ಸಂಭ್ರಮವು ನಡೆದಿತ್ತು. ವಿದ್ಯಾಸಾಗರನು ಅಷ್ಟು ಮೋಜಿನವನಲ್ಲ. ಸಮಾರಂಭವ ಎಲ್ಲ ಭಾರವನ್ನು ತನ್ನ ಸ್ನೇಹಿತರಿಗೆ ಒಪ್ಪಿಸಿ ತಾನು ಓದುವದರಲ್ಲಿ ತೊಡಗಿದ್ದನು.

ರಹೆಮಾನನು ಮುನ್ನಾದಿನ ಸಂಜೆಗೆ ಬಂದಿಯಿಂದ ಮುಕ್ತನಾಗಿದ್ದನು. ಸುಶೀಲೆಯನ್ನು ಅವನು ಮರೆತಿದ್ದಿಲ್ಲ. ಅವಳ ಮುದ್ದುಮುಖವು ಅವನ ಕಣ್ಣ ಮುಂದೆ ಕಟ್ಟತ್ತು. ಅವಳನ್ನು ನೋಡಲಿಕ್ಕೆ ಒಳ್ಳೆಯ ಆತುರದಿಂದ ಅವ ಮನೆಗೆ ಬಂದನು. ಮನೆಯಲ್ಲಿ ನಡೆದ ಸಂಭ್ರಮವನ್ನು ಟಕಮಕ ನೋಡಹತ್ತಿದನು. ಕಾರಾಗೃಹವಾಸದಿಂದ ಅವನ ಮುಖಕಾಂತಿಯು ಹೋಗಿತ್ತು. ಅವನ

ಬಲಹೀನನಾಗಿದ್ದನು. ಹೆರಕು ಮತ್ತು ಮಾಸಿದ ಅರಿವೆಗಳನ್ನು ತೊಟ್ಟಿದ್ದನು. ಗಡ್ಡ-ಮೀಸೆಗಳು ಮಿತಿಮೀರಿ ಬೆಳೆದಿದ್ದವು ಗುರ್ತು ಹತ್ತದಷ್ಟು ಸೋತಿದ್ದನು. ಉತ್ಸವದಲ್ಲಿ ಎಲ್ಲರೂ ತೊಡಗಿದ್ದರಿಂದ ಅವನನ್ನು ಯಾರೂ ಮಾತಾಡಿಸಲಿಲ್ಲ. ಆದಾಗ್ಯೂ ಅವನು ಬಹಳ ಹೊತ್ತು ಅಲ್ಲಿಯೇ ನಿಂತು ಕಡೆಗೆ ವಿದ್ಯಾಸಾಗರನು ಹೊರಗೆ ಬರಲು ಅವನನ್ನು ಮಾತಾಡಿಸಿದನು. ವಿದ್ಯಾಸಾಗರನು ತುಸು ಹೊತ್ತು ದಿಟ್ಟಿಸಿ ನೋಡಿ ಗುರ್ತಿಸಿದನು

ಓಹೋ! ರಹಮಾನ ದಿ ಕಾಬೂಲಿವಾಲಾ ಎಂದು ಅವನ ಎಲ್ಲ ಸಮಾಚಾರವನ್ನು ಕೇಳಿದನು ಸುಶೀಲೆಯು ಮದುಮಗಳಾಗಿ ಜರದ ಪೀತಾಂಬರವನ್ನು ಧರಿಸಿ, ಮೈತುಂಬ ಆಭರಣಗಳನ್ನು ಇಟ್ಟು, ಅರಿಸಿಣ, ಕುಂಕುಮ, ಗಂಧಾದಿಗಳನ್ನು ಲೇಪಿಸಿಕೊಂಡು ರೇಸಿಮೆಯ ಮುಸಕನ್ನು ಹೊತ್ತುಕೊಂಡು ಮಂಗಲ ಕಾರ್ಯಗಳಲ್ಲಿ ತೊಡಗಿದ್ದಳು ರಹಮಾನನು ಅವಳನ್ನು ನೋಡಲು ಬಲು ಆತುರಪಟ್ಟನು ಆದರೆ ಈಗ ಲಗ್ನದ ಗಡಿಬಿಡಿಯದೆ ಇನ್ನೆರಡು ದಿನ ತಡೆದು ಬಾ ಎಂದು ವಿದ್ಯಾಸಾಗರನು ಹೇಳಿದನು ಅದಕ್ಕೆ ನಿರುಪಾಯನಾಗಿ ಒಂದೆರಡು ಹೆಜ್ಜೆ ಮುಂದೆ ಹೋಗಿ ಮತ್ತೆ ತಿರುಗಿ ವಿದ್ಯಾಸಾಗರನಿಗೆ ಒಂದೆರಡು ನಿಮಿಷ ಸುಶೀಲೆಯನ್ನು ನೋಡಲಿಕ್ಕಾಗುವದಿಲ್ಲವೇ? ಎಂದು ಕೇಳಿದನು ಇಲ್ಲವೆಂದು ಹೇಳಲು ಮತ್ತೆ ಒಂದೆರಡು ಹೆಜ್ಜೆ ಹೋಗಿ ಪುನಃ ಬಂದು ನಿಧಾನ ಈ ಹಣ್ಣುಗಳನ್ನು ಆಕೆಗೆ ಮುಟ್ಟಿಸುವಿರೋ ಎಂದು ಬಿನ್ನವಿಸಿದನು ಸುಶೀಲೆಯು ಮೊದಲಿನಂತೆ ಇನ್ನೂ ಚಿಕ್ಕ ಬಾಲಿಕೆಯೆಂದು ರಹಮಾನನು ಭಾವಿಸಿದ್ದನು ಅವಳನ್ನು ಕರೆಯಿಸಲಿಕ್ಕೆ ಆಲೋಚಿಸುತ್ತಿರಲು ರಹಮಾನನು ಆತನಿಗೆ ತನ್ನ ಕಿಸೆಯಲ್ಲಿ ಮಡಿಚಿಟ್ಟಿದ್ದ ಹಳೆಯ ಕಾಗದವನ್ನು ತೆಗೆದು ತೋರಿಸಿದನು ಅದನ್ನು ಒಳ್ಳೆಯ ಜೋಪಾನದಿಂದ ಕಾಯ್ದುಕೊಂಡಿದ್ದನು ಅದರ ಮೇಲೆ ಒಂದು ಸಣ್ಣ ಮಗುವಿನ ಅಂಗೈ ಗುರ್ತು ಇತ್ತು ಅದು ಫೋಟೊ ಅಲ್ಲ ಕೈಯಿಂದ ತೆಗೆದ ಚಿತ್ರವೂ ಅಲ್ಲ. ಕೇವಲ ಅಂಗೈಯನ್ನು ಮಸಿ ಸವರಿ ತೆಗೆದುಕೊಂಡ ಮುದ್ರೆಯು. ಅದು ತನ್ನ ಚಿಕ್ಕ ಮಗಳ ಕೈಯ ಗುರ್ತು ಅವಳೊಬ್ಬಳೇ ಆತನಿಗೆ ಸಂತತಿಯು. ಮಮತೆಯಿಂದ ಅವಳ ನೆನಪಿಗಾಗಿ ಈ ಹಸ್ತಮುದ್ರೆಯನ್ನು ಜತನ ಮಾಡಿದ್ದನು ಅವಳನ್ನು ಬಿಟ್ಟು ಬಂದು ಅನೇಕ ವರ್ಷಗಳಾಗಿದ್ದವು ಅವಳು ಸುಶೀಲೆಯ ಮುಖಮುದ್ರೆಯನ್ನು ಹೋಲುವಳೆಂದು ಹೇಳಿದನು. ಸುಶೀಲೆಯನ್ನು ನೋಡಿದರೆ ತನ್ನ ಮಗಳನ್ನೇ ನೋಡಿದಂತಾಗುವದೆಂದು ಹೇಳಿದನು ಅದಕ್ಕೊಸ್ಕರ ಸುಶೀಲೆಯ ಮೇಲೆ ಅಷ್ಟು ಮಮತೆ. ಅದನ್ನು ಕೇಳಿ ವಿದ್ಯಾಸಾಗರನಿಗೆ ವಿಸ್ಮಯವಾಯಿತು ಅಂಥ ಕ್ರೂರ ಮತ್ತು ಭೀಕರವಾದ ಶರೀರದಲ್ಲಿ ಎಂಥ ಕೋಮಲವಾದ ಹೃದಯವಿದೆಯೆಂದೂ, ಎಂಥ ಅಪ್ರತಿಮ ಪುತ್ರವಾತ್ಸಲ್ಯವಿದೆಯೆಂದೂ

ಹಿಗ್ಗಿ ಅವನನ್ನು ಒಳ್ಳೆಯ ಪ್ರೇಮದಿಂದ ಕರೆದು ಕೂಡ್ರಿಸಿ ಸುಶೀಲೆಯನ್ನು ಕೂಡಲೆ ಕರೆಕಳುಹಿದನು. ಅವಳು ಬರುವಂತೆ ಇದ್ದಿಲ್ಲ. ಮೇಲಾಗಿ ಅಂಥ ಮಂಗಲ ಕಾರ್ಯದಲ್ಲಿ ಅಮಂಗಲಕರನೂ, ಯವನನೂ ಆದ ಆ ಪಠಾಣನನ್ನು ನೋಡುವದು ಶುಭವಲ್ಲವೆಂದು ಅವಳ ತಾಯಿ ಮೊದಲಾದವರು ಅವಳಿಗೆ ಹೋಗ ಗೊಡಲಿಲ್ಲ. ಆದರೆ ವಿದ್ಯಾಸಾಗರನು ಇಂಥ ಶುಭಾಶುಭಗಳನ್ನು ನೋಡುವವ ನಲ್ಲ. ದುರಾಗ್ರಹದಿಂದ ಸುಶೀಲೆಯನ್ನು ಕರೆದುಕೊಂಡು ಬಂದು ರಹಮಾನನೆ ದುರಿಗೆ ನಿಲ್ಲಿಸಿದನು ಸುಶೀಲೆಯು ಅವನ ಗುರ್ತನ್ನು ಬೇಗನೆ ಹಿಡಿಯಲಿಲ್ಲ. ಕೆಲಹೊತ್ತು ಆಲೋಚಿಸಿದ ಮೇಲೆ ಅವಳಿಗೆ ಪೂರ್ವದ ಸಖ್ಯತ್ವದ ನೆನಪಾಯಿತು. ಆದರೆ ಅವಳು ಈಗ ಪ್ರಾಯದ ಹುಡುಗಿಯು. ವಿವಾಹ ಕಾರ್ಯದಲ್ಲಿ ತೊಡಗಿ ದವಳು. ಪ್ರಾಯಕ್ಕೆ ಸರಿಯಾದ ಲಜ್ಜಾದಿ ಗುಣಗಳು ಅವಳಲ್ಲಿ ಸೇರಿದ್ದವು ಆದುದರಿಂದ ಅವನನ್ನು ಮಾತಾಡಿಸದೆ ಹಾಗೆಯೇ ನಿಂತಳು. ಆ ಪಠಾಣನಾ ದರೂ ಅವಳ ಗುರ್ತನ್ನು ಹಿಡಿಯಲಿಲ್ಲ ಅವಳು ಬಹಳ ಹೊತ್ತು ಅವನ ಎದುರಿ ನಲ್ಲಿದ್ದರೂ ಅವನಿಗೆ ಅವಳ ಗುರ್ತು ಹತ್ತಲಿಲ್ಲ. ಮತ್ತು ಅವಳನ್ನು ಮಾತಾಡಿ ಸಲಿಲ್ಲ. ಅವಳು ಬೇರೆ ಒಬ್ಬ ಪ್ರಾಯದ ಹೆಣ್ಣು ಮಗಳೆಂದು ಭಾವಿಸಿದನು. ಮತ್ತು ಸುಶೀಲೆಯು ಎಲ್ಲಿ ಇರುವಳೆಂದು ವಿದ್ಯಾಸಾಗರನನ್ನು ಅಂಜುತ್ತ ಕೇಳಿದನು. ವಿದ್ಯಾಸಾಗರನು ವಿಸ್ಮಯಪಟ್ಟು ಇಗೋ, ನಿನ್ನ ಪ್ರೇಮದ ಸುಶೀಲೆಯು. ಅವಳು ದೊಡ್ಡವಳಾಗಿದ್ದಾಳೆ. ಅವಳ ಲಗ್ನದ ಸಮಾರಂಭವು ನಡೆದದೆ ಎಂದು ಹೇಳಿದನು. ಅದಕ್ಕೆ ರಹಮಾನನು ಸುಶೀಲೆಯನ್ನು ದಿಟ್ಟಿಸಿ ನೋಡಿ ಆನಂದ ಪಟ್ಟು, ಅವಳಿಗೆ ತಾನು ತಂದಿದ್ದ ದ್ರಾಕ್ಷಿಯ ಹಣ್ಣುಗಳನ್ನೂ, ಬಾದಾಮಿ-ಪಿಸ್ತೆ ಗಳನ್ನೂ ಕೊಡಹೋದನು. ಅವಳು ಅವನ್ನು ಸ್ವೀಕರಿಸಲು ಹಿಂಜರಿದಳು. ತಂದೆಯ ಅಪ್ಪಣೆಯ ಮೇರೆಗೆ ಸ್ವೀಕರಿಸಿದಳು. ರಹಮಾನನು ಸುಶೀಲೆಗೆ ನಾನು ನಿನ್ನಿನ ದಿನವೇ ನಮ್ಮ ಮಾವನ ಮನೆಯಿಂದ ಬಂದೆನು. ನೀನು ಈ ನಿನ್ನ ಮಾವನ ಮನೆಗೆ ಹೋಗಲು ಸಿದ್ಧಳಾಗಿರುವೆಯೋ ಎಂದು ಕೇಳಲು ಸುಶೀಲೆಗೆ ಈಗ ಮಾವನ ಮನೆಯೆಂಬುದರ ಭಾವವು ತಿಳಿದಿದ್ದರಿಂದ ಲಜ್ಜೆಯಿಂದ ತಲೆವಾಗಿ ಸಿದಳು. ಮತ್ತು ಅವನಿಗೆ ತನ್ನ ಕೃತಜ್ಞತೆಯನ್ನು ನಮ್ರವಾಗಿ ವ್ಯಕ್ತಪಡಿಸಿ ಮಂಗಲ ಕಾರ್ಯಕ್ಕಾಗಿ ಹೋದಳು.

ಅವಳನ್ನು ನೋಡಿದೊಡನೆ ಅವನಿಗೆ ತನ್ನ ಮಗಳಾದರೂ ಪ್ರಾಯದವಳಾ ಗಿರಬಹುದು. ಅವಳಿಗೂ ತಕ್ಕ ವರನನ್ನು ಹುಡುಕಿ ಮಾವನ ಮನೆಗೆ ಕಳುಹಿಸ ಬೇಕಲ್ಲವೆ? ಅವಳು ಬೇನೆ-ಬೇಸರಿಕೆಗಳಿಲ್ಲದೆ ಸುಖದಿಂದ ಇರಬಹುದಲ್ಲವೆ? ಇತ್ಯಾದಿ ವಿಚಾರತರಂಗಗಳು ಅವನಲ್ಲಿ ಬರಹತ್ತಿದವು. ಹೀಗೆ ತನ್ನಲ್ಲಿ ತಾನೇ ಮಗ್ನನಾಗಿರಲು, ವಿದ್ಯಾಸಾಗರನು ಆತನಿಗೆ ನಿನ್ನ ಮಗಳು ದೊಡ್ಡವಳಾ

ಗಿರಬಹುದು. ನಿನ್ನನ್ನು ಅಗಲಿ ನಿನ್ನ ಹೆಂಡತಿಯು ದುಃಖದಿಂದ ಕೊರಗುತ್ತಿರ ಬಹುದು. ಇಗೋ, ಈ ಇಪ್ಪತ್ತೈದು ರೂಪಾಯಿಗಳನ್ನು ತೆಗೆದುಕೋ, ಇಂದೇ ನಿನ್ನ ಊರಿಗೆ ತೆರಳು; ತಡಮಾಡಬೇಡ ಎಂದು ರೂಪಾಯಿಗಳನ್ನು ಕೊಡಹೋ ದನು ರಹಮಾನನ ಹತ್ತರ ಒಂದು ಪೈ ಸಹ ಇಲ್ಲದಿದ್ದರೂ ಸ್ವೀಕರಿಸಲಿಕ್ಕೆ ಹಿಂಜರಿದನು ವಿದ್ಯಾಸಾಗರನು ನಿನ್ನ ಮಗಳಿಂದರೆ ನನ್ನ ಮಗಳು. ಅವಳು ನಿನ್ನನ್ನು ಅಗಲಿ ಬಹಳ ದುಃಖಕ್ಕೆ ಗುರಿಯಾಗಿರಬಹುದು. ನೀನು ಬೇಗನೆ ಅವ ಳನ್ನು ಕಾಣಬೇಕು. ಈ ಹಣವನ್ನು ಸ್ವೀಕರಿಸಿ ಗಾಡಿಯನ್ನು ಹತ್ತಿದ್ದನ್ನು ನೋಡಿದರೆ ನನ್ನ ಮಗಳಾದ ಸುಶೀಲೆಯ ಮಂಗಲ ಕಾರ್ಯವನ್ನು ಬಹಳ ಆನಂ ದದಿಂದ ಜರುಗಿಸುವೆನು. ಇಲ್ಲದಿದ್ದರೆ ನನಗೆ ವ್ಯಥೆಯಾಗುವದು ಎಂದು ಅಂದನು ಸುಶೀಲೆಯ ಮೇಲಿನ ಮಮತೆಯಿಂದಲೂ, ತನ್ನ ಮಗಳನ್ನು ನೋಡುವ ಕುತೂ ಹಲದಿಂದಲೂ ಆ ಹಣವನ್ನು ಸ್ವೀಕರಿಸಿ ಅವರ ಅಪ್ಪಣೆಯನ್ನು ಪಡೆದು ತನ್ನ ದೇಶದ ಪರ್ವತಗಳ ಕಡೆಗೆ ಮೋರೆಯನ್ನು ತಿರುವಿ ತನ್ನ ಮುದ್ದುಮಗಳ ಚಿತ್ರವನ್ನು ಕಣ್ಣೆದುರಿಗೆ ತಂದು ಸ್ವದೇಶಕ್ಕೆ ಸಾಗಿದನು. ಮಕ್ಕಳಿದ್ದವರ ಹೃದ ಯವು ಕೋಮಲವಾದುದಲ್ಲವೇ?

—ಅನುವಾದ.

ಔದ್ಯೋಗಿಕ ಶಿಕ್ಷಣ.

ಸಂಪಾದಕರು.

ಸಾಂಪ್ರತು ಸಾಮಾನ್ಯವಾಗಿ ಎಲ್ಲ ಬಗೆಯ ಉದ್ಯೋಗಗಳಲ್ಲಿ ಬಹಳ ಕ್ರಾಂತಿ ಯಾಗಿದೆ. ಗಿರಣಿ ಮತ್ತು ಕಾರಖಾನೆಗಳ ಪದ್ಧತಿಯು ಬಹಳ ಪ್ರಸಾರವಾಗಿದೆ. ಮನೆಯೆಲ್ಲಿ ಕೂತು ಮಾಡುವ ಕೈಗಾರಿಕೆಯ ಕೆಲಸಗಳು ಬರಬರುತ್ತ ಲಯಹೊಂ ದಹತ್ತಿವೆ. ಆದಷ್ಟು ಮಟ್ಟಿಗೆ ದೊಡ್ಡ ದೊಡ್ಡ ಕಾರಖಾನೆಗಳನ್ನು ತೆಗೆದು ಸಾವಿ ರಾರು ಜನ ಕೂಲಿಕಾರರನ್ನು ಕೆಲಸಕ್ಕೆ ಹಚ್ಚಿ ಯಂತ್ರಗಳ ಸಹಾಯದಿಂದ ಒಡವೆ ಗಳನ್ನು ತಯಾರ ಮಾಡುವ ಪದ್ಧತಿಯು ಎಲ್ಲ ದೇಶಗಳಲ್ಲಿ ದಿನೇ ದಿನೇ ಅಭಿವೃ ದ್ಧಿಯನ್ನು ಹೊಂದಹತ್ತಿದೆ. ಆದ್ದರಿಂದ ಯಂತ್ರಗಳಿಲ್ಲದೆ ಮನೆಯಲ್ಲಿ ಕೂತು

ಕ್ಕೈಯಿಂದ ಒಡವೆಗಳನ್ನು ಮಾಡಿ ಹೊಟ್ಟೆ ಹೊರಕೊಳ್ಳುವ ಪ್ರಸಂಗಗಳು ದೂರಾ ಗಹತ್ತಿವೆ. ನಮ್ಮ ದೇಶದ ಪೂರ್ವದಿಂದ ನಡೆದು ಬಂದ ಅನೇಕ ಉದ್ಯೋಗ ಗಳು ಮುಳುಗಿ ಹೋಗಿವೆ. ದೊಡ್ಡ ಭಾಂಡವಲು ಹಾಕಿ ಯಂತ್ರಗಳ ಸಹಾಯ ದಿಂದ ದೊಡ್ಡ ದೊಡ್ಡ ಕಾರಖಾನೆಗಳನ್ನು ನಡೆಸುವದರಲ್ಲಿ ನಾವು ಅನೇಕ ಅನಿ ವಾರ್ಯ ತೊಂದರೆಗಳ ಮೂಲಕ ಪಾಶ್ಚಾತ್ಯ ದೇಶಗಳ ಕೂಡ ಸ್ಪರ್ಧೆಯನ್ನು ಮಾಡಲಾರೆವು. ಈ ಮುಂಚೆ ಒಂದೊಂದು ಉದ್ಯೋಗವನ್ನು ವಂಶಪರಂಪರ ಒಂದೊಂದು ವರ್ಗದವರು ಮುಂದುತ್ತ ಬಂದಿದ್ದರು. ಕಮ್ಮಾರ, ಕುಂಬಾರ, ಉಪ್ಪಾರ, ಬಡಿಗ, ಕಂಚುಗಾರ, ಬಳಿಗಾರ, ನೇಕಾರ, ಬಣ್ಣಗಾರ, ನೀಲಗಾರ, ಚಿತ್ರಕಾರ, ಮೊಚ್ಚಿಗಾರ ಮೊದಲಾದ ನೂರೊಂದು ಉದ್ಯೋಗದವರು ತಮ್ಮ ತಮ್ಮ ಮಕ್ಕಳಿಗೆ ತಮ್ಮ ತಮ್ಮ ಉದ್ಯೋಗವನ್ನು ಚಿಕ್ಕಂದಿನಿಂದಲೇ ಕಲಿಸುತ್ತ ಕಾಯ್ದುಕೊಂಡಿದ್ದರು. ಅವರೆಲ್ಲರು ಈಗ ಔದ್ಯೋಗಿಕ ಕ್ರಾಂತಿಯಿಂದ ಪಾಶ್ಚಾ ತ್ಯರ ಯಂತ್ರಗಳೊಡನೆ ಸ್ಪರ್ಧೆ ಮಾಡಲು ಅಸಮರ್ಥರಾಗಿದ್ದಾರೆ ಪೂರ್ವದಿಂದ ನಡೆದು ಬಂದ ತಮ್ಮ ಉದ್ಯೋಗವನ್ನು ಮರೆತು ಅಲ್ಪ ಸ್ವಲ್ಪ ನಿರುಪಯೋಗೀ ಶಿಕ್ಷಣವನ್ನು ಹೊಂದಿ ಗಿರಣಿಗಳಲ್ಲಿ ಕೂಲಿಕಾರರಾಗಬೇಕಾಗಿದೆ. ಹಿಂದುಸ್ಥಾನದ ದಾರಿದ್ರ್ಯಕ್ಕೆ ಇವೇ ಮುಖ್ಯ ಕಾರಣವಾಗಿದೆ. ದೇಶದಲ್ಲಿಯ ಉದ್ಯೋಗಗಳೆಲ್ಲ ಹಾಳಾದ ಮೇಲೆ ದೇಶದ ಸಾಂಪತ್ತಿಕ ಸ್ಥಿತಿಯಾದರೂ ಕೆಡುವದರಲ್ಲಿ ಸಂಶಯ ವೇನು? ಆದ್ದರಿಂದ ಈಗಿನ ಹಾಯಸ್ಕೂಲ, ಕಾಲೇಜಗಳಲ್ಲಿ ದೊರೆಯುವ ಸಾಮಾನ್ಯ ಶಿಕ್ಷಣಕ್ಕಿಂತ ಹೆಚ್ಚು ಉಪಯುಕ್ತ ಮತ್ತು ಅತ್ಯವಶ್ಯವಾದ ಅರ್ವಾ ಚೀನ ಪದ್ಧತಿಯ ಔದ್ಯೋಗಿಕ ಶಿಕ್ಷಣದ ಯೋಜನೆಯಾಗಬೇಕಾಗಿದೆ. ಈ ಬಗ್ಗೆ ಜನಜಾಗ್ರತೆಯು ಸಾಕಷ್ಟು ಆಗಿಲ್ಲ ಸರಕಾರದವರೂ ಈ ವಿಷಯದಲ್ಲಿ ನಿರ್ದಾಕ್ಷಿ ಣ್ಯವುಳ್ಳವರಾಗಿದ್ದಾರೆ. ಈ ಪರಿಸ್ಥಿತಿಯು ದೇಶಕ್ಕೆ ಕ್ಷೇಮವನ್ನುಂಟು ಮಾಡ ಲಾರದು. ಔದ್ಯೋಗಿಕ ಶಿಕ್ಷಣದ ಶಾಲೆಗಳು ಬೇಗನೆ ಅಸ್ತಿತ್ವದಲ್ಲಿ ಬರಲೇಬೇಕು. ಮತ್ತು ಈ ಬಗ್ಗೆ ಜನರು ಎಚ್ಚರವಹಿಸಬೇಕಲ್ಲದೆ ಸರಕಾರವೂ ಕೂಡ ಅವಶ್ಯ ಅನು ಕೂಲವಾಗಬೇಕು ಈಗ ನಮ್ಮ ಇಲಾಖೆಯಲ್ಲಿ ಕೆಲವು ಹಾಯಸ್ಕೂಲಗಳಲ್ಲಿ ಔದ್ಯೋಗಿಕ ಶಿಕ್ಷಣದ ಯೋಜನೆಯು ಮಾಡಲ್ಪಟ್ಟಿದೆ. ಅವು ತಕ್ಕ ಮಟ್ಟಿಗೆ ಚನ್ನಾಗಿ ನಡೆದಿದ್ದರೂ ಊರ್ಜಿತಾವಸ್ಥೆಯಲ್ಲಿ ಇಲ್ಲ. ಅಂಥ ಸಂಸ್ಥೆಗಳಲ್ಲಿ ಕೆಲ ವನ್ನು ಇದರಡಿಯಲ್ಲಿ ಕಾಣಿಸುವೆವು.

ಮುಂಬಯಿಯಲ್ಲಿ ವಿಕ್ಟೋರಿಯಾ ಜುಬ್ಲಿ ಟೆಕ್ನಿಕಲ್ ಇನ್ಸ್ಟಿಟೂಟ ಎಂದು ಸರಕಾರೀ ಔದ್ಯೋಗಿಕ ಶಾಲೆಯುಂಟು ಜೇ. ಜೇ. ಸ್ಕೂಲ ಆಫ್ ಆರ್ಟ ಎಂಬ ಚಿತ್ರಕಲೆಯ ಶಾಲೆಯು ಇರುವದು. ಆದರೆ ಈ ಸರಕಾರೀ ಸಂಸ್ಥೆಗಳಲ್ಲದೆ ಬೇರೆ ಕೆಲವು ಸ್ವತಂತ್ರ ಸಂಸ್ಥೆಗಳಿವೆ.

೧. ಕೊಂಕಣ ಎಜ್ಯುಕೇಶನ್ ಸೊಸಾಯಿಟಿಯವರು ಅಲಿಬಾಗದಲ್ಲಿ ಇಂಡಸ್ಟ್ರಿಯಲ್ (ಔದ್ಯೋಗಿಕ) ಸ್ಕೂಲನ್ನು ನಡೆಯಿಸಿರುವರು. ಇಲ್ಲಿ ವಿದ್ಯಾರ್ಥಿಗಳಿಗೆ (೧) ಬಡಿಗತನ, (೨) ಚಿತ್ರಕಲೆ, (೩) ನೇಕಾರಿಕೆ ಮತ್ತು (೪) ಮುದ್ರಣ ಈ ಧಂದೆಗಳು ಕಲಿಸಲ್ಪಡುವವು. ಇದರಲ್ಲಿ ಮೂರು ತರಗತಿಗಳಿದ್ದು ಮೂರು ವರ್ಷದ ವರೆಗೆ ವಿದ್ಯಾಭ್ಯಾಸವು ನಡೆಯುವದು. ಈ ಸಂಸ್ಥೆಗೆ ಕೊಲಾಬಾ ಡಿಸ್ಟ್ರಿಕ್ಟ ಲೋಕಲ್ ಬೋರ್ಡಿನವರು ಪ್ರತಿವರ್ಷ ಮೂರು ಸಾವಿರ ರೂಪಾಯಿ ಗ್ರಾಂಟು ಕೊಡುವರು ಮತ್ತು ಸರಕಾರದವರೂ ಇದಕ್ಕೆ ಮಂಜೂರಿ ಕೊಟ್ಟು ಸಹಾಯ ಮಾಡುವರು. ಮುಂಬಯಿ ಇಲಾಖೆಯ ಔದ್ಯೋಗಿಕ (ಟೆಕ್ನಿಕಲ್) ಶಿಕ್ಷಣದ ಡಾಯರೆಕ್ಟರರು ಪ್ರತಿ ವರ್ಷ ಪರೀಕ್ಷೆ ತೆಗೆದುಕೊಳ್ಳುವರು.

೨. ಸೂರೇಖ ಟೆಕ್ನಿಕಲ್ ಇನ್ಸ್ಟ್ಯೂಟ ಸುರತ ಇದು ಕ್ರಿ.ಶ. ೧೮೮೩ರಲ್ಲಿ ಸೂರೇಖ ಎಂಬ ಘಾರ್ಸಿ ಸನ್ಮನುಷ್ಯರ ಉದಾರ ದೇಣಿಗೆಯಿಂದ ಸ್ಥಾಪಿಸಲ್ಪಟ್ಟಿತು. ಈಗ ಈ ಸಂಸ್ಥೆಯನ್ನು ಸುರತ ಮುನಸಿಪಾಲಿಟಿಯವರು ನಡೆಯಿಸುತ್ತಾರೆ. ಇದಕ್ಕೆ ಸರಕಾರದಿಂದಲೂ, ಸುರತ ಜಿಲ್ಲಾ ಲೋಕಲ್ ಬೋರ್ಡಿನಿಂದಲೂ ಧನ ಸಹಾಯವು ದೊರೆಯುವದು. ವಿಶೇಷತಃ ಮುನಿಸಿಪಾಲಿಟಿಯವರಿಗೆ ಹೆಚ್ಚು ಭಾರ ಬೀಳುವದು ವಿಶೇಷವಾಗಿ ಗುಜರಾಥಿ ಮತ್ತು ಇಂಗ್ಲಿಷ ಭಾಷೆಗಳು ಉಪಯೋಗಿಸಲ್ಪಡುವವು. ವರ್ಕಶಾಪಿನಲ್ಲಿ ವಿಷಯಗಳು ಮರಾಠಿ, ಹಿಂದೀ ಮತ್ತು ಹಿಂದುಸ್ತಾನೀ ಭಾಷೆಯಲ್ಲಿಯೂ ಹೇಳಲ್ಪಡುವವು. ಇಲ್ಲಿ ೬೦ ವಿದ್ಯಾರ್ಥಿಗಳಿಗೆ ಸ್ಥಳವುಂಟು. ಮೂರು ವರ್ಷ ಶಿಕ್ಷಣವು ಕೊಡಲ್ಪಡುವದು (೧) ಮೆಕ್ಯಾನಿಕಲ್ ಇಂಜನಿಯರಿಂಗ (ಇಂಜನ ಮೊದಲಾದವನ್ನು ನಡಿಸುವ ಜ್ಞಾನ) (೨) ವರ್ಕಶಾಪಿನಲ್ಲಿ ಶೀರಲಿಕ್ಕೆ ಅವಶ್ಯವಾದ ಜ್ಞಾನ (೩) ಬಡಿಗತನ. ಈ ಮೂರು ವಿಷಯಗಳು ಕಲಿಸಲ್ಪಡುವವು ಇದರಲ್ಲಿ ಡ್ರಾಯಿಂಗ ಮೊದಲಾದವು ಸಮಾವೇಶವಾಗುವವು. ಪ್ರತಿವರ್ಷ ಪರೀಕ್ಷೆಯು ತೆಗೆದುಕೊಳ್ಳಲ್ಪಡುವದು ಮೇಲೆ ಹೇಳಿದ ಡಾಯರೆಕ್ಟರರು ಇಲ್ಲಿಯಾದರೂ ಪರೀಕ್ಷೆ ತೆಗೆದುಕೊಳ್ಳುವರು.

೩. ಎಡ್ವರ್ಡ ದಿ ಸೆವಂಥ ಟೆಕ್ನಿಕಲ್ ಸ್ಕೂಲ ಧುಳೆ ಈ ಸಂಸ್ಥೆಯನ್ನು ೧೯೦೬ರಲ್ಲಿ ಧುಳೆ ಜಿಲ್ಲಾ ಲೋಕಲ್ ಬೋರ್ಡಿನವರು ಸ್ಥಾಪಿಸಿದರು ಇದರಲ್ಲಿ (೧) ಮ್ಯಾನ್ಯುಅಲ್ ಟ್ರೇನಿಂಗ (೨) ಮೇಸ್ತ್ರೀ ಕ್ಲಾಸ (೩) ನೇಕಾರಿಕೆ ಈ ಮೂರು ವರ್ಗಗಳುಂಟು. (೧) ಮ್ಯಾನ್ಯುಅಲ್ ಟ್ರೇನಿಂಗಿನಿನಲ್ಲಿ ಬಡಿಗತನ, ಕಮ್ಮಾರಿಕೆ, ಚಿತ್ರಕಲೆ, ಬಣ್ಣ ಕೊಡುವದು ಮೊದಲಾದ ಕೈಗಾರಿಕೆಯ ಕೆಲಸಗಳು ಕಲಿಸಲ್ಪಡುವವು. ಇದು ಮೂರು ವರ್ಷದ ಅಭ್ಯಾಸಕ್ರಮವದೆ. ಇದರ ಕಡೆಯ ಪರೀಕ್ಷೆಯನ್ನು ಮೇಲೆ ಹೇಳಿದ ಡಾಯರೆಕ್ಟರ ಸಾಹೇಬರು ತೆಗೆದುಕೊಳ್ಳುವರು. ಮತ್ತು ಪಾಸಾದವರಿಗೆ ಸರ್ಟಿಫಿಕೇಟು ಕೊಡುವರು. (೨) ಮೇಸ್ತ್ರೀ

(ಸಬ್-ಓವ್ಹರಸೀಯರ) ಕೆಲಸದಲ್ಲಿ ಮ್ಯಾನ್ಯುಅಲ್ ಟ್ರೇನಿಂಗಿನಚಿನೆಯ ವರ್ಷದ ಪರೀಕ್ಷೆಯಲ್ಲಿ ಪಾಸಾಗಿ ಸರ್ಟಿಫಿಕೇಟ ಪಡೆದ ಮತ್ತು ಮಹತ್ವ ಮಾಪಕ (ಮೆನ್ಯುರೇಶನ್) ಗಣಿತ ವಿಷಯದಲ್ಲಿ ನೂರಕ್ಕೆ ನಾಲ್ವತ್ತು ಗುಣಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಮಾತ್ರ ಈ ಕ್ಲಾಸಿಗೆ ಪ್ರವೇಶ ಹೊರೆಯುವದು ಇಲ್ಲಿ ಇಂಜನಿಯರಿಂಗ, ಲೋಕಲ್ ಬೋರ್ಡ, ಮುನಸೀಪಾಲಿಟಿ ಮೊದಲಾದ ಖಾತೆಗಳಲ್ಲಿಯ ಪಬ್ಲಿಕ್ ವರ್ಕ ಡಿಪಾರ್ಟಮೆಂಟಿನ ಜ್ಞಾನವು ಮಾಡಿಕೊಡಲ್ಪಡುವದು. (೧) ಪ್ಲಾನ್ (ನಾವು) ಎಸ್ಟಿಮೇಟ ತಯಾರ ಮಾಡುವದು, (೨) ಡಿಜಾಯಿನಿಂಗ (ಫರ್ನೀಚರ ಮೊದಲಾದವು), (೩) ಟ್ರೇನಿಂಗ ಮತ್ತು ಪಿರೋಪ್ರಶಿಯೇಟ, ಪ್ರಿಂಟಿಂಗ, (೪) ಕಟ್ಟಡಗಳಿಗೆ ಬೇಕಾಗುವ ಜ್ಞಾನ. ಇದೆಲ್ಲ ಒಂದು ವರ್ಷದಲ್ಲಿ ಕಲಿಸಲ್ಪಡುವದು. (೩) ನೇಯಕಾರಿಕೆಯಲ್ಲಿ ಸೇರುವ ವಿದ್ಯಾರ್ಥಿಗಳು ಮರಾಠಿ ೩ನೆಯ ಇಯತ್ತೆಯನ್ನು ಪಾಸಾಗಿರಬೇಕು. ಇಲ್ಲಿ ಒಂದು ವರ್ಷದ ಅಭ್ಯಾಸ ಇರುವದು. ಇದಲ್ಲದೆ ಮೋಟಾರ ಕ್ಲಾಸ ಸಹ ಇಟ್ಟಿರುವರು. ಎರಡು ತಿಂಗಳಲ್ಲಿ ಮೋಟಾರ ನಡಿಸುವದನ್ನೂ, ಅದರ ಯಂತ್ರಗಳ ವಿಷಯವನ್ನೂ ತಿಳಿಸುವರು

೪ ರಾಬರ್ಟಸನ್ ಸ್ಕೂಲ ಆಫ್ ಇಂಡಸ್ಟ್ರಿ ಹಂಡರಪೂರ. ಈ ಸಂಸ್ಥೆಯಾದರೂ ಮೇಲಿ ಹೇಳಿದ ಹುಳಿಯಾದ ಸ್ಕೂಲಿನಂತೆಯೇ ಇರುವದು. ವಿಶೇಷ ಹೆಚ್ಚುಕಡಿಮೆ ಇಲ್ಲ.

೫. ಇಂಡಸ್ಟ್ರಿಯಲ್ ಆ್ಯಂಡ ಇಂಜನಿಯರಿಂಗ ಇನ್ಸ್ಟಿಟ್ಯೂಟ, ನದಿಯಾದ. ಈ ಸಂಸ್ಥೆಯನ್ನು ಮಿಶನರಿಯವರು ಸ್ಥಾಪಿಸಿರುವರು. ಇಲ್ಲಿಯಾದರೂ ಬಡಿಗತನ, ಕಮ್ಮಾರಿಕೆ, ಇಂಜನ ಮತ್ತು ಮೋಟಾರ ನಡೆಯಿಸುವದು, ಡ್ರಾಯಿಂಗ ಮೊದಲಾದ ವಿಷಯಗಳು ಕಲಿಸಲ್ಪಡುವವು.

೬. ವ್ಹಿಕ್ಟೋರಿಯಾ ಟೆಕ್ನಿಕಲ್ ಮುನಸೀಪಲ್ ಇನ್ಸ್ಟಿಟ್ಯೂಟ ಪುಣೆ. ಇಲ್ಲಿಯಾದರೂ, ಬಡಿಗತನ, ಕಮ್ಮಾರಿಕೆ, ಡ್ರಾಯಿಂಗ, ನೇಕಾರಿಕೆ, ಮೇಸ್ತ್ರಿ ಕ್ಲಾಸ, ಎಂಜಿನಿಯರಿಂಗ ಮತ್ತು ಮುದ್ರಣ ಈ ವಿಷಯಗಳು ಕಲಿಸಲ್ಪಡುವವು.

ಹೀಗೆ ಅನೇಕ ಔದ್ಯೋಗಿಕ ಶಾಲೆಗಳು ಅಸ್ತಿತ್ವದಲ್ಲಿ ಇರುವವು. ಇವೆಲ್ಲವುಗಳಲ್ಲಿ ಶಿಕ್ಷಣ ಕ್ರಮವು ಒಂದೇ ಮಾದರಿಯದು ಆದೆ. ಕಾರಣ ಸರಕಾರದವರು ಈ ಬಗ್ಗೆ ದಿ ಕಮಿಟಿ ಆಫ್ ಡಾಯರೆಕ್ಟರ್ಸ ಫಾರ ಟೆಕ್ನಿಕಲ್ ಎಜ್ಯುಕೇಶನ್ ಎಂಬ ಕಮಿಟಿಯನ್ನು ನೇಮಿಸಿ ಅವರ ಮುಖಾಂತರ ಅಭ್ಯಾಸಕ್ರಮವನ್ನು ಗೊತ್ತುಪಡಿಸುವರು ಮತ್ತು ಪರೀಕ್ಷೆಯನ್ನು ತೆಗೆದುಕೊಂಡು ಸರ್ಟಿಫಿಕೇಟ ಕೊಡುವರು.

ನಿಧಾನ ಇಂಥ ಸಂಸ್ಥೆಗಳಾದರೂ ನಮ್ಮ ಕರ್ನಾಟಕದಲ್ಲಿ ಒಂದೂ ಇಲ್ಲ. ಹುಬ್ಬಳ್ಳಿ, ಗದಗ, ಬೆಳಗಾವ, ವಿಜಾಪೂರ, ಧಾರವಾಡದಂಥ ದೊಡ್ಡ ಮುನಸೀ ಪಾಲಿಟಿಗಳಾಗಲೀ, ನಮ್ಮ ಜಿಲ್ಲಾ ಲೋಕಲ್ ಬೋರ್ಡುಗಳಾಗಲೀ ಈ ತರದ ಶಾಲೆಗಳನ್ನು ತೆರೆಯುವದು ಸಯುಕ್ತಿಕವಾಗಿದೆ. ಇಲ್ಲವೆ ಬೇರೆ ಸ್ವತಂತ್ರ ಶಿಕ್ಷಣ ಸಂಸ್ಥೆಗಳು ಮನಸ್ಸು ಹಾಕಿ ಇಂಥ ಶಾಲೆಗಳನ್ನು ತೆರೆದು ಸರಿಯಾಗಿ ನಡಿಸಿದರೆ ನಮ್ಮ ಕರ್ನಾಟಕ ಮುನಸೀಪಾಲಿಟಿಗಳು, ಲೋಕಲ್ ಬೋರ್ಡುಗಳು ಅವಶ್ಯ ಸಹಾಯ ಮಾಡದೆ ಇರಲಾರವು ಇದೇ ಹೆಚ್ಚಿಗೆ ಸಯುಕ್ತಿಕವಂದು ತೋರುತ್ತದೆ.

ಈ ಮೇಲ್ಕಂಡ ಸಂಗತಿಯಿಂದ ಔದ್ಯೋಗಿಕ ಶಿಕ್ಷಣವು ನಮ್ಮ ಇಲಾಖೆಯಲ್ಲಿ ಇನ್ನೂ ಎಷ್ಟು ಶೈಶವಾವಸ್ಥೆಯಲ್ಲಿದೆಯೆಂಬುದು ತಿಳಿದು ಬರುವದು. ಔದ್ಯೋಗಿಕ ಶಾಲೆಗಳಲ್ಲಿ ವಿಶೇಷವಾಗಿ ಕಲಿಸತಕ್ಕ ವಿಷಯಗಳನ್ನು ಪರಿಶೀಲಿಸಿದರೆ ಬಡಿಗತನ, ಕಮ್ಮಾರಿಕೆ, ನೇಕಾರಿಕೆ ಇವೇ ಹೆಚ್ಚು ರೂಢಿಯಲ್ಲಿರುವವು ಬಡಿಗತನದಲ್ಲಿ ನವೀನ ಪದ್ಧತಿಯ ಕೈಗಾರಿಕೆಯು ಕಲಿಸಲ್ಪಡುವದು. ಅದರಂತೆ ಕಮ್ಮಾರಿಕೆಯು ಹೊಸ ಪದ್ಧತಿಯಂತೆ ಕಲಿಸಲ್ಪಡುವದು. ಕಟ್ಟಿಗೆ, ಕಬ್ಬಿಣಗಳಲ್ಲಿಯ ಕೆಲಸವು ವರ್ಷ ವರ್ಷ ಬೆಳೆಯುತ್ತಿರುವದು. ಫರ್ನಿಚರ (ಕುರ್ಚಿ, ಮೇಜು, ಕಪಾಟು ಮೊದಲಾದ) ಸಾಮಾನುಗಳ ಬಳಕೆಯು ಹೆಬ್ಬುತ್ತ ಇರುವದು ಆದ್ದರಿಂದ ಇದಕ್ಕೆ ಬಹಳ ಬೇಡಿಕೆಯದೆ. ಯಂತ್ರಗಳ ಜ್ಞಾನವಾವರೂ ತೀರ ಅವಶ್ಯವಾಗಿದೆ. ಈ ಧಂದೆಯೂ ಅತಿ ಜೋರಿನಿಂದ ಬೆಳೆಯುವ ಉದ್ಯೋಗವಾಗಿದೆ. ಇವಲ್ಲದೆ ಮುದ್ರಣದ ಉದ್ಯೋಗವಾದರೂ ಬಹಳವಾಗಿ ಬೆಳೆಯಹತ್ತಿದೆ ಈ ಉದ್ಯೋಗವು (ಅಂದರೆ ಕಂಪೋಜಿಂಗ, ಪ್ರಿಂಟಿಂಗ, ಬಾಯಿಂಡಿಂಗ, ರೂಲಿಂಗ, ಟಾಯಿಪ ಕಾಸ್ಟಿಂಗ, ಬ್ಲಾಕ್ಸಮೇಕಿಂಗ ಇತ್ಯಾದಿ) ಜಗತ್ತಿನ ಮುಖ್ಯ ಮತ್ತು ದೊಡ್ಡ ಉದ್ಯೋಗಗಳಲ್ಲಿ ಒಂದಾಗಿದೆ. ಇದು ದಿನೇ ದಿನೇ ಬೆಳೆಯುವ ಉದ್ಯೋಗವಲ್ಲದೆ ಕಡಿಮೆಯಾಗುವದಿಲ್ಲ. ಈ ಕ್ಲಾಸನ್ನು ಕೊಲಾಬಾ ಇಂಡಸ್ಟ್ರಿಯಲ್ ಸ್ಕೂಲಿನವರೂ, ಪುಣೆ ಮುನಸೀಪಲ್ ವ್ಹಿಕ್ಟೋರಿಯಾ ಟೆಕ್ನಿಕಲ್ ಸ್ಕೂಲಿನವರೂ ತೆಗೆದಿರುವರು. ಮಂಗಳೂರಲ್ಲಿ ಈ ಉದ್ಯೋಗವು ಮಿತಿಮೀರಿ ಬೆಳೆದಿರುವದು. ಇಡೀ ಮುಂಬಯಿ ಕರ್ನಾಟಕದಲ್ಲಿ ಇದ್ದ ಎಲ್ಲ ಪ್ರಿಂಟಿಂಗ ಪ್ರೆಸ್ಸುಗಳು ಕೂಡಿದರೆ ಮಂಗಳೂರಲ್ಲಿಯ ಒಂದು ದೊಡ್ಡ ಪ್ರೆಸ್ಸಿನಷ್ಟು ಸಹ ಆಗುವದಿಲ್ಲ. ಈ ಧಂದೆಯನ್ನು ಬೆಳೆಯಿಸಲಿಕ್ಕೆ ಕರ್ನಾಟಕದ ನಮ್ಮ ಭಾಗದಲ್ಲಿ ತುಂಬಾ ಅವಕಾಶವದೆ.

ಇತ್ತ ಕಡೆಗೆ ಅನುಭವಿಕರು, ಅನುಕೂಲತೆಯುಳ್ಳವರು ಗಮನ ಕೊಡುವರೆಂದು ಹಾರೈಸುತ್ತೇವೆ.

ವಿವಿಧ ವಿಷಯಗಳು.

ಮಾವಿನ ಹಣ್ಣು.

ಮಾವಿನ ಹಣ್ಣು ಹಿಂದುಸ್ಥಾನದ ಅಮೌಲ್ಯವಾದ ಹಣ್ಣುಗಳಲ್ಲಿ ಒಂದಾಗಿದೆ. ಇದು ಸುಗ್ಗಿಯಲ್ಲಿ ಹೇರಳವಾಗಿ ದೊರೆಯುವದು. ಇದರಲ್ಲಿ ಜವಾರಿ ಮತ್ತು ಕಸಿ [ಕಲ್ಮಿ] ಎಂದು ಎರಡು ವರ್ಗ. ಜವಾರಿ ಹಣ್ಣಿನಲ್ಲಿ ಎಳೆಗಳು [ಸೋಪು] ಬಹಳ. ಕಸಿ ಹಣ್ಣುಗಳಲ್ಲಿ ಎಳೆಗಳು ಇರುವದಿಲ್ಲ. ಪಿಂಡ ಹೆಚ್ಚು ಈ ಹಣ್ಣುಗಳು ಧಾರವಾಡ, ಬೆಂಗಳೂರ ಮತ್ತು ಗೋವಾ ಪ್ರಾಂತಗಳಲ್ಲಿ ವಿಶೇಷವಾಗಿ ಬೆಳೆಯುವವು. ಮಾವಿನ ಹಣ್ಣುಗಳು ತಿನ್ನಲಿಕ್ಕೆ ಎಷ್ಟು ರುಚಿಕರವಿರುವವೋ ಅಷ್ಟು ದೇಹಕ್ಕೆ ಆರೋಗ್ಯಕರವೂ ಇರುವವು ದೇಹದ ರಕ್ತಶೋಷಕ್ಕೆ, ಹೊಟ್ಟೆ ಮುರಿಯುವದಕ್ಕೆ, ಮಲಬದ್ಧತೆಗೆ ವಿಶೇಷವಾಗಿ ಸ್ತ್ರೀ ರೋಗಕ್ಕೆ [ಅಳತೆಗೆಟ್ಟು ಹೊಟ್ಟೆ ಜಾಡಿಸೋಣ], ಇದು ಅಮೌಲ್ಯವಾದ ಉಪಾಯ. ರೋಗಿಗಳು ಹಾಲು-ಹಣ್ಣಿನ ಊಟದ ಮೇಲೆ ಇರತಕ್ಕದ್ದು. ಉತ್ತಮ ಕಲ್ಮಿಯ ಎರಡು ಹಣ್ಣುಗಳನ್ನು ತೆಗೆದುಕೊಂಡು ಮೇಲಿನ ತೊಗಟೆ ತೆಗೆದು ತಿಳಲನ್ನು ಚೂರಿಯಿಂದ ಚೂರು ಚೂರು ಮಾಡಿ ಪಾತ್ರೆಯಲ್ಲಿ ಹಾಕಿ ಅದರ ಮೇಲೆ ಕಾದು ಆರಿದ ಹಾಲನ್ನು ಹಾಕಬೇಕು. ಹಾಲಿನಲ್ಲಿ ಮುಳುಗಿ ಸ್ವಲ್ಪ ಹೊತ್ತು ನೆನೆದ ಮೇಲೆ ಸವಟಿನಿಂದ ಸೇವಿಸಬೇಕು ಹೀಗೆ ದಿವಸಕ್ಕೆ ಎರಡು ಮೂರು ವೇಳೆ ಊಟ ಮಾಡಬೇಕು. ಹೆಚ್ಚಿಗೆ ಹಸಿವೆಯೆಂದರೆ ಉತ್ತಮವಾದ ಮಜ್ಜಿಗೆಯನ್ನೂ, ಮತ್ತಿಷ್ಟು ಹಾಲನ್ನೂ ತೆಗೆದುಕೊಳ್ಳಬೇಕು. ಹೀಗೆ ಒಂದೆರಡು ವಾರ ಮಾಡಿದರೆ ರೋಗವು ವಾಸಿಯಾಗದೇ ಉಳಿಯುವದಿಲ್ಲ. ವಾರಕ್ಕೆ ಮೂರು ನಾಲ್ಕು ಪೌಂಡ ತೂಕ ಏರಿ ಬರುವದು. ಈ ಊಟವು ರೋಗಿಗಳಷ್ಟೇ ಅಲ್ಲದೆ ಸರ್ವರಿಗೂ ಹಿತಕಾರಿಯು. ಮಾವಿನ ಹಣ್ಣುಗಳು ಬೆಳೆಯದಿದ್ದಾಗ್ಗೆ ಉತ್ತಮವಾದ ಬಾಳೆಯ ಹಣ್ಣುಗಳನ್ನು ಸೇವಿಸಬೇಕು. ಮಾತು ಬಲ್ಲವನಿಗೆ ಜಗಳವಿಲ್ಲ; ಊಟ ಬಲ್ಲವನಿಗೆ ರೋಗವಿಲ್ಲ.

* * * *

ಹಲ್ಲು ಹುಳಿಯುವದು.

ಇತ್ತಿತ್ತಲಾಗಿ ಚಿಕ್ಕ ವಯಸ್ಸಿನಲ್ಲಿಯೇ ಹಲ್ಲುಗಳು ಬೀಳುವದು ಹೆಚ್ಚಾಗಿದೆ. ಹಲ್ಲುಗಳಿಗೆ ಅನೇಕ ರೋಗಗಳು. ಹಲ್ಲುಗಳನ್ನು ಯಾವಾಗಲೂ ಸ್ವಚ್ಛವಾಗಿ

ಇಟ್ಟುಕೊಳ್ಳುವದೇ ಹಲ್ಲುಬೇನೆಗೆ ಮುಖ್ಯ ಉಪಾಯ. ಹಲ್ಲುಗಳು ಹಸನಾಗಿರದಿದ್ದರೆ ಮಾಯಕ್ರೋಬ ಎಂಬ ಸೂಕ್ಷ್ಮ ಕ್ರಿಮಿಗಳು ಅಂಟಿ ಹಲ್ಲುಗಳನ್ನು ಕೆಡಿಸುವವು. ಆದ್ದರಿಂದ ದಿವಸಕ್ಕೆ ಒಂದೆರಡಾವೃತ್ತಿ ಹಲ್ಲುಗಳನ್ನು ಹಸನಾಗಿ ತಿಕ್ಕಬೇಕು. ಹಲ್ಲುಗಳಿಗೆ ಹುಳ ಹತ್ತಿ ಡೊಗರು ಬೀಳಹತ್ತಿದರೆ ಕೂಡಲೆ ಹಲ್ಲಿನ ಡಾಕ್ಟರರಿಂದ ತುಂಬಿಸಬೇಕು. ತಡವಾದರೆ ಹುಳಗಳು ಬೇರಿನ ವರೆಗೆ ಹೋಗಿ ಸ್ನಾಯುಗಳನ್ನು ಮೇದು ಬಿಡುವವು ಹಲ್ಲುಗಳು ಬೀಳುವವು. ಮತ್ತು ಪಾಯರಿಯಾ (ಕೀವ ಬರುವದು), ದಮ್ಮು, ಹಾರ್ಟಡಿಸೀಜ (ಹೃದಯ ರೋಗ), ರೂಮ್ಯಾಟಿಸಮ್ (ಸಂದಿ ವಾತರೋಗ) ಮೊದಲಾದ ಅನೇಕ ರೋಗಗಳು ಗಂಟು ಬೀಳುವವು. ಆದ್ದರಿಂದ ಹಲ್ಲುಗಳ ಬಗ್ಗೆ ಬಹಳ ಎಚ್ಚರಿಕೆಯಿಂದ ಇರಬೇಕು. ಹಲ್ಲಿನ ಡಾಕ್ಟರರಿಗೆ ಆಗಾಗ್ಗೆ ತೋರಿಸಬೇಕು

ಹಲ್ಲಿನ ಮೇಲೆ ದಪ್ಪಾಗಿ ಟಾರ್ಟರ ಎಂಬ ಕವಚವು ಕೂಡುವದು ಇದು ಬೆಳೆದು ಒಸಡಿಯನ್ನು ದೂಡುವದು. ಆದರಿಂದ ಹಲ್ಲುಗಳು ಸಡಿಲವಾಗುವವು. ಆಮೇಲೆ ಮೇಲೆ ವಿವರಿಸಿದ ರೋಗಗಳಿಗೆ ಆಸ್ಪದವಾಗುವದು. ಈ ಟಾರ್ಟರ ಹುಟ್ಟದಂತೆ ಎಚ್ಚರದಿಂದ ಇರಬೇಕು. ಸೀ ಪದಾರ್ಥಗಳನ್ನು ಹೆಚ್ಚು ಸೇವಿಸಬಾರದು. ಕ್ರಿಮಿಗಳು ಇವಕ್ಕೆ ಬಹಳ ಮೆಚ್ಚುವವು

ಹಲ್ಲುಗಳ ಮಧ್ಯದಲ್ಲಿ ಸೇರಿದ ಕಸರನ್ನು ಬಿರುಸಾದ (ಚಾಕು, ಸೂಜಿ, ಮೊಳೆ) ವಸ್ತುಗಳಿಂದ ತೆಗೆಯಬಾರದು. ಇದರಿಂದ ಒಸಡಿಗಳಿಗೆ ಧಕ್ಕೆ ತಗಲುವದು

ಹಲ್ಲುಗಳಿಗೆ ಸಹ ವ್ಯಾಯಾಮ ಬೇಕು. ಆದ್ದರಿಂದ ಕಟಕಾದ ರೊಟ್ಟಿ ಮುಂತಾದವನ್ನು ತಿನ್ನುತ್ತಿರಬೇಕು ಅಂದರೆ ಹಲ್ಲುಗಳು ಗಟ್ಟಿಯಾಗುವವು. ಆದರೆ ಇಡೀ ಅಡಿಕೆ ಒಡೆಯುವದು ಮುಂತಾದ ಕಠಿಣ ಕೆಲಸ ಮಾಡಕೂಡದು.

ಹಲ್ಲುಗಳನ್ನು ಹಸನಾಗಿಡುವದಕ್ಕೆ ಸಿಕ್ಕ ಸಿಕ್ಕ ಹಲ್ಲುಪುಡಿ (ಟೂಥ ಪಾವಡರ) ಗಳನ್ನು ಉಪಯೋಗಿಸಬಾರದು ಜಾಲಿಯ ಕಡ್ಡಿ, ಉತ್ತರಾಣಿಯ ಕಡ್ಡಿಗಳನ್ನು ಉಪಯೋಗಿಸಬಹುದು. ಆದರೆ ಪುಣಸೆಯ ಕಡ್ಡಿಯನ್ನು ಉಪಯೋಗಿಸಬಾರದು. ಈ ಕಡ್ಡಿಗಳನ್ನು ಜಜ್ಜಿ ಕುಂಚು ಮಾಡಿ ತಿಕ್ಕಬೇಕು ಬಿರುಸು ಕಡ್ಡಿಗಳಿಂದ ತಿಕ್ಕಬಾರದು. ಈಗ ನೂರಾರು ಬಗೆಯ ಹಲ್ಲುಪುಡಿಗಳು ಪೇಟೆಯಲ್ಲಿ ದೊರೆಯುವವು ಆದರೆ ಡಾಕ್ಟರರನ್ನು ಕೇಳಿ ಒಳ್ಳೆಯವನ್ನೇ ಉಪಯೋಗಿಸಬೇಕು

ಹಲ್ಲುಗಳು ಯಾವಾಗಲೂ ಹಸನಾಗಿ ಇದ್ದರೆ ದೇಹದಲ್ಲಿ ಆರೋಗ್ಯತೆಯು ಉಳಿಯುವದು.

* * * *

ಕಲ್ಲು, ಲೋಹ ಮೊದಲಾದ ವಸ್ತುಗಳಲ್ಲಿ ಸಹ ಗಂಡು-ಹೆಣ್ಣು ಎಂಬ ವರ್ಗಗಳಿವೆ.

ರಸಿಯಾದ ಮ್ಯಾನೋಲೋವ್ಹ ಎಂಬ ಪ್ರಸಿದ್ಧ ಶಾಸ್ತ್ರಜ್ಞನು ಕಲ್ಲು, ಲೋಹ ಮೊದಲಾದ ಎಲ್ಲ ವಸ್ತುಗಳಲ್ಲಿ ಹೆಣ್ಣು ಗಂಡುಗಳೆಂಬ ವರ್ಗಗಳುಂಟೆಂದು ಕಂಡು ಹಿಡಿದಿರುವನು. ಒಂದೇ ಲೋಹವು ಒಂದೇ ತರಹದ ರಸಾಯನ ದ್ರವ್ಯಗಳು ಳ್ಳದ್ದು ಇದ್ದಾಗ್ಯೂ ಒಂದರ ಕಣಗಳು ಚೌಕೋನವಾಗಿಯೂ, ಇನ್ನೊಂದರ ಕಣಗಳು ಅಷ್ಟಕೋನವಾಗಿಯೂ ಇರುವವು ಚೌಕೋನ ಹಳುಕುಗಳುಳ್ಳದ್ದು ಗಂಡು ಎಂದೂ, ಅಷ್ಟಕೋನ ಹಳುಕುಗಳುಳ್ಳದ್ದು ಹೆಣ್ಣು ಎಂದೂ ಕಂಡುಹಿಡಿದಿರುವನು ಅವುಗಳನ್ನು ಕೆಲವು ಸೋಲೂಶನಗಳಲ್ಲಿ ಮುಳುಗಿಸಿ ರೇಡಿಯೊ ಕಿರಣಗಳ ಮೂಲಕ ಒಂದು ಗಂಡಿನ ಕ್ರಿಯೆಯನ್ನು, ಒಂದು ಹೆಣ್ಣಿನ ಕ್ರಿಯೆಯನ್ನು ಮಾಡುವವೆಂದು ಸಿದ್ಧಪಡಿಸಿರುವನು.

ಸೃಷ್ಟಿಯೆಲ್ಲ ದ್ವಂದ್ವಮಯವಾಗಿಯೇ ಇರುವದು. ಪ್ರಾಣಿಗಳಲ್ಲಿ ಮತ್ತು ವನಸ್ಪತಿಗಳಲ್ಲಿ ಗಂಡು-ಹೆಣ್ಣು ಎಂದು ಜಾತಿಗಳು ಇರುವದಂತೂ ಎಲ್ಲರೂ ಬಲ್ಲರು. ಆದರೆ ನಿರ್ಜೀವಿಗಳಾದ ಕಲ್ಲು, ಕಬ್ಬಿಣ ಮೊದಲಾದ ಪದಾರ್ಥಗಳಲ್ಲಿ ಸಹ ಈ ಜಾತಿಗಳುಂಟೆಂಬದು ಆಶ್ಚರ್ಯವೇ.

ಇನ್ನು ಪ್ರಕಾಶ, ಬುದ್ಧಿ, ಕಲ್ಪನಾ, ಶಿಟ್ಟು ಮೊದಲಾದ ಚಿಚ್ಛಕ್ತಿಗಳಲ್ಲಿ ಸಹ ಅರ್ಥಾತ್ ಎಲ್ಲ ಶಕ್ತಿಗಳಲ್ಲಿಯೂ ಈ ವರ್ಗಗಳಿರಲಿಕ್ಕೇ ಬೇಕು. ಯಾಕಂದರೆ ಮೂಲ ಶಕ್ತಿಯ ಪ್ರಾದುರ್ಭಾವವೇ ಈ ಸೃಷ್ಟಿ ಇರುವದು.

* * * *

ಹಾವಿನ ವಿಷಕ್ಕೆ ಉಪಾಯ.

ಹಾವು ಕಡಿದ ಸ್ಥಳದ ಮೇಲ್ಬದಿಯಲ್ಲಿ ಕಡಿದ ಕ್ಷಣವೇ ಬಿಗಿಯಾಗಿ ಹುರಿಯಿಂದ ಕಟ್ಟಬೇಕು ಇದರಿಂದ ರಕ್ತವು ಮೈತುಂಬ ಹರಿಯುವದು ಕಡಿಮೆಯಾಗುವದು. ಆ ಮೇಲೆ ಬಾಳೆಯ ದಿಂಡಿನ ರಸವನ್ನು ಪ್ರತಿ ಐದು, ಹತ್ತು ನಿಮಿಷಕ್ಕೊಮ್ಮೆ ಅರ್ಧ ಚಮಚೆಯಷ್ಟು ಕುಡಿಸಬೇಕು ಮತ್ತು ತುಳಸಿಯ ಎಲೆಯ ರಸವನ್ನು ನೆತ್ತಿಗೂ, ಹಣೆಗೂ, ಕುತ್ತಿಗೆಗೂ, ಹೊಂಕುಳಕ್ಕೂ, ಬಗಲಿಗೂ, ಎದೆಗೂ ಹಚ್ಚಿ ತಿಕ್ಕಬೇಕು. ಹೀಗೆ ಒಂದು ಘಂಟೆಯ ವರೆಗೆ ಮಾಡಿದರೆ ಮೈ ಮೇಲೆ ಸ್ಮೃತಿ ಬರುವದು. ಆ ಮೇಲೆ ಬಾಳೆಯ ರಸವನ್ನು ೨೦-೩೦ ಮಿನಿಟಿಗೊಮ್ಮೆ ಕುಡಿಯಲಿಕ್ಕೆ ಕೊಡಬೇಕು. ಮತ್ತು ಹೊಟ್ಟೆ ತೊಳೆಯುವದಕ್ಕೆ

"ಎನಿಮಾ" ಕೊಡಬೇಕು. ನುತ್ತು ಮನಸ್ಸು ಒಪ್ಪಿದರೆ ಕಡಿದ ಜಾಗೆಯ ಮೇಲೆ ಚಾಕುವಿನಿಂದ ಕತ್ತರಿಯ ಗೆರೆಯನ್ನು (ರಕ್ತ ಬರುವಂತೆ) ಹಾಕಿ ಕೋಳಿಯ ಮರಿಯ ಗುದಕ್ಕೆ ಕತ್ತರಿ ಗೆರೆಯನ್ನು ಹಾಕಿ ಅದನ್ನು ಕಡಿದ ಜಾಗೆಗೆ ಹಚ್ಚಬೇಕು. ಹೀಗೆ ಮಾಡಿದರೆ ವಿಷವು ಹೊರಬಿಳುವದು. ಮರಿಯು ಕೂಡಲೆ ವಿಷದಿಂದ ಸಾಯುವದು. ಇದರಂತೆ ಒಂದರ ಮೇಲೆ ಒಂದು ಕೋಳಿಯ ಮರಿಯನ್ನು ಹಚ್ಚಬೇಕು. ಹೀಗೆ ನಾಲ್ಕೈದು ಮರಿಗಳು ವಿಷಪ್ರಯೋಗದಿಂದ ಸಾಯಬಹುದು. ಆ ಮೇಲೆ ವಿಷವೆಲ್ಲ ಹೋಗುವದು ಬಾಳಿಯ ರಸವು ಸಿಗದಿದ್ದರೆ ಹತ್ತಿಯ ಎಲೆಯ ರಸವು ನಡೆಯುವದು. ಅದೂ ದೊರೆಯದಿದ್ದರೆ ತುಳಸಿಯ ರಸವನ್ನು ಹೊಟ್ಟೆಯಲ್ಲಿ ಸಹ ಕೊಡಬಹುದು. ತುಳಸಿಯ ರಸವು ಸಿಗದಿದ್ದರೆ ಕಮಲದ ದೇಟಿನ ರಸವನ್ನು ಕೇವಲ ನೆತ್ತಿಗೆ ಮಾತ್ರ ಹಚ್ಚಬಹುದು. ಇದು ಇಲ್ಲದಿದ್ದರೆ ಶ್ರೀಗಂಧವನ್ನು ನೆತ್ತಿ, ಹಣೆ ಮೊದಲಾದ ಸ್ಥಳಗಳಲ್ಲಿ ಹಚ್ಚಬಹುದು.

ಚೋಳು ಕಡಿದರೂ ಕೂಡ ಈ ಉಪಾಯದಿಂದ ಬೇಗನೆ ಗುಣಕಾರಿಯಾಗುವದು. ಮರಣೋನ್ಮುಖನಾದ ಮನುಷ್ಯನ ಮೈಗೆಲ್ಲ ತುಳಸಿಯ ರಸವನ್ನು ಸವರಿದರೆ ಸ್ಮೃತಿ ಬರುವದುಂಟು. ಸಾಲಿಗ್ರಾಮ ನಿಘಂಟಿನಲ್ಲಿ ತುಳಸಿ, ಶ್ರೀಗಂಧ, ಕಮಲ, ಬಾಳೆ, ಇವು ವಿಷನಾಶಕವೆಂದು ಹೇಳಿರುವದು.

—ಸಂಪಾದಕ.

ಸಾಲೆಗಳ ಸುದ್ದಿ.

೧. ಕಲಘಟಗಿ ತಾಲೂಕ ಜಿನ್ನೂರ ಕನ್ನಡ ಗಂಡು ಹುಡುಗರ ಸಾಲೆಗೆ ಅಲ್ಲಿಯ ಸ್ಕೂಲ ಪಂಚರೂ, ಕೋ. ಆ. ಕ್ರೈ. ಸೊ. ಯ ಚೇರಮನ್ನರೂ ಆದ ಮಾ॥ ರಾ॥ ರಾ॥ ಚನ್ನಬಸಪ್ಪ ಉಳವಪ್ಪ ತಾವರಗೇರಿ ಇವರು ಒಂದು ಗಡಿಯಾರವನ್ನೂ ಮತ್ತು ಧರ್ಮಣ್ಣಾ ತಿಪ್ಪಣ್ಣಾ ಪರವಾಪೂರ ಇವರು ಒಂದು ಜಾಂಗಟೆಯನ್ನೂ ಕೊಟ್ಟಿರುತ್ತಾರೆ ಈ ಉರ್ವ ಸದ್ಗೃಹಸ್ಥರ ಆಭಾರವನ್ನು ಮನ್ನಿಸದೆ ಇರಲಾರೆವು.

ಜೀವಾಜಿ ರಾಮಚಂದ್ರ ಮಳಲಿ,
ಹೆ. ಮಾ. ಜಿನ್ನೂರ.

* * * *

೨. ಹಾನಗಲ್ಲ ತಾಲೂಕ ಅಲೂರ ಕನ್ನಡ ಗಂಡು ಹುಡುಗರ ಶಾಲೆಗೋಸುಗ ಬೋರ್ಡಿನವರು ಹೊಸ ಕಟ್ಟಡವನ್ನು ಕಟ್ಟಿಸಿರುವದು. ಅದರ ಅನಾವರಣ ಸಮಾರಂಭವು ಹೋದ ಜಾನೇವರಿ ತಿಂಗಳ ೭ನೆಯ ತಾರೀಖಿನ ದಿವಸ ಮೆ॥ ಸಿ ಸಿ. ಹುಲಕೋಟಿ, ಬಿ ಎ. ಎಲೆಲ್. ಬಿ ಹಿಂದಿನ ಲೋಕಲ್ ಬೋರ್ಡ ಪ್ರೆಸಿಡೆಂಟ, ಸದ್ಯದ ಸೆಸನ್ಸ ಜಜ್ಜ ಬೆಳಗಾವ ಇವರ ಹಸ್ತದಿಂದ ನೆರವೇರಿತು ಶ್ರೀ. ಲಿಂಗಪ್ಪ ಕೂಬಿಹಾಳ ಇವರು ಸ್ವಾಗತಪರ ಭಾಷಣ ಮಾಡಿದರು. ನಂತರ ಶ್ರೀ. ಜಿ. ಆರ್. ನಲವಡಿ, ಬಿ ಎ. ಎಲೆಲ್ ಬಿ (ವ್ಹಾಯಿಸ ಚೇರಮನ್ನ ಸ್ಕೂ. ಬೋರ್ಡ ಇವರು ಇಂಗ್ಲಿಷಿನಲ್ಲಿ ಮಾತಾಡಿದರು. ಆ ನಂತರ ಅಧ್ಯಕ್ಷರು ಹೊಸ ಕಟ್ಟಡದ ಬಾಗಿಲವನ್ನು ತೆರೆದರು. ಮತ್ತು ಸಮಯೋಚಿತ ಭಾಷಣ ಮಾಡಿದರು. ಇದೇ ಕಾಲಕ್ಕೆ ಮುಲ್ಕಿ ಪರೀಕ್ಷೆಯಲ್ಲಿ ಪಾಸಾದ ವಿದ್ಯಾರ್ಥಿಗಳಿಗೂ, ವಾರ್ಷಿಕ ಪರೀಕ್ಷೆಯಲ್ಲಿ ಪಾಸಾದ ವಿದ್ಯಾರ್ಥಿಗಳಿಗೂ ಸರ್ಟಿಫಿಕೇಟು ಮತ್ತು ಇನಾಮುಗಳು ಕೊಡಲ್ಪಟ್ಟವು

ಮ. ಗು. ಹಿರೇಮಠ,
ಗನೆಯ ಅ ಮಾ. ಅಲೂರ.

* * * *

೩. ತರ್ಲಗಟ್ಟಿ (ಬಂಕಾಪೂರ) ಶಾಲೆಯಲ್ಲಿ ಈಗ ೧೯ ಗಂಡು ಹುಡುಗರು ೬ ಹೆಣ್ಣು ಹುಡುಗೆಯರು ಅಸ್ಪೃಶ್ಯ ವರ್ಗದವರಿದ್ದು ಈ ಬಗ್ಗೆ ಸ್ಕೂಲ ಬೋರ್ಡ ಚೇರಮನ್ನರು ಶ್ರೀಯುತ ಹಣಮಂತ ಚಲುವಾದಿ ಎಂಬವರನ್ನು ಕಾಯಮ ಅಸಿಸ್ಟಂಟ ಮಾಸ್ತರರನ್ನಾಗಿ ನಿಯಮಿಸಿರುವರು ಅಸ್ಪೃಶ್ಯ ವರ್ಗದ ವಿದ್ಯಾರ್ಥಿಗಳಿಗೆ ಅರಿವೆಗಳನ್ನು ಹೊಲಿಸಿ ಕೊಡುವದಕ್ಕಾಗಿ ಶ್ರೀ. ರ ದ್ರಪ್ಪ ರೊಟ್ಟಿ ೧೦-೦-೦ ಶ್ರೀ ಗುರಪ್ಪಗೌಡಾ ಪಾಟೀಲ ೮- -೦ ಮತ್ತು ಇತರ ಸದ್ಗೃಸ್ಥರು ೭—೦ -೦ ಹೀಗೆ ಒಟ್ಟು ೨೫- -೦ ರೂ ದೇಣಿಗೆಯನ್ನು ಮಾಡಿದರು. ಮತ್ತು ಇನಾಮಿನ ಸಮಾರಂಭವು ಮೆ॥ ಆನೆಯ ಸುಪರವಾಯಿಝರ ಸಾಹೇಬರ ಅಧ್ಯಕ್ಷತೆಯಲ್ಲಿ ತಾ॥ ೮—೯ನೆಯ ದಿವಸ ನೆರವೇರಿತು ಆ ಕಾಲಕ್ಕೆ ಶ್ರೀಯುತ ರುದ್ರ ಗೌಡಾ ರಾಮನಗೌಡರ ಇವರು ಶಿಕ್ಷಣದಿಂದಾಗುವ ಲಾಭಗಳ ಬಗ್ಗೆ ಸರಸವಾಪ ಭಾಷಣ ಮಾಡಿದರು

ಹಣಮಂತ ಚಲವಾದಿ,
ಪಂಚಮ ಕ್ಲಾಸ ಮಾಸ್ತರ ತರ್ಲಗಟ್ಟಿ.

* * * *

೪. ಬನ್ನೂರು (ಬಂಕಾಪೂರ) ಗ್ರಾಮದ ಕನ್ನಡ ಶಾಲೆಯ ಹುಡುಗರ ಸಂಖ್ಯೆಯು ೩೦ರಿಂದ ೧೦೦ರ ವರಿಗೆ ಬೆಳೆದದೆ. ಒಬ್ಬರೇ ಮಾಸ್ತರರಿದ್ದ ಕಾರಣ

ಗ್ರಾಮದ ಜನರೆಲ್ಲರೂ ಕೂಡಿ ಮುಲ್ಕೀ ಪರೀಕ್ಷೆ ಪಾಸಾದ ಅಸಿಸ್ಟಂಟ ಮಾಸ್ತರರನ್ನು ಕೊಟ್ಟಿರುತ್ತಾರೆ ಅಲ್ಲದೆ ಶಾಲೋಪಯೋಗಕ್ಕೆ ಒಂದು ಟಾಯಿಂಪಿಸನ್ನು ಕೊಟ್ಟಿರುವರು. ಮತ್ತು ಒಂದು ಜಾಂಗಟೆಯನ್ನು ಕೊಡಲಿಕ್ಕೆ ಒಪ್ಪಿರುವರು. ಮತ್ತು ಒಬ್ಬ ಕಾಯಮ ಅಸಿಸ್ಟಂಟ ಜಾಗೆಯನ್ನು ಸ್ಕೂಲ ಬೋರ್ಡಿನವರು ಮಂಜೂರ ಮಾಡುವ ಬಗ್ಗೆ ವಿಜ್ಞಾಪನೆ ಮಾಡಿಕೊಂಡಿರುವರು.

ಸ್ಕೂಲ ಪಂಚ ಕಮಿಟಿಯಿಂದ.

* * * *

ನವಲಗುಂದ ತಾಲೂಕ ಖಾನಾಪೂರ (ಗಂಗಾಪೂರ) ಕನ್ನಡ ಶಾಲೆ—ಈ ಊರು ಸಣ್ಣದಿದ್ದರೂ ಹೆಡ್ ಮಾಸ್ತರರಾದ ಶ್ರೀಯುತ ಉಗಲಾಟ ಇವರ ಪರಿಶ್ರಮದಿಂದ ಒಂದು ನೂರಾ ಇಪ್ಪತ್ತು ವಿದ್ಯಾರ್ಥಿಗಳು ಶಾಲೆಯಲ್ಲಿರುವರು. ಅವರಲ್ಲಿ ಸುಮಾರು ಮೂವತ್ತೈದು ಹೆಂಣುಮಕ್ಕಳಿರುವರು ಜನಸಂಖ್ಯೆಯ ಮಾನದಿಂದ ನೋಡಿದರೆ ನೂರಕ್ಕೆ ಇಪ್ಪತ್ತರಂತೆ ಪ್ರಮಾಣ ಬೀಳುವದು. ಈ ಶಾಲೆಯಲ್ಲಿ ಎರಡು ಕಾಯಮು ಜಾಗೆಗಳುಂಟು. ಒಂದು ಮೊದಲನೆಯ ಸ್ಥಳವು ನಡೆದಿರುವದು.

ಹ. ಗೌ. ಪಾಟೀಲ,
ಜೀರಮನ್ನ, ಸ್ಕೂಲ ಪಂಚ ಕಮಿಟಿ, ಖಾನಾಪೂರ.

* * * *

ಕಲಘಟಗಿ ತಾಲೂಕ ತಬಕದ ಹೊನ್ನಿಹಳ್ಳಿಯ ಕನ್ನಡ ಗಂಡು ಹುಡುಗರ ಶಾಲೆಯ ಎಲ್ಲ ಹುಡುಗರ ಪರವಾಗಿ ಫೀಯನ್ನು ಆ ಗ್ರಾಮದ ಶ್ರೀಮತಿ ಸೋಮವ್ವ ಕೋಂ ಶಿವನಗೌಡಾ ಪಾಟೀಲ ಇವರು ಉದಾರಬುದ್ಧಿಯಿಂದ ತಾವೇ ಪ್ರತಿತಿಂಗಳ ಕೊಡುತ್ತೇವೆಂದು ಒಪ್ಪಿರುವರು ಎಂದು ಶ್ರೀ ಈರಪ್ಪ ಬಸಪ್ಪ ಬಳಿಗಾರ ಇವರು ತಿಳಿಸಿರುವರು. ಸ್ತ್ರೀರತ್ನೋಮಣಿಯನ್ನು ಅವರಲ್ಲಿರುವ ವಿದ್ಯಾವಾತ್ಸಲ್ಯಕ್ಕಾಗಿ ಅಭಿನಂದಿಸದೆ ಇರಲಾರೆವು ಶ್ರೀಯುತ ಸ್ವಾಮಿ ಮಹಾದೇವ ವಿಜಾಪೂರ, ಹೆಡ್ ಮಾಸ್ತರ ಇವರು ಕಳಿಕಳಿಯಿಂದ ಕೆಲಸ ಮಾಡುತ್ತಿರುವದಾಗಿಯೂ ಜನಪ್ರಿಯರಾಗಿಯೂ ಇರುವದರಿಂದ ಈ ಶಾಲೆಯು ಊರ್ಜಿತಾವಸ್ಥೆಯಲ್ಲಿದೆ.

* * * *

ಶ್ರೀಯುತ ಪುರುಷೋತ್ತಮಾಚಾರ್ಯ ರಾಯಚೂರ ವಕೀಲ ಹಾವೇರಿ ಇವರು ನಮ್ಮ ಶಾಲೆಯನ್ನು ಸಹಜವಾಗಿ ನೋಡಲಿಕ್ಕೆ ಬಂದಿದ್ದರು ಶಾಲೆಯಲ್ಲಿ ವಿದ್ಯಾರ್ಥಿಗಳ ಪುಸ್ತಕಾಲಯವಿರುವದು ಅಗತ್ಯವಾಗಿರುವದನ್ನು ತಿಳಿದು ಅಜ ಮಾಸು ೪೦–೪೫ ರೂಪಾಯಿ ಬೆಲೆಯುಳ್ಳ ಒಂದು ಕಪಾಟನ್ನೂ, ಹಲವು ಪುಸ್ತಕ

ಗಳನ್ನೂ ಕೊಟ್ಟು ತಮ್ಮ ಪರಮೌದಾರ್ಯವನ್ನು ತೋರಿಸಿದರು. ಮನುಷ್ಯನ ಜ್ಞಾನಾಭಿವೃದ್ಧಿಗೆ ಗ್ರಂಥಾವಲೋಕನವೇ ಮುಖ್ಯ ಕಾರಣವಾದದ್ದು. ಈ ಚಟವು ಚಿಕ್ಕಂದಿನಿಂದಲೇ ಹುಡುಗರಿಗೆ ಹತ್ತುವದು ಅವಶ್ಯವಾದದ್ದು. ಆದ್ದರಿಂದ ಶಾಲೆಯಲ್ಲಿ ಈ ಬಗೆಯ ಪುಸ್ತಕಾಲಯಗಳಿರುವದು ಕೇವಲ ಅಗತ್ಯವೆಂದು ಸರಸವಾದ ಭಾಷಣ ಮಾಡಿ ಸಕಲರ ಮನಸ್ಸಿಗೆ ಆನಂದವನ್ನುಂಟು ಮಾಡಿದರು. ಮತ್ತು ನಮ್ಮ ಶಾಲಾ ವಿದ್ಯಾರ್ಥಿಗಳ ಪುಸ್ತಕಾಲಯಕ್ಕೆ ಶ್ರೀಯುತ ಗುರುರಾವ ದೇಶಪಾಂಡೆ (ಆಲದಕಟ್ಟಿ) ಇವರು ಹತ್ತು ರೂಪಾಯಿಯನ್ನೂ, ಶ್ರೀಯುತ ಮಲ್ಲಪ್ಪನವರು ಬೆನ್ನೂರ ಇವರು ಐದು ರೂಪಾಯಿಗಳನ್ನೂ, ಶ್ರೀಯುತ ಚನ್ನಪ್ಪ ತಿಪ್ಪಣ್ಣನವರ ಇವರು ಐದು ರೂಪಾಯಿಗಳನ್ನೂ ಕೊಟ್ಟು ಸಹಾಯ ಮಾಡಿದರೆಂದು ಹೇಳಲು ಪರಮಾನಂದವಾಗುವದು. ಮೇಲೆ ಹೇಳಿದ ಸಭ್ಯಗೃಹಸ್ಥರ ಉಭಾರವನ್ನು ಮನಃಪೂರ್ವಕವಾಗಿ ಮನ್ನಿಸದಿರಲಾರೆವು ತಾ।। ೨೮-೯-೨೮.

ವೆ. ರಾ. ಮಠದ,
ಹೆ. ಮಾ. ಕ. ಶಾ. ಕರ್ಜಗಿ.

* * * *

ನಮ್ಮ ಶಾಲೆಯ ಏಳನೆಯ ಇಯತ್ತ್ತಿಯ ಶಾಮು ನಾರಾಯಣರಾವ ಕುಲಕರ್ಣಿಯೆಂಬ ವಿದ್ಯಾರ್ಥಿಗೆ ನಮ್ಮ ಶಾಲೆಯಲ್ಲಿ ಅಕಸ್ಮಾತ್ ಒಂದು "ಬೆಳ್ಳಿಯ ಉಡುದಾರ" ವು ಸಿಕ್ಕಿದ್ದು ಅದನ್ನು ಅವನು ಕೂಡಲೆ ನಮ್ಮ ಕಡೆಗೆ ತಂದು ಕೊಟ್ಟನು. ಬಳಿಕ ೩-೪ ದಿನ ವಿಚಾರಿಸುತ್ತಿರಲು ಬಿನ್ ಇಯತ್ತ್ತಿಯ ಒಬ್ಬ ಅಕ್ಕಸಾಲಿಗರ ಹುಡುಗನದೆಂದು ಶೋಧವಾದ ಕೂಡಲೆ ಆ ಹುಡುಗನ ತಂದೆಯನ್ನು ಕರೆಯಿಸಿ ಖಾತ್ರಿಯಾದ ಬಳಿಕ ಅವನ ಉಡುದಾರವನ್ನು ಸದರ ಅಕ್ಕಸಾಲಿಗರ ರುದ್ರಪ್ಪನಿಗೆ ಕೊಟ್ಟಿತು. ಸದರ ಶಾಮು ನಾರಾಯಣ ಕುಲಕರ್ಣಿ ಎಂಬ ವಿದ್ಯಾರ್ಥಿಯು ತನಗೆ ದೊರೆತ ಪದಾರ್ಥವನ್ನು ಕೂಡಲೆ ತಂದು ಕೊಟ್ಟ ಬಗ್ಗೆ ಅವನ "ಪ್ರಾಮಾಣಿಕತನ" ವು ಬಹು ಶ್ಲಾಘನೆ ಮಾಡುವಂತಿದೆ. ಈ ತರದ "ಪ್ರಾಮಾಣಿಕತನ" ದ ಗುಣವು ಬಾಲಕ ವರ್ಗದಲ್ಲಿ ಹೆಚ್ಚಾಗಲಿಕ್ಕೆ ಈ ಉದಾಹರಣೆಯು ಮಾದರಿಯುಳ್ಳದ್ದಾಗಿದೆ. ಸದರ ರುದ್ರಪ್ಪನು ಸದರ ವಿದ್ಯಾರ್ಥಿಯ ಗುಣಕ್ಕೆ ಮೆಚ್ಚಿ ಅವನಿಗೆ ಎಂಟಾಣೆಗಳನ್ನು ಇನಾಮಾಗಿ ಕೊಟ್ಟನು. ಈ ಸಂಗತಿಯನ್ನು ತಿಳಿಸಲಿಕ್ಕೆ ಪರಮ ಸಂತೋಷವೆನಿಸುತ್ತದೆ.

ಮ. ಗು. ಕಾಲವಾಡ,
ಹೆಡ್ ಮಾಸ್ತರ, ಕನ್ನಡ ಶಾಲಾ ನವಲಗುಂದ.

ಸರಕ್ಯೂಲರಗಳು.

ಪ್ರಾಥಮಿಕ ಶಾಲೆಗಳ ಗಣೀತ ವಿಷಯದ ಅಭ್ಯಾಸ ಪತ್ರಿಕೆಯ ತಿದ್ದುಪಡೆ.

ಈ ವಿಷಯದ ಬಗ್ಗೆ ಪ್ರಾ ಥಮಿಕ ಶಿಕ್ಷಕರಿಗೆ ಬಹಳ ತಪ್ಪು ತಿಳುವಳಿಕೆಯಾ ಗಿದೆಯೆಂದು ತಿಳಿದು ಬಂದದ್ದರಿಂದ ಮೆ|| ಎಜ್ಯೂಕೇಶನಲ್ ಇನ್ಸಪೆಕ್ಟರ ಸಾಹೇಬ ರವರಿಂದ ಬರೆದು ಬಂದವೇನಂದರೆ :—

"[ಅ] ತಿದ್ದುಪಡೆ ಹೊಂದಿದ ಅಂಕಗಣೀತ ಅಭ್ಯಾಸದ ಪತ್ರಿಕೆಯು ಹಳೆಯ ಅಭ್ಯಾಸ ಪತ್ರಿಕೆಯಕ್ಕಿಂತ ಬಹಳ ಸುಧಾರಿಸಿದ್ದು ಅದೆ. ಇದು ವ್ಯವಹಾರೋಪ ಯೋಗಿಯೂ ಜಾಣತನದ್ದೂ ಅದೆ. ಭೂಮಿತಿ ಈ ಶಬ್ದವು ಕೆಳಗಿನ ಕ್ಲಾಸಿನ ಶಿಕ್ಷ ಕರನ್ನು ಗಾಬರಿಪಡಿಸಿದಂತೆ ಕಾಣುತ್ತದೆ ಆದರೆ ಭೂಮಿತಿಯ ಭಾಗದಲ್ಲಿ ಕೇವಲ ಕಾಗದ ಮಡಿಚುವದು ಡ್ರಾಯಿಂಗ ತೆಗೆಯುವದು ಇರುವದು."

"[ಬ] ತಿದ್ದುಪಡೆ ಹೊಂದಿದ ಅಭ್ಯಾಸದ ವಿಷಯವು ಕಠಿಣವಿದೆ ಎಂದು ತಪ್ಪು ತಿಳುವಳಿಕೆಯಾಗಿದೆ ಆದರೆ ಇದು ಹಾಗಿರದೆ ಇದು ಹಳೆಯ ಅಭ್ಯಾಸ ವಿಷ ಯಕ್ಕಿಂತ ಬಹಳ ವ್ಯವಹಾರೋಪಯೋಗಿಯೂ ರುಚಿಕರವಾಗಿಯೂ ಇದೆ. ನಿಜ ವಾಗಿ ಈ ವಿಷಯವನ್ನು ಬಹಳ ಶಹಣೇತನದಿಂದ ಕಲಿಸಬೇಕಾಗುವದು. ನಿಜ ವಾಗಿ ಈ ಅಭ್ಯಾಸಪತ್ರಿಕೆಯು ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಅಭಿರುಚಿಯನ್ನು ಉಂಟು ಮಾಡತಕ್ಕದ್ದಾಗಿದೆ."

ಆದ್ದರಿಂದ ಧಾರವಾಡ ಜಿಲ್ಲಾ ಸ್ಕೂಲ ಬೋರ್ಡಿನ ಸುಪರವಾಯಿಜಿಂಗ ಮತ್ತು ಇನಸ್ಪೆಕ್ಟಿಂಗ ಅಧಿಕಾರಿಗಳು ಈ ನವೀನ ಪದ್ಧತಿಯನ್ನು ಎಲ್ಲ ಶಾಲೆಗಳಲ್ಲಿ ಅಮಲಿನಲ್ಲಿ ತರಲಿಕ್ಕೆ ಪ್ರಯತ್ನ ಮಾಡತಕ್ಕದ್ದು.

S. K. Hosamani,
ಚೇರಮನ್.

ಅಗ್ರಿಕಲ್ಚರಲ್ ಬಾಯಸ್ ಕ್ಲಾಸಿನ ಅಭ್ಯಾಸ.

ಓನೆಯ ಇಯತ್ತೆ—ಓನೆಯ ವಿಷಯ—ಸೃಷ್ಟಿಯ ಅಭ್ಯಾಸ ದುಸ್ತ್ಯ ಪ್ರತ್ಯಕ್ಷ ಕೆಲಸ (Nature study and practical work).

(ಅ) ಕೆಳಗೆ ಕೊಟ್ಟ ಯಾವವಾದರೂ ೫ ವಿಷಯಗಳ ಅಧ್ಯಯನ :—ಜೋಳ, ಸಜ್ಜಿ, ಅಕ್ಕಿ, ಗೋದಿ, ಹತ್ತಿ, ಕಬ್ಬು, ತಂಬಾಕ, ಕಡ್ಲಿ, ಮೆಣಸಿನಕಾಯಿ, ಪೊಡಲ ಮತ್ತು ಬಟಾಟಿ.

ಅಭ್ಯಾಸ :—ಈ ವಿಷಯವು ಕೆಳಗೆ ಕೊಟ್ಟಂತೆ ವಿಭಾಗಿಸಲ್ಪಡಬೇಕು.

೧ ಬೀಜದ ಅಧ್ಯಯನ : —ಅದರ ಆಕಾರ ಬಣ್ಣ ಮತ್ತು ಭಾರ, ಅದರ ಒಳಗಿನ ರಚನೆ, ಅದರ ಗರ್ಭಕೋಶ ಮತ್ತು ಅದರ ಆಹಾರ ದ್ರವ್ಯ, ಅದರ ಹುಟ್ಟುವಳಿ ಮತ್ತು ಸಸಿಯ ಬೆಳವಣಿಗೆ (ಇದರೊಡನೆ ಜೀವದ ಆರೈಕೆಯ ಸಣ್ಣ ಬೀಜಕ್ಕಿಂತ ದೊಡ್ಡ ಬೀಜದ ಮಹತ್ವ ಮತ್ತು ಬೀಜದ ಸಂಗ್ರಹ ಇವುಗಳ ಬಗ್ಗೆ ತಕ್ಕ ಸಂಕ್ಷಿಪ್ತ ಮಾಹಿತಿಯನ್ನು ಕೊಡಬೇಕು).

೨ ಬೆಳೆಯುವ ಸಸಿ ಅದರ ಭಾಗಗಳು ಮತ್ತು ಅವುಗಳ ಕಾರ್ಯಗಳು—ಬರೇ ಕಣ್ಣಿಗೆ ಗೊತ್ತಾಗಬಹುದಾದ ಸಸಿಗಳ ದೇಟಿನ ಒಳಬದಿಯ ಮತ್ತು ಹೊರಗಣ ರಚನೆ ಬೇರುಗಳನ್ನು ಸಡಲಿಸುವದರಿಂದ ಆಗುವ ಪರಿಣಾಮ, ಎಲೆಗಳನ್ನು ಜಿವ್ವಟಿ ಹಿಗೆಯುವದರಿಂದ ಆಗುವ ಪರಿಣಾಮ ಮತ್ತು ಇಂಥ ಬೇರೆ ಪ್ರಯೋಗಗಳು. (ಈ ಕಾಲಕ್ಕೆ ಬೆಳೆಯುವ ಸಸಿಗಳಿಗೆ ಹತ್ತುವ ಕೀಡಿಗಳ ಸಂಬಂಧವಾಗಿ ತುಸುಮಟ್ಟಿಗೆ ಮಾಹಿತಿ ಕೊಡತಕ್ಕದ್ದು).

೩. ಹೂವಿನ ಅಧ್ಯಯನ :—ಅದರ ಭಾಗಗಳು ಮತ್ತು ಅವುಗಳ ಕಾರ್ಯಗಳು. ಫಲೋತ್ಪತ್ತಿಯಾಗದಂತೆ ಮಾಡುವದರಿಂದಾಗುವ ಪರಿಣಾಮ, ಕೃತ್ರಿಮ ರೀತಿಯಿಂದ ಫಲೋತ್ಪತ್ತಿಯಾಗುವಂತೆ ಮಾಡುವದರಿಂದಾಗುವ ಪರಿಣಾಮ ಮತ್ತು ಕಟ್ಟೋಗದಿಂದಾಗುವ ಪರಿಣಾಮ. (ಇಲ್ಲಿ ಹುಳಗಳಿಂದಲೂ, ಗಾಳಿಯಿಂದಲೂ ಆಗುವ ಫಲೋತ್ಪತ್ತಿಯ ಕಾರ್ಯದ ಬಗ್ಗೆ ಮಾಹಿತಿ ಕೊಡಲ್ಪಡುವದು).

೪. ಹಣ್ಣಿನ ಅಧ್ಯಯನ :—ಅದರ ಭಾಗಗಳು ಮತ್ತು ಅವುಗಳ ಕಾರ್ಯಗಳು. (ಇಲ್ಲಿ ಸಸಿಯ ಪೂರ್ಣ ಜೀವನದ ಚಕ್ರವನ್ನು ತಿಳಿದುಕೊಂಡಿದ್ದೇವೆಂಬುವನ್ನು ಗೊತ್ತು ಮಾಡಿಕೊಡುವದು ಮತ್ತು ಸಸಿಗಳ ಸಂಖ್ಯೆ ಯಾವ ಪ್ರಮಾಣದಿಂದ ಬೆಳೆಯುತ್ತದೆಂಬುದನ್ನು ತಿಳಿಸುವದು)

೭ನೆಯ ಇಯತ್ತ—೭ನೆಯ ವಿಷಯ—ಸೃಷ್ಟಿಯ ಅಧ್ಯಯನ ಮತ್ತು ಪ್ರತ್ಯಕ್ಷ ಕೆಲಸ.

(ಅ) ಹಿಂದಿನ ವರ್ಗದಲ್ಲಿ ಹೇಳಿದ ಅವೇ ೫ ವಿಷಯಗಳನ್ನು ತೆಗೆದುಕೊಂಡು (ಸೃಷ್ಟಿಯ ಅಧ್ಯಯನವನ್ನು ಮಾಡುತ್ತಿರುವೆವೆಂಬ ಭಾವನೆಯಿಂದಲೇ) ಆಹಾರವನ್ನು ಕೊಡುವಂಥ ಉದ್ಭಿಜಗಳಿಂದು ಅಧ್ಯಯನ ಮಾಡುವದು. ಹಿಂದಿನ ವರ್ಗದಲ್ಲಿ ಮಾಡಿದ ಕೆಲಸವನ್ನು ಇಲ್ಲಿ ತುಸುಮಟ್ಟಿಗೆ ಉಜಳನಿ ಮಾಡಿ ಈ ವರ್ಷದಲ್ಲಿ ಆ ಆ ಪೈರಿಗೆ ಯೋಗ್ಯವಾದ ಮತ್ತು ಅಯೋಗ್ಯವಾದ ಭೂಮಿ ಯಾವದೆಂಬದನ್ನು ಕಾರಣ ಮತ್ತು (ಪ್ರತ್ಯಕ್ಷ) ಉದಾಹರಣೆಗಳಿಂದ ತಿಳಿದುಕೊಳ್ಳುವದು.

ಬಿತ್ತುವ ಸುಗ್ಗಿ ಮತ್ತು ಪದ್ಧತಿ ಮತ್ತು ಅದಕ್ಕೆ ಕಾರಣಗಳು, ಇದನ್ನು ಬದಲಾಯಿಸುವದರಿಂದ ಆಗುವ ಪರಿಣಾಮಗಳು.

ಈ ಬೆಳೆಗಳ ಸಂಬಂಧಿ ಮುಖ್ಯ ಒಕ್ಕಲತನದ ಕೆಲಸಗಳ ಸರ್ವಸಾಧಾರಣ ಅಧ್ಯಯನ.

ಈ ಬೆಳೆಗಳಲ್ಲಿ ಸಾಮಾನ್ಯವಾಗಿ ಹುಟ್ಟುವ ಕಸಗಳು ಮತ್ತು ಅವುಗಳ ಸ್ವಭಾವ ಮತ್ತು ಅವುಗಳನ್ನು ಕಿತ್ತು ಹಾಕುವ ಉಪಾಯ. ಈ ಕಸಗಳಿಂದ ಬೆಳೆಯ ಮೇಲೆ ಆಗುವ ಪರಿಣಾಮ.

ಈ ಬೆಳೆಗಳಿಗೆ ವಾಡಿಕೆಯಾಗಿ ತಟ್ಟುವ ರೋಗಗಳು ಮತ್ತು ಹುಳಗಳು ಮತ್ತು ಅವುಗಳ ಬಗ್ಗೆ ಉಪಾಯಗಳು. (ಸಾಧ್ಯವಾದಲ್ಲಿ ಪ್ರತ್ಯಕ್ಷ ಪ್ರಯೋಗಗಳು).

ಗೊಬ್ಬರಗಳಿಂದಾಗುವ ಪರಿಣಾಮ. ಸಾಮಾನ್ಯವಾಗಿ ಗಿಡಗಳ ಆಹಾರದ ಬಗ್ಗೆ ಮಾಹಿತಿ.

ಪ್ರತಿಯೊಂದು ಬೆಳೆಯು ಮನುಷ್ಯನಿಗೆ ಯಾಕೆ ಲಾಭದಾಯಕವಾದೆಯೆಂಬುದಕ್ಕೆ ಕಾರಣಗಳು ಮತ್ತು ಅದು ಯಾವ ವಿಧಾನದಲ್ಲಿ ಸುಗ್ಗೀ ವಿಪುಲ ಮಾಡಲ್ಪಡುವದು. ಮತ್ತು ಪೇಟೆಗೆ ಒಯ್ಯಲ್ಪಡುವದು

೧೯೨೭ನೆಯ ಇಸ್ವಿಯಲ್ಲಿ ಹೆಣ್ಣು ಮಕ್ಕಳ ವ್ಹ. ಫಾಯನಲ್ ಪರೀಕ್ಷೆಯ ವಿಷಯದಲ್ಲಿ ಪರೀಕ್ಷಕರ ಅಭಿಪ್ರಾಯಗಳು.

ಕನ್ನಡ.

೧. ಶುದ್ಧ ಬರಹ ಮತ್ತು ನಿಬಂಧ—ಈ ವಿಷಯದಲ್ಲಿ ಉಮೇದವಾರರು ಚನ್ನಾಗಿ ಬರೆದಿದ್ದರು. ಒಟ್ಟು ಸಂಖ್ಯೆಯ ಒಂದು ಮೂರಾಂಶಕ್ಕಿಂತ ಕಡಿಮೆ ಉಮೇದವಾರರು ನಪಾಸು ಆದರು.

೨. ಗಣಿತ ಮತ್ತು ಜಮಾಖರ್ಚು—ಸಾಧಾರಣ ನೆಟ್ಟಗೆ. ದೃಢಭಾಜಕ, ದಶಾಂಶ ಅವೃಣಾರ್ಥಂಕ ಇವುಗಳನ್ನು ಬಹಳ ಉಮೇದವಾರರು ಬಿಡಿಸಿದ್ದಿಲ್ಲ. ಆದರೆ ದೇಶೀ ಜಮಾಖರ್ಚಿನಲ್ಲಿ ಚನ್ನಾಗಿ ಮಾಡಿದ್ದರು.

೩. ಭೂವರ್ಣನೆ—ಬಹಳ ಕಡೆ ಉತ್ತರಗಳು ಸ್ಪಷ್ಟವಾಗಿದ್ದಿಲ್ಲ ಮತ್ತು ಕೇಳಿದ್ದಕ್ಕೆ ಸರಿಯಾಗಿ ಉತ್ತರವಿದ್ದಿಲ್ಲ. ನಕಾಶ ತೆಗೆಯುವ ವಿಷಯಕ್ಕೆ ಶಾಲೆಗಳಲ್ಲಿ ಸರಿಯಾಗಿ ಲಕ್ಷ್ಯ ಪೂರೈಸಲ್ಪಟ್ಟಿಲ್ಲವೆಂದು ಕಂಡು ಬಂತು.

೪. ಡ್ರಾಯಿಂಗ—ಸಾಮಾನ್ಯವಾಗಿ ಈ ವಿಷಯವು ನೆಟ್ಟಗಿತ್ತು. ಧಾರವಾಡ ಮತ್ತು ಗದಗ ಸೆಂಟರಿನ ಉಮೇದವಾರರು ಬೆಳಗಾವ ಮತ್ತು ವಿಜಾಪೂರ ಸೆಂಟರಿನವರಿಗಿಂತ ಚನ್ನಾಗಿ ಮಾಡಿದ್ದರು

೫. ಇತಿಹಾಸ—ಉಮೇದವಾರರು ಇತಿಹಾಸದಲ್ಲಿ ಸಾಕಷ್ಟು ಮಾಹಿತಿಯನ್ನು ವ್ಯಕ್ತಪಡಿಸಿರುವರು. ಆದರೆ ಬಹಳ ಉಮೇದವಾರರು ಪ್ರಶ್ನೆಗೆ ಸರಿಯಾದಷ್ಟು ಉತ್ತರ ಕೊಟ್ಟಿದ್ದಿಲ್ಲ.

ಮರಾಠಿ.

ಭಾಷಾ ವಿಷಯ—ವ್ಯಾಕರಣವು ಸಾಮಾನ್ಯವಾಗಿ ನೆಟ್ಟಗಿದ್ದಿಲ್ಲ. ಅಶುದ್ಧ ಬರಹ ಬಹಳ ಪೇಪರಿನಲ್ಲಿ ಕಂಡು ಬಂತು. ಹುಡುಗಿಯರು ಕೆಲವು ಪ್ರಶ್ನೆಗಳನ್ನು ಸರಿಯಾಗಿ ತಿಳಿದುಕೊಂಡಿದ್ದಿಲ್ಲ. ಮತ್ತು ಸರಿಯಾದ ಉತ್ತರ ಕೊಟ್ಟಿದ್ದಿಲ್ಲ.

೨ ನಿಬಂಧ—ಈ ವಿಷಯವು ಸಾಮಾನ್ಯವಾಗಿ ನೆಟ್ಟಗೆ ಕಂಡು ಬಂದರೂ ವಿಷಯಗ್ರಹಣ ಮತ್ತು ವಿಷಯಜ್ಞಾನ ಕಡಿಮೆಯೆಂದು ಕಂಡು ಬಂತು ಬರಹ ಸಮಾಧಾನಕರವಿದ್ದಿಲ್ಲ.

೩. ಗಣಿತ ಮತ್ತು ಚಮಾಬಿರ್ಡು—ಬೆಳಗಾವಿಯ ಸೆಂಟರಿನಲ್ಲಿ ಕೆಲವು ಉಮೇದವಾರರು ನೆಟ್ಟಗೆ ಇದ್ದರು. ಆದರೆ ಉಳಿದ ಸೆಂಟರಿನ ಉಮೇದವಾರರು ಸರಿಯೊದ ತಯಾರಿಯನ್ನು ತೋರಿಸಲಿಲ್ಲ.

೪. ಆರೋಗ್ಯವಿಜ್ಞಾನ—ಎಲ್ಲ ಸೆಂಟರುಗಳಲ್ಲಿ ಈ ವಿಷಯವನ್ನು ಚನ್ನಾಗಿ ಮತ್ತು ಶಹಣೇತನದಿಂದ ಕಲಿಸುವದು ಅವಶ್ಯವದೆ.

೫. ಇತಿಹಾಸ—ಬಹಳೇ ಉಮೇದವಾರರು ಚನ್ನಾಗಿ ಮಾಡಿದ್ದರು. ಆದರೆ ಕಾರವಾರದ ಉಮೇದವಾರರು ಇಯತ್ತಿಗೆ ನಿಲುಕಲಿಲ್ಲ. ಕೆಲವು ಸೆಂಟರಿನಲ್ಲಿ ವಿದ್ಯಾರ್ಥಿನಿಯರು ಬಾಯಪಾಠ ಮಾಡಿದಂತೆ ಕಂಡು ಬಂತು.

೬. ಭೂವರ್ಣನೆ—ಕೆಲವರನ್ನು ಬಿಟ್ಟು ಎಲ್ಲ ಉಮೇದವಾರರು ಚನ್ನಾಗಿ ಬರೆದಿದ್ದರು.

ಉರ್ದು.

ಬಹಳ ಉಮೇದವಾರರು ಸರಿಯಾಗಿ ಸಲ್ಪಟ್ಟಂತೆ ಕಂಡು ಬರಲಿಲ್ಲ. ಭಾಷಾದ ಜ್ಞಾನ ತೀರ ಕಡಿಮೆ ಇದ್ದಂತೆ ಕಂಡು ಬಂತು. ಮತ್ತು ಬರಹವು ನೆಟ್ಟಗಿದ್ದಿಲ್ಲ. ಈ ತಪ್ಪು ಶಿಕ್ಷಕರ ಮೇಲೆ ಅದೆ. ಅವರಲ್ಲಿ ಅನೇಕರು ಕ್ವಾಲೀಫಾಯಿಡ ಇಲ್ಲ. ಮತ್ತು ಮೇಲಿನ ಇಯತ್ತಿಗಳನ್ನು ಕಲಿಸಲಿಕ್ಕೆ ಯೋಗ್ಯರಲ್ಲ. ಯೋಗ್ಯರಾದ ಶಿಕ್ಷಿಕೆಯರನ್ನು ಆರಿಸಿ ಚನ್ನಾಗಿ ಟ್ರೇನಿಂಗ ಕೊಡಿಸದ ಹೊರತು ಪರೀಕ್ಷೆಯಲ್ಲಿ ಮುಸಲ್ಮಾನ ಹುಡುಗಿಯರು ಚಲೋ ಪರಿಣಾಮವನ್ನು ತೋರಿಸುವದು ಶಕ್ಯವಿಲ್ಲ.

ಧಾ. ಜಿ ಸ್ಕೂ. ಬೋರ್ಡಿಗೆ ಒಳಪಟ್ಟ ಯಾವತ್ತು ಹೆಣ್ಣುಮಕ್ಕಳ ಸಾಲೆಗಳ ಅಧ್ಯಾಪಕರಿಗೆ ತಿಳಿಯಪಡಿಸುವದೇನಂದರೆ—ವ್ಹ. ಫಾ. ಪರೀಕ್ಷೆಗೆ ಹೆಣ್ಣು ಮಕ್ಕಳು ಲನೆಯ ವಿಷಯದಲ್ಲಿ (೧) ಸೃಷ್ಟಿಪಾಠ (೨) ಚಿತ್ರಕಲೆ (೩) ಗಾಯನ ಈ ಮೂರರಲ್ಲಿ ಯಾವದೊಂದನ್ನು ಸ್ವೇಚ್ಛಾ ವಿಷಯವಾಗಿ ತೆಗೆದುಕೊಳ್ಳಬೇಕಾಗುವದು. ಆದರೆ ಈ ವಿಷಯಗಳನ್ನು ಕಲಿಸಲಿಕ್ಕೆ ಯೋಗ್ಯರಾದ ಟ್ರೇಂಡ ಶಿಕ್ಷಕಿಯರು ದೊರೆಯುವ ವರೆಗೆ ಈಗಿದ್ದ ಶಿಕ್ಷಕರಿಗೆ ಶಕ್ಯವಿದ್ದ ವಿಷಯಗಳನ್ನು ಕಲಿಸತಕ್ಕದ್ದು. ಈ ಪ್ರಕಾರ ಡಾಯರೆಕ್ಟರ ಸಾಹೇಬರ ಅಪ್ಪಣೆಯದೆ.

S. K. Hosamani,
ಜೇಅರಮನಿ,
ಡಿಸ್ಟ್ರಿಕ್ಟ ಸ್ಕೂಲ ಬೋರ್ಡ,
ಧಾರವಾಡ.

ಸರಕ್ಯೂಲರ ನಂಬರ ೩.

ಧಾರವಾಡ ಜಿಲ್ಲಾ ಸ್ಕೂಲ ಬೋರ್ಡ ಜೇಅರಮನ್ನರ ಕಡೆಯಿಂದ—

ಜಿಲ್ಲೆಯೊಳಗಿನ ಯಾವತ್ತೂ ಲೋಕಲ್ ಬೋರ್ಡ ವ ನಾನ್ ಲೋಕಲ್ ಅಥಾರಿಟಿ ಮುನಸೀಪಾಲಿಟಿ ಶಾಲೆಗಳ ಮಾಸ್ತರ ವ ಏಜೆಂಟ್ಸ ಜನರಿಗೆ ಈ ಸರಕ್ಯೂಲರ ಮೂಲಕ ತಿಳಿಯಪಡಿಸುವದೇನಂದರೆ—ಈ ವರುಷ ಬಾದಶಹರು ಹುಟ್ಟಿದ ದಿವಸದ ಬಗ್ಗೆ ತಾರೀಖು ೩—೬—೧೯೧೯ನೆಯ ಸೋಮವಾರ ದಿವಸ ಯಾವತ್ತೂ ಶಾಲೆಗಳಿಗೆ ಸೂಟಿ ಕೊಡತಕ್ಕದ್ದು.

ತಾರೀಖು ೨೫—೪—೧೯೧೯.

S. K. Hosamani,
ಜೇಅರಮನಿ,
ಡಿಸ್ಟ್ರಿಕ್ಟ ಸ್ಕೂಲ ಬೋರ್ಡ,
ಧಾರವಾಡ.

॥ ವಿದ್ಯಾ ಗುರೂಣಾಂ ಗುರುಃ ॥

ಧಾರವಾಡ ಜಿಲ್ಲಾ
ಸ್ಕೂಲ ಬೋರ್ಡ ಪತ್ರಿಕೆ.

ಸಂಪುಟ ೧. | ಮಾರ್ಚ ೧೯೨೯. | ಸಂಚಿಕೆ ೧೨.

ಬೃಹತ್ ಕರ್ನಾಟಕ.

ಪಲವಂ ನಾಲಗೆಯುಳ್ಳವಂ ಬಗೆವಡೆಂದುಂ ಬಂಣಿಸಲ್ಕಾರನಾ ।
ನೆಲನಂ ಪುತ್ತಿನ ಮಾನಿಸರ್ಪೊಗಳಲೇನಂ ಬಲ್ಲರೆಂಬೊಂದುಬ ।
ಲ್ಲುಲಿಯುಂ ನೆಟ್ಟನೆ ತಾಳ್ದಿ ಕನ್ನಡ ಮೆನಿಪ್ಪಾನಾಡು ಜಲ್ವಾಯ್ತು ಮೆ ।
ಲ್ಲೆಲರಿಂ ಪೂತಕೊಳಂಗಳಿಂ ಕೆರೆಗಳಿಂ ಕಾಲೂರ್ಗಳಿಂ ಕೈಯ್ಗಳಿಂ ॥

ಕಬ್ಬಿಗರ ಕಾವ.

ಪೌರಾಣಿಕ ಕಾಲ.

ಪುರಾತನಕಾಲದಲ್ಲಿ ವಿಂಧ್ಯಕುಲಪರ್ವತವು ಗಗಣಾಂಗಣದವರೆಗೆ ಬೆಳೆದು ಸೂರ್ಯನಾರಾಯಣನನ್ನು ಅಡ್ಡಗಟ್ಟಿತ್ತೆಂತಲೂ, ಅಗಸ್ತ್ಯ ಮಹಾಮುನಿಯು ಅದನ್ನು ಮುಲಗಿಸಿ ದಾಟಿ ತಾನು ಮರಳಿ ಬರುವವರೆಗೆ ಹೀಗೆಯೇ ಒರಗಿಕೊಂಡಿರಿಂದು ಆಶೀರ್ವದಿಸಿದನೆಂತಲೂ ಪುರಾಣಗಳಲ್ಲಿ ಉಲ್ಲೇಖವಿದೆ. ಅಂದರೆ ಆರ್ಯರು ಆರ್ಯಾವರ್ತ (ಉತ್ತರ ಹಿಂದುಸ್ತಾನ) ವನ್ನೆಲ್ಲ ಆಕ್ರಮಿಸಿದಾಗ್ಯೂ ಉನ್ನತೋನ್ನತವಾದ ಶಿಖರಗಳಿಂದಲೂ, ನಿಬಿಡವಾದ ಕಾನನಗಳಿಂದಲೂ, ಅಗಾಧವಾದ ಕಂದರಗಳಿಂದಲೂ, ಭಯಂಕರವಾದ ಗಂಭ್ಹರಗಳಿಂದಲೂ, ಉಗ್ರವಾದ ಮೃಗಸಂಕುಲದಿಂದಲೂ ತುಂಬಿಕೊಂಡು ಪಶ್ಚಿಮ ಘಡದಿಂದ ಪೂರ್ವ ಘಡದವರೆಗೆ ಹಬ್ಬಿದ ವಿಂಧ್ಯವನ್ನು ದಾಟಲಾಗದೆ ಅದರಾಚೆಗಿರುವ ಭೂಭಾಗಕ್ಕೆ

ಸೂರ್ಯಕಿರಣಗಳೇ ನಿಲುಕುವದಿಲ್ಲವೆಂದೂ ಅಗಸ್ತ್ಯಮುನಿಯು ಮೊದಲು ದಾಟಿ ದ್ದರಿಂದ ಅದನ್ನು ಬಗ್ಗಿಸಿದನೆಂದೂ ಮುಂದೆ ತಾವು ಒಂದೇ ಸವನೆ ದಕ್ಷಿಣಪಥ ವನ್ನು ಅಭಿಗಮಿಸಹತ್ತಿದ್ದರಿಂದ ಪುನಃ ಮೇಲಕ್ಕೇಳದೆಂದೂ ಬಗೆದರು. ಅದ್ದರಿಂದ ಅದಕ್ಕೂ ಪೂರ್ವದಲ್ಲಿ ತೆಂಕಣದ ಪರಿಚಯವು ಅವರಿಗಿದ್ದಿಲ್ಲ. ಪರಶುರಾಮನು ಸಮುದ್ರವನ್ನು ಹಿನ್ನೆರಡು ಗಾವುದ ಸರಿಸಿದನಂತೆ. ಅಂದರೆ ಆ ಕಾಲದಲ್ಲಿ ಆರ್ಯರು ಸಹ್ಯಾದ್ರಿಯನ್ನು ದಾಟಿ ಈಗಿರುವ ಕೊಂಕಣ ಪಟ್ಟಿಯಲ್ಲಿ ಸಹ ತಳವೂರಿದರು. ರಾಮನ ಕಾಲದಲ್ಲಿ ಕಿಷ್ಕಿಂಧದಂಥ ನಗರಗಳಿದ್ದವೆಂದು ತಿಳಿಯುತ್ತದೆ. ಕಾಡು ಸ್ಥಿತಿಯಲ್ಲಿದ್ದ ಮೂಲನಿವಾಸಿಗಳೂ ಸಂಸ್ಕಾರಿಸಿದ ದ್ರವಿಡರೂ ಈ ದೇಶದಲ್ಲಿ ನೆಲೆ ಗೊಂಡಿದ್ದರೆಂದು ಊಹಿಸಬಹುದು. ಆಗಿನ ಆರ್ಯರಲ್ಲಿ ಕಾವ್ಯಸ್ಫೂರ್ತಿಯು ತುಂಬಿ ತುಳುಕುತ್ತಿದ್ದರಿಂದ ಐತಿಹಾಸಿಕ ದೃಷ್ಟಿಯಿಂದ ಗ್ರಂಥಗಳನ್ನು ರಚಿಸ ಲಿಲ್ಲ. ಆದಕಾರಣ ಶಾಲಿವಾಹನ ಶಕವಿಂದೀಚೆಗೆ ಹೇಳರವಾಗಿ ದೊರಕುವ ಶಿಲಾ ಲೇಖಗಳಿಂದಲೂ ತಾಮ್ರಪಟಗಳಿಂದಲೂ ನಾಣ್ಯಗಳಿಂದಲೂ ಕಾವ್ಯಗ್ರಂಥಗ ಳಿಂದಲೂ ಸಾಧಾರಣವಾದ ಮತ್ತು ತಕ್ಕಮಟ್ಟಿಗೆ ಸಮಗ್ರವಾದ ಇತಿಹಾಸವು ದೊರಕುತ್ತದೆ. ಆದರೆ ರಾಮಾಯಣ ಮಹಾಭಾರತದಲ್ಲಿ ಕರ್ನಾಟಕವು ಭರತ ಖಂಡದಲ್ಲಿ ಪ್ರಸಿದ್ಧವಾದ ಪ್ರದೇಶವಾಗಿತ್ತು. ಆಗ ಇದು ನವಗೆ ಕರ್ಮ ಭೂಮಿ, ಭೋಗ ಭೂಮಿ ಪುಣ್ಯಭೂಮಿಯೆಂದು ಹೆಸರಾಗಿತ್ತು. ಇಲ್ಲಿ ಹನುಮಂತ ವಾಲಿ ಸುಗ್ರೀವ ಮೊದಲಾದ ಮಂಡಲ ನಿವಾಸಿಗಳ ನಾಯಕರ ಕರ್ಮಭೂಮಿಯಾಗಿತ್ತು. ಕಾರ್ತವೀರ್ಯ, ಮೊದಲಾದ ದ್ರವಿಡ ಕುಲದ ನಾಯಕರ ಭೋಗ ಭೂಮಿ ಯಾ ಗಿತ್ತು. ವಿಭೀಷಣ ಮೊದಲಾದ ಶಿವಭಕ್ತರ ಪುಣ್ಯಭೂಮಿಯಾಗಿತ್ತು. ಇದು ಪುರಾಣ ಪ್ರಸಿದ್ಧವದೆ. ಕರ್ನಾಟಕದಲ್ಲಿಯೇ ಚಂದ್ರಹಾಸ ಮೊದಲಾದ ಪ್ರಸಿದ್ಧ ಅರಸರು ಆಳಿದರು ಈಗಿನ ಹಾನಗಲ್ಲು ಆಗ ವಿರಾಟ ನಗರವು, ಈಗಿನ ಬನವಾ ಸಿಯೇ ಆಗ ಪಾಂಡವರ ವನವಾಸ ಸ್ಥಾನವು, ಹಾವೇರಿಯೇ (ಹಾವು ಏರಿದ್ದು) ಪರಿಕ್ಷೀತನು ಹಾವಿಗಂಜಿ ಇದ್ದ ಸ್ಥಳವು. ಹರಿಹರವೇ ಯಜ್ಞ ಭೂಮಿಯು. ಇಷ್ಟರಿಂದಲೇ ಕರ್ನಾಟಕವು ಭಾರತದ ಕುಲದಲ್ಲಿ ಎಂಥ ಪ್ರಸಿದ್ಧ ಸ್ಥಳವೆಂಬುದು ಗೊತಾಗುವದು

ಐತಿಹಾಸಿಕ ಕಾಲ.

ವಿಂದ್ಯಾದ್ರಿಯ ದಕ್ಷಿಣಕ್ಕಿರುವ ನಾಡಿಗೆಲ್ಲ ಆರ್ಯರು ದಕ್ಷಿಣಪಥವೆಂದು ಕರೆ ಯುತ್ತಿದ್ದರು. ಇಲ್ಲಿ ದ್ರವಿಡ ಆಂಧ್ರ ಕರ್ನಾಟಕಾದಿ ದೇಶಗಳೂ ಪಂಚದ್ರಾವಿಡ ಭಾಷೆಗಳೂ ಅನೇಕ ಶತಮಾನಗಳಿಂದ ನಡಿಯುತ್ತಬಂದಿವೆಯೆಂದು ಪ್ರತೀತಿ ಯಿದ್ದಾಗ್ಯೂ ಬೇರೆ ಬೇರೆ ಕಾಲಗಳಲ್ಲಿ ಅಯಾ ದೇಶಗಳ ಮರ್ಯಾದೆಯನ್ನು ಕಂಡುಹಿಡಿಯುವದು ದುಸ್ತರವಾಗಿದೆ. ಒನೇ ಶತಮಾನದಲ್ಲಿ ಹ್ಯೂವೆನ್‌ತ್ಸಾಂ ಗ್‌ನೆಂಬ ಚೀನದ ಒಬ್ಬ ಪ್ರಸಿದ್ಧಪ್ರವಾಸಿಯು ಈ ದೇಶವನ್ನು ಸಂಚರಿಸುತ್ತಿ

ದ್ದಾಗ್ಗೆ ಅಂದರೆ ಚಲುಕ್ಯರ ಪುಲಿಕೇಶಿಮಹಾರಾಜನ ಕಾಲದಲ್ಲಿ ಈ ನಾಡಿಗೆ ಮಹಾರಾಷ್ಟ್ರವೆಂದು ಅಭಿದಾನವಿತ್ತು. ಸಾಂಪ್ರತದಲ್ಲಿ ಮಹಾರಾಷ್ಟ್ರವೆಂದು ಕರೆಯುವಂತೆ ಆ ಕಾಲಕ್ಕೂ ಕರಿಯುತ್ತಿದ್ದರೆಂಬೊಂದು ಭ್ರಾಂತಿಯುಂಟಾಗಬಹುದು. ವಿಪ್ರನ್ನಮಣಿಗಳಾದ ಶ್ರೀ. ಡಾಕ್ಟರ್ ಭಂಡಾರಕರರು–ಸರ್ ಯಿಲಿಯಿ.ಟ್, ಡಾಕ್ಟರ್ ಫ್ಲೀಟ್ ಇವರುಗಳ ಗ್ರಂಥಗಳು ಕಣ್ಣೆದುರಿಗಿದ್ದಾಗ್ಯೂ–ಅರಿತೂ ಅರಿಯದವರಂತೆ ಈ ಭ್ರಾಂತಿಯಲ್ಲಿಯೇ ಮುಗ್ಗರಿಸಿದ್ದಾರೆ. ಈ ನಾಡೆಲ್ಲ ಮರಾಟ ಜನರ ಮಾತೃಭೂಮಿಯಾಗಿದ್ದಲ್ಲಿ ಮರಾಟೀ ಭಾಷೆಯು ತವರುಮನೆಯಾಗಿದ್ದಲ್ಲಿ ಅಗಿನ ಪಂಚದ್ರಾವಿಡರಿಗೆ ಅನುವನ್ನು ಕಲ್ಪಿಸಿಕೊಡುವದು ನಮ್ಮಂಥವರಿಂದಾಗದೆ ತ್ರಿಶಂಖುಮಹಾರಾಜನ ಕೊರಳಿಗೆ ಬೀಳುತ್ತಿತ್ತು ಆದ್ದರಿಂದ ಈ ತೆಂಕಣನಾಡಿಗೆ ಮಹಾರಾಷ್ಟ್ರವೆಂಬುದೇ ನಿಜವಾದ ಹೆಸರೋ ಇಲ್ಲವೇ ಬೇರೆ ವಿಶಿಷ್ಟ ಹೆಸರುಗಳೇನಾದರೂ ಉದ್ದವೋ ಎಂಬದನ್ನು ವಿಚಾರಿಸುವಾ:—

ಕ್ರೈಸ್ತೇಶಕದ ಪೂರ್ವದಲ್ಲಿದ್ದ ಪ್ರಸಿದ್ಧ ಅಶೋಕ ಸಾರ್ವಭೌಮನು ಇಲ್ಲಿ ಪಚಲಿತವಿದ್ದ ದ್ರವಿಡಭಾಷೆಗಳಲ್ಲಿಯೇ ರಾಜಶಾಸನಗಳನ್ನು ಪ್ರಕಟಿಸಿದ್ದನು. ಆ ಕಾಲದಲ್ಲಿ ಭಾಷೆಗಳು ಎಷ್ಟರಮಟ್ಟಿಗೆ ತಿದ್ದುಪಡಿಯನ್ನು ಹೊಂದಿದ್ದವೆಂಬುವದು ನಿರ್ಣಯವಾಗುವದಿಲ್ಲ. ಅಂದಿನಿಂದೀಚೆಗೆ ಈ ಭಾಷೆಗಳಿಗೆ ಲಿಪಿಯುಂಟಾಗಿ ನೂರಿನ್ನೂರು ವರ್ಷಗಳಲ್ಲಿ ಮೇಲ್ತರದ ವಾಙ್ಮಯವನ್ನು ಒಳಕೊಂಡವು. ಕ್ರೈಸ್ತೇಶಕದ ಎರಡನೇ ಶತಮಾನದಲ್ಲಿದ್ದ ಟಾಲೆಮಿಯೆಂಬ ಇಜಿಪ್ತದೇಶದ ಶಾಸ್ತ್ರಜ್ಞನು ಈ ಭಾಗದಲ್ಲಿ ವ್ಯಾಪಾರಕ್ಕೆ ಪ್ರಸಿದ್ಧವಾದ ಕೆಲವು ಊರುಗಳ ಹೆಸರಗಳನ್ನು ತನ್ನ ಗ್ರಂಥಗಳಲ್ಲಿ ಕೊಟ್ಟಿದ್ದಾನೆ. ಅವುಗಳಲ್ಲಿ ಬಾದಾಮಿ, ಮುದಗಲ್ಲ. ಪಟ್ಟದಕಲ್ಲು ಮುಂತಾದ ಹೆಸರುಗಳು ಇರುತ್ತವೆ. ಈ ದೇಶದ ಕೂಡ ಅರಬರು, ಇಜಿಪ್ತದವರು, ಗ್ರೀಕರು, ರೋಮಾಯರು ಮೊದಲಾದ ಪಡುವಣದ ನಾಡಿನವರು ವ್ಯವಹಾರವನ್ನು ಮಾಡುತ್ತಿದ್ದರು. ಈದಕ್ಕೆ ದೃಷ್ಟಾಂತವೇನಂದರೆ, ಒಂದಾನೊಂದು ಗ್ರೀಕನಾಟಕದಲ್ಲಿ ಕನ್ನಡ ವಾಕ್ಯಗಳು ದೊರಕುತ್ತವೆ. ಇದಲ್ಲದೆ ರೋಮದ ನಾಣ್ಯಗಳಾದರೂ ವಿಪುಲವಾಗಿ ಸಿಕ್ಕಿವೆ. ಚಲುಕ್ಯರ ಕಾಲದಲ್ಲಿ ಪರದೇಶದ ರಾಯಭಾರಿಗಳು ಆ ರಾಜರ ಒಡ್ಡೋಲಗದಲ್ಲಿ ಇರುತ್ತಿದ್ದರು. ಇವರ ರಾಯಭಾರಿಗಳಾದರೂ ದೂರ ಪೂರ ದೇಶಗಳಿಗೆ ಹೋಗಿದ್ದರು; ಅಜಂತದ ಗುಹೆಯೊಳಗಿನ ಒಂದು ಚಿತ್ರದಲ್ಲಿ ಅರಸನು ಇಜಿಪ್ತದ ರಾಯಭಾರಿಗಳ ಮನ್ನಣೆಯನ್ನು ಸ್ವೀಕರಿಸುವದು ತೋರಿಯಲ್ಪಟ್ಟಿದೆ. ಆ ಅರಸರ ಬಳಿಯಲ್ಲಿ ವ್ಯಾಪಾರದ ಹಡಗುಪಡೆಗಳಾದರೂ ಇದ್ದವು. ಕದಂಬ ಅರಸರ ಧ್ವಜಪತಾಕೆಯ ಹನುಮುಂತನ ಚಿನ್ಹವು ಆ ಅರಸರ ಓಲಪರ್ಯಟನದಲ್ಲಿಯ ಅಸಕ್ತಿಯನ್ನೇ ಸೂಚಿಸುವದು.

ಕಾವೇರಿಯಿಂದ ಗೋದಾವರಿಯವರೆಗೆ ಹಬ್ಬಿದ ಪ್ರದೇಶದಲ್ಲಿ ಕ್ರೈಸ್ತೇಶಕದ ೨ನೇಯ ಶತಮಾನದಲ್ಲಿ ಆಂಧ್ರಭೃತ್ಯರು ಆಳುತ್ತಿದ್ದರು. ಈಗಿರುವ ಕೊಲ್ಹಾಪೂ

ರದಲ್ಲಿ ಅವರ ಮಹಾಮಂಡಲೇಶ್ವರರು ಆಳುತ್ತಿದ್ದರು. ಇಲ್ಲಿ ದೊರೆತ ಇವರ ಕಾಲದ ನಾಣ್ಯಗಳ ಮೇಲೆ ವಿಲಿಮಾಯಕರಸ, ಪಲವಣಾಯಿಕರಸ ಎಂಬ ಹೆಸರುಗಳಿರುವದರಿಂದ ಇವರು ಕನ್ನಡಿಗರಾಗಿರಬಹುದು. ಮುಂದೆ ಕದಂಬರು ಪ್ರಬಲರಾಗಹತ್ತಿದಹಾಗೆ ಆಂಧ್ರಭೃತ್ಯರು ಮುಗ್ಗಿ ಹೋದರು. ಕದಂಬರು ೬ನೇ ಶತಮಾನದ ಅರ್ಧದವರೆಗೆ ಆಳಿದರು. ಬನವಾಸಿಯು ಇವರ ರಾಜಧಾನಿಯಾಗಿತ್ತು. ಇವರ ಸಮಕಾಲೀನರಾದ ಪಲ್ಲವರು ದಕ್ಷಿಣಕ್ಕೆ ವಾತಾಪಿಯಲ್ಲಿ (ಬಾದಾಮಿ) ಆಳುತ್ತಿದ್ದರು. ೬ನೇ ಶತಮಾನದಲ್ಲಿ ಚಲುಕ್ಯರು ಗಂಗರ ಸಹಾಯದಿಂದ ಇವರನ್ನು ಸೋಲಿಸಿ ವಾತಾಪಿಯನ್ನು ಹಿಡಕೊಂಡರು. ಗಂಗರು ತಳಕಾಡಿನಲ್ಲಿ (ಶ್ರೀರಂಗಪಟ್ಟಣದ ಹತ್ತಿರ) ಆಳಿದರು. ಪಲ್ಲವರು ತಮಿಳನಾಡನ್ನು ಸೇರಿ ಮೊದಲಾವೆಂಗಿಯಲ್ಲಿ ಆಮೇಲೆ ಕಾಂಚಿಯಲ್ಲಿ ಆಳಿದರು. ೭ನೇ ಶತಮಾನದಲ್ಲಿ ಇಮ್ಮಡಿ ಸತ್ಯಾಶ್ರಯ ಪುಲಕೇಶಿಯು ತನ್ನ (ಚಾಲುಕ್ಯರ) ರಾಜ್ಯವನ್ನು ನರ್ಮದೆಯವರೆಗೆ ಬೆಳಿಸಿದನ. ಉತ್ತರದಲ್ಲಿ ಪ್ರಸಿದ್ಧ ಸಾರ್ವಭೌಮನಾದ ಶ್ರೀಹರ್ಷನನ್ನು ಕೂಡಾ ಸೋಲಿಸಿಬಿಟ್ಟನು. ದಕ್ಷಿಣಹಿಂದುಸ್ತಾನವಂತೂ ಪಾದಾಕ್ರಾಂತವಾಗಿತ್ತು. ಆ ಕಾಲದಲ್ಲಿ ಇವನ ರಾಜ್ಯಕ್ಕೆ ಮಾಹಾರಾಷ್ಟ್ರವೆಂದು ಕರೆಯುತ್ತಿದ್ದರೆಂದು ಹಿಂದೆ ಹೇಳಿದೆ. ಆದರೆ ಇವನಿಗೆ ಕರ್ನಾಟಕದ ಅರಸನೆಂದೂ ಇವನ ಪಡೆಗೆ ಕರ್ನಾಟಕಸೈನ್ಯವೆಂದೂ ಕರೆಯುತ್ತಿದ್ದಕಾರಣ ಇವನ ರಾಜ್ಯಕ್ಕೆ ಕರ್ನಾಟಕವೆಂದೇ ತೀರಬೇಕು. ಇವನು ಕರ್ನಾಟಕವನ್ನಷ್ಟೇ ಅಲ್ಲ ನರ್ಮದೆಯಿಂದ ರಾಮೇಶ್ವರದವರೆಗೆ ಎಲ್ಲ ಪ್ರದೇಶವನ್ನು ಕೈವಶಮಾಡಿಕೊಂಡಿದ್ದನು. ಗುಜರಾಥದಲ್ಲಿ ಕೆಲವು ಭಾಗವನ್ನುಸಹ ಹಿಡುಕೊಂಡಿದ್ದನು ಆದ್ದರಿಂದ ಇವನ ರಾಜ್ಯವು ಮಾಹಾರಾಷ್ಟ್ರವೆಂದೂ ಕರೆಯಲ್ಪಡುತ್ತಿತ್ತು. ಇವನಿಗಾದರೂ ಪ್ರಮೇಶ್ವರನೆಂದು ಬಿರುದು ಇತ್ತು. ಮಾಹಾರಾಷ್ಟ್ರವೆಂಬುದು, ಕೇವಲ ಆ ರಾಜ್ಯದ ವಿಸ್ತಾರವನ್ನೇ ಸೂಚಿಸುತ್ತಿತ್ತಲ್ಲದೆ ತೆಲಂಗಣ, ಗುಜರಾಥ, ಈಗಿನ ಮಾಹಾರಾಷ್ಟ್ರಗಳಂತೆ ಹೆಸರಿಗನ್ವರ್ಥಕವಾದ ಜನರಾಗಲಿ, ನುಡಿಯಾಗಲಿ ನೆಲೆಗೊಂಡ ದೇಶವೆಂದು ಎಂದೂ ವ್ಯಕ್ತಪಡಿಸುತ್ತಿದ್ದಿಲ್ಲ ಮುಂದೆ ಚಲುಕ್ಯರು ಬಲಹೀನರಾಗಲು ರಾಷ್ಟ್ರಕೂಟರೆಂಬವರು ಚಲುಕ್ಯರ ಕರ್ನಾಟಕದ ದಂಡನ್ನು ಸೋಲಿಸಿದರು. ಈ ರಾಷ್ಟ್ರಕೂಟರು ೭೫೦ ರಿಂದ ೯೭೩ ರವರೆಗೆ ಆಳಿದರು. ಮಾನ್ಯಖೇಟವು (ಕಲ್ಯಾಣದ ಕೆಳಗೆ ಭೀಮಾನದಿಯ ದಂಡೆಯ ಮೇಲೆ ಈಗಿರುವ ಮಳಖೇಡ) ಇವರ ರಾಜಧಾನಿಯಾಗಿತ್ತು. ೯೭೩ ರಲ್ಲಿ ಚಲುಕ್ಯರು ಪ್ರಬಲರಾಗಿ ಇವರನ್ನು ಸೋಲಿಸಿ ಮಾನ್ಯಖೇಟದಲ್ಲಿಯೇ ನಿಂತರು. ೧೨ನೆಯ ಶತಮಾನದಲ್ಲಿ ಕಲಚೂರ್ಯರು ಇವರ ರಾಜ್ಯವನ್ನು ಅಪಹರಿಸಿದರು ಮತ್ತು ಕಲ್ಯಾಣದಲ್ಲಿ ನಿಂತರು. ಬಿಜ್ಜಳರಾಯನು ತೀರಿದನಂತರ ದೇವಗಿರಿ ಯಾದವರು ೧೪ನೇ ಶತಮಾನದ ಆರಂಭದವರೆಗೆ ಆಳಿದರು. ದಕ್ಷಿಣದಲ್ಲಿ ಬಲ್ಲಾಳರು (ಹೊಯ್ಸಳರು) ಪ್ರಬಲರಾಗಿ ಚೋಳ ಮಂಡಲದಲ್ಲಿ

(ಕಾರೋಮಂಡಲದಲ್ಲಿ) ಆಳುತ್ತಿದ್ದ ಚೋಳರನ್ನು ಮೈಸೂರ ಕರ್ನಾಟಕದಿಂದ ಓಡಿಸಿದರು. ಇವರ ರಾಜಧಾನಿ ದ್ವಾರಸಮುದ್ರ ಅಥವಾ ಹಳೇಬೀಡು. ಇವರಾದರೂ ೧೪ನೇ ಶತಮಾನದವರೆಗೆ ಆಳಿದರು. ಹಿಗೆ ಕಾವೇರಿಯಿಂದ ಗೋದಾವರಿಯವರೆಗೆ ವಿಸ್ತೃತವಾದ ಈ ಪ್ರದೇಶದಲ್ಲಿ ಮೊದಲು ಆಂಧ್ರಭೃತ್ಯರು, ಮುಂದೆ ಕಂದಬರು ಪಲ್ಲವರು. ಆಮೇಲೆ ಚಲುಕ್ಯರು, ಗಂಗರು. ಆಮೇಲೆ ರಾಷ್ಟ್ರ ಕೂಟರು ಚಲುಕ್ಯರು ಕಲಚೂರ್ಯರು. ಕಡೆಗೆ ದೇವಗಿರಿಯ ಯಾದವರು ದ್ವಾರಸಮುದ್ರ ಬಲ್ಲಾಳರು ೧೪ನೇ ಶತಮಾನದ ಆರಂಭದವರೆಗೆ ಆಳಿದರು.

ಈ ಅರಸುಮನೆತನಗಳು ರಾಮಾಯಣಭಾರತಗಳಲ್ಲಿ ಹೆಸರಾದ ಸೋಮ ಸೂರ್ಯ ಯದುವಂಶಗಳಿಂದ ಬಂದವುಗಳೆಂದು ಗ್ರಹಿಕೆ ಇದೆ. ಭುಜಬಲಪರಾಕ್ರಮ ದಿಂದಲೂ, ಸಾಹಸದಿಂದಲೂ, ದೈವಾನುಕೂಲತೆಯಿಂದಲೂ ರಾಜ್ಯಗಳನ್ನು ಸಂಪಾದಿಸಿದ ಹಸನ ಗಂಗೂ ಭಾಮಿನಿ ಶೈನರ ಮುಂತಾದವರು ತುರ್ಕಸ್ಥಾನದ ಅರಸು ಮನೆತನಕ್ಕಾಗಲಿ ಪರದಾರ ಮನೆತಕ್ಕಾಗಲಿ ಹೊಂದಿದವರೆಂದು ಹೇಳಿಕೊಂಡಂತೆ ಇವರಾದರೂ ಹೇಳಿಕೊಂಡಿರಬಹುದು ಒಂದುವೇಳೆ ಇವರು ಉತ್ತರಹಿಂದು ಸ್ಥಾನದಿಂದ ಬಂದ ರಜಪೂತ ನೊದಲಾದ ಕ್ಷತ್ರಿಯ ವರ್ಗಕ್ಕೆ ಸೇರಿದವರಾದಲ್ಲಿ ಇಲ್ಲಿ ಬಂದು ನಿಂತನಂತರ ಇಲ್ಲಿಯ ನಡೆನುಡಿ ಗಳನ್ನ ಸ್ವೀಕರಿಸಿ ಹಳೆ ಅರಸುಮನೆತನ ಗಳೊಡನೆ ಶರೀರಸಂಬಂಧವನ್ನು ಬೆಳೆಯಿಸಿ ಈದೇಶದ ಅಭಿಮಾನವನ್ನೇ ವಹಿಸಿದರು. ಇನ್ನು ಈ ಅರಸರ ಕಾಲದಲ್ಲಿ ನಡಿಯುತ್ತಿದ್ದ ಭಾಷೆಯು ಮರಾಠಿಯೋ ಕನ್ನಡವೋ, ಅಥವಾ ಬೇರೊಂದಾವದಾದರೂ ಇತ್ತೋ ಎಂಬದನ್ನು ಪರೀಕ್ಷಿಸುವಾ.

ಅಪ್ಪಾರ್ಯಕ, ಬಡ್ಡಿಗ, ಕೊಟ್ಟಿಗ, ಅಯ್ಯನ, ನೂರ್ಮಡಿ, ತೈಲಪ, ಅಸ್ಸದೇವಿ ದೊಡ್ಡಿಯಪ್ಪ, ಲಕ್ಷ್ಮಿದೇವ್ವ ಮುಂತಾದ ಕನ್ನಡ ಹೆಸರುಗಳು ಈ ಅರಸು ಅರಸಿಯರಿಗೆ ಇದ್ದದ್ದು ಕಂಡುಬರುತ್ತದೆ. ಸಂಸ್ಕೃತ ಹೆಸರುಗಳೇಬಹಳ. ಮರಾಠೀ ಹೆಸರು ಒಂದಾದರೂ ಕಂಡುಬರುವದಿಲ್ಲ. ಇದೆಲ್ಲದೆ ಆ ಕಾಲದ ಶಿಲಾಲೇಖಗಳೂ, ತಾಮ್ರ ಪಟಗಳೂ ರಾಜಶಾಸನಗಳೂ ಸಂಸ್ಕೃತದಲ್ಲಿ, ಪ್ರಾಕೃತದಲ್ಲಿ ಇಲ್ಲವೆ ಹಳೆಗನ್ನಡದಲ್ಲಿ ಇರುತ್ತವೆ. ಮರಾಠಿ ಲಿಪಿಯೆಂತೂ ಕಣ್ಣಿಗೆ ಬೀಳುವದೇ ಇಲ್ಲ. ಇನ್ನು ಆ ಅರಸರ ಕಾಲಗಳಲ್ಲಿ ಗ್ರಂಥಕರ್ತರೂ, ಕವಿಗಳೂ ಯಾರು ಇದ್ದರೆಂಬದನ್ನು ವಿಚಾರಿಸುವಾ-ರಾಷ್ಟ್ರಕೂಟ ಮನೆತನಕ್ಕೆ ಸೇರಿದ ಅರಸನೂ ಕವಿಯೂ ಆದ ನೃಪತುಂಗನು ಕವಿರಾಜಮಾರ್ಗವೆಂಬ ಕನ್ನಡಗ್ರಂಥವನ್ನು ಬರೆದಿದ್ದಾನೆ. ಇವನು ಮಾನ್ಯಖೇಟದಲ್ಲಿ ೧೪೨ ರವರೆಗೆ ಆಳಿದನು. ಇವನು ತನ್ನ ಕಾಲದಲ್ಲಿ ಕರ್ನಾಟಕವು "ಕಾವೇರಿಯಿಂದ ಮಾಗೋದಾವರಿವರಂ" ಹಬ್ಬಿತ್ತೆಂದೂ ಅಲ್ಲಿ ತಿಳಿಗನ್ನಡವು ಪ್ರಚಲಿತವಿತ್ತವೆಂದೂ ಕನ್ನಡಿಗರು ಕಾವ್ಯಜ್ಞರಿದ್ದರೆಂದೂ ತನ್ನ ಪೂರ್ವದಲ್ಲಿ ಅನೇಕ ಕನ್ನಡ ಕವಿಗಳು ಆಗಿಹೋದರೆಂದೂ ಮೇಲೆ ಹೇಳಿದ ತನ್ನ ಗ್ರಂಥದಲ್ಲಿಉಲ್ಲೇ

ಖಿಸಿದ್ದಾನೆ. ಇವನ ಆಶ್ರಯದಲ್ಲಿಯೇ ಶ್ರೀವಿಜಯನೆಂಬ ಪ್ರಸಿದ್ಧ ಕವಿಯಾಗಿದ್ದರೂ ಇದ್ದನು. ಇವನ ಪೂರ್ವದವನಾದ ಶ್ರೀವರ್ಧನದೇವ ಅಥವಾ ತುಂಬಲೂರಾಚಾರ್ಯನೆಂಬ ಜೈನ ಕವಿಯು ತತ್ವಾರ್ಥಮಹಾಶಾಸ್ತ್ರವೆಂಬ ಸಂಸ್ಕೃತ ಗ್ರಂಥಕ್ಕೆ ಚೂಡಾಮಣಿಯೆಂಬ ತೊಂಬತ್ತಾರುಸಾವಿರ ಶ್ಲೋಕಗಳನ್ನೊಳಕೊಂಡ ಪ್ರಕಾಶಿಕೆಯನ್ನು ಕನ್ನಡದಲ್ಲಿಯೇ ಬರದಿದ್ದಾನೆಂದು ದಂಡಿಮಹಾಕವಿಯೂ ಪ್ರಸಿದ್ಧ ಕನ್ನಡ ವೈಯ್ಯಾಕರಣಿಯಾದ ಭಟ್ಟಾಕಲಂದೇವನೂ ಹಳೆಗನ್ನಡ ಪಂಚತಂತ್ರವನ್ನು ಬರೆದ ದುರ್ಗಸಿಂಹನೆಂಬ ಶೈವಕವಿಯೂ ಅಪೂರ್ವಸ್ತುತಿಯನ್ನು ಮಾಡಿದ್ದಾರೆ ಇದರ ಮೇಲಿಂದ ಕನ್ನಡ ಭಾಷೆಯ ಪ್ರೌಢತೆಯು ಸಹಜವಾಗಿ ವ್ಯಕ್ತವಾಗತ್ತದೆ.

ಕನ್ನಡ ಕವಿಗಳಲ್ಲಿ ಅಗ್ರಗಣ್ಯನಾದ ಆದಿಪಂಪನು ೪೪೧ರಲ್ಲಿ ಚಾಲುಕ್ಯ ಅರಸನಾದ ಅರಿಕೇಸರಿಯ ದಂಡನಾಯಕನಿದ್ದನು. ಈತನು ಪುಲಿಗೆರೆಯಲ್ಲಿ ಅಂದರೆ ಈಗಿನ ಲಕ್ಷ್ಮೇಶ್ವರದಲ್ಲಿ ಇರುತ್ತಿದ್ದನು ಬನವಾಸಿಯ ಪಟ್ಟಣದ ಬಗ್ಗೆ ಅಸಾಧಾರಣವಾದ ಅಭಿಮಾನವನ್ನು ತೋರಿಸಿದ್ದರಿಂದ ಬನವಾಸಿಯವನಾಗಿರಬಹುದು. ಇವನು ಪಂಪಭಾರತ, ಆದಿಪುರಾಣವೆಂಬೆರಡು ಉತ್ಕೃಷ್ಟ ಗ್ರಂಥಗಳನ್ನು ಬರೆದಿದ್ದಾರೆ. ತೀರ ಹಳೆಗನ್ನಡದಲ್ಲಿ ಬರೆದಾಗ್ಯೂ ಅಗ್ಗೆ ನಡೆಯುವ ಚಚ್ಚ ಹೊಸಗನ್ನಡದಲ್ಲಿ ಬರೆದಿರುವೆನೆಂದು ಹೇಳಿಕೊಳ್ಳುವದರಿಂದ ಇವನ ಪೂರ್ವದಲ್ಲಿಯೇ ಕನ್ನಡವಾಙ್ಮಯವು ಪ್ರೌಢವಾಗಿತ್ತೆಂದು ಕಂಡುಬರುತ್ತದೆ.

ಹೊನ್ನನೆಂಬ ಪ್ರಸಿದ್ಧ ಕವಿಯು ರಾಷ್ಟ್ರಕೂಟದಕನ್ನರನೆಂಬ ಅರಸನಿಂದ ಉಭಯಕವಿಚಕ್ರವರ್ತಿ ಮುಂತಾದ ಬಿರುದಗಳನ್ನು ಪಡಕೊಂಡಿದ್ದನು. ಇವನು ೯೫೯ರಿಂದ ೯೭೮ರ ವರೆಗೆ ಬಾಳಿದನು. ರನ್ನನೆಂಬ ಬಳೆಗಾರ ಕುಲಕ್ಕೆ ಸೇರಿದ ಹೆಸರಾದ ಕವಿಯು ಮಧುವಳದಲ್ಲಿ (ಮುಧೋಳ) ಹುಟ್ಟಿ (೯೭೩) ಪೂರ್ವಾಖೇಟದಲ್ಲಾಳಿದ ತೈಲಪ (ಅಹವಮಲ್ಲ) ನಿಂದ ಮನ್ನಣೆಯನ್ನು ಹೊಂದಿದನು. ಈತನ ತನ್ನ ಕಾಲದಲ್ಲಿ ಮಧುವಳದಲ್ಲಿ ತಿಳಿಗನ್ನಡವು ನಡಿಯುತ್ತಿತ್ತೆಂದು ಹೇಳುತ್ತಾನೆ. ಚಾವುಂಡರಾಯನೆಂಬ ಒಬ್ಬ ಕವಿಯು ೯೭೪ರಲ್ಲಿ ಗಂಗ ಅರಸರ ಬಳಿಯಲ್ಲಿ ದಂಡನಾಯಕನಿದ್ದನು. ನಾಗವರ್ಮನೆಂಬ ಜೈನಕವಿಯು ವೆಂಗಿಪಳುವಿನಲ್ಲಿ (ಗೋದಾವರಿ ಡಿಸ್ಟ್ರಿಕ್ಟ) ಜನ್ಮನೆತ್ತಿ ಕಿಸುಕಾಡಿನಲ್ಲಿ ನಿಂತುಕೊಂಡಿದ್ದನು ಇವನು ಶ್ರವಣಬೆಳಗುಳದ ಸೋಜಿಗವಾದ ಗುಮ್ಮಟವನ್ನು ಕಟ್ಟಿಸಿದನು. ಅಭಿನವಪಂಪನೆಂಬ ಇನ್ನೊಬ್ಬ ಕವಿಯು ೧೧೦೦ರಲ್ಲಿ ವಿಷ್ಣುವರ್ಧನನೆಂಬ ಬಲ್ಲಾಳರಾಯನ ಆಶ್ರಯದಲ್ಲಿದ್ದನು. ಇವನ ಜತೆಗೆ ಕಂತಿಯೆಂಬ ಕವಿಯಿತ್ರಿಯೂ ಇದ್ದಳು. ಪಂಚತಂತ್ರವನ್ನು ಬರೆದ ದುರ್ಗಸಿಂಹನೆಂಬ ಶೈವಕವಿಯು ೧೧೯೫ರಲ್ಲಿ ಜಗದೇಕಮಲ್ಲನೆಂಬ ಚಾಲುಕ್ಯರಾಜನ ಆಶ್ರಯದಲ್ಲಿದ್ದನು.

ವೀರಶೈವ ಕವಿಗಳಾದ ಹರಿಹರದೇವ, ರಾಘವಾಂಕ. ಕೆರೆಯ ಪದ್ಮರಸ ರೆಂಬ ಕವಿಶ್ರೇಷ್ಠರು ಹಳೇಬೀಡಿನಲ್ಲಿದ್ದ ನರಶಿಂಹ ಬಲ್ಲಾಳನ ಪ್ರೋತ್ಸಾಹನದಲ್ಲಿದ್ದರು. ಹಂಪಿಯಾದರೂ ಇವರ ವಾಸಸ್ಥಾನವಾಗಿತ್ತು (೧೬೫೦). ಕಲ್ಯಾಣದಲ್ಲಿ ಆಳಿದ ಕಲಚೂರ್ಯವಂಶದ ಬಿಜ್ಜಳರಾಯನ ಆಸ್ಥಾನದಲ್ಲಿ ಶ್ರೀಬಸವೇಶ್ವರ ಮೊದಲಾದ ಪಂಡಿತರಿದ್ದರೆಂಬುವದು ಇತಿಹಾಸಪ್ರಸಿದ್ಧವಿದೆ. ಕಲ್ಯಾಣವು ಆ ಕಾಲಕ್ಕೆ ಕನ್ನಡ ಭಾಷೆಯ ಕೇಂದ್ರಸ್ಥಾನವಾಗಿತ್ತು. ಗೋದಾವರೀ ತೀರದಲ್ಲಿ ಪಾಲ್ಕುರಿಕೆ ಸೋಮನಾಥನು ೧೧೯೫ರ ಸುಮಾರಿಗೆ ಇದ್ದನು ಸೋಮರಾಜನೆಂಬ ವೀರಶೈವ ಕವಿಯು ೧೩೨೦ರಲ್ಲಿ ಪಶ್ಚಿಮ ಸಮುದ್ರ ತೀರದಲ್ಲಿ (ಮಂಗಳೂರ ಗೋವೆಗಳ ನಡುವೆ) ರಾಜನಾಗಿದ್ದನು. ಇವರಲ್ಲದೆ ನೂರಾರು ಸುಪ್ರಸಿದ್ಧ ಕನ್ನಡ ಕವಿಗಳು ಕಾಲಕಾಲಕ್ಕೆ ಬೇರೆ ಬೇರೆ ಪ್ರಾಂತಗಳಲ್ಲಿ ಬೇರೆ ಬೇರೆ ಅರಸರ ಓಲಗಗಳಲ್ಲಿ ಗೌರವದಿಂದ ಮೆರೆದು ವಿಧವಿಧದ ಬಿರುದಗಳನ್ನು ಸಂಪಾದಿಸಿದ್ದರು ಗುಬ್ಬೀ ಮಲ್ಲಣಾರ್ಯನೆಂಬ ಕವಿಯು ತೆಲಗುನಾಡಿನಲ್ಲಿ ಇದ್ದನು. ಅದೃಶ್ಯಪ್ಪನೆಂಬ ಕವಿಯು ಪ್ರೌಢರಾಯ ಚರಿತೆಯನ್ನು ೧೫೯೫ರಲ್ಲಿ ಕೊಲ್ಹಾಪೂರದಲ್ಲಿ ಬರೆದನು. ಈ ಮೇರಿಗೆ ಮಹಾರಾಷ್ಟ್ರವಾದ ಕರ್ನಾಟಕವು ಕನ್ನಡ ಕವಿಗಳಿಗೆ ಮಾತೃ ಭೂಮಿಯಾಗಿದ್ದ ಸಂಗತಿಯು ಸಿದ್ಧವಾಗುತ್ತದೆ.

ಅಲ್ಲಾಉದ್ದೀನ ಬಾದಶಹನ ದಳವಾಯಿಯಾದ ಮಲೀಕ್‌ಖಾಫರನು ೧೩೧೦ರಲ್ಲಿ ಕರ್ನಾಟಕದ ಮೇಲೆ ದಂಡೆತ್ತಿಬಂದು ಸ್ವತಃ ನಪುಂಸಕನಿದಾಗ್ಯೂ ನರಪುಂಗವರನ್ನೆಲ್ಲ ಸದೆದಿಕ್ಕಿದನು. ಯಾದವ ಬಲ್ಲಾಳ, ಚೋಳ, ಪಾಂಡ್ಯ ಮೊದಲಾದ ಅರಸೊತ್ತಿಗೆಗಳನ್ನು ಮುರಿದು ಬಿಟ್ಟನು ಅಂದಿನಿಂದ ಅರಾಜಕವುಂಟಾಗಿ, ಭಾಮಿನಿ ಮತ್ತು ವಿಜಯನಗರಗಳೆಂಬೆರಡು ಹೊಸ ರಾಜ್ಯಗಳ ಸ್ಥಾಪನೆಯಾಯಿತು. ಭಾಮಿನಿ ಬಾದಶಹರು ಕೃಷ್ಣಾನದಿಯ ಉತ್ತರದಲ್ಲಿ, ವಿಜಯನಗರದ ರಾಯರು ಆದೇ ನದಿಯ ದಕ್ಷಿಣದಲ್ಲಿ ಆಳುತ್ತಿದ್ದರು ಇಂತು ಕರ್ನಾಟಕವು ಒಡೆದು ಇಬ್ಭಾಗವಾಗಿ ಉತ್ತರಭಾಗವು ಮುಸಲ್ಮಾನರ ಕೈಸೇರಿತು. ದಕ್ಷಿಣಭಾಗವು ಸುದೈವದಿಂದ ಕನ್ನಡಿಗರಾದ ಪ್ರೌಢ ರಾಯರ ವಶದಲ್ಲಿಯೇ ಉಳಿಯಿತು.

ಬಡಗಣದವರು ಮುಸಲ್ಮಾನರ ವರ್ಚಸ್ಸಿಗೆ ಒಳಪಟ್ಟು ತೆಂಕಣದವರಿಂದಗಲಿ, ದಿವಸಗಳು ಕಳೆದು ಹೋದಹಾಗೆ ನಡೆನುಡಿಗಳಲ್ಲೆಲ್ಲ ವಿಕಾರವನ್ನು ಹೊಂದುತ್ತ ನೂರಾರು ವರ್ಷಗಳಲ್ಲಿ ತೀರ ಭಿನ್ನ ಮತ್ತು ವಿಪರೀತ ದೆಸೆಯನ್ನು ಹೊಂದಿದರು. ಫಾರ್ಸಿ, ಅರಬಿ, ಉರ್ದೂ ಭಾಷೆಗಳ ಸಂಪರ್ಕದಿಂದ ಅವರ ನುಡಿಯು ಸಾಂಪ್ರತದ ಕನ್ನಡದಂತೆ ಹಸಟ್ಟುಹೋಯಿತು. ಮೇಲಕ್ಕೆ ಹೋದ ಹೋದ ಹಾಗೆಲ್ಲ ಕರ್ನಾಟಕದ ಗುರ್ತೂ ಮಾಜಲಾರಂಭಿಸಿತು. ವಿಜಯನಗರದ ರಾಯರು

ರಿಗೂ ಭಾವಿನಿ ಶಹರಿಗೂ ಒಂದು ಅರಗಳಿಗೆ ಯಾದರೂ ಆಗದ್ದರಿಂದ ದಕ್ಷಿಣದಲ್ಲಿ ನಿಂತ ಕನ್ನಡಿಗರ ಸಂಪರ್ಕವು ತಪ್ಪಿ ಉತ್ತರದಲ್ಲಿಯ ಬಾಂಧವರು ಕನ್ನಡವನ್ನು ಮರೆಯಲಾರಂಭಿಸಿದರು. ಆದರೆ ದಕ್ಷಿಣದ ಕನ್ನಡಿಗರು ತಮ್ಮ ವರ್ಚಸ್ಸನ್ನು ತಮಿಳು, ತೆಲಗು ಮಲೆಯಾಳು ನಾಡುಗಳಮೇಲೆ ಬೀರಿ ಎಂದಿನಂತೆ ಪ್ರಬಲರಾದರು. ಕನ್ನಡದ ಏಳ್ಗೆಯು ಹೆಚ್ಚುತ್ತ ಹೋಯಿತು. ರಾಯರ ನಿಗಳ್ತೆಯು ಎಲ್ಲೆಡೆಯಲ್ಲಿಯೂ ನೆಲಗೊಂಡಿತು ಪರಂತು ಉತ್ತರದ ಬಾಂಧವರು ತೀರ ಕೈಬಿಟ್ಟರು. ಬಾಗಾದಿಗಳಂತೆ ಒಬ್ಬರ್ನೊಬ್ಬರು ಬಗೆಯಹತ್ತಿದರು. ಕಾಲನು ಮರವೆಯನ್ನು ಹಾಕಿದ್ದರಿಂದ ಬಡಗಣದವರಿಗೆ ತಮ್ಮ ಪೂರ್ವದ ಅಪೂರ್ವ ವೈಭವದ ಅರಿವು ಆಗದಂತಾಯಿತು. ಬಡತನದಲ್ಲಿ ಬ್ರಹ್ಮಹತ್ಯವೆಂಬಂತೆ ಆ ಭಾವಿನಿ ರಾಜ್ಯವು ಸುಸೂತ್ರ ಸಾಗದೆ ಒಡೆದು ಐದು ತುಂಡಾದ್ದರಿಂದಲೂ ಮುಂದೆ ಕೆಲವು ವರ್ಷಗಳಲ್ಲಿಯೇ ವಿಜಯನಗರದ ಸಾಮ್ರಾಜ್ಯವು ತಾಳೀಕೋಟೆಯ ಕಾಳಗದಲ್ಲಿ ಹಾಳಾಗಿ ಹೋದದ್ದರಿಂದಲೂ ಕರ್ನಾಟಕದ ಗೋಳನ್ನು ಕೇಳದಾಯಿತು

ಆಹವ್ಮದನಗರಕ್ಕೆ ಸೇರಿದ ಕರ್ನಾಟಕದ ಪಶ್ಚಿಮಭಾಗವು (ನಾಶೀಕದಿಂದ ಪರ್ತಾರೆಯವರೆಗೆ) ಬೀದರ ವಿಜಾಪೂರ-ಕರ್ನಾಟಕದಿಂದ ಸಿಡಿದುನಿಂತು ಸ್ವತಂತ್ರವಾಗಿ ಬೆಳೆಯಲಾರಂಭಿಸಿತು. ಮುಂದೆ ಇದೇ ಪ್ರದೇಶವೇ ಮಹಾರಾಷ್ಟ್ರ ಸಾಮ್ರಾಜ್ಯದ ಉಗಮಸ್ಥಾನವಾಯಿತು. ಇಲ್ಲಿಂದರಲ್ಲಿ ಕರ್ನಾಟಕವನ್ನು ಬಡಗಣದಲ್ಲಿ ಮಹಾರಾಷ್ಟ್ರರೂ, ನಿಜಾಮನೂ, ಮಧ್ಯದಲ್ಲಿ ಸವಣೂರ, ಕಡಪಾ ನವಾಬರೂ, ಹಡುವಣದಲ್ಲಿ ಬಿದನೂರ ಕೊಡಗ ಅರಸರೂ, ತೆಂಕಣದಲ್ಲಿ ಮೈಸೂರ ಒಡೆಯರೂ, ಮೂಡಣದಲ್ಲಿ ಆರ್ಕಾಟದ ನವಾಬರೂ ಆಳುತ್ತಿದ್ದರು ಮುಂದೆ ಮಹಾರಾಷ್ಟ್ರರ ಪ್ರಾಬಲ್ಯವು ಹೆಚ್ಚಾಗಲು ಸವಣೂರ ಮತ್ತು ಬಿದನೂರ ಇವೆರಡೂ ಅವರ ಕೈಸೇರಿದವು ಈ ಪ್ರದೇಶಕ್ಕೆ ಮಹಾರಾಷ್ಟ್ರರು ದಕ್ಷಿಣಮಹಾರಾಷ್ಟ್ರವೆಂಬ ನೂತನವಾದ ನಾಮಧೇಯವನ್ನಿತ್ತರು. ಈ ನಾಮಕರಣ ಸಂಸ್ಕಾರಕ್ಕಿಂತ ಮೊದಲು ಕನ್ನಡದೇಶದ ಪೂರ್ವವೈಭವವನ್ನು ಇನ್ನಷ್ಟು ಕೊಡುವದು ಉಚಿತವೆಂದು ತೋರುತ್ತದೆ

ಕರ್ನಾಟಕವು ಕಾವೇರಿಯಿಂದ ಗೋದಾವರಿಯವರೆಗೆ ಹಬ್ಬಿತ್ತೆಂದು ಹಿಂದೆ ಹೇಳಿದೆ. ಕರ್ನಾಟಕಜನನಿಯು ಯಾವ ಯಾವ ದೇಶಗಳನ್ನು ಪಾದಾಕ್ರಾಂತ ಮಾಡಿದ್ದಳೋ ಆ ಎಲ್ಲ ದೇಶಗಳಿಗೆ ತನ್ನ ನಾಮಾಂಕಿತವನ್ನೇ ಕೊಟ್ಟಿದ್ದಳು. ತನ್ನ ಪರಾಕ್ರಮಿಗಳಾದ ರಾಜಪುತ್ರರಿಂದ "ಕರ್ನಾಟಕ" "ಕರ್ನಾಟಕ" "ಕರ್ನಾಟಕ" "ಕರ್ನಾಟಕ"ವೆಂದು ನಾಲ್ಕು ಸಲ ನಾಲ್ಕೂ ದಿಕ್ಕಿನಲ್ಲಿದ್ದ ತನ್ನ ಭಗಿನಿಯರ ಮೇಲೆ ಮುದ್ರೆಯನ್ನು ಒತ್ತಿಸಿದ್ದಳಲ್ಲದೆ ಈ ನಾಲ್ಕಕ್ಷರದ ಮಂತ್ರವನ್ನು ದೃಢಪಡಿಸಿದ್ದಳು. ಹಿಂದಕ್ಕೆ ರೋಮಾಯರು ಕಾಲಿಟ್ಟ ಪ್ರದೇಶವೆಲ್ಲ ಹೇಗೆ ರೋಮಮಯ

ವಾಗಿತ್ತೋ ಅದೇ ಮೇರೆಗೆ ಕರ್ನಾಟಕವು ಆಕ್ರಮಿಸದ ನಾಡೆಲ್ಲ ಕರ್ನಾಟಕವೆಂದೆನಿಸಿತು. ರಾಷ್ಟ್ರಕೂಟರಾಗಲಿ, ಬಲ್ಲಾಳರಾಗಲಿ, ವಿಜಯನಗರದ ರಾಯರಾಗಲಿ ಹೋದಹೋದಲ್ಲೆಲ್ಲ ಈ ಮಂತ್ರೋಪದೇಶವನ್ನು ಎಡೆಬಿಡದೆ ಮಾಡಿದರು. ಇಷ್ಟು ಗೌರವದಿಂದಲೂ ವೈಭವದಿಂದಲೂ ಮೆರೆದ ಕರ್ನಾಟಕೆಯು ತನ್ನಿಂದೊಗೆದ ಮಹಾರಾಷ್ಟ್ರ ಕನ್ನಿಕೆಯಿಂದ ನಾಮಕರಣ ಸಂಸ್ಕಾರವನ್ನೀಗ ಹೊಂದಿದಳು. ಶಿರವನ್ನು ಪುರಾತನಿಗೂ ದೇಹವನ್ನು ತುರ್ಕನಿಗೂ ಕೈಕಾಲುಗಳನ್ನು ಪಾಳ್ಯಗಾರರಿಗೂ ಸಲ್ಲಿಸಿ ಹೃದಯವನ್ನಷ್ಟು ಒಡೆಯ (ಮೈಸೂರ) ನಲ್ಲಿರಿಸಿ ಛಿನ್ನ ವಿಚ್ಛಿನ್ನಳಾಗಿ ಮೂಲೆಗುಂಪಾಗಿ ಬಿದ್ದಳು. ಹೀಗೆ ತುಂಡುತುಂಡಾದ ಕರ್ನಾಟಕವನ್ನು (೧) ಮಹಾರಾಷ್ಟ್ರೀಕೃತ ಮರಿತ ಕರ್ನಾಟಕವೆಂದೂ (೨) ಆಂಧ್ರೀಕೃತ ಆಂಧ್ರ ಕರ್ನಾಟಕವೆಂದೂ (೩) ದ್ರಾವಿಡೀಕೃತ ನಿದ್ರಾವಸ್ಥ ಕರ್ನಾಟಕವೆಂದೂ (೪) ನಿಜಾಮೀಕೃತ ನಿರ್ಜೀವ ಕರ್ನಾಟಕವೆಂದೂ (೫) ಮಂಗಳೂರ ಸುಮಂಗಲ ಕರ್ನಾಟಕವೆಂದೂ (೬) ಮೈಸೂರ ಮೈಸಿರಿವೆತ್ತ ಕರ್ನಾಟಕವೆಂದೂ (೭) ದಕ್ಷಿಣಮಹಾರಾಷ್ಟ್ರವೆಂಬ ವಿಗತಲಕ್ಷಣಕರ್ನಾಟಕವೆಂದೂ (೮) ಮುಂಬಯಿಯ ಪ್ರಬುದ್ಧ ಕರ್ನಾಟಕವೆಂದೂ (೯) ಅಕ್ಕಾಟಕದ ಶೂನ್ಯಕರ್ನಾಟಕವೆಂದೂ ಭಾಗಗಳನ್ನಾಗಿ ಕಲ್ಪಿಸಬಹುದು.

ಕರ್ನಾಟಕದ ಅನಸ್ಥೆಯು ಹೀಗಾಗಿರಲು ಕನ್ನಡಿಗರು ಪರದೇಸಿ ಮಕ್ಕಳಂತೆ ಹೆರವರ ದೂಷಣಕ್ಕೂ ಪೋಷಣಕ್ಕೂ ಪಾತ್ರರಾದದ್ದು ಸೋಜಿಗವಲ್ಲ. ಅಂತೆಯೇ ಕರ್ನಾಟಕವು ಮತ್ತು ಕನ್ನಡ ನುಡಿಯು ಡಾಕ್ಟರ ಭಂಡಾರಕರರವರ ದೃಷ್ಟಿಪಥವನ್ನೈದದೆ ಅಪಮಾನಕ್ಕೆ ಗುರಿಯಾಯಿತು. ಆ ಮಹಾನುಭಾವರು ಮಹಾರಾಷ್ಟ್ರ ವೆಂಬ ಹೆಸರು ಪೂರ್ವದಲ್ಲಿತ್ತೆಂಬುದೊಂದೇ ಆಧಾರದಿಂದ ಈ ನಾಡಿನಲ್ಲಿ ಮರಾಠೀ ಭಾಷೆಯೂ, ಮರಾಠೀ ಜನರೂ, ಮರಾಠೀ ಅರಸರೂ ಪರಂಪರೆಯಿಂದ ನೆಲೆಗೊಂಡಿದ್ದರೆಂದು ಊಹಿಸಿದರು. ನಾಸೀಕ, ಬೀದರ, ಗುಂಟೂರುಗಳನ್ನು ಹಿಡಕೊಂಡು ಕಾನಾನೂರ, ಕೊಯಿಮತ್ತೂರ ತ್ರಿಚನಾಪಳ್ಳಿಯವರೆಗೆ ವಿಸ್ತೃತವಾದ ಪ್ರದೇಶದಲ್ಲಿ ಅಲ್ಲಲ್ಲಿಗೆ ಕನ್ನಡಹೆಸರುಳ್ಳ ಊರುಗಳೂ, ಹಳ್ಳಿಗಳೂ, ಗುಡಿಗಳೂ, ಶಿಲಾಶಾಸನಗಳೂ ಇರುವದರಿಂದ ಆ ಎಲ್ಲ ಭಾಗದಲ್ಲಿ ಕನ್ನಡವೇ ಪ್ರಚಲಿತ ಭಾಷೆಯಾಗಿತ್ತು. ಅಕ್ಕಾಟಕ್ಕೆ ಇತಿಹಾಸದಲ್ಲಿ ಕರ್ನಾಟಕವೆಂದು ಪ್ರತೀತಿಯದೆ. ಇದು ನಿಜವಾಗಿ ಕನ್ನಡ ದೇಶವಲ್ಲ. ಇದು ಚೋಳಮಂಡಲ. ಇಲ್ಲಿ ನಡೆಯುವ ಭಾಷೆಯು ತಮಿಳು (ದ್ರವಿಡ) ಆದರೆ ಇದು ಚಲುಕ್ಯ ಮತ್ತು ವಿಜಯನಗರದ ಅರಸರ ವಶವರ್ತಿಯಾದಾಗ್ಗೆ ಕರ್ನಾಟಕವೆಂಬ ಹೆಸರನ್ನು ಅನಾಯಾಸವಾಗಿ ಧರಿಸಿತು. ದ್ದರಿಂದ ಇದಕ್ಕೆ ಶೂನ್ಯಕರ್ನಾಟಕವೆಂದರೆ ಸಲ್ಲುವದು.

ರಿಗೂ ಭಾವಿನಿ ಶಹರಿಗೂ ಒಂದು ಅರಗಳಿಗೆ ಯಾದರೂ ಆಗದ್ದರಿಂದ ದಕ್ಷಿಣದಲ್ಲಿ ನಿಂತ ಕನ್ನಡಿಗರ ಸಂಪರ್ಕವು ತಪ್ಪಿ ಉತ್ತರದಲ್ಲಿಯ ಬಾಂಧವರು ಕನ್ನಡವನ್ನು ಮರೆಯಲಾರಂಭಿಸಿದರು. ಆದರೆ ದಕ್ಷಿಣದ ಕನ್ನಡಿಗರು ತಮ್ಮ ವರ್ಚಸ್ಸನ್ನು ತಮಿಳು, ತೆಲಗು ಮಲೆಯಾಳು ನಾಡುಗಳಮೇಲೆ ಬೀರಿ ಎಂದಿನಂತೆ ಪ್ರಬಲರಾದರು. ಕನ್ನಡದ ಏಳ್ಗೆಯು ಹೆಚ್ಚುತ್ತ ಹೋಯಿತು. ರಾಯರ ನೆಗಳ್ತೆಯು ಎಲ್ಲೆಡೆಯಲ್ಲಿಯೂ ನೆಲಗೊಂಡಿತು ಪರಂತು ಉತ್ತರದ ಬಾಂಧವರು ತೀರ ಕೈಬಿಟ್ಟರು. ಬಾಗಾದಿಗಳಂತೆ ಒಬ್ಬರ್ನೊಬ್ಬರು ಬಗೆಯಹತ್ತಿದರು. ಕಾಲನು ಮರವೆಯನ್ನು ಹಾಕಿದ್ದರಿಂದ ಬಡಗಣದವರಿಗೆ ತಮ್ಮ ಪೂರ್ವದ ಅಪೂರ್ವ ವೈಭವದ ಅರಿವು ಆಗದಂತಾಯಿತು. ಬಡತನದಲ್ಲಿ ಬ್ರಹ್ಮಹತ್ಯವೆಂಬಂತೆ ಆ ಭಾವಿನಿ ರಾಜ್ಯವು ಸುಸೂತ್ರ ಸಾಗದೆ ಒಡೆದು ಐದು ತುಂಡಾದ್ದರಿಂದಲೂ ಮುಂದೆ ಕೆಲವು ವರ್ಷಗಳಲ್ಲಿಯೇ ವಿಜಯನಗರದ ಸಾಮ್ರಾಜ್ಯವು ತಾಳೀಕೋಟೆಯ ಕಾಳಗದಲ್ಲಿ ಹಾಳಾಗಿ ಹೋದದ್ದರಿಂದಲೂ ಕರ್ನಾಟಕದ ಗೋಳನ್ನು ಕೇಳದಾಯಿತು

ಅಹಮ್ಮದನಗರಕ್ಕೆ ಸೇರಿದ ಕರ್ನಾಟಕದ ಪಶ್ಚಿಮಭಾಗವು (ತಾಳೀಕದಿಂದ ಪತಾರೆಯವರೆಗೆ) ಬೀದರ ನಿಜಾಪೂರ–ಕರ್ನಾಟಕದಿಂದ ಸಿಡಿದುನಿಂತು ಸ್ವತಂತ್ರವಾಗಿ ಬೆಳೆಯಲಾರಂಭಿಸಿತು. ಮುಂದೆ ಇದೇ ಪ್ರದೇಶವೇ ಮಹಾರಾಷ್ಟ್ರ ಸಾಮ್ರಾಜ್ಯದ ಉಗಮಸ್ಥಾನವಾಯಿತು. ಇವರಿಂದರಲ್ಲಿ ಕರ್ನಾಟಕವನ್ನು ಬಡಗಣದಲ್ಲಿ ಮಹಾರಾಷ್ಟ್ರರೂ, ನಿಜಾಮನೂ, ಮಧ್ಯದಲ್ಲಿ ಸವಣೂರ, ಕಡಪಾ ನವಾಬರೂ, ಪಡುವಣದಲ್ಲಿ ಬಿದನೂರ ಕೊಡಗ ಅರಸರೂ, ತೆಂಕಣದಲ್ಲಿ ಮೈಸೂರ ಒಡೆಯರೂ, ಮೂಡಣದಲ್ಲಿ ಅರ್ಕಾಟದ ನವಾಬರೂ. ಆಳುತ್ತಿದ್ದರು ಮುಂದೆ ಮಹಾರಾಷ್ಟ್ರರ ಪ್ರಾಬಲ್ಯವು ಹೆಚ್ಚಾಗಲು ಸವಣೂರ ಮತ್ತು ಬಿದನೂರ ಇವೆರಡೂ ಅವರ ಕೈಸೇರಿದವು ಈ ಪ್ರದೇಶಕ್ಕೆ ಮಹಾರಾಷ್ಟ್ರರು ದಕ್ಷಿಣಮಹಾರಾಷ್ಟ್ರವೆಂಬ ನೂತನವಾದ ನಾಮಧೇಯವನ್ನಿತ್ತರು. ಈ ನಾಮಕರಣ ಸಂಸ್ಕಾರಕ್ಕಿಂತ ಮೊದಲು ಕನ್ನಡದೇಶದ ಪೂರ್ವವೈಭವನನ್ನು ಇನ್ನಿಷ್ಟು ಕೊಡುವದು ಉಚಿತವೆಂದು ತೋರುತ್ತದೆ

ಕರ್ನಾಟಕವು ಕಾವೇರಿಯಿಂದ ಗೋದಾವರಿಯವರೆಗೆ ಹಬ್ಬಿತ್ತೆಂದು ಹಿಂದೆ ಹೇಳಿದೆ. ಕರ್ನಾಟಕಜನನಿಯು ಯಾವ ಯಾವ ದೇಶಗಳನ್ನು ಪಾದಾಕ್ರಾಂತ ಮಾಡಿದ್ದಳೋ ಆ ಎಲ್ಲ ದೇಶಗಳಿಗೆ ತನ್ನ ನಾಮಾಂಕಿತವನ್ನೇ ಕೊಟ್ಟಿದ್ದಳು. ತನ್ನ ಪರಾಕ್ರಮಿಗಳಾದ ರಾಜಪುತ್ರರಿಂದ "ಕರ್ನಾಟಕ" "ಕರ್ನಾಟಕ" "ಕರ್ನಾಟಕ" ಕರ್ನಾಟಕ"ವೆಂದು ನಾಲ್ಕು ಸಲ ನಾಲ್ಕೂ ದಿಕ್ಕಿನಲ್ಲಿದ್ದ ತನ್ನ ಭಗಿನಿಯರ ಮೇಲೆ ಮುದ್ರೆಯನ್ನು ಒತ್ತಿಸಿದ್ದಳಲ್ಲದೆ ಈ ನಾಲ್ಕಕ್ಷರದ ಮಂತ್ರವನ್ನು ದೃಢಪಡಿಸಿದ್ದಳು. ಹಿಂದಕ್ಕೆ ರೋಮಾಯರು ಕಾಲಿಟ್ಟ ಪ್ರದೇಶವೆಲ್ಲ ಹೇಗೆ ರೋಮಮಯ

ವಾಗಿತ್ತೋ ಅದೇ ಮೇರೆಗೆ ಕರ್ನಾಟಕವು ಆಕ್ರಮಿಸದ ನಾಡೆಲ್ಲ ಕರ್ನಾಟಕವೆಂದೆನಿಸಿತು. ರಾಷ್ಟ್ರಕೂಟರಾಗಲಿ, ಬಲ್ಲಾಳರಾಗಲಿ, ವಿಜಯನಗರದ ರಾಯರಾಗಲಿ ಹೋದಹೋದಲ್ಲೆಲ್ಲ ಈ ಮಂತ್ರೋಪದೇಶವನ್ನು ಎಡೆಬಿಡದೆ ಮಾಡಿದರು. ಇಷ್ಟು ಗೌರವದಿಂದಲೂ ವೈಭವದಿಂದಲೂ ಮೆರೆದ ಕರ್ನಾಟಕೆಯು ತನ್ನಿಂದೊಗೆದ ಮಹಾರಾಷ್ಟ್ರ ಕನ್ನಿಕೆಯಿಂದ ನಾಮಕರಣ ಸಂಸ್ಕಾರವನ್ನೀಗ ಹೊಂದಿದಳು. ಶಿರವನ್ನು ಮರಾಠನಿಗೂ ದೇಹವನ್ನು ತುರ್ಕನಿಗೂ ಕೈಕಾಲುಗಳನ್ನು ಪಾಳ್ಯಗಾರರಿಗೂ ಸಲ್ಲಿಸಿ ಹೃದಯವನ್ನಷ್ಟು ಒಡೆಯ (ಮೈಸೂರ) ನಲ್ಲಿರಿಸಿ ಛಿನ್ನ ವಿಚ್ಛಿನ್ನಳಾಗಿ ಮೂಲೆಗುಂಪಾಗಿ ಬಿದ್ದಳು. ಹೀಗೆ ತುಂಡುತುಂಡಾದ ಕರ್ನಾಟಕವನ್ನು (೧) ಮಹಾರಾಷ್ಟ್ರೀಕೃತ ಮರಿತ ಕರ್ನಾಟಕವೆಂದೂ (೨) ಆಂಧ್ರೀಕೃತ ಆಂಧ ಕರ್ನಾಟಕವೆಂದೂ (೩) ದ್ರಾವಿಡೀಕೃತ ನಿದ್ರಾವಸ್ಥ ಕರ್ನಾಟಕವೆಂದೂ (೪) ನಿಜಾಮೀಕೃತ ನಿರ್ಜೀವ ಕರ್ನಾಟಕವೆಂದೂ (೫) ಮಂಗಳೂರ ಸುಮಂಗಲ ಕರ್ನಾಟಕವೆಂದೂ (೬) ವೈಸೂರ ವೈಸಿರಿವೆತ್ತ ಕರ್ನಾಟಕವೆಂದೂ (೭) ದಕ್ಷಿಣಮಹಾರಾಷ್ಟ್ರವೆಂಬ ವಿಗತಲಕ್ಷಣಕರ್ನಾಟಕವೆಂದೂ (೮) ಮುಂಬಯಿಯ ಪ್ರಬುದ್ಧ ಕರ್ನಾಟಕವೆಂದೂ (೯) ಅಕ್ಕಾಟಕದ ಶೂನ್ಯಕರ್ನಾಟಕವೆಂದೂ ಭಾಗಗಳನ್ನಾಗಿ ಕಲ್ಪಿಸಬಹುದು.

ಕರ್ನಾಟಕದ ಅನಸ್ಥೆಯು ಹೀಗಾಗಿರಲು ಕನ್ನಡಿಗರು ಪರದೇಸಿ ಮಕ್ಕಳಂತೆ ಹೆರವರ ದೂಷಣಕ್ಕೂ ಪೋಷಣಕ್ಕೂ ಪಾತ್ರರಾದದ್ದು ಸೋಜಿಗವಲ್ಲ. ಅಂತೆಯೇ ಕರ್ನಾಟಕವು ಮತ್ತು ಕನ್ನಡ ನುಡಿಯು ಡಾಕ್ಟರ ಭಂಡಾರಕರರವರ ದೃಷ್ಟಿಪಥವನ್ನೈದದೆ ಅಪಮಾನಕ್ಕೆ ಗುರಿಯಾಯಿತು. ಆ ಮಹಾನುಭಾವರು ಮಹಾರಾಷ್ಟ್ರ ವೆಂಬ ಹೆಸರು ಪೂರ್ವದಲ್ಲಿತ್ತೆಂಬುದೊಂದೇ ಆಧಾರದಿಂದ ಈ ನಾಡಿನಲ್ಲಿ ಮರಾಠೀ ಭಾಷೆಯೂ, ಮರಾಠೀ ಜನರೂ, ಮರಾಠೀ ಅರಸರೂ ಪರಂಪರೆಯಿಂದ ನೆಲೆಗೊಂಡಿದ್ದರೆಂದು ಊಹಿಸಿದರು. ನಾಸೀಕ, ಬೀದರ, ಗುಂಟೂರುಗಳನ್ನು ಹಿಡಿಕೊಂಡು ಕಾನಾನೂರ, ಕೊಯಿಮತ್ತೂರ ತ್ರಿಚನಾಪಳ್ಳಿಯವರೆಗೆ ವಿಸ್ತೃತವಾದ ಪ್ರದೇಶದಲ್ಲಿ ಅಲ್ಲಲ್ಲಿಗೆ ಕನ್ನಡಹೆಸರುಳ್ಳ ಊರುಗಳೂ, ಹಳ್ಳಿಗಳೂ, ಗುಡಿಗಳೂ, ಶಿಲಾಶಾಸನಗಳೂ ಇರುವದರಿಂದ ಆ ಎಲ್ಲ ಭಾಗದಲ್ಲಿ ಕನ್ನಡವೇ ಪ್ರಚಲಿತ ಭಾಷೆಯಾಗಿತ್ತು. ಅಕ್ಕಾಟಕ್ಕೆ ಇತಿಹಾಸದಲ್ಲಿ ಕರ್ನಾಟಕವೆಂದು ಪ್ರತೀತಿಯಿದೆ. ಇದು ನಿಜವಾಗಿ ಕನ್ನಡ ದೇಶವಲ್ಲ. ಇದು ಜೋಳಮಂಡಲ. ಇಲ್ಲಿ ನಡೆಯುವ ಭಾಷೆಯು ತಮಿಳು (ದ್ರವಿಡ) ಆದರೆ ಇದು ಚಲುಕ್ಯ ಮತ್ತು ವಿಜಯನಗರದ ಅರಸರ ವಶವರ್ತಿಯಾದಾಗ್ಗೆ ಕರ್ನಾಟಕವೆಂಬ ಹೆಸರನ್ನು ಅನಾಯಾಸವಾಗಿ ಧರಿಸಿತು. ಆದ್ದರಿಂದ ಇದಕ್ಕೆ ಶೂನ್ಯಕರ್ನಾಟಕವೆಂದರೆ ಸಲ್ಲುವದು.

ಕರ್ನಾಟಕವೋ ಮಹಾರಾಷ್ಟ್ರವೋ ?

ಇನ್ನು ಮಹಾರಾಷ್ಟ್ರೀಕೃತ ಮರೆತ ಕರ್ನಾಟಕದ ಬಗ್ಗೆ ವಿಚಾರಿಸುವಾ. ಈ ಪ್ರಾಂತದಲ್ಲಿ ಮರಾಠಿ ಎಂಬ ವಿಶಿಷ್ಟ ಭಾಷೆಯು ನಡೆಯುತ್ತದೆ. ಇದು ಆರ್ಯವರ್ಗಕ್ಕೆ ಸೇರಿದ ನುಡಿಯು, ಸಂಸ್ಕೃತ-ಪ್ರಾಕೃತಗಳಿಂದ ಹುಟ್ಟಿರುವದು. ನಾಗವರ್ಮನು ಹಿಂದುಸ್ತಾನದಲ್ಲಿ ನಡಿಯುವ ಎಲ್ಲ ಭಾಷೆಗಳು (೫೬) " ಸಂಸ್ಕೃತಂ ಪ್ರಾಕೃತಂ ಅಪಭ್ರಂಶಂ ಪೈಶಾಚಿಕಂ ಎಂಬ ಸೂರುವರಿ ಭಾಷೆಗಳಿಂ "ದ ಹುಟ್ಟಿರುವವೆಂದು ಬರೆದಿದ್ದಾನೆ. ಆದರೆ ಶಾಸ್ತ್ರದೃಷ್ಟಿಯಿಂದ ವಿಚಾರಿಸದೆ ಇವನು ಕೇಳಿಕೆಯ ಬಲದಿಂದ ಹೀಗೆ ಅಭಿಪ್ರಾಯ ಪಟ್ಟಿರಬಹುದು. ದ್ರವಿಡ-ಆಂಧ್ರ-ಕರ್ನಾಟಕಾದಿ ಭಾಷೆಗಳು ಸ್ವತಂತ್ರವಾಗಿರುತ್ತವೆ. ಸಂಸ್ಕೃತದಿಂದ ಶಬ್ದಗಳನ್ನು ಹೇರಳವಾಗಿ ತಕ್ಕೊಂಡಿರುತ್ತವೆ. ಸ್ವಂಸ್ಕೃತವಾದರೂ ಇವುಗಳಿಂದ ಶಬ್ದಸಂಗ್ರಹವನ್ನು ಬೆಳೆಯಿಸಿರುತ್ತದೆ. "ನಿಲಿಂಪಾ" ಎಂಬದು ದೇವತೆಗಳ ಹೆಸರು ಇದರ ಉತ್ಪತ್ತಿಯು:-ನಿಲ್ (=ನಿಲ್ಲು) + ಇಂಪಾ (=ಇಂಪೆ, ಎವೆ); 'ನಿಲಿಂಪಾ' ಎಂದರೆ ನಿಂತ (ಪಿಳುಕಿಸದ) ಎವೆಯುಳ್ಳವ. ಅಂದರೆ 'ಅನಿಮಿಷ'. ಇದರಂತೆ ಅನೇಕ ಶಬ್ದಗಳ ಉತ್ಪತ್ತಿಯನ್ನು ಕೊಡಬಹುದು.

ವಿಕಾರಹೊಂದದೆ ಸಂಸ್ಕೃತದಲ್ಲಿ ಬಳಕೆಯಲ್ಲಿ ಬಂದ ಸುಪ್ರಸಿದ್ಧ ೨೧ ಶಬ್ದಗಳು:—ಅಂಕ, ಅಂಗಣ. ಅಟ್ಟ, ಕಂಕಣ, ಕೋಟಿ, ಗಂಡ, ಗಲ್ಲ, ಗಾಳ, ಗೋಣಿ, ತಳ, ತೋರಣ, ಪಟ್ಟ, ಬಂದಿ, ಬಲ. ಬಿಲ, ಮುಂಚ, ವಣಿ, ಮಲ್ಲ ಮಾಲೆ, ಲತೆ, ಸಬಳ, ಇವಲ್ಲದೆ ಅಳ್ಳ, ಪಲ್ಲಿ ಮೊದಲಾದ ಶಬ್ದಗಳು ದ್ರವಿಡವರ್ಗದ, ವಿಶೇಷತಃ ಕನ್ನಡ ಶಬ್ದಗಳೇ ಇರುವವು. ಕನ್ನಡ ಮತ್ತು ಉಳಿದ ದ್ರಾವಿಡ ವರ್ಗದ ಭಾಷೆಗಳು ಸಂಸ್ಕೃತ ಭಾಷೆಯ ಸಂಪರ್ಕದಿಂದ ಅಂದಗೆಟ್ಟವಲ್ಲದೇ, ಯಾವಪ್ರಕಾರ ಕನ್ನಡನಾಡು ವಿಕೃತರೂಪವನ್ನು ಹೊಂದಿ ಮರಾಠೀ ದೇಶವೆನಿಸಿತೋ ಹಾಗೆ ದ್ರಾವಿಡ ಭಾಷೆಯ ಶಬ್ದಗಳು ಸಂಸ್ಕೃತ ಶಬ್ದಗಳೆಂಬಂತೆ ರೂಢಿಯಲ್ಲಿ ಬಂದವು. ಕನ್ನಡ ನುಡಿಯ ಪ್ರಾಚೀನತೆಗೆ ಇತ್ತಿತ್ತಲಾಗಿನ ಮರಾಠೀ ನೊದಲಾದ ಭಾಷೆಗಳು ನಿಲುಕುವವೇ !

ಪ್ರಾಕೃತದಿಂದ ಹುಟ್ಟಿದ ಮರಾಠಿ ಭಾಷೆಯು ಈ ಪ್ರಾಂತದಲ್ಲಿ ಎಂದಿನಿಂದ ನಡೆಯುತ್ತ ಬಂದದೆಯೆಂಬುವದು ವಿಶದವಾಗಿ ತಿಳಿಯುವದಿಲ್ಲ. ಚಾಲುಕ್ಯ-ರಾಷ್ಟ್ರಕೂಟ-ಬಲ್ಲಾಳರ ಕಾಲದಲ್ಲಿ ನಡಿಯುತ್ತಿದ್ದ ಬಗ್ಗೆ ಕುರುಹುಗಳೇನೂ ಕಂಡು ಬರುವದಿಲ್ಲ. ದೇವಗಿರಿ ಯಾದವರ ಕಾಲದಲ್ಲಿ ಸುಮಾರು ೧೩೦೦ನೇ ಇಸ್ವಿಯಲ್ಲಿ ಹೇಮಾದ್ರಿಯೆಂಬ ಸಂಸ್ಕೃತ ಪಂಡಿತನು ಮೋಡೀ ಲಿಪಿಯನ್ನು ನಿರ್ಮಾಣಮಾಡಿದನು. ಅದೇ ಕಾಲದಲ್ಲಿ ಜ್ಞಾನೇಶ್ವರನೆಂಬ ಸಂತನು ಒಂದು ಗ್ರಂಥವನ್ನು ಈ

ಭಾಷೆಯಲ್ಲಿ ರಚಿಸಿದನು. ಇದೇ ಮೊದಲಿನ ಗ್ರಂಥವೆಂದು ಕಂಡುಬರುತ್ತದೆ. ಅದ ಕ್ಕೂ ಮೊದಲು ಇದು ಈಗಿನ ಕೊಂಕಣೀ ಭಾಷೆಯಂತೆ ಗ್ರಾಂಥಿಕ ಭಾಷೆಯಾ ಗಿರದೆ ಕಾಡುಸ್ಥಿತಿಯಲ್ಲಿರಬಹುದು. ಮನೆಯಲ್ಲಿ ಈ ಭಾಷೆಯನ್ನೂ ವ್ಯವಹಾರದಲ್ಲಿ ಕನ್ನಡಭಾಷೆಯನ್ನೂ ಉಪಯೋಗಿಸುತ್ತಿದ್ದರೆಂದು ತೋರುತ್ತದೆ. ಆದ್ದರಿಂದಲೇ ಜ್ಞಾನೇಶ್ವರಿಯ ಗಂಥದಲ್ಲಿ ಕನ್ನಡ ನುಡಿಗಳೂ ವಿಪುಲವಾಗಿ ದೊರೆಯುತ್ತವೆ. ತಾವು ಪೂರ್ವಕಾಲದಲ್ಲಿ ಕನ್ನಡಿಗರೇ ಎಂದು ಕೈ ಬಾಳ ಗಂಗಾಧರ ಟಿಳಕರು ಒಪ್ಪಿಕೊಂಡಿದ್ದಾರೆ. ಮರಾಠಿಯು ಜ್ಞಾನೇಶ್ವರನಿಂದೀಚೆಗೆ ಗ್ರಾಂಥಿಕ ಭಾಷೆಯಾಗಿ ಉಪಯೋಗಿಸಲ್ಪಟ್ಟು ಪೇಶ್ವೆಯರ ಕಾಲದಲ್ಲಿ ಪ್ರೌಢತೆಯನ್ನಡರಿತು. ಡಾಕ್ಟರ ಭಾಂಡಾರಕರರು, ಇದು ಪ್ರಾಕೃತದ ಮುಖ್ಯಾಂಶವಾಗಿದ್ದು ಇದರಲ್ಲಿ ಕಾಳಿದಾ ಸನ 'ಸೇತು ಬಂಧ' ವೆಂಬ ಕಾವ್ಯವನ್ನೂ ವರರುಚಿಯು ವ್ಯಾಕರಣವನ್ನು ಬರೆದರೆಂದು ಹೇಳುತ್ತಾರೆ. ಆದರೆ. 'ಪ್ರಾಕೃತದಲ್ಲಿ ಮೇಲಿನ ಗ್ರಂಥಗಳನ್ನು ಬರೆದದ್ದೇನೋ ದಿಟ; ಆದರೆ ಪ್ರಾಕೃತವೇ ಮರಾಠಿ ಎಂಬುವದಕ್ಕೆ ಆಧಾರ ಗಳೇನೂ ಇಲ್ಲ. ಒಂದುವೇಳೆ ನಿಜವಾದಲ್ಲಿ ಮರಾಠಿ ನುಡಿಯಲ್ಲಿ ಸಂಸ್ಕೃತ-ಪ್ರಾಕೃತ ಭಾಷೆಗಳಿಗೆ ಸಂಬಂಧ ವಿಲ್ಲದ ಅನೇಕ ಅಚ್ಚ ಮರಾಠಿ ಶಬ್ದಗಳಿರುತ್ತವೆ. ಘಾಟೆ, ಭಾಟಿ. ಕಾಣೆ' ಮುಂತಾದ ಹೆಸರುಗಳು ಪ್ರಾಕೃತಭಾಷೆಯ ನೇಮ್ಯ ನುಸರಿಸಿ, ಬಂದವುಗಳಲ್ಲ. ಕಾಳಿದಾಸ-ವರರುಚಿಗಳ ಸೇವೆಯನ್ನು ಹೊಂದಿದ ಅಷ್ಟೊಂದು ಪ್ರೌಢವಾದೀ ನುಡಿಯು ಸೊಲ್ಲು ಸಾವಿರ ವರ್ಷಗಳ ಹಿಂದೆ ಎಲ್ಲಿಯೂ ಕೇಳಬರದೇ ಇದ್ದದ್ದು ಸೋಜಿಗವೇ ಸರಿ!

ಕನ್ನಡಿಗರು ಮರಾಠಿಗೆ 'ಆರೇ' ವಾತೆಂದೂ ಮರಾಠೀ ಜನರಿಗೆ 'ಆರೇಕಾರ' ರೆಂದೂ ಕರೆಯುವದು, 'ಚಿಕ್ಕದೇವರಾಜವಿಜಯ' ವೆಂಬ ಮಹಾಕಾವ್ಯದ ಕರ್ತ ನಾದ ತಿರುಮಲಾರ್ಯನ ಕಾಲದಲ್ಲಿಯೇ ಬಳಕೆಯಲ್ಲಿತ್ತು. ಹೀಗೆ ಹೆಸರಿಟ್ಟ ಕಾರ ಣವು ಚನ್ನಾಗಿ ತಿಳಿಯುವದಿಲ್ಲ 'ಆರೆ" 'ಇದು "ಆರ್ಯ ಶಬ್ದದಿಂದ ಬಂದ ದ್ದಾದರೆ ಆರ್ಯರಿಗೂ ಆರ್ಯರು ವ್ಯವಹರಿಸುವ ಎಲ್ಲ ಭಾಷೆಗಳಿಗೂ ಹತ್ತಬೇಕಾ ಗಿತ್ತು. ಅನ್ಯದೇಶ್ಯಶಬ್ದವಾಗದೇ ಇದ್ದಲ್ಲಿ 'ಆರಿ, ಅಂದರೆ' ವಿಚಾರಿಸು, ಅಥವಾ 'ತಿಳಿದುಕೊಳ್ಳು, ಇದರ ಮೇಲಿಂದ 'ಆರೆ, ಎಂದರೆ, ತಿಳಿಯಲಾರೆ, ಎಂಬರ್ಥ ವಾದರೆ ಮರಾಠೀ ಜನರು ಅಪರಿಚಿತರಾಗಬೇಕಾಗಿತ್ತು. ಈಗ ಕೊಂಕಣೀ ಭಾಷೆಗೆ ಅನಕವಾಡುವಂತೆ ಹಿಂದಕ್ಕೆ ಅಂಥ ಸ್ಥಿತಿಯಲ್ಲಿದ್ದ ಈ ಭಾಷೆಯನ್ನಾದರೂ (ಕಾಯರೆ?) 'ಆರೆ' 'ಆರೆ' ಎಂದು ಹಯಾಳಿಸಿರಬಹುದು

ಪುರಾಣೇತಿಹಾಸಗಳಲ್ಲಿ 'ಮಹಾರಾಷ್ಟ್ರ' 'ಮಹಾರಾಷ್ಟ್ರೀಯ' 'ಮಹಾ ರಠಿ, 'ಮಹಾರಠಿನೀ' ಎಂಬ ಶಬ್ದಗಳು ಕೆಲವೆಡೆಯಲ್ಲಿ ದೊರಕುವದರಿಂದ, ಕೃಷ್ಣಾನದಿಯಿಂದ ಗೋದಾವರಿಯವರೆಗೆ ಇರುವ ಪ್ರಾಂತವು ಮರಾಠೀ ಜನರದೇ

ಎಂದು ಡಾಕ್ಟರ ಭಂಡಾರಕರರ ಪ್ರತಿಪಾದನೆಯು ಸ್ವಭಾಷಾಭಿಮಾನದ ಅಪೂರ್ವವಾದ ಉದಾಹರಣೆಯೆ ಸರಿ. ಕಲ್ಯಾಣ, ಕಲಬುರ್ಗಿ, ಮಾನ್ಯಕೇಟ, ಪಂಢರಪುರ, ಸೊಲ್ಲಾಪುರ, ಎಂಬ ಕೃಷ್ಣಾನದಿಯಾಚೆಗಿರುವ ಪಟ್ಟಣಗಳು ಕನ್ನಡ ಕವಿಗಳ, ರಾಜರ, ಭಗವದ್ಭಕ್ತರ ಜನ್ಮಭೂಮಿಗಳಾಗಿರುವದರಿಂದ ಕನ್ನಡಿಗರು ಅಭಿಮಾಪಡದೇ ಇದ್ದರೆ ಕರ್ತವ್ಯಪರಾಙ್ಮುಖರಾಗುವರೆಂದು ಸಾರಿ ಹೇಳಬಹುದು. ಡಾಕ್ಟರ ಭಂಡಾರಕರರಂಥ ವಿದ್ವನ್ಮಣಿಗಳಿಗೆ ಪ್ರತಿಕೂಲವಾಗಿ ಲೆಕ್ಕಣಿಕೆಯನ್ನೆತ್ತುವದು ನಮಗೆ ಸಲ್ಲದಿದ್ದರೂ ಡಾಕ್ಟರ ಫ್ಲೀಟರವರು ನನುಗೆ ಅನಕೂಲರಾಗಿದ್ದಾರೆ ಕನ್ನಡ ಕವಿಕುಲಗುರುವಾದ ನೃಪತುಂಗನ " ಕಾವೇರಿಯಿಂದವಾಗೋದಾವರಿವರಮಿರ್ಪ ಕರ್ನಾಟಕವು ಸುಳ್ಳೋ ಡಾಕ್ಟರ ಭಂಡಾರಕರರ ಮಹಾರಾಷ್ಟ್ರವು ಸುಳ್ಳೋ!

ವಿಕೃತ ಕರ್ನಾಟಕ.

ಪೂರ್ವದಲ್ಲಿ ಆಂಧ್ರರು ದಿನೇ ದಿನೇ ಪ್ರಬಲರಾಗುತ್ತ ಬಂದ ಕಾಲಕ್ಕೆ ಕಾರೀಕಲ್ಲ, ರಾಜಮಹೇಂದ್ರಿಯವರೆಗೆ ಹಬ್ಬಿದ ಕರ್ನಾಟಕವನ್ನು ದೂಡುತ್ತ ದೂಡುತ್ತ ತಿರುಳ್ ಕನ್ನಡದ ಭಾಗವನ್ನೇ ಆಕ್ರಮಿಸಿರುವರು. ರಾಷ್ಟ್ರಕೂಟರ ಚಲುಕ್ಯರ ವಿಜಯನಗರದ ರಾಯರ ತವರ್ಮನೆಯಾಗಿದ್ದ ನಾಡು ತೆಲಗರ ಕೈವಶವಾಗಿದೆ. ಈ ತೆಲಗರ ತಗಲಿನಿಂದ ಅಲ್ಲಿರುವ ಕನ್ನಡಿಗರು ತಮ್ಮ ನಿಜವನ್ನೇ ತೊಲಗಹತ್ತಿರುವರು. ಇದುವರೆಗೆ ಅವರು ನಿದ್ರಾವಸ್ಥೆಯಲ್ಲಿಯೇ ಇದ್ದರು, ಬಳ್ಳಾರಿ ಅನಂತಪೂರ, ಕರ್ನೂಲ ಮೊದಲಾದ ಜಿಲ್ಲೆಗಳಲ್ಲಿಯ ಕನ್ನಡಿಗರು ಎಚ್ಚತ್ತಿರುವರು

ದಕ್ಷಿಣದಲ್ಲಿ ತಮಿಳರು ನೀಲಗಿರಿಯಾಚೆಯಿಂದ ಬಂದು ಕ್ರಮೇಣ ಅರ್ಕಾಟ ಮೊದಲಾದ ಪ್ರಾಂತಗಳಲ್ಲದೆ ಶುದ್ಧ ಕನ್ನಡದ ಭಾಗಗಳಾದ ಕೊಯಿಮುತ್ತೂರ ಸೇಲಮ್, ನೀಲಗಿರಿ ಮೊದಲಾದ ಜಿಲ್ಲೆಗಳನ್ನು ವಶಮಾಡಿಕೊಂಡಿರುವರು. ತಮಿಳರಿಂದ ಅಲ್ಲಿಯ ಕನ್ನಡಿಗರಿಗೆ ತಿಗುಳಹತ್ತಿದಂತಾಗಿ ತಮ್ಮ ನಿಜಸ್ವರೂಪವನ್ನೇ ಮರೆತು ಬಿಟ್ಟಿರುವರು. ಇವರನ್ನು ಪುನಃ ನಮ್ಮ ಬಳಗದಲ್ಲಿ ತೆಗೆದುಕೊಳ್ಳುವದು ಬಹಳ ದುಸ್ತರವಾಗಿದೆ. ಆದಾಗ್ಯೂ ಅಲ್ಲಿಯಾದರೂ ಎಚ್ಚರಿಕೆಯುಂಟಾಗಿದೆ.

ನಿಜಾಮ ರಾಜ್ಯದ ದಕ್ಷಿಣ ಪಶ್ಚಿಮ ಭಾಗವು ಕನ್ನಡವು. ಆದರೆ ಮುಸಲ್ಮಾನೀ ದರಬಾರದಿಂದ ಇಸ್ಲಾಮಿಯಾ ಸಂಸ್ಕೃತಿಯು ಕನ್ನಡಿಗರನ್ನು ಆವರಿಸಿಕೊಂಡಿದೆ. ಊರ್ದುಭಾಷೆಯೇ ಶಿಕ್ಷಣ ವಿಷಯದಲ್ಲಿಯೂ, ರಾಜಕಾರಣದಲ್ಲಿಯೂ, ವ್ಯವಹಾರದಲ್ಲಿಯೂ ಪ್ರಾಮುಖ್ಯವಾದುದರಿಂದ ಭಿನ್ನ ಸಂಸ್ಕೃತಿಯ ಭಾರವು ಹೊರಲಾರದಾಗಿದೆ. ಇಲ್ಲಿ ರಾಯಚೂರು, ಕಲಬುರ್ಗಿ, ಬೀದರ, ಜಿಲ್ಲೆಗಳೂ ಕೊಪ್ಪಳ ಸುರಪುರ, ಮುಂತಾದ ಜಹಗೀರುಗಳೂ ಶುದ್ಧ ಕನ್ನಡಿಗರ ತಾಯ್ನಾಡುಗಳು.

ಕೃಷ್ಣಾ, ತುಂಗಭದ್ರಾ, ಘಟಪ್ರಭಾ ಮಲಪ್ರಭಾ, ಭೀಮಾ ಎಂಬ ನದಿಗಳಿಂದ ಪುನೀತವಾದ ಈ ನಾಡಿನಲ್ಲಿ ರಾಷ್ಟ್ರಕೂಟರು, ಚಾಲುಕ್ಯರು, ವಿಜಯನಗರದ ರಾಯರು, ಮತ್ತು ಯಾದವರು ರಾಜ್ಯವಾಳಿರುವರು. ಅಂಜಂತಾ, ವೇರೂಳ ಎಂಬ ಜಗತ್ಪ್ರಸಿದ್ಧ ಗುಹಾಂತದೇವಾಲಯಗಳೂ ಮಳಖೇಡ, ಕಲ್ಯಾಣ, ಕಲಬುರ್ಗಿ ಮೊದಲಾದ ಪ್ರಾಚೀನ ರಾಜಧಾನಿಗಳೂ ಈ ಪ್ರದೇಶದಲ್ಲಿಯೇ ಮೆರೆದಿವೆ. ಕರ್ನಾಟಕದ ಗತವೈಭವಕ್ಕೆ ನೆಲೆವೀಡಾದ ಈ ಕರ್ನಾಟಕವು ಈಗ ನಿರ್ಜೀವ ಕರ್ನಾಟಕವೇ ಸರಿ. ಆದರೂ ಸ್ವಾಭಿಮಾನದ ಸುಳಿಗಾಳಿಯು ಇದೀಗ ಬೀಸ ಹತ್ತಿರುವದು.

ಮಂಗಳೂರ, ಕೊಡಗು, ಮುಖ್ಯವಾದ ಮಲಬಾರ ದಂಡೆಯ ಕರ್ನಾಟಕವು ಉಳಿದ ಕರ್ನಾಟಕಸ್ತರಿಂದ ಬಹಳ ದೂರವಿರುವದರಿಂದ ಸ್ವಲ್ಪ ವಿಪರ್ಯಾಸವನ್ನು ಹೊಂದಿದಾಗ್ಯೂ ಆ ಭಾಗವು ಸುಮಂಗಲಭೂಮಿಯೊಗಿಯೇ ಇದೆ. ಅಲ್ಲಿಯ ಕನ್ನಡಿಗರು ಅಭಿಮಾನಶಾಲಿಗಳೂ ವಿದ್ಯಾವಂತರೂ ಇದ್ದು ತಾಯ್ನುಡಿಯ ಮತ್ತು ತಾಯ್ನಾಡಿನ ಸೇವೆಯಲ್ಲಿ ತತ್ಪರರಾಗಿರುವರು.

ಮೈಸೂರು ಪ್ರಾಂತವು ಮೈಸಿರಿಯಿಂದ ತುಂಬಿತುಳುಕುತ್ತಿರುವದು. ಉತ್ತರದಲ್ಲಿ ಮಹಾರಾಷ್ಟ್ರರು, ಪೂರ್ವದಲ್ಲಿ ಆಂಧ್ರರು, ದಕ್ಷಿಣದಲ್ಲಿ ದ್ರಾವಿಡರು, ಮತ್ತು ಪಶ್ಚಿಮದಲ್ಲಿ ಕೇರಳರು, ಬೆಳಗಾವಿ, ಬಳ್ಳಾರಿ, ಕೊಯಿಮತ್ತೂರ, ಮಂಗಳೂರ ಆದಿಯಾಗಿ ಎಲ್ಲ ಕರ್ನಾಟಕವನ್ನು ನುಂಗಿ ನೀರು ಕುಡಿದರೂ ಮೈಸೂರು, ಕರ್ನಾಟಕದ ಧ್ವಜವನ್ನು ಮೆರೆಯಿಸದೆ ಬಿಡದು. ಕರ್ನಾಟಕದ ಹೃದಯವೇ ಮೈಸೂರು. ಈ ಕೇಂದ್ರಸ್ಥಾನದಿಂದಲೆ ಕರ್ನಾಟಕದ ಎಲ್ಲ ಭಾಗಗಳಿಗೆ ಕನ್ನಡ ಸಂಸ್ಕೃತಿಯೆಂಬ ರುಧಿರಾಭಿಸರಣವು ಪೂರೈಸಬೇಕಾಗಿದೆ. ಸ್ವಾಭಿಮಾನವೆಂಬ ಸುಳಿಗಾಳಿಯು ಬೀಸಬೇಕಾಗಿದೆ ಈ ನಾಡಿನ ಒಡೆಯರೇ ಕನ್ನಡಿಗರ ಕುಲಕ್ಕೆ ಮಣಿದೀಪದಂತಿರುವರು.

ದಕ್ಷಿಣ ಮಹಾರಾಷ್ಟ್ರವೆಂಬ ಮುಂಬಯಿ ಕರ್ನಾಟಕದ ಭಾಗಕ್ಕೆ ಹೆಸರು ನೂರಿನ್ನೂರು ವರ್ಷಗಳಿಂದ ಬಳಕೆಯಲ್ಲಿ ಬಂದಿದೆ. ಕೊಲ್ಹಾಪುರ [ಕರವೀರಪುಂ] ಸಂಸ್ಥಾನವು ಸ್ಥಾಪಿತವಾದಂದಿನಿಂದ, [೧೭೦೭] ಪೇಶ್ವೆಯರ ಅಳಿಕೆಯವರೆಗೆ [೧೮೦೦] ಕರ್ನಾಟಕದ ಈ ಭಾಗದಲ್ಲಿ ಅನೇಕ ಮಹಾರಾಷ್ಟ್ರ ಸರದಾರರು ತಳ ಊರಿ ನಿಂತರು. ಈಗ ಅಸ್ತಿತ್ವದಲ್ಲಿ ಇರುವ ಮಿರ್ಜಿ, ಜಮಖಂಡಿ, ಸಾಂಗಲಿ ಮೊದಲಾದ ಪಟವರ್ಧನ ಸಂಸ್ಥಾನಗಳು ಪೇಶ್ವೆಯರ ಕಾಲದಲ್ಲಿ ಉದಯ ಹೊಂದಿದವು. ಮಹಾರಾಷ್ಟ್ರರ ಮನೆತನಗಳು ಜಿಂಜಿ, ತಂಜಾವರದವರೆಗೆ ಹಬ್ಬಿದವು. ಈ ಸಂಸ್ಥಾನಗಳಿಂದಲೂ, ಮರಾಟರ ವರ್ಚಸ್ಸು ಈ ಭಾಗದಲ್ಲಿ

ವಿಶೇಷವಾಗಿದ್ದರಿಂದಲೂ ಈ ಭಾಗಕ್ಕೆ ಬ್ರಿಟಿಶರು ದಕ್ಷಿಣ ಮಹಾರಾಷ್ಟ್ರವೆಂದು ಹೆಸರಿಟ್ಟರು. ಆದರೆ ಕರ್ನಾಟಕವು ಎಚ್ಚತ್ತದರಿಂದ ಈ ಹೆಸರು ಮಾಜಹತ್ತಿದೆ.

ಮುಂಬಯಿ ಇಲಾಖೆಯ ದಕ್ಷಿಣ ಭಾಗದಲ್ಲಿ ಮಹಾರಾಷ್ಟ್ರರ ಅಭಿಯೋಗಕ್ಕೆ ಎದೆಗೊಟ್ಟು ಎಡಬಿಡದೆ ಹೋರಾಡಿ ತಮ್ಮ ಸಂಸ್ಕೃತಿಯನ್ನೂ ಸ್ವಾತಂತ್ರ್ಯವನ್ನೂ ಕನ್ನಡಿಗರು ಕಾಯ್ದುಕೊಂಡಿರುವರು. ಅಲ್ಲದೆ ಕರ್ನಾಟಕದ ಜಯಭೇರಿಯನ್ನು ಹೊಡೆಯುತ್ತ, ಡಂಗುರವನ್ನು ಸಾರುತ್ತ, ತುತೂರಿಯನ್ನು ಊದುತ್ತ ಅಖಂಡ ಕರ್ನಾಟಕದಲ್ಲೆಲ್ಲ ನವಚೈತನ್ಯವನ್ನು ಉಂಟುಮಾಡಿರುವರು.

ಒಂದು ಕಾಲಕ್ಕೆ ಕಾವೇರಿಯಿಂದ ಗೋದಾವರಿಯವರೆಗೆ, ಪಶ್ಚಿಮ ಧಡದಿಂದ ಪೂರ್ವಧಡದವರೆಗೆ ಹಬ್ಬಿ ವಿರಾಟ್ ಸ್ವರೂಪವನ್ನು ಹೊಂದಿದ ಕರ್ನಾಟಕವು ಈಗ ವಿಕೃತ ರೂಪವನ್ನು ಹೊಂದಿದೆಯೆಂದು ಕಂಡುಬರುವದು. ಆದರೆ ಕನ್ನಡಿಗರಲ್ಲಿ ಸ್ವಾಭಿಮಾನವು ಪ್ರಕಟವಾಗಿ, ತಮ್ಮ ಸಂಸ್ಕೃತಿಯನ್ನು ಅಭಿವೃದ್ಧಿಗೊಳಿಸಬೇಕೆಂತಲೂ ತಮ್ಮ ವೈಶಿಷ್ಟ್ಯವನ್ನು ಕಾಯ್ದುಕೊಳ್ಳಬೇಕೆಂತಲೂ ತಮ್ಮ ಐಕ್ಯವನ್ನು ಸಾಧಿಸಿಕೊಳ್ಳಬೇಕೆಂತಲೂ ಕಡುತರವಾದ ಹಂಬಲವು ಉಂಟಾಗಿದೆ.

ಕನ್ನಡಿಗರ ಸರ್ವಸ್ವ ಅಂದರೆ ಬೃಹತ್ ಕರ್ನಾಟಕ:—

೧. ರಾಜ್ಯಶಾಸನ ದೃಷ್ಟಿಯಿಂದ ಬ್ರಿಟಿಶ ಕರ್ನಾಟಕವು ಒಂದು ಸ್ವತಂತ್ರ ಇಲಾಖೆಯ.

೨. ಕರ್ನಾಟಕಕ್ಕೆ ಸ್ವತಂತ್ರ (ಕನ್ನಡ) ವಿಶ್ವವಿದ್ಯಾಲಯವು.

೩. ಕರ್ನಾಟಕಕ್ಕೆ ಸ್ವತಂತ್ರ ಬಂದರವು.

೪. ಅಖಂಡ ಕರ್ನಾಟಕಕ್ಕೆ ಏಕರೂಪ ಸಂಸ್ಕೃತಿಯು

ಕರ್ನಾಟಕ ಏಕೀಕರಣ

ಬ್ರಿಟಿಶ್ ಕರ್ನಾಟಕ ಪ್ರಾಂತ

ಮುಂಬಯಿ ಇಲಾಖೆಯ ಜಿಲ್ಲೆಗಳು:—

೧. ಧಾರವಾಡ ಜಿಲ್ಲಾ (ಪೂರ್ಣ)

೨. ಬೆಳಗಾಂವ ,, ,,

೩. ವಿಜಾಪೂರ ,, ,,

೪. ಕಾರವಾರ ,, ,,

೫. ಸೊಲ್ಲಾಪೂರ (ಸಂಗೊಳ್ಳಿ; ಫಂಡರಪೂರ, ಬಾರ್ಸಿ. ಮತ್ತು ಸೊಲ್ಲಾಪೂರ ತಾಲೂಕುಗಳು ಮಾತ್ರ)

೬. ಸತಾರಿ (ವಾಳವೆ ಮತ್ತು ತಾಸಗಾವ)

ಮದ್ರಾಸ:—

೭. ಮಂಗಳೂರು (ಪೂರ್ಣ)

೮. ನೀಲಗಿರಿ (ಪೂರ್ಣ)

೯. ವಾಯನಾಡ ತಾಲೂಕಾ (ಪೂರ್ಣ)

೧೦ ಕೊಯಿಮತ್ತೂರ (ಕೊಯಿಮತ್ತೂರ, ಅವನಾಶಿ, ಗೋಪಿ ಶೆಟ್ಟಿಪಲ್ಲಿ ಭವಾನಿ ಮತ್ತು ಕೊಳ್ಳೆಗಾಲ ತಾಲೂಕುಗಳು)

೧೧. ಸೇಲಮ (ಹೊಸೂರು, ಕೃಷ್ಣಗಿರಿ, ಧರ್ಮಪುರಿ ತಾಲೂಕುಗಳು)

೧೨. ಚಿತ್ತೂರ (ಪುಂಗನೂರು ತಾಲೂಕು)

೧೩. ಕರ್ನೂಲ (ಪತ್ತೀಕೊಂಡ ತಾಲೂಕ)

೧೪. ಅನಂತಪೂರ (ಮಡಕಶಿರಾ, ಹಿಂದೂಪೂರ, ಪೆನಗೊಂಡ, ಧರ್ಮಾವರಂ, ಅನಂತಪೂರ, ಮತ್ತು ಗುತ್ತಿ ತಾಲೂಕಗಳು)

೧೫. ಬಳ್ಳಾರಿ (ಪೂರ್ಣ)

೧೬. ಉತ್ತರ ಅರ್ಕಾಟ (ಕನಗುಂಡಿ ತಾಲೂಕ)

ಕೂರ್ಗ:—

೧೭. ಕೂರ್ಗ ಅಥವಾ ಕೊಡಗು (ಪೂರ್ಣ)

ಈ ಎಲ್ಲ ಪ್ರದೇಶಗಳು ಕೂಡಿ ನಿದಾನ ೧೧ ದೊಡ್ಡ ಜಿಲ್ಲೆಗಳಾಗುವವು. ಜನಸಂಖ್ಯೆಯು ಸುಮಾರು ೮೨ ಲಕ್ಷವಾಗುವದು. ಕ್ಷೇತ್ರಫಲವು ೪೮ ಸಾವಿರ ಚೌ. ಮೈಲು ಆಗುವದು. ಉತ್ಪನ್ನವು ೫ ಕೋಟಿಯವರೆಗೆ ಆಗಬಹುದು. ಆದ್ದರಿಂದ ಇದು ಒಂದು ಸಾಧಾರಣ ಈಲಾಖೆಯಾಗಲು ಯಾವ ಅಭ್ಯಂತರವು ತೋರುವದಿಲ್ಲ. ಭಾಷಾನುವಾರ ಪ್ರಾಂತರಚನೆಯು ತತ್ವವಾದರೂ ಸರಕಾರಕ್ಕೆ ಮಾನ್ಯವಾದದ್ದಾಗಿದೆ. ಈ ಬಗ್ಗೆ ಕನ್ನಡಿಗರ ಚಳವಳಿಯು ಜೋರಿನಿಂದ ಸಾಗಿದೆ.

ಕರ್ನಾಟಕಕ್ಕೆ ವಿಶ್ವವಿದ್ಯಾಲಯವು:—

ಭಾಷಾನುವಾರ ವಿಶ್ವವಿದ್ಯಾಲಯಗಳು ಆಗುವದಾದರೂ ಅವಶ್ಯವಾಗಿದೆ. ಆಂಧ್ರರಿಗೆ ಆಂಧ್ರ ವಿಶ್ವವಿದ್ಯಾಲಯದ ಯೋಜನೆಯಾಯಿತು. ಮಹಾರಾಷ್ಟ್ರರು ಮಹಾರಾಷ್ಟ್ರ ವಿಶ್ವವಿದ್ಯಾಲಯವನ್ನು ಬೇಡಹತ್ತಿರುವರು. ಅದರಂತೆ ಗುಜರಾಥಿಯರು, ಕೇರಳರ. ಸ್ವತಂತ್ರ ವಿಶ್ವವಿದ್ಯಾಲಯಗಳನ್ನು ಬೇಡುವರು. ಆದ್ದರಿಂದ ಕರ್ನಾಟಕವಾದರೂ ಭಾಷೆಯಿಂದಲೂ, ವಿಸ್ತಾರದಿಂದಲೂ, ಸಂಸ್ಕೃತಿಯಿಂದಲೂ, ಆದಾಯದಿದಲೂ ಸ್ವತಂತ್ರ ವಿಶ್ವವಿದ್ಯಾಲಯಕ್ಕೆ ಬಾಧ್ಯವಾಗಿದೆ. ಆಂಧ್ರ ವಿದ್ಯಾಲಯಕ್ಕಷ್ಟು ದ್ರಾವಿಡ ವಿದ್ಯಾಲಯಕ್ಕಷ್ಟು, ಕೇರಳ ವಿದ್ಯಾಲಯಕ್ಕಷ್ಟು, ಮಹಾರಾಷ್ಟ್ರ ವಿದ್ಯಾಲಯಕ್ಕಷ್ಟು, ಬ್ರಿಟಿಶ್ ಕರ್ನಾಟಕವನ್ನು ಹಂಚಿಕೊಡಬೇಕೆಂದು ಧೂರ್ತ ವಿಚಾರದ ಜನರು ಕೆಲವರಂಟು. ಕನ್ನಡಿಗರು ಈ ಹಂಚಿಕೆಗೆ ಎಂದೂ ಒಪ್ಪಲಾರರು

೧. ಸ್ವತಂತ್ರ ಬಂದರವು

ಕರ್ನಾಟಕದ ವ್ಯವಹಾರ ಉದ್ಯೋಗಗಳು ಬೆಳವಣಿಗೆಯನ್ನು ಹೊಂದಬೇಕಾದರೆ ಕರ್ನಾಟಕವು ಮುಂಬಯಿ ಹಾಗು ಮದ್ರಾಸು ಬಂದರಗಳಿಂದ ಬಿಡುಗಡೆ ಹೊಂದಿ ಸ್ವತಂತ್ರ ಬಂದರದಿಂದ ಪರದೇಶಗಳ ಕೂಡ ವ್ಯವಹಾರ ಮಾಡಬೇಕು. ಪೂರ್ವದಲ್ಲಿ ಕರ್ನಾಟಕದಲ್ಲಿ ಪಶ್ಚಿಮ ಸಮುದ್ರದ ಗುಂಟ ನೂರಾರು ಬಂದರಗಳಿದ್ದು ಹೇರಳವಾಗಿ ಸರಕುಗಳು ವಿನಿಮಯವು ಅವ್ಯಾಹತವಾಗಿ ನಡೆದಿತ್ತು. ಆರ್ಥಿಕ ಸ್ಥಿತಿಯು ಸುಧಾರಿಸುವದಕ್ಕೆ ಇದೇ ಮುಖ್ಯ ಮಾರ್ಗವು. ಇದೇ ಎಲ್ಲಕ್ಕೆ ಪೊದಲು ಈಡೇರಬೇಕಾಪದ್ದು.

೨. ವಿಕರೂಪ ಸಂಸ್ಕೃತಿಯು:—

ಕರ್ನಾಟಕದ ಅರ್ಧ ಭಾಗವು ಬ್ರಿಟಿಶ ಪ್ರಾಂತಗಳಲ್ಲಿ ಇರುವದು ಅರ್ಧ ಭಾಗವು ದೇಶೀಯ ಸಂಸ್ಥಾನಿಕರ ಆಡಳಿತದಲ್ಲಿರುವದು. ಆದ್ದರಿಂದ ರಾಜ್ಯಶಾಸನ ವಿಷಯದಲ್ಲಿ ಕರ್ನಾಟಕವು ಒಟ್ಟಾಗಲಾರಿಯದು.

ಮದ್ರಾಸ ಇಲಾಖೆಯ ಭಾಗ, ಮುಂಬಯಿ ಇಲಾಖೆಯ ಭಾಗ ಕೂರ್ಗ ಮತ್ತು ಮೈಸೂರ ಸಂಸ್ಥಾನ, ನಿಜಾವನ ರಾಜ್ಯದಲ್ಲಿಯ ಕೆಲವು ಭಾಗಗಳು ಇವು ಅಲ್ಲದೆ. (೧) ಸಾಂಗಲಿ, (೨) ಮಿರ್ಜಿ, (೩) ಜಮಖಂಡಿ, (೪) ಕುರಂದವಾಡ, (೫) ಮುಧೋಳ, (೬) ಜತ್ತ (೭) ಸವಣೂರ, (೮) ಅಕ್ಕಲಕೋಟೆ, (೯) ಸಾವಂತವಾಡಿ, (೧೦) ಸೊಂಡೂರ, (೧೧) ರಾಮದುರ್ಗ, ಮತ್ತು (೧೨) ಕೊಲ್ಹಾಪೂರ, ಈ ಹನ್ನೆರಡು ಸಂಸ್ಥಾನಗಳು ಕರ್ನಾಟಕದ ಭಾಗಗಳೇ. ಗೋವೆ

ಯ ಪ್ರಾಂತವು ಕೂಡ ಕನ್ನಡಿಗರದೇ. ಇವೆಲ್ಲವುಗಳು ಕೂಡುವದು ಅಸಂಭವ ವೆಂಬುದು ಸ್ಪಷ್ಟವದೆ. ಆದರೆ ಈ ಎಲ್ಲ ಭಾಗಗಳ ಕನ್ನಡಿಗರಲ್ಲಿ ಸರ್ವಸಾಮಾ ನ್ಯವಾದ ಸಂಸ್ಕೃತಿಯು ನೆಲೆಗೊಳ್ಳಬೇಕು; (ಬರಹದ ಮತ್ತು ಆಡುವ) ಭಾಷೆಯಲ್ಲಿ ಏಕರೂಪತೆಯಾಗಬೇಕು; ಆಚಾರವಿಚಾರಗಳಲ್ಲಿ ಹೊಂದಿಕೆ ಯಾಗಬೇಕು; ವ್ಯವಹಾರ ಉದ್ಯೋಗಗಳಲ್ಲಿ ತುಂಬಾ ಸಂಬಂಧವಿರಬೇಕು; ಶರೀರ ಸಂಬಂಧ ಮೊದಲಾದ ಸಾಮಾಜಿಕ ವ್ಯವಹಾರಗಳು ಬೆಳೆಯಬೇಕು; ಸಾಮಾನ್ಯ–ಸಂಘಗಳು (ಕರ್ನಾಟಕ ವಿದ್ಯಾವರ್ಧಕ ಸಂಘ, ಮು ಂ), ಪರಿಷತ್ತು ಗಳು (ಸಾಹಿತ್ಯ ಪರಿಷತ್ತು ಮುಂ.), ಪತ್ರಿಕೆಗಳು (ಸಾಹಿತ್ಯ ಪರಿಷತ್ ಪತ್ರಿಕೆ ಮುಂ.), ಸಂಗ್ರಹಾಲಯಗಳು (ಪ್ರಾಚ್ಯಕೋಶ ಮುಂ.), ಮಂಡಲಗಳು (ಐತಿ ಸಿಕ ಮಂಡಲಮುಂ.), ಸಮ್ಮೇಲನಗಳು (ಪತ್ರಿಕಾ ಕರ್ತರ ಸಮ್ಮೇಲನಗಳು) ಮೊ ದಲಾದ ಚಟುವಟಿಕೆಗಳು ಅಖಂಡ ಕರ್ನಾಟಕಕ್ಕೆ ಸಾಮಾನ್ಯವಾಗಿರಬೇಕು. ಇಂಥ ಪ್ರಸಂಗಗಳು, ವಿಧಾಯಕ ಕಾರ್ಯಕ್ರಮಗಳು ಮತ್ತು ಸಂಘಟಿತ ಚಟುವಟಿಕೆಗಳು ಪದೇಪದೇ ಕರ್ನಾಟಕದ ಆಯಾಯ ಭಾಗದಲ್ಲಿ ಜರುಗಬೇಕು ವಿಶೇಷತಃ ಕನ್ನ ಡಿಗರು ತಮ್ಮ ಗಡಿನಾಡುಗಳಲ್ಲಿಯೇ ಈ ಕಾರ್ಯ ಕಲಾಪವನ್ನು ವಿಸ್ತರಿಸಬೇಕು. ಅಂದರೆ ಕನ್ನಡಿಗರ ಆಕಾಂಕ್ಷೆಯು ಅಂದರೆ ಬೃಹತ್ ಕರ್ನಾಟಕವೆಂಬ ಸರ್ವ ಸ್ವವು ಕೈಗೂಡುವದು.

ಕಡೆಯ ನುಡಿ

ಇನ್ನು ಕನ್ನಡಿಗರ ಈ ಆ ಕಾಂಕ್ಷೆಗಳು ಕೈಗೂಡುವವೆಂಬಲ್ಲಿ ಸಂದೇಹವೇ ಇಲ್ಲ. ನಮ್ಮ ಕರ್ನಾಟಕವು ಪ್ರಾಚೀನ ವೈಭವದಲ್ಲಿ ಭರತಖಂಡದ ಯಾವ ನಾಡಿಗೂ ಕಿರಿಯದಾಗಿರಲಿಲ್ಲವೆಂಬುದು ಸಿದ್ಧಾಂತವು. ಜ್ಞಾನೋನ್ನತಿಯಲ್ಲಿಯಾ ಗಲಿ, ಧರ್ಮಜಾಗ್ರತಿಯಲ್ಲಿಯಾಗಲಿ, ರಾಜಕಾರಣವಿಚಕ್ಷಣತೆಯಲ್ಲಿಯಾಗಲಿ, ವ್ಯವಹಾರೋದ್ಯೋಗವಿಸ್ತಾರದಲ್ಲಿಯಾಗಲಿ ಲಲಿತಕಲಾ ವೈಖರಿಯಲ್ಲಾಗಲಿ, ಕರ್ನಾಟಕವನ್ನು ಪರಿಗಟ್ಟುವ ನಾಡಾವುದು? ಶ್ರೀರಾಮನ ಮೊರೆಯನ್ನು ಕೇಳಿ ಬಳಸಿಕೆಗಳಾದ ಹನುಮಸುಗ್ರೀವಾದಿಗಳೇ ಅಖಂಡ ಕರ್ನಾಟಕದ ಬೆಂಬಲವನ್ನಿ ತ್ತರು ಧುರಧೀರ ಪಾಂಡವರಿಗೆ ಬನವಾಸಿಯಲ್ಲಿ ವಾಸವನ್ನಿತ್ತುದು ಕರ್ನಾಟಕ ವೇ? ಮರೆಹೊಕ್ಕ ಬೌದ್ಧಯತಿಗಳಿಗೂ, ಜೈನ ಸವಣರಿಗೂ, ಅಜಂತ, ಎಲ್ಲೂರ, ಶ್ರವಣಬೆಳಗುಳಗಳೆಂಬಲ್ಲಿ ಆಶ್ರಯವನ್ನಿತ್ತುದು ಕರ್ನಾಟಕವೇ. ಶಕಾರಿ ಶಾಲಿವಾ ಹನನೂ ಇಮ್ಮಡಿ ಪುಲಿಕೇಶಿಯೂ ಕರ್ನಾಟಕದ ಸ್ವಾತಂತ್ರತೆಯನ್ನು ಕಾಯ್ದ ಶೂರಪುರುಷರು. ಕರ್ನಾಟಕವೇ ವೈದಿಕ ಧರ್ಮವನ್ನು ಪುನರುಜ್ಜೀವನಗೊಳಿಸಿ ಸ್ಥಿರಗೊಳಿಸಿತು. ಮಧ್ವಾಚಾರ್ಯರು, ಬಸವೇಶ್ವರರು ಕರ್ನಾಟಕದಲ್ಲಿ ಅವತರಿ

ಸಿದರು. ಚೇರ ಶಂಕರಾಚಾರ್ಯರು, ಚೋಳ ರಾಮಾನುಜಾಚಾರ್ಯರು ಕರ್ನಾಟಕವನ್ನೇ ಆಶ್ರಯಿಸಿದರು. ಹಂಪೆಯ ಸಾಯಣನೇ ವೇದಾರ್ಥವನ್ನು ಸ್ಪಷ್ಟೀಕರಿಸಿದನು. ಮಾಧವನೇ ವೇದಾಂತವನ್ನು ಉಪದೇಶಿಸಿದನು. ನಿಜಗುಣನೇ ಉತ್ತರಷಟ್ಸ್ಥಲವನ್ನು ಭರತಖಂಡವಾಮಲಕವಾಗಿ ಕನ್ನಡಿಸಿದನು. ಆದಿಕವಿಪಂಪನು ಚಾಲುಕ್ಯರನ್ನಿಗೆ ವಿಜಯಲಾಗಿರುವನು ಷಡಕ್ಷರದೇವನು, ಶೈಕ್ಷಪಿಯರನನ್ನು ಎಸುರಿಸುವನು. ಲಕ್ಷ್ಮೀಶನು ಮಿಲ್ಟನನ್ನು ಮರೆಯಿಸುವನ , ನಾಗವರ್ಮ, ಕೇಶಿರಾಜ, ಭಟ್ಟಾಕಳಂಕದೇವರು ಸೂತ್ರರೂಪವಾಗಿ ಕನ್ನಡದ ವ್ಯಾಕರಣವನ್ನು ಹೆಳಿದರು ಕೆಳದಿಯ ಬಸವಪ್ಪನಾಯಕನೇ ಶಿವತತ್ವರತ್ನಾಕರನೆಂಬ ವಿಶ್ವಕೋಶವನ್ನು ಬರೆಯಿಸಿದನು. ಜಗತ್ತಿನಲ್ಲಿ ಇದೇ ಮೊದಲಿನ ಎನ್ಸಾಯಕ್ಲೊಪೀಡಿಯವು. ಕರ್ನಾಟಕದ ಗಾಯನವಾದರೋ ಸ್ವತಂತ್ರವಾದದ್ದೂ ಸಶಾಸ್ತ್ರವಾದದ್ದೂ ಇರುವದ . ಜಾಣಜಕ್ಕಣಾಚಾರ್ಯರಂಥ ಶಿಲ್ಪಜ್ಞರು ಶಿಲೆಯಲ್ಲಿ ಸಹ ಜೀವಕಳೆಯನ್ನು ತುಂಬಿ ವೈಭವ ಮಂದಿರಕ್ಕೆ ಭವ್ಯನಾದ ಕಳಸವನ್ನಿಟ್ಟಿತು. ಚಾಲುಕ್ಯ ರಾಜಪರಮೇಶ್ವರರೂ, ವಿಜಯನಗರದ ಅರಾಯರೂ, ಗೋದಾವರಿಯಿಂದ ಕಾವೇರಿಯ ಪರಿಯಂತ, ಪಡುವಣಕಡಲಿನಿಂದ ಮೂಡಣ ಕಡಲಿನತನಕ ರಾಜ್ಯವನ್ನು ಚಾಚಿ ಕರ್ನಾಟಕಕ್ಕೆ ಮಹಾರಾಷ್ಟ್ರವೆಂಬ ಗೌರವವನ್ನಿತ್ತು ಈ ಎಲ್ಲ ನಾಡಿಗೆ ಕರ್ನಾಟಕವೆಂದು ಮುದ್ರೆಯೊತ್ತಿದರು. ನಮ್ಮ ಪೂರ್ವಜರು ಜಗದಚ್ಚರಿಯಾದ ಸಾಹಸಕೃತ್ಯಗಳನ್ನು ಮಾಡಿದರು. ಜಗತ್ತಿಗೆ ಮೇಲಾದ ಸಂಸ್ಕೃತಿಯನ್ನು ಹೊಂದಿದರು. ಇಷ್ಟೊಂದು ಘನತೆಯನ್ನು ಪಡೆದ ಕರ್ನಾಟಕವು ಇದೀಗ ಭರತಖಂಡಕ್ಕೆಲ್ಲ ಹಿಂದುಳಿದ ಪ್ರಾಂತವೆಂದು ಹೆಸರುವಾಸಿಯಾಗಿರುವದು ಎಂಥ ಸೋಜಿಗವು ! ಕರ್ನಾಟಕವು, ಹರಿದು ಹಂಜಿ, ಮುರಿದೊಡೆದು, ಪಳಿಗೆ ಪಕ್ಕಾಗಿರುವದು ಕಾಲಮಹಿಮೆಯಿಂದಲ್ಲವೇ ! ನಮ್ಮ ಪೂರ್ವಜರ ರಕ್ತವು ನಮ್ಮಲ್ಲಿ ಹರಿಯುವದಿಲ್ಲವೇ! ಅವರ ತೇಜಸ್ಸು ನಮ್ಮನ್ನು ಪೂರ್ಣ ತೊಲಗಿದೆಯೇ ! ಸಮುದ್ರವನ್ನೇ ಹಾಗಿದು ಶೇತುವೆ ಕಟ್ಟಿದ ಸಮೂಹಿಕಶಕ್ತಿಸಾಹಸಗಳು ನಮ್ಮ ಕೈ ಬಿಟ್ಟವೇ ! ಛೆ ಇಲ್ಲಿಲ್ಲ. ನಾವು ಮೃತಪ್ರಾಯರಾಗಿ ತೋರಿದರೂ ನಮ್ಮಲ್ಲಿ ಜೀವಕಳೆಯುಂಟು. ಬೂದಿ ಮುಸುಕಿದ ಒಂದೇ ಕೆಂಡವಿದ್ದರೂ ಪ್ರಚಂಡ ದಾವಾನಲವಾಗಲಿಕ್ಕೆ ತಡವಿಲ್ಲ. ಕರ್ನಾಟಕದಲ್ಲಿಲ್ಲ ಪ್ರಾಣವಾಯುವು ಸಂಚರಿಸುತ್ತಿರುವದು. ನೆರೆಯ ಬಂಧುಗಳ ಅತ್ಯಾಚರಣೆಗೆ ಚೇತರಿಸುತ್ತಿರುವದು. ನಮ್ಮ ತರುಣ ಕನ್ನಡಿಗರು ತಲಗರಿಗೆ ಮುಂದೆ ಅಡಿ ಇಡಲಾಗದೆಂದೂ, ಆರಿಯರಿಗೆ ಹಿಂದಿರುಗಿರೆಂದೂ, ತಮಿಳರಿಗೆ ಅತಿಕ್ರಮಣವನ್ನು ನಿಲ್ಲಿಸಿರೆಂದೂ ಕೂಗುತ್ತಿರುವರು. ಕನ್ನಡಿಗರು ಭಾರತ ಸಂಸ್ಕೃತಿಗೆ ಹೊರತಾಗಿಲ್ಲ. ಹೊರತಾಗಬೇಕೆಂದು ಎಂದೂ ಬಯಸುವದಿಲ್ಲ ಆದರೆ ಪ್ರಾಂತಿಕ ಸಂಸ್ಕೃತಿಯಲ್ಲಿ ಅತಿ ಪ್ರಾಚೀನದಿಂದ ಬಂದ ತನ ವೈಶಿಷ್ಟ್ಯವನ್ನು ಕಾಯ್ದುಕೊಳ್ಳುವರು. ಗಂಗಾತೀರದವರು ತುಲಸೀದಾಸ ರಾಮಾ

ಯಣವನ್ನು ಓದಿದರೆ, ತುಂಗಾಲೇ ರ ದವರು ತೊರವೇರಾಮಾಯಣವನ್ನು ಓದುವರು. ಇಷ್ಟೇ ಅಭ್ಯಂತರ ಅಖಿಲಭಾರತ ಸಮ್ಮೇಳನದಲ್ಲಿ ಕರ್ನಾಟಕವೂ ಒಂದು ಪ್ರಮುಖ ಸದಶ್ಯತ್ವವನ್ನು ಹೊಂದುವದು. ಅವಂವರ ಪಕ್ಕದಲ್ಲಿ ಸೇರಲಾರದು ಮರಾಠರೊಡನೆ, ತನ್ನ ಪಾವಡದಳ್ಳಿಯನ್ನು ಬಿಟ್ಟ ಪಾಗೋಟಯನ್ನು ಧರಿಸಲಾರದು ಆಂಧ್ರರಲ್ಲಿ, ಸೇರಿ ತನ್ನ ಪಂಚಕಚ್ಚೆಯ ಬಿಡಲಾರದು. ಅರ್ಥಾತ್ ತನ್ನ ಪ್ರಾಚೀನ ವೈಭವವನ್ನು ನೆನೆದು, ಸದ್ಯದ ಶೋಚನೀಯ ಸ್ಥಿತಿಗೆ ವ್ಯಥೆಪಟ್ಟು, ಭಾವೀ ಘನತೆಗೆ ಅಭಿಮುಖವಾಗಿ, ನಾಮಶೇಷವಾಗದಹಾಗೆ, ತನ್ನ ವೈಶಿಷ್ಟ್ಯವನ್ನು ಕಾಯ್ದು ಕೊಂಡು, ತನ್ನ ಬಯಕೆಗಳನ್ನು ಸಾಧಿಸಿಕೊಂಡು, ಭಾರತಮಾತೆಯ ತೊಡೆಯ ಮೇಲೆ ವಿರಾಜಿಸಬೇಕೆನ್ನುವದು. ಎಂದಿನಂತೆ ಸಕರ್ನಾಟಕವು ಘನತೆಯನ್ನು ಪಡೆಯ ಬೇಕೆನ್ನುವದು. ಅದಕ್ಕೆ ಭಾರತಪುರಸ್ಕರ್ತರು ಭಯಪಡುವಕಾರಣವಿಲ್ಲ.—ಜಯಕರ್ನಾಟಕ.

ಸಂಪಾದಕ

ಜಿಲಗಾವಿಯಲ್ಲಿ ಜರಗುವ ಕರ್ನಾಟಕದ ಸಮ್ಮೇಲನಗಳು.

(ಮೇ ೧೧ ರಿಂದ ೧೫ರ ವರೆಗೆ.)

ಇದೇ ಮೇ ತಿಂಗಳಲ್ಲಿ ಕರ್ನಾಟಕಸಾಹಿತ್ಯ ಸಮ್ಮೇಲನ ಮತ್ತು ಪರಿಷತ್ತು, ಕರ್ನಾಟಕ ಏಕೀಕರಣ ಸಭಾ, ಕರ್ನಾಟಕ ಐತಿಹಾಸಿಕ ವಸ್ತು ಪ್ರದರ್ಶನ ಕರ್ನಾಟಕ ಪತ್ರಿಕಾ ಕರ್ತರ ಸಮ್ಮೇಲನ, ಕರ್ನಾಟ
ಕರ್ನಾಟಕ ಕವಿಗಳಸಮ್ಮೇಲ ಇತ್ಯಾದಿ ಜರುಗುವವು.

ಕನ್ನಡಿಗರೆಲ್ಲರು ಅಭಿಮಾನ ವಹಿಸಿ ಈ ಸಮ್ಮೇಲನಗಳನ್ನು ಯಶಸ್ವಿಯಾಗುವಂತೆ ಮಾಡಬೇಕಾಗಿ ಕೋರಿಕೆ.

ಕರ್ನಾಟಕ ರಾಷ್ಟ್ರೀಯ ಗೀತೆ.



ಭೋ ಮಾತೆ ಕರ್ನಾಟ ಭೂಮಾತೆ ನಮಿಪೆ ॥
ಕಾಮಿತಾರ್ಥವನಿತ್ತು ಪೊರೆಯೆ ಭೂದೇವಿ ॥ಪಲ್ಲ॥

ಕಾವೇರಿ ದಕ್ಷಿಣದೊಳುತ್ತರದ ದಿಶೆಗೆ ಗೋ
ದಾವರಿಯೆ ನಿನ್ನಗಡಿಯೆನಿಸಿತೊಮ್ಮೆ ॥
ಭೋ ನಸುಂಧರೇ ಪೂರ್ವದಾ ನಿನ್ನ ವೈಭವವ
ನಾವ ಕವಿ ಬಣ್ಣಿಸಲು ಸಾಧ್ಯವಮ್ಮಾ ! ॥೧॥ ಭೋ ಮಾ

ಹಳಿಬೀಡು ಬಾದಾಮಿ ಬನವಾಸಿ ಬಿದನೂರು॥
ಮುಳಬೀಡ ಕಲ್ಯಾಣವಿಜಯನಗರ ॥
ಕಲಿಸಾರ್ವಭೌಮ ನೃಪರಿಂದೆಸೆದು ಹೆಸರಾದ।
ಹಳೆಯ ರಾಜ್ಯಗಳಿಂದ ಮೆರೆದೆಯಮ್ಮಾ ! ॥೨॥ ಭೋ ಮಾತೆ

ಚಾಲುಕ್ಯ ಪುಲಕೇಶಿ ಗೋವಿಂದ ನೃಪತುಂಗ।
ತೈಲಪ ಸುವಿಕ್ರಮಾದಿತ್ಯ ಬುಕ್ಕ ॥
ಮೇಟಾಪ ಕಲಿಕೃಷ್ಣರಾಯರೆಂಬಾ ಸತ್ವ ।
ಶಾಲಿ ನೃಪವರರಿಂಗೆ ಜನ್ಮದಾತೆ ॥೩॥ ಭೋ ಮಾತೆ

ಅಕ್ಕದೇವಿಗೆ ವೀರ ಮೈರಾಳದೇವಿಗೆ ।
ಬುಕ್ಕರಾಯನ ಸೊಸೆಗೆ ವಿದುಷಿಯರಿಗೆ ॥
ಲೆಕ್ಕವಿಲ್ಲದ ಭವ್ಯ ಗುಡಿಗಳನು ವಿರಚಿಸಿದ ।
ಜಕ್ಕಣಾಚಾರ್ಯರನಿಗೆ ಜನ್ಮದಾತೆ ॥೪॥ ಭೋಮಾತೆ

ಅದ್ವೈತ ಮತವಾದಿ ಶಂಕರಾಚಾರ್ಯರನಿಗೆ।
ಸುದ್ವೈತ ಮತವಾದಿ ಮಧ್ವ ಮುನಿಗೆ ॥
ಸುದ್ವಿಜಗೆ ರಾಮಾನುಜಾಚಾರ್ಯರನಿಗೆ ಮೆರೆವ ।
ಸದ್ವಚನದಾ ಬಸವಂಗೆ ಜನ್ಮದಾತೆ ॥೫॥ ಭೋ ಮಾತೆ

ರನ್ನ ಲಕ್ಷ್ಮೀಶ ಹರಿಹರ ಷಡಕ್ಷರದೇವ ।
ಪೊನ್ನ ನಯಸೇನ ರಾಘವ ಪಂಪರ ॥
ಜನ್ನ ಮಲ್ಲಣ ಗಜಗ ರುದ್ರಭಟ್ಟಾಂಡಯ್ಯ ।
ಸನ್ನುತ ಕವೀಶ್ವರರ ಜನ್ಮಧಾತೆ ॥೬॥ ಭೋ ಮಾತೆ

ವಿದ್ಯೆಯಲಿ ಹೆಸರಾದ ಮಾಧವನ ಸಾಯಣನ।
ಬುದ್ಧಿಯಲಿ ಪೆಸರ್ಗೊಂಡ ಸರ್ವಜ್ಞನ ॥
ಸದ್ಭಜಕ ಪುರಂಧರ ಕನಕದಾಸ ನಿಜಗುಣರ
ಮುದ್ದು ತಾಯ್ತುಂಬಿಗಳ ಜನ್ಮದಾತೆ ॥೭॥ ಭೋ ಮಾ

ಸಾದಾ ಮುಲ್ಕೀ ಪರೀಕ್ಷೆಯ ವಿದ್ಯಾರ್ಥಿಗಿಂತ ಒಕ್ಕಲತನದ ಮುಲ್ಕೀ ಪರೀಕ್ಷೆಯ ವಿದ್ಯಾರ್ಥಿಯು ವ್ಯವಹಾರ ದೃಷ್ಟಿಯಿಂದ ಹೆಚ್ಚಿನ ಯೋಗ್ಯತೆಯವನು.



ಲೇಖಕ:—ದೇವಿಹೊಸೂರ ಅಗ್ರಿಕಲ್ಚರಲ್ ಸ್ಕೂಲ ಓರ್ವ ವಿದ್ಯಾರ್ಥಿ.

ಯಾವದೊಂದು ದೇಶವು ಅಭ್ಯುದಯವನ್ನು ಹೊಂದಿ ಸುಖಸಮಾಧಾನದಿಂದ ಬಾಳಬೇಕಾದರೆ ಆ ದೇಶದ ಮುಖ್ಯ ಉದ್ಯೋಗವು ಪ್ರಗತಿಯನ್ನು ಹೊಂದಲು ತಕ್ಕುದಾದ ಶಿಕ್ಷಣವೇ ಮೂಲ ಕಾರಣವಾಗಿದೆ. ಇದು ಅಮೇರಿಕಾ, ಇಂಗ್ಲಂಡ, ಜರ್ಮನಿ, ಜಪಾನ ಮೊದಲಾದ ರಾಷ್ಟ್ರಗಳಿಂದ ಸಹಜವೇ ತಿಳಿಯುವಂತಿದೆ. ಆದರೆ ನಮ್ಮ ದೇಶದ ಸ್ಥಿತಿಯು ಇವುಗಳ ವಿರುದ್ಧವಾಗಿದೆ. ಔದ್ಯೋಗಿಕ ಶಿಕ್ಷಣವಂತೂ ಇಲ್ಲವೆಂದರೂ ಸಲ್ಲುವದು ಇನ್ನು ಶಾಬ್ದಿಕ ಶಿಕ್ಷಣವಾದರೂ ಎಲ್ಲಿ ಪೂರ್ಣವಾಗಿದೆ? ಸ್ವೀಡನ್, ನಾರ್ವೆ, ಸ್ವಿತ್ಸರ್ಲಂಡಗಳಲ್ಲಿ ನೂರಕ್ಕೆ ನೂರರಂತೆಯೂ, ಅಮೇರಿಕಾ, ಇಂಗ್ಲಂಡ, ಜಪಾನಗಳಲ್ಲಿ ತೊಂಭತ್ತೈದು-ತೊಂಭತ್ತಾರರಂತೆಯೂ ಸಿಗುತ್ತಿರಲು, ನಮ್ಮ ದೇಶದಲ್ಲಿ ನೂರಕ್ಕೆ ಹತ್ತರಂತೆ ಮಾತ್ರ ಅಕ್ಷರಸ್ಥರು ಸಿಗುವರು ಇವರಲ್ಲಿಯೂ ಕೂಡಾ ಬಹಳ ಜನರು ನೌಕರಿಯನ್ನೇ ಅವಲಂಬಿಸಿರುವರೇ ಹೊರತು, ಸ್ವಾವಲಂಬಿಗಳು ತೀರ ಕಡಿಮೆ ಸಿಗುವರು.

ಹೀಗಾಗಲು ನಮ್ಮಲ್ಲಿಯ ಶಾಲೆಗಳಲ್ಲಿ ದೊರೆಯುವ ಶಿಕ್ಷಣ ಕ್ರಮವೇ ಕಾರಣವಾಗಿದೆ. ಮಠದಯ್ಯನವರು ತಮ್ಮ ಅವಸಾನ ಕಾಲದಲ್ಲಿ ಮುದ್ದುಮಗನಿಗೆ ಜೋಳಿಗೆ, ದಂಡಕೋಲುಗಳನ್ನು ಕೊಟ್ಟು ಭಿಕ್ಷಾ ಮಾರ್ಗವನ್ನು ತೋರಿಸುವಂತೆ, ನಮಗೆ ದೊರೆಯುತ್ತಿರುವ ಶಿಕ್ಷಣವಾದರೂ ಶಾಲೆಯಿಂದ ಹೊರಬಿದ್ದೊಡನೆಯೇ ನೌಕರಿಯ ಮಾರ್ಗವನ್ನೇ ತೋರಿಸುವದು. ಇಂಥ ಶಿಕ್ಷಣಾಭಿವೃದ್ಧಿಯಿಂದ ನೌಕರರ ಸಂಖ್ಯೆಯನ್ನೇ ಹೆಚ್ಚಿಸಿದಂತಾಗುವದು. ಇದರಿಂದ ದೇಶಕ್ಕೆ ಹಾನಿಯು ಸಂಭವಿಸುವದು.

ಇದೇ ಕ್ರಮದಂತೆ ಈ ವರ್ಷ ಧಾರವಾಡ ಸೆಂಟರಿನಲ್ಲಿ ಸುಮಾರು ಹನ್ನೆರಡು ನೂರು ವಿದ್ಯಾರ್ಥಿಗಳು ಮುಲ್ಕೀ ಪರೀಕ್ಷೆಗೆ ಕುಳಿತಿದ್ದು, ಇವರಲ್ಲಿ ಎರಡು ಮೂರಾಂಶ ವಿದ್ಯಾರ್ಥಿಗಳಾದರೂ ಪಾಸಾಗಬಹುದು. ಇವರ ವಯಸ್ಸು ತಕ್ಕ ಮಟ್ಟಿಗಿದ್ದರೂ ಈಗಿನ ಸೂಕ್ಷ್ಮಕಾಲ ಪರಿಸ್ಥಿತಿಗನುಸಾರವಾಗಿ ಯಾವದಾದ

ರೊಂದು ಧನೋತ್ಪಾದನ ಕಾರ್ಯವನ್ನು ಕೈಕೊಳ್ಳಬೇಕಾಗುವದು. ಇಂಥ ಪ್ರಸಂಗದಲ್ಲಿ ತಾವು ಯಾವ ಉದ್ಯೋಗವನ್ನವಲಂಬಿಸಬೇಕೆಂಬುದು ತಿಳಿಯ ಗುವದು.

ಈಗ ಬಿ. ಎ ಪರೀಕ್ಷೆ ಪಾಸಾದವರು ಕೂಡಾ ತಿಂಗಳೊಂದಕ್ಕೆ ನಾಲ್ವತ್ತು ರೂಪಾಯಿ ಪಗಾರ ಕೊಟ್ಟಲ್ಲಿ ಚಕ್ಕಂದದಿಂದ ನೌಕರೀ ಮಾಡುತ್ತಿರುವಾಗ್ಗೆ "ನಗಾರಿಯ ಮುಂಡೆ ತುಂತುಣಿ" ಎಂಬಂತೆ ಈ ಮುಲ್ಕೀ ಪರೀಕ್ಷೆಯವರನ್ನು ಯಾರು ಕೇಳಬೇಕು.

ಇನ್ನು ವ್ಯಾಪಾರದಲ್ಲಿ ಸೇರಬೇಕೆಂದರೆ, ವ್ಯಾಪಾರಸ್ಥರು ಇವರನ್ನು ಎರಡು ಮೂರು ವರ್ಷಗಳ ವರೆಗೆ ಉಮೇದವಾರಿಯಲ್ಲಿ ಇಟ್ಟುಕೊಳ್ಳುತ್ತಾರೆ. ಸ್ವತಂತ್ರ ವ್ಯಾಪಾರ ಮಾಡಬೇಕೆಂದರೆ, ಭಾಂಡವಲ ವಿಶೇಷ ಬೇಕಾಗುವದು. ಒಂದು ವೇಳೆ ಭಾಂಡವಲದ ಅನುಕೂಲತೆ ಇದ್ದರೂ ವ್ಯವಹಾರ ಜ್ಞಾನವು ಕಡಿಮೆ ಇರುವ ಮೂಲಕ, ಹಾನಿ ತಟ್ಟುವ ಭಯವು ವಿಶೇಷವಾಗಿರುವದು. ಹೀಗಾಗಿ ಈ ಮಾರ್ಗವು ಉಪಯುಕ್ತವೆನಿಸುವದಿಲ್ಲ

ಇನ್ನು ಯಾವದಾದರೊಂದು ಧಂದೆಯನ್ನು ಮಾಡಬೇಕೆಂದರೆ, ಈ ಮುಲ್ಕೀ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಅದರ ಸುಳಿವೇ ಇರುವದಿಲ್ಲ ಮತ್ತು ಕೂಲೀ ಮಾಡುವದು ಇವರ ಯೋಗ್ಯತೆಗೆ ಭಂಗ ಬರುವಂಥಾದ್ದು, ಆದ್ದರಿಂದ ಇದೂ ಒಪ್ಪಿಗೆಯಾಗುವದಿಲ್ಲ.

ಇನ್ನುಳಿದ ಉದ್ಯೋಗವೆಂದರೆ ಒಕ್ಕಲತನ ಇದನ್ನು ಮಾಡುವದೆಂದರೆ ಬಹಳ ಅಪಮಾನವೆನಿಸುವದು. ಯಾಕಂದರೆ, ಇಷ್ಟು ದಿವಸ ಕಷ್ಟಬಟ್ಟು ಕಲಿತು. ಕಡೆಗೆ ಮೇಳೀ ಹಿಡಿಯುವದು ಬಂತಲ್ಲ ! ಎಂದು ಚಿಂತೆಗೊಳಗಾಗುವರು. ಒಂದು ವೇಳೆ ಇದೆಲ್ಲವನ್ನು ಬದಿಗಿಟ್ಟು ದೈವದ ಮೇಲೆ ಭಾರ ಹಾಕಿ ಒಕ್ಕಲತನ ಮಾಡ ಬೇಕೆಂದರೆ, ಒಕ್ಕಲತನದ ಜ್ಞಾನವೂ, ರೂಢಿಯೂ, ಶಕ್ತಿಯೂ ಇರದ್ದರಿಂದ ಕಡೆಗೆ ಈ ಮಾರ್ಗವನ್ನೂ ಬಿಟ್ಟು ತಂದೆತಾಯಿಗಳಿಗೆ ಭಾರವಾಗಿ ಪರಪುಷ್ಟ ಜೀವಿ ಗಳಂತಾಗುವರು.

ಆದರೆ ಇತ್ತಿತ್ತಲಾಗಿ ವಿಶೇಷವಾಗಿ ಪ್ರಚಾರದಲ್ಲಿ ಬರುತ್ತಿರುವ ಬಾಯಸ್ ಕ್ಲಾಸುಗಳಲ್ಲಿಯ ವಿದ್ಯಾರ್ಥಿಗಳಿಗೆ ಒಕ್ಕಲತನದಲ್ಲಿ ಅಭಿರುಚಿ ಉತ್ಪನ್ನವಾಗು ವಂತೆಯೂ, ಕೆಲಮಟ್ಟಿಗೆ ಆಯಾ ವಿಷಯಗಳ ಜ್ಞಾನವಾಗುವಂತೆಯೂ, ಕೃಷಿ ಕರ್ಮ, ವನಸ್ಪತಿ, ದನಗಳ ಸಂಗೋಪನ ಮತ್ತು ಒಕ್ಕಲತನಕ್ಕೆ ಸಂಬಂಧಿಸಿದ ಗಣಿತ, ಭೂಗೋಲ ಮೊದಲಾದ ವಿಷಯಗಳನ್ನೂ, ಇವರಲ್ಲಿ ನಾಗರೀಕತೆಯು

ಉತ್ಪನ್ನವಾಗಲು ರಾಜಶಾಸನ, ಸೊಸಾಯಿಟಿ, ಗ್ರಾಮ ಕಾಯಿದೆ ಮೊದಲಾದ ವಿಷಯಗಳನ್ನೂ ಇವುಗಳಲ್ಲದೆ ಒಕ್ಕಲತನಕ್ಕೆ ಉಪಯೋಗ ಬೀಳುವಂಥ ಜತಿಗೆ, ಬಾರಕೋಲು, ಹಗ್ಗ, ಕಣ್ಣಿ ಹಾಗು ಗುಡಾರ ಪಟ್ಟಿ ಮೊದಲಾದವುಗಳನ್ನು ನಿಯಮಿಸುವವನ್ನು ಕಲಿಸುವರು

ಮೇಲೆ ಬರೆದ ಉಪಯುಕ್ತ ವಿಷಯಗಳು ಒಕ್ಕಲತನದ ಮುಲ್ಕೀ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಕಲಿಸಲ್ಪಡುವದರಿಂದ ಇವರು ಸಾದಾಮುಲ್ಕೀ ಪರೀಕ್ಷೆಯ ವಿದ್ಯಾರ್ಥಿಗಳಿಗಿಂತ ವ್ಯವಹಾರ ದೃಷ್ಟಿಯಿಂದ ಹೆಚ್ಚು ಜಾಣರಾಗುತ್ತಾರೆಂಬುದು ಸಹಜವೇ ಕಂಡು ಬರುವದು ಮತ್ತು ಬಾಯಸ ಕ್ಲಾಸ ಮುಲ್ಕೀ ಪರೀಕ್ಷೆಯ ವಿದ್ಯಾರ್ಥಿಗಳಲ್ಲಿ ತಮ್ಮ ಮನೆಯ ಹಾಗು ತಮ್ಮ ದೇಶದ ಮುಖ್ಯೋದ್ಯೋಗವಾದ ಒಕ್ಕಲತನದ ಬಗ್ಗೆ ಅಭಿಮಾನವೂ, ತಾವು ಸ್ವತಃ ಮಾಡಬೇಕೆಂಬ ಕುತೂಹಲವೂ ಹುಟ್ಟಿ, ಸ್ವಾವಲಂಬನದ ಮಾರ್ಗವು ಸುಗಮವಾಗುವದು. ಆದುದರಿಂದಲೇ ಪಂಜಾಬದಲ್ಲಿ ಬಾಯಿಸ್ ಕ್ಲಾಸುಗಳು ಜನತೆಯ ಪ್ರೇಮಕ್ಕೆ ಪಾತ್ರವಾಗಿ ವಿಶೇಷ ಪ್ರಸಾರವಾಗುತ್ತಲಿರುವವು.

ಈ ಪ್ರಕಾರ ಒಕ್ಕಲತನದ ವಿಷಯಕ್ಕೆ ಆದರ ಬುದ್ಧಿಯುಳ್ಳ ಬಾಯಸ್ ಕ್ಲಾಸ ಮುಲ್ಕೀ ಪರೀಕ್ಷೆಯ ವಿದ್ಯಾರ್ಥಿಗಳು ತಮಗುಂಟಾಗಿರುವ ಶಿಕ್ಷಣದ ಪೂರ್ಣತೆಗೋಸುಗ ದೇವೀಹೊಸೂರಲ್ಲಿರುವಂಥ ಮಾಧ್ಯಮಿಕ ಶೇತಕೀ ಶಾಲೆಯಲ್ಲಿ ಎರಡು ವರ್ಷದ ಅಭ್ಯಾಸ ಕ್ರಮವನ್ನು ಸರಿಯಾಗಿ ಮುಗಿಸಿದಲ್ಲಿ ಮಾದರಿಯ ಒಕ್ಕಲಿಗರಾಗುವರು ಇಂಥವರು ಸ್ವಾವಲಂಬನದಿಂದ ತಮ್ಮ ಜೀವಮಾನವನ್ನು ಸುಖವಾಗಿ ಕಳೆಯುವರಲ್ಲದೆ, ದೇಶದ ಹಿತಸಂಬಂಧಿಗಳಾಗುವರು. ಆದುದರಿಂದಲೇ ಸ್ಪಿಪ್ಪನೆಂಬ ತತ್ವಜ್ಞಾನಿಯು "ಎಲ್ಲಿ ನಿಮ್ಮ ಪೂರ್ವಜರು ಒಂದು ಕಾಳನ್ನು ಬೆಳೆಯುತ್ತಿದ್ದರೋ ಅಷ್ಟೇ ಭೂಮಿಯಲ್ಲಿ ನೀವು ಎರಡು ಕಾಳನ್ನು ಬೆಳೆಯುವಷ್ಟು ಜಾಣರಾದರೆ, ಜಗತ್ತಿನ ಸುಧಾರಣೆಗಾಗಿ ಹೆಣಗಾಡುತ್ತಿರುವ ಮುತ್ಸದ್ದಿಗಳಿಗಿಂತಲೂ ದೇಶಕ್ಕೆ ಹೆಚ್ಚಿಗೆ ಉಪಯೋಗವಾದಂತಾಗುವಿರಿ" ಎಂದು ಅಂದಿರುವರು.

ಆದ್ದರಿಂದ ಒಕ್ಕಲತನದ ಶಿಕ್ಷಣವನ್ನು ಹೊಂದಿ, ದೇಶದ ಏಳ್ಗೆಗೆ ಕಾರಣನಾಗಲು ತಯಾರಾದಂಥ ಬಾಯಸ ಕ್ಲಾಸ ಮುಲ್ಕೀ ಪರೀಕ್ಷೆಯ ವಿದ್ಯಾರ್ಥಿಯು ಸಾದಾ ಮುಲ್ಕೀ ಪರೀಕ್ಷೆಯ ವಿದ್ಯಾರ್ಥಿಗಿಂತ ವ್ಯವಹಾರ ದೃಷ್ಟಿಯಿಂದ ಹೆಚ್ಚಿನ ಯೋಗ್ಯತೆಯವನೆಂಬುದು ಸಿದ್ಧವಾಗುವದು.

ಹುಬ್ಬಳ್ಳಿ ಕನ್ನಡ ಗಂಡು ಮಕ್ಕಳ ಲನೆಯ ನಂಬರ ಶಾಲೆಯು.

ಈ ಶಾಲೆಯ ವರದಿಯು ಮತ್ತು ವಾರ್ಷಿಕ ಇನಾಮಿನ ಸಮಾರಂಭದ ಕಾರ್ಯ ಕ್ರಮವು ನಮ್ಮ ಕೈಸೇರಿದೆ.

ಈ ಶಾಲೆಯನ್ನು ಅನೇಕ ಶಿಕ್ಷಣತಜ್ಞರೂ ಶಿಕ್ಷಣಾಧಿಕಾರಿಗಳೂ ನೋಡಿ ತಮ್ಮ ಸದಭಿಪ್ರಾಯವನ್ನು ವ್ಯಕ್ತಪಡಿಸಿರುವರು. ಈ ಶಾಲೆಯನ್ನು ನಾವಾದ ರೂ ನೋಡಿರುವೆವು. ಈಗಿನ ದೋಷವುಳ್ಳವಾದ ಶಿಕ್ಷಣಪದ್ಧತಿಯಲ್ಲಿ ಈ ಶಾಲೆಯ ಅಧ್ಯಾಪಕರು ಶಕ್ಯವಿದ್ದಮಟ್ಟಿಗೆ ಇದನ್ನು ಮಾದರಿಯ ಶಾಲೆಯನ್ನಾಗಿ ಮಾಡಿರುವರು. ಕನ್ನಡ ನಾಲ್ಕನೆ ಇಯತ್ತೆಯವರೆಗೆ ಅಭ್ಯಾಸವಾಗುವದು. ಕಟ್ಟಡವು ಸಾಮಾನ್ಯವಾಗಿದೆ. ಒಬ್ಬ ಶಿಕ್ಷಕನಿಗೆ ೪೦ ವಿದ್ಯಾರ್ಥಿಗಳ ಪ್ರಮಾಣವದೆ ಬೇರೆ ಸಾಲೆಗಳಕಿಂತ ಇದಕ್ಕೆ ಹೆಚ್ಚಿನ ಸೌಲಭ್ಯಗಳೇನೂ ಇಲ್ಲ. ಆದಾಗ್ಯೂ ಇದರ ಉತ್ಕರ್ಷಕ್ಕೆ ಶಿಕ್ಷಕರ ಉತ್ಸಾಹಪರಿಶ್ರಮಗಳೇ ಕಾರಣವು. ವಾಡಿಕೆಯಾಗಿ ಪ್ರಾಥಮಿಕ ಶಾಲೆಗಳಲ್ಲಿ ಅಗತ್ಯ ವಿಷಯಗಳ ಅಭ್ಯಾಸವಲ್ಲದೆ (ಅದಂತೂ ಒಳ್ಳೇ ಚನ್ನಾಗಿಯೇ ಇದೆ) ವಿದ್ಯಾರ್ಥಿಗಳಿಗೆ ಅವರವರ ಯೋಗ್ಯತೆಗೆ ಸರಿಯಾಗಿ ಶಾರೀರಕ, ಬೌದ್ಧಿಕ, ನೈತಿಕ, ಮತ್ತು ಕಲಾಕೌಶಲ್ಯದ ಶಿಕ್ಷಣವು ಕೊಡಲ್ಪಡುತ್ತದೆ ಈ ಶಾಲೆಯನ್ನು ನೋಡಿದ ವಿನಹ ಇಲ್ಲಿಯ ಅಭಿನಂದನೀಯವಾದ ಶಿಕ್ಷಣ ಪದ್ಧತಿಯ ಕಲ್ಪನೆಯು ಚನ್ನಾಗಿ ಆಗದು. ಎಲ್ಲ ಕೆಲಸಗಳು ಆ ಆ ವೇಳೆಗೆ ಸರಿಯಾಗಿ ಅಚ್ಚುಕಟ್ಟುತನದಿಂದಲೂ, ಸಿಸ್ತಿನಿಂದಲೂ ನಡೆಯುವವು. ಅಭ್ಯಾಸವಾದರೂ ಆ ಆ ಮಿತಿಗೆ ಆಗಬೇಕಾದಷ್ಟು, ಆ ಆ ವಿಷಯಗಳ ಅಭ್ಯಾಸವು ಆಗೇ ತೀರುವದು. ಇದೆಲ್ಲ ಶಿಕ್ಷಕರ ಉದ್ಯೋಗಾಸಕ್ತಿ, ನಿಯಮಿತತನ, ಪರಿಶ್ರಮ ಮತ್ತು ಉತ್ಸಾಹ ಇವುಗಳನ್ನು ಅವಲಂಬಿಸಿರುವದೆಂದು ಬೇರೆ ಹೇಳಲವಶ್ಯವಿಲ್ಲ

ಶಿಕ್ಷಣ ವಿಷಯಗಳು:— ಶಾರೀರಕ ಶಿಕ್ಷಣ:— ಪ್ರತಿನಿತ್ಯ ಮುಂಜಾನೆ ದೇವರ ಪ್ರಾರ್ಥನೆ ಮತ್ತು ತಾಯ್ನಾಡಿನ ಹಾಡು ಜರುಗಿದನಂತರ, ಶಾಲೆಯು ಮುಂಬದಿಯಲ್ಲಿ ಕೂತು ಏಳುವದು, ಸೂರ್ಯ ನಮಸ್ಕಾರ ಹಾಕುವದು; ಸಾಯಂಕಾಲದಲ್ಲಿ ಓಡುವದು, ಲಾಠೀ ತಿರುಗಿಸುವದು, ಹಾಡುವದು, ಜಿಗಿಯುವದು ಮುಂತಾದ ಸ್ಪರ್ಧೆಯ ಆಟಗಳು, ಖೋ ಖೋ, ಕುಸ್ತಿ ಮೊದಲಾದವು ನಿರ್ದಿಷ್ಟ ಕಾರ್ಯಕ್ರಮದಂತೆ ಜರಗುವವು ವಿದ್ಯಾರ್ಥಿಗಳ ಪ್ರಕೃತಿ ಪರೀಕ್ಷೆಗೆ ಸಹ ಸ್ಥಾನಿಕ ಡಾಕ್ಟರರ ಸಹಾಯವು ದೊರಕಿಸಲ್ಪಡುವದು. ಸ್ಕೌಟ ಟ್ರೂಪ ಇರುವದು ವರ್ಷಕ್ಕೆ ಎರಡಾವರ್ತಿ ಪಂದ್ಯಾಟಗಳು ಜರುಗಿಸಲ್ಪಡುವವು. ಮತ್ತು ಮೆಚ್ಚುಗೆಗಳು ಕೊಡಲ್ಪಡುವವು.

ಸಾದಾ ಮುಲ್ಕೀ ಪರೀಕ್ಷೆಯ ವಿದ್ಯಾರ್ಥಿಗಿಂತ ಒಕ್ಕಲತನದ ಮುಲ್ಕೀ ಪರೀಕ್ಷೆಯ ವಿದ್ಯಾರ್ಥಿಯು ವ್ಯವಹಾರ ದೃಷ್ಟಿಯಿಂದ ಹೆಚ್ಚಿನ ಯೋಗ್ಯತೆಯುವನು.

ಲೇಖಕ—ದೇವಿಹೊಸೂರ ಅಗ್ರಿಕಲ್ಚರಲ್ ಸ್ಕೂಲ ಒರ್ವ ವಿದ್ಯಾರ್ಥಿ.

ಯಾವದೊಂದು ದೇಶವು ಅಭ್ಯುದಯವನ್ನು ಹೊಂದಿ ಸುಖಸಮಾಧಾನದಿಂದ ಬಾಳಬೇಕಾದರೆ ಆ ದೇಶದ ಮುಖ್ಯ ಉದ್ಯೋಗವು ಪ್ರಗತಿಯನ್ನು ಹೊಂದಲು ತಕ್ಕುದಾದ ಶಿಕ್ಷಣವೇ ಮೂಲ ಕಾರಣವಾಗಿದೆ. ಇದು ಅಮೇರಿಕಾ, ಇಂಗ್ಲಂಡ, ಜರ್ಮನಿ, ಜಪಾನ ಮೊದಲಾದ ರಾಷ್ಟ್ರಗಳಿಂದ ಸಹಜವೇ ತಿಳಿಯುವಂತಿದೆ. ಆದರೆ ನಮ್ಮ ದೇಶದ ಸ್ಥಿತಿಯು ಇವುಗಳ ವಿರುದ್ಧವಾಗಿದೆ. ಔದ್ಯೋಗಿಕ ಶಿಕ್ಷಣವಂತೂ ಇಲ್ಲವೆಂದರೂ ಸಲ್ಲುವದು. ಇನ್ನು ಶಾಬ್ದಿಕ ಶಿಕ್ಷಣವಾದರೂ ಎಲ್ಲಿ ಪೂರ್ಣವಾಗಿದೆ? ಸ್ವೀಡನ್, ನಾರ್ವೆ, ಸ್ವಿತ್ಸರ್ಲಂಡಗಳಲ್ಲಿ ನೂರಕ್ಕೆ ನೂರರಂತೆಯೂ, ಅಮೇರಿಕಾ, ಇಂಗ್ಲಂಡ, ಜಪಾನಗಳಲ್ಲಿ ತೊಂಭತ್ತೈದು-ತೊಂಭತ್ತಾರರಂತೆಯೂ ಸಿಗುತ್ತಿರಲು, ನಮ್ಮ ದೇಶದಲ್ಲಿ ನೂರಕ್ಕೆ ಹತ್ತರಂತೆ ಮಾತ್ರ ಅಕ್ಷರಸ್ಥರು ಸಿಗುವರು ಇವರಲ್ಲಿಯೂ ಕೂಡಾ ಬಹಳ ಜನರು ನೌಕರಿಯನ್ನೇ ಆವಲಂಬಿಸಿರುವರೇ ಹೊರತು, ಸ್ವಾವಲಂಬಿಗಳು ತೀರ ಕಡಿಮೆ ಸಿಗುವರು.

ಹೀಗಾಗಲು ನಮ್ಮಲ್ಲಿಯ ಶಾಲೆಗಳಲ್ಲಿ ಡೊರೆಯುವ ಶಿಕ್ಷಣ ಕ್ರಮವೇ ಕಾರಣವಾಗಿದೆ. ಮಠದಯ್ಯನವರು ತಮ್ಮ ಅವಸಾನ ಕಾಲದಲ್ಲಿ ಮುದ್ದುಮಗನಿಗೆ ಜೋಳಿಗೆ, ದಂಡಕೋಲುಗಳನ್ನು ಕೊಟ್ಟು ಭಿಕ್ಷಾ ಮಾರ್ಗವನ್ನು ತೋರಿಸುವಂತೆ, ನಮಗೆ ಡೊರೆಯುತ್ತಿರುವ ಶಿಕ್ಷಣವಾದರೂ ಶಾಲೆಯಿಂದ ಹೊರಬಿದ್ದೊಡನೆಯೇ ನೌಕರಿಯ ಮಾರ್ಗವನ್ನೇ ತೋರಿಸುವದು. ಇಂಥ ಶಿಕ್ಷಣಾಭಿವೃದ್ಧಿಯಿಂದ ನೌಕರರ ಸಂಖ್ಯೆಯನ್ನೇ ಹೆಚ್ಚಿಸಿದಂತಾಗುವದು. ಇದರಿಂದ ದೇಶಕ್ಕೆ ಹಾನಿಯು ಸಂಭವಿಸುವದು.

ಇದೇ ಕ್ರಮದಂತೆ ಈ ವರ್ಷ ಧಾರವಾಡ ಸೆಂಟರಿನಲ್ಲಿ ಸುಮಾರು ಹನ್ನೆರಡು ನೂರು ವಿದ್ಯಾರ್ಥಿಗಳು ಮುಲ್ಕೀ ಪರೀಕ್ಷೆಗೆ ಕುಳಿತಿದ್ದು, ಇವರಲ್ಲಿ ಎರಡು ಮೂರಾಂಶ ವಿದ್ಯಾರ್ಥಿಗಳಾದರೂ ಪಾಸಾಗಬಹುದು. ಇವರ ವಯಸ್ಸು ತಕ್ಕ ಮಟ್ಟಿಗಿದ್ದರೂ ಈಗಿನ ಸೂಕ್ಷ್ಮಕಾಲ ಪರಿಸ್ಥಿತಿಗನುಸಾರವಾಗಿ ಯಾವದಾದ

ರೊಂದು ಧನೋತ್ಪಾದನ ಕಾರ್ಯವನ್ನು ಕೈಕೊಳ್ಳಬೇಕಾಗುವದು. ಇಂಥ ಪ್ರಸಂಗದಲ್ಲಿ ತಾವು ಯಾವ ಉದ್ಯೋಗವನ್ನವಲಂಬಿಸಬೇಕೆಂಬುದು ತಿಳಿಯ ಗುವದು.

ಈಗ ಬಿ. ಎ ಪರೀಕ್ಷೆ ಪಾಸಾದವರು ಕೂಡಾ ತಿಂಗಳೊಂದಕ್ಕೆ ನಾಲ್ವತ್ತು ರೂಪಾಯಿ ಪಗಾರ ಕೊಟ್ಟಲ್ಲಿ ಚಕ್ಕಂದದಿಂದ ನೌಕರೀ ಮಾಡುತ್ತಿರುವಾಗ್ಗೆ "ನಗಾರಿಯ ಮುಂಡೆ ತುಂತುಣಿ" ಎಂಬಂತೆ ಈ ಮುಲ್ಕೀ ಪರೀಕ್ಷೆಯವರನ್ನು ಯಾರು ಕೇಳಬೇಕು.

ಇನ್ನು ವ್ಯಾಪಾರದಲ್ಲಿ ಸೇರಬೇಕೆಂದರೆ, ವ್ಯಾಪಾರಸ್ಥರು ಇವರನ್ನು ಎರಡು ಮೂರು ವರ್ಷಗಳ ವರೆಗೆ ಉಮೇದವಾರಿಯಲ್ಲಿ ಇಟ್ಟುಕೊಳ್ಳುತ್ತಾರೆ. ಸ್ವತಂತ್ರ ವ್ಯಾಪಾರ ಮಾಡಬೇಕೆಂದರೆ, ಭಾಂಡವಲ ವಿಶೇಷ ಬೇಕಾಗುವದು. ಒಂದು ವೇಳೆ ಭಾಂಡವಲದ ಅನುಕೂಲತೆ ಇದ್ದರೂ ವ್ಯವಹಾರ ಜ್ಞಾನವು ಕಡಿಮೆ ಇರುವ ಮೂಲಕ, ಹಾನಿ ತಟ್ಟುವ ಭಯವು ವಿಶೇಷವಾಗಿರುವದು. ಹೀಗಾಗಿ ಈ ಮಾರ್ಗವು ಉಪಯುಕ್ತವೆನಿಸುವದಿಲ್ಲ

ಇನ್ನು ಯಾವದಾದರೊಂದು ಧಂದೆಯನ್ನು ಮಾಡಬೇಕೆಂದರೆ, ಈ ಮುಲ್ಕೀ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಅದರ ಸುಳಿವೇ ಇರುವದಿಲ್ಲ ಮತ್ತು ಕೂಲೀ ಮಾಡುವದು ಇವರ ಯೋಗ್ಯತೆಗೆ ಭಂಗ ಬರುವಂಥಾದ್ದು, ಆದ್ದರಿಂದ ಇದೂ ಒಪ್ಪಿಗೆಯಾಗುವದಿಲ್ಲ.

ಇನ್ನುಳಿದ ಉದ್ಯೋಗವೆಂದರೆ ಒಕ್ಕಲತನ ಇದನ್ನು ಮಾಡುವದೆಂದರೆ ಬಹಳ ಅಪಮಾನವೆನಿಸುವದು. ಯಾಕಂದರೆ, ಇಷ್ಟು ದಿವಸ ಕಷ್ಟಬಟ್ಟು ಕಲಿತು, ಕಡೆಗೆ ಮೇಳೀ ಹಿಡಿಯುವದು ಬಂತಲ್ಲ ! ಎಂದು ಚಿಂತೆಗೊಳಗಾಗುವರು. ಒಂದು ವೇಳೆ ಇದೆಲ್ಲವನ್ನು ಬದಿಗಿಟ್ಟು ದೈವದ ಮೇಲೆ ಭಾರ ಹಾಕಿ ಒಕ್ಕಲತನ ಮಾಡ ಬೇಕೆಂದರೆ, ಒಕ್ಕಲತನದ ಜ್ಞಾನವೂ, ರೂಢಿಯೂ, ಶಕ್ತಿಯೂ ಇರದ್ದರಿಂದ ಕಡೆಗೆ ಈ ಮಾರ್ಗವನ್ನೂ ಬಿಟ್ಟು ತಂದೆತಾಯಿಗಳಿಗೆ ಭಾರವಾಗಿ ಪರಪುಷ್ಟ ಜೀವಿ ಗಳಂತಾಗುವರು.

ಆದರೆ ಇತ್ತಿತ್ತಲಾಗಿ ವಿಶೇಷವಾಗಿ ಪ್ರಚಾರದಲ್ಲಿ ಬರುತ್ತಿರುವ ಬಾಯಸ್ ಕ್ಲಾಸುಗಳಲ್ಲಿಯ ವಿದ್ಯಾರ್ಥಿಗಳಿಗೆ ಒಕ್ಕಲತನದಲ್ಲಿ ಅಭಿರುಚಿ ಉತ್ಪನ್ನವಾಗು ವಂತೆಯೂ, ಕೆಲಮಟ್ಟಿಗೆ ಆಯಾ ವಿಷಯಗಳ ಜ್ಞಾನವಾಗುವಂತೆಯೂ, ಕೃಷಿ ಕರ್ಮ, ವನಸ್ಪತಿ, ದನಗಳ ಸಂಗೋಪನ ಮತ್ತು ಒಕ್ಕಲತನಕ್ಕೆ ಸಂಬಂಧಿಸಿದ ಗಣಿತ, ಭೂಗೋಲ ಮೊದಲಾದ ವಿಷಯಗಳನ್ನೂ, ಇವರಲ್ಲಿ ನಾಗರೀಕತೆಯು

ಉತ್ಪನ್ನವಾಗಲು ರಾಜಶಾಸನ, ಸೊಸಾಯಟಿ, ಗ್ರಾಮ ಕಾಯಿದೆ ಮೊದಲಾದ ವಿಷಯಗಳನ್ನೂ ಇವುಗಳಲ್ಲದೆ ಒಕ್ಕಲತನಕ್ಕೆ ಉಪಯೋಗ ಬೀಳುವಂಥ ಜತಿಗೆ, ಬಾರಕೋಲು, ಹಗ್ಗ, ಕಣ್ಣಿ ಹಾಗು ಗುಡಾರ ಪಟ್ಟಿ ಮೊದಲಾದವುಗಳನ್ನು ನಿಯಮಿಸುವದನ್ನು ಕಲಿಸುವದು

ಮೇಲೆ ಬರೆದ ಉಪಯುಕ್ತ ವಿಷಯಗಳು ಒಕ್ಕಲತನದ ಮುಲ್ಕೀ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಕಲಿಸಲ್ಪಡುವದರಿಂದ ಇವರು ಸಾದಾಮುಲ್ಕೀ ಪರೀಕ್ಷೆಯ ವಿದ್ಯಾರ್ಥಿಗಳಿಗಿಂತ ವ್ಯವಹಾರ ದೃಷ್ಟಿಯಿಂದ ಹೆಚ್ಚು ಜಾಣರಾಗುತ್ತಾರೆಂಬುದು ಸಹಜವೇ ಕಂಡು ಬರುವದು ಮತ್ತು ಬಾಯಸ ಕ್ಲಾಸ ಮುಲ್ಕೀ ಪರೀಕ್ಷೆಯ ವಿದ್ಯಾರ್ಥಿಗಳಲ್ಲಿ ತಮ್ಮ ಮನೆಯ ಹಾಗು ತಮ್ಮ ದೇಶದ ಮುಖ್ಯೋದ್ಯೋಗವಾದ ಒಕ್ಕಲತನದ ಬಗ್ಗೆ ಅಭಿಮಾನವೂ, ತಾವು ಸ್ವತಃ ಮಾಡಬೇಕೆಂಬ ಕುತೂಹಲವೂ ಹುಟ್ಟಿ, ಸ್ವಾವಲಂಬನದ ಮಾರ್ಗವು ಸುಗಮವಾಗುವದು. ಆದುದರಿಂದಲೇ ಪಂಜಾಬದಲ್ಲಿ ಬಾಯಿಸ್ ಕ್ಲಾಸುಗಳು ಜನತೆಯ ಪ್ರೇಮಕ್ಕೆ ಪಾತ್ರವಾಗಿ ವಿಶೇಷ ಪ್ರಸಾರವಾಗುತ್ತಲಿರುವವು.

ಈ ಪ್ರಕಾರ ಒಕ್ಕಲತನದ ವಿಷಯಕ್ಕೆ ಆದರ ಬುದ್ಧಿಯುಳ್ಳ ಬಾಯಸ್ ಕ್ಲಾಸ ಮುಲ್ಕೀ ಪರೀಕ್ಷೆಯ ವಿದ್ಯಾರ್ಥಿಗಳು ತಮಗುಂಟಾಗಿರುವ ಶಿಕ್ಷಣದ ಪೂರ್ಣತೆಗೋಸುಗ ದೇವೀಹೊಸೂರಲ್ಲಿರುವಂಥ ಮಾಧ್ಯಮಿಕ ಶೇತಕೀ ಶಾಲೆಯಲ್ಲಿ ಎರಡು ವರ್ಷದ ಅಭ್ಯಾಸ ಕ್ರಮವನ್ನು ಸರಿಯಾಗಿ ಮುಗಿಸಿದಲ್ಲಿ ಮಾದರಿಯ ಒಕ್ಕಲಿಗರಾಗುವರು ಇಂಥವರು ಸ್ವಾವಲಂಬನದಿಂದ ತಮ್ಮ ಜೀವಮಾನವನ್ನು ಸುಖವಾಗಿ ಕಳೆಯುವರಲ್ಲದೆ, ದೇಶದ ಹಿತಸಂಬಂಧಿಗಳಾಗುವರು. ಆದುದರಿಂದಲೇ ಸ್ಪಿಪ್ಪನೆಂಬ ತತ್ವಜ್ಞಾನಿಯು "ಎಲ್ಲಿ ನಿಮ್ಮ ಪೂರ್ವಜರು ಒಂದು ಕಾಳನ್ನು ಬೆಳೆಯುತ್ತಿದ್ದರೋ ಅಷ್ಟೇ ಭೂಮಿಯಲ್ಲಿ ನೀವು ಎರಡು ಕಾಳನ್ನು ಬೆಳೆಯುವಷ್ಟು ಜಾಣರಾದರೆ, ಜಗತ್ತಿನ ಸುಧಾರಣೆಗಾಗಿ ಹೆಣಗಾಡುತ್ತಿರುವ ಮುತ್ಸದ್ದಿಗಳಿಗಿಂತಲೂ ದೇಶಕ್ಕೆ ಹೆಚ್ಚಿಗೆ ಉಪಯೋಗವಾದಂತಾಗುವಿರಿ" ಎಂದು ಅಂದಿರುವರು.

ಆದ್ದರಿಂದ ಒಕ್ಕಲತನದ ಶಿಕ್ಷಣವನ್ನು ಹೊಂದಿ, ದೇಶದ ಏಳ್ಗೆಗೆ ಕಾರಣನಾಗಲು ತಯಾರಾದಂಥ ಬಾಯಸ ಕ್ಲಾಸ ಮುಲ್ಕೀ ಪರೀಕ್ಷೆಯ ವಿದ್ಯಾರ್ಥಿಯು ಸಾದಾ ಮುಲ್ಕೀ ಪರೀಕ್ಷೆಯ ವಿದ್ಯಾರ್ಥಿಗಿಂತ ವ್ಯವಹಾರ ದೃಷ್ಟಿಯಿಂದ ಹೆಚ್ಚಿನ ಯೋಗ್ಯತೆಯವನೆಂಬುದು ಸಿದ್ಧವಾಗುವದು.

ಹುಬ್ಬಳ್ಳಿ ಕನ್ನಡ ಗಂಡು ಮಕ್ಕಳ ಎನೆಯ ನಂಬರ ಶಾಲೆಯು.

ಈ ಶಾಲೆಯ ವರದಿಯು ಮತ್ತು ವಾರ್ಷಿಕ ಇನಾಮಿನ ಸಮಾರಂಭದ ಕಾರ್ಯ ಕ್ರಮವು ನಮ್ಮ ಕೈಸೇರಿದೆ.

ಈ ಶಾಲೆಯನ್ನು ಅನೇಕ ಶಿಕ್ಷಣತಜ್ಞರೂ ಶಿಕ್ಷಣಾಧಿಕಾರಿಗಳೂ ನೋಡಿ ತಮ್ಮ ಸದಭಿಪ್ರಾಯವನ್ನು ವ್ಯಕ್ತಪಡಿಸಿರುವರು. ಈ ಶಾಲೆಯನ್ನು ನಾವಾದರೂ ನೋಡಿರುವೆವು. ಈಗಿನ ದೋಷವಾಯವಾದ ಶಿಕ್ಷಣಪದ್ಧತಿಯಲ್ಲಿ ಈ ಶಾಲೆಯ ಅಧ್ಯಾಪಕರು ಶಕ್ಯವಿದ್ದವುಟ್ಟಿಗೆ ಇದನ್ನು ಮಾದರಿಯ ಶಾಲೆಯನ್ನಾಗಿ ಮಾಡಿರುವರು. ಕನ್ನಡ ನಾಲ್ಕು ಇಯತ್ತೆಯವರೆಗೆ ಅಭ್ಯಾಸವಾಗುವದು. ಕಟ್ಟಡವು ಸಾಮಾನ್ಯವಾಗಿದೆ. ಒಬ್ಬ ಶಿಕ್ಷಕನಿಗೆ ೪೦ ವಿದ್ಯಾರ್ಥಿಗಳ ಪ್ರಮಾಣದೆ ಬೇರೆ ಸಾಲೆಗಳಕಿಂತ ಇದಕ್ಕೆ ಹೆಚ್ಚಿನ ಸೌಲಭ್ಯಗಳೇನೂ ಇಲ್ಲ. ಆದಾಗ್ಯೂ ಇದರ ಉತ್ಕರ್ಷಕ್ಕೆ ಶಿಕ್ಷಕರ ಉತ್ಸಾಹಪರಿಶ್ರಮಗಳೇ ಕಾರಣವು. ವಾಡಿಕೆಯಾಗಿ ಪ್ರಾಥಮಿಕ ಶಾಲೆಗಳಲ್ಲಿ ಆಗತಕ್ಕ ವಿಷಯಗಳ ಅಭ್ಯಾಸವಲ್ಲದೆ (ಅದಂತೂ ಒಳ್ಳೇ ಚನ್ನಾಗಿಯೇ ಇದೆ) ವಿದ್ಯಾರ್ಥಿಗಳಿಗೆ ಅವರವರ ಯೋಗ್ಯತೆಗೆ ಸರಿಯಾಗಿ ಶಾರೀರಕ, ಬೌದ್ಧಿಕ, ನೈತಿಕ, ಮತ್ತು ಕಲಾಕೌಶಲ್ಯದ ಶಿಕ್ಷಣವು ಕೊಡಲ್ಪಡುತ್ತದೆ ಈ ಶಾಲೆಯನ್ನು ನೋಡದವನಿಗೆ ಇಲ್ಲಿಯ ಅಭಿನಂದನೀಯವಾದ ಶಿಕ್ಷಣ ಪದ್ಧತಿಯ, ಕಲ್ಪನೆಯು ಚನ್ನಾಗಿ ಆಗದು. ಎಲ್ಲ ಕೆಲಸಗಳು ಆ ಆ ವೇಳೆಗೆ ಸರಿಯಾಗಿ ಅಚ್ಚುಕಟ್ಟುತನದಿಂದಲೂ, ಸಿಸ್ತಿನಿಂದಲೂ ನಡೆಯುವವು. ಅಭ್ಯಾಸವಾದರೂ ಆ ಆ ಮಿತಿಗೆ ಆಗಬೇಕಾದಷ್ಟು ಆ ಆ ವಿಷಯಗಳ ಅಭ್ಯಾಸವು ಆಗೇ ತೀರುವದು. ಇದೆಲ್ಲ ಶಿಕ್ಷಕರ ಉದ್ಯೋಗಾಸಕ್ತಿ, ನಿಯಮಿತತನ, ಪರಿಶ್ರಮ ಮತ್ತು ಉತ್ಸಾಹ ಇವುಗಳನ್ನು ಅವಲಂಬಿಸಿರುವದೆಂದು ಬೇರೆ ಹೇಳಲವಶ್ಯವಿಲ್ಲ

ಶಿಕ್ಷಣ ವಿಷಯಗಳು:— ಶಾರೀರಕ ಶಿಕ್ಷಣ:— ಪ್ರತಿನಿತ್ಯ ಮುಂಜಾನೆ ದೇವರ ಪ್ರಾರ್ಥನೆ ಮತ್ತು ತಾಯ್ನಾಡಿನ ಹಾಡು ಜರುಗಿದನಂತರ, ಶಾಲೆಯು ಮುಂಬದಿಯಲ್ಲಿ ಕೂತು ಏಳುವದು, ಸೂರ್ಯ ನಮಸ್ಕಾರ ಹಾಕುವದು; ಸಾಯಂಕಾಲದಲ್ಲಿ ಓಡುವದು, ಲಾಠೀ ತಿರುವುವದು, ಹಾರುವದು, ಜಿಗಿಯುವದು ಮುಂತಾದ ಸ್ಪರ್ಧೆಯ ಆಟಗಳು, ಖೋ ಖೋ, ಕುಸ್ತಿ ಮೊದಲಾದವು ನಿರ್ದಿಷ್ಟ ಕಾರ್ಯಕ್ರಮದಂತೆ ಜರಗುವವು ವಿದ್ಯಾರ್ಥಿಗಳ ಪ್ರಕೃತಿ ಪರೀಕ್ಷೆಗೆ ಸಹ ಸ್ಥಾನಿಕ ಡಾಕ್ಟರರ ಸಹಾಯವು ದೊರಕಿಸಲ್ಪಡುವದು. ಸ್ಕೌಟ ಟ್ರೂಪ ಇರುವದು ವರ್ಷಕ್ಕೆ ಎರಡಾವರ್ತಿ ಪಂದ್ಯಾಟಗಳು ಜರುಗಿಸಲ್ಪಡುವವು. ಮತ್ತು ಮೆಚ್ಚುಗೆಗಳು ಕೊಡಲ್ಪಡುವವು.

ಕೈಗಾರಿಕೆಯ ಶಿಕ್ಷಣಃ--ಎಲ್ಲ ವರ್ಗಗಳಿಗೂ ಚಿತ್ರಕಲೆ ಕಲಿಸಲ್ಪಡುವದು ನೂಲುವದು, ಕಾಗದ ಮಡಿಚುವದು, ಹೆಣೆಯುವದು, ಪ್ರಿಂಕಲ್ ವರ್ಕ ಮೊದಲಾದವು ಕಲಿಸಲ್ಪಡುವವು. ಮೇಲಿನ ವರ್ಗದವರಿಗೆ ಡ್ರಾಯಿಂಗ, ಭೂಮಿತಿ, ಕೇವೆಯ ಕಲ್ಲಿನಲ್ಲಿ ಸುಳವು ಮಣಿ ಮುಂತಾದವನ್ನು ಕೆತ್ತುವದು, ಫ್ರೇಮು ಮಾಡುವದು, ಕಾಜು ಕೊರೆಯುವದು, ವಾರ್ನೀಸು, ಸಬಕಾರ ಸಾಯರಪ್, ಮುಂತಾದ್ದು. ಮಾಡುವದು, ಸ್ಪ್ರೀವರ್ಕ, ಫೆರೊಸಾಯನಡ ವರ್ಕ, ಬೋರ್ಡ ಬರೆಯುವದು, ಮುಂತಾದವನ್ನು ಕಲಿಸುವರು. ವರ್ಷಕ್ಕೊಮ್ಮೆ ಈ ಶಾಲೆಯ ಹುಡುಗರ ಮತ್ತು ಶಿಕ್ಷಕರ ಕಲಾಕೌಶಲ್ಯದ ಪ್ರದರ್ಶನವಾಗುವದು.

ನೈತಿಕ ಶಿಕ್ಷಣ--ಪ್ರತಿ ಶುಕ್ರವಾರ ಒಂದು ತಾಸು ನೈತಿಕ ಶಿಕ್ಷಣವು ಕೊಡಲ್ಪಡುವದು. ಇದರಲ್ಲಿ [೧] ಶಿಶುವರ್ಗ. [೨] ೧, ೨, ಇಯತ್ತೆಗಳು [೩] ೩, ೪ ಇಯತ್ತೆಗಳು ಈ ಪ್ರಕಾರ ಮೂರು ವರ್ಗಗಳು. ಶಿಕ್ಷಕರೂ ಕೆಲವು ಪ್ರಸಂಗಗಳಲ್ಲಿ ತಜ್ಞ ಜನರೂ ಬೊಧಪ್ರದವಾದ ಭಾಷಣಗಳನ್ನು ಮಾಡುವರು. ಮೇಲಿನ ವರ್ಗದ ಹುಡುಗರಿಗೆ ಭಾಷಣಮಾಡಲಿಕ್ಕೆ ಪ್ರೋತ್ಸಾಹನವುಂಟು.

ವಿನೋದಪರ ಸಭೆಃ--ಈ ಕಾಲಕ್ಕೆ ಹುಡುಗರಲ್ಲಿ ಸ್ವಾಭಾವಿಕವಾದ, ಅನುಕರಣಶೀಲತೆ ವಿನೋದ ಮುಂತಾದವುಗಳಿಗೆ ಪ್ರೋತ್ಸಾಹನವು ಕೊಡಲ್ಪಡುವದು. ಇದೇ ಮುಖ್ಯವಾಗಿ ಶಿಕ್ಷಣ ಪದ್ಧತಿಯು ಸವಿಾಚೀನವಾದ ವೇಳಾಪತ್ರಿಕೆಯ ಪ್ರಕಾರ ನಿಯವಿತತನದಿಂದ ಜರಗುವದು.

ವಿದ್ಯಾರ್ಥಿಗಳ ಪ್ರಗತಿ ಪತ್ರಿಕೆಯು ಮೂರುತಿಂಗಳಿಗೊಮ್ಮೆ ಕಳಿಸಲ್ಪಡುವದು. ಅದರಲ್ಲಿ, ಅಭ್ಯಾಸ, ನಡತೆ, ಹಾಜರಿ, ತೂಕ, ವಿಶಿಷ್ಟ ವಿಷಯಗಳಲ್ಲಿ ಪ್ರಗತಿ, ಮುಂತಾದವು ತಿಳಿಸಲ್ಪಡುವವು. ಹುಡುಗರ ಅನಿಯಮಿತತನ, ಅಭ್ಯಾಸ ಮಾಡದೇ ಇರೋಣ, ಶಾಲೆಯ ನಿಯಮಗಳನ್ನು ಪಾಲಿಸದಿರೋಣ, ಆಟನೋದ ಲಾದವುಗಳಲ್ಲಿ ನಿತ್ಯ ಸೇರದಿರೋಣ ಮೊದಲಾದ ಬಗ್ಗೆ ಪಾಲಕರಿಗೆ ಕಂಪ್ಲೆಂಟ ರಿಪೋರ್ಟ ಕಳಿಸಲ್ಪಡುವದು. ಇದರಮೇಲಿಂದ ವಿದ್ಯಾರ್ಥಿಗಳಿಗೆ ನಿಜವಾದ ಶಿಕ್ಷಣವು ದೊರೆಯುವದೆಂದು ಹೊತ್ತಾಗದೇ ಇರದು:—

ಈ ಬಗ್ಗೆ ಕೆಲವು ತಜ್ಞರ ಅಭಿಪ್ರಾಯಕೊಡದೆ ಇರಲಾರೆವು.

ಸ್ಕೂಲಬೋರ್ಡಿನ ಚೇಅರಮನ್ನರ ಸಂಗಡ ಶಾಲೆಯನ್ನು ತಪಾಸಮಾಡಿದೆನು ಶಾಲೆಯ ಕಟ್ಟಡವು ತಕ್ಕಮಟ್ಟಿಗೆ ಚನ್ನಾಗಿ ಅದೆ. ಆದರೆ ಹೆಚ್ಚಿನ ಬೆಳಕಿನ ಸಲುವಾಗಿ ಒಂದೆರಡು ಕಿಡಕಿಗಳನ್ನು ತೆಗೆಯಿಸಬಹುದು. ಅತಿ ಚುರಕಾದ ಚನ್ನಾಗಿ ಶಿಕ್ಷಣ ಹೊಂದಿದ ಸಾಟ ಚಮು ಒಂದು ಈ ಶಾಲೆಯಲ್ಲಿ ಅದೆ. ಉಗೆ

ಹುಬ್ಬಳ್ಳಿ ಕನ್ನಡ ಗಂಡು ಮಕ್ಕಳ ಆನೆಯ ನಂಬರ ಶಾಲೆಯು.

ಈ ಶಾಲೆಯ ವರದಿಯು ಮತ್ತು ವಾರ್ಷಿಕ ಇನಾಮಿನ ಸಮಾರಂಭದ ಕಾರ್ಯ ಕ್ರಮವು ನಮ್ಮ ಕೈಸೇರಿದೆ.

ಈ ಶಾಲೆಯನ್ನು ಅನೇಕ ಶಿಕ್ಷಣತಜ್ಞರೂ ಶಿಕ್ಷಣಾಧಿಕಾರಿಗಳೂ ನೋಡಿ ತಮ್ಮ ಸದಭಿಪ್ರಾಯವನ್ನು ವ್ಯಕ್ತಪಡಿಸಿರುವರು. ಈ ಶಾಲೆಯನ್ನು ನಾವಾದ ರೂ ನೋಡಿರುವೆವು. ಈಗಿನ ದೋಷಮಯವಾದ ಶಿಕ್ಷಣಪದ್ಧತಿಯಲ್ಲಿ ಈ ಶಾಲೆಯ ಅಧ್ಯಾಪಕರು ಶಕ್ಯವಿದ್ದಮಟ್ಟಿಗೆ ಇದನ್ನು ಮಾದರಿಯ ಶಾಲೆಯನ್ನಾಗಿ ಮಾಡಿರುವರು. ಕನ್ನಡ ನಾಲ್ಕು ಇಯತ್ತೆಯವರೆಗೆ ಅಭ್ಯಾಸವಾಗುವದು. ಕಟ್ಟಡವು ಸಾಮಾನ್ಯವಾಗಿದೆ. ಒಬ್ಬ ಶಿಕ್ಷಕನಿಗೆ ೪೦ ವಿದ್ಯಾರ್ಥಿಗಳ ಪ್ರಮಾಣದ ಬೇರೆ ಸಾಲೆಗಳಕಿಂತ ಇದಕ್ಕೆ ಹೆಚ್ಚಿನ ಸೌಲಭ್ಯಗಳೇನೂ ಇಲ್ಲ. ಆದಾಗ್ಯೂ ಇದರ ಉತ್ಕರ್ಷಕ್ಕೆ ಶಿಕ್ಷಕರ ಉತ್ಸಾಹಪರಿಶ್ರಮಗಳೇ ಕಾರಣವು. ವಾಡಿಕೆಯಾಗಿ ಪ್ರಾಥಮಿಕ ಶಾಲೆಗಳಲ್ಲಿ ಅಗತ್ಯ ವಿಷಯಗಳ ಅಭ್ಯಾಸವಲ್ಲದೆ (ಅದಂತೂ ಒಳ್ಳೇ ಚನ್ನಾಗಿಯೇ ಇದೆ) ವಿದ್ಯಾರ್ಥಿಗಳಿಗೆ ಅವರವರ ಯೋಗ್ಯತೆಗೆ ಸರಿಯಾಗಿ ಶಾರೀರಕ, ಬೌದ್ಧಿಕ, ನೈತಿಕ, ಮತ್ತು ಕಲಾಕೌಶಲ್ಯದ ಶಿಕ್ಷಣವು ಕೊಡಲ್ಪಡುತ್ತದೆ ಈ ಶಾಲೆಯನ್ನು ನೋಡದವನಿಹ ಇಲ್ಲಿಯ ಅಭಿನಂದನೀಯವಾದ ಶಿಕ್ಷಣ ಪದ್ಧತಿಯ ಕಲ್ಪನೆಯು ಚನ್ನಾಗಿ ಆಗದು. ಎಲ್ಲ ಕೆಲಸಗಳು ಆ ಆ ವೇಳೆಗೆ ಸರಿಯಾಗಿ ಅಚ್ಚುಕಟ್ಟುತನದಿಂದಲೂ, ಸಿಸ್ತಿನಿಂದಲೂ ನಡೆಯುವವು. ಅಭ್ಯಾಸವಾದರೂ ಆ ಆ ಮಿತಿಗೆ ಆಗಬೇಕಾದಷ್ಟು, ಆ ಆ ವಿಷಯಗಳ ಅಭ್ಯಾಸವು ಆಗೇ ತೀರುವದು. ಇದೆಲ್ಲ ಶಿಕ್ಷಕರ ಉದ್ಯೋಗಾಸಕ್ತಿ, ನಿಯಮಿತತನ, ಪರಿಶ್ರಮ ಮತ್ತು ಉತ್ಸಾಹ ಇವುಗಳನ್ನು ಅವಲಂಬಿಸಿರುವದೆಂದು ಬೇರೆ ಹೇಳಲವಶ್ಯವಿಲ್ಲ

ಶಿಕ್ಷಣ ವಿಷಯಗಳು:— ಶಾರೀರಕ ಶಿಕ್ಷಣ:— ಪ್ರತಿನಿತ್ಯ ಮುಂಜಾನೆ ದೇವರ ಪ್ರಾರ್ಥನೆ ಮತ್ತು ತಾಯ್ನಾಡಿನ ಹಾಡು ಜರುಗಿದನಂತರ, ಶಾಲೆಯು ಮುಂಬದಿಯಲ್ಲಿ ಕೂತು ಏಳುವದು, ಸೂರ್ಯ ನಮಸ್ಕಾರ ಹಾಕುವದು; ಸಾಯಂಕಾಲದಲ್ಲಿ ಓಡುವದು, ಲಾಠೀ ತಿರುವುವದು, ಹಾರುವದು, ಜಿಗಿಯುವದು ಮುಂತಾದ ಸ್ಫೂರ್ತಿಯ ಆಟಗಳು, ಖೋ ಖೋ, ಕುಸ್ತಿ ಮೊದಲಾದವು ನಿರ್ದಿಷ್ಟ ಕಾರ್ಯಕ್ರಮದಂತೆ ಜರಗುವವು ವಿದ್ಯಾರ್ಥಿಗಳ ಪ್ರಕೃತಿ ಪರೀಕ್ಷೆಗೆ ಸಹ ಸ್ಥಾನಿಕ ಡಾಕ್ಟರರ ಸಹಾಯವು ದೊರಕಿಸಲ್ಪಡುವದು. ಸ್ಕೌಟ ಟ್ರೂಪ ಇರುವದು ವರ್ಷಕ್ಕೆ ಎರಡಾವರ್ತಿ ಹಂದ್ಯಾಟಗಳು ಜರುಗಿಸಲ್ಪಡುವವು. ಮತ್ತು ಮೆಚ್ಚುಗೆಗಳು ಕೊಡಲ್ಪಡುವವು.

ಕೈಗಾರಿಕೆಯ ಶಿಕ್ಷಣಃ--ಎಲ್ಲ ವರ್ಗಗಳಿಗೂ ಚಿತ್ರಕಲೆ ಕಲಿಸಲ್ಪಡುವದು ನೂಲುವದು, ಕಾಗದ ಮಡಿಚುವದು, ಹೆಣೆಯುವದು, ಪ್ಲಿಂಕಲ್ ವರ್ಕ ಮೊದಲಾದವು ಕಲಿಸಲ್ಪಡುವವು. ಮೇಲಿನ ವರ್ಗದವರಿಗೆ ಡ್ರಾಯಿಂಗ, ಭೂಮಿತಿ, ಕೇವೆಯ ಕಲ್ಲಿನಲ್ಲಿ ಸುಳವು ಮುಂತಾದವನ್ನು ಕೆತ್ತುವದು, ಫ್ರೇಮು ಮಾಡುವದು, ಕಾಜು ಕೊರೆಯುವದು, ವಾರ್ನೀಸು, ಸಬಕಾರ ಸಾಯರಪ್, ಮುಂತಾದ್ದು. ಮಾಡುವದು, ಸ್ಕ್ರೀವರ್ಕ, ಫೆರೊಸಾಯನಡ ವರ್ಕ, ಬೋರ್ಡ ಬರೆಯುವದು, ಮುಂತಾದವನ್ನು ಕಲಿಸುವರು. ವರ್ಷಕ್ಕೊಮ್ಮೆ ಈ ಶಾಲೆಯ ಹುಡುಗರ ಮತ್ತು ಶಿಕ್ಷಕರ ಕಲಾಕೌಶಲ್ಯದ ಪ್ರದರ್ಶನವಾಗುವದು.

ನೈತಿಕ ಶಿಕ್ಷಣ--ಪ್ರತಿ ಶುಕ್ರವಾರ ಒಂದು ತಾಸು ನೈತಿಕ ಶಿಕ್ಷಣವು ಕೊಡಲ್ಪಡುವದು. ಇದರಲ್ಲಿ [೧] ಶಿಶುವರ್ಗ. [೨] ೧, ೨, ಇಯತ್ತೆಗಳು [೩] ೩, ೪ ಇಯತ್ತೆಗಳು ಈ ಪ್ರಕಾರ ಮೂರು ವರ್ಗಗಳು. ಶಿಕ್ಷಕರೂ ಕೆಲವು ಪ್ರಸಂಗಗಳಲ್ಲಿ ತಜ್ಞ ಜನರೂ ಬೊಧಪ್ರದವಾದ ಭಾಷಣಗಳನ್ನು ಮಾಡುವರು. ಮೇಲಿನ ವರ್ಗದ ಹುಡುಗರಿಗೆ ಭಾಷಣಮಾಡಲಿಕ್ಕೆ ಪ್ರೋತ್ಸಾಹನವುಂಟು.

ವಿನೋದಪರ ಸಭೆಃ--ಈ ಕಾಲಕ್ಕೆ ಹುಡುಗರಲ್ಲಿ ಸ್ವಾಭಾವಿಕವಾದ, ಅನುಕರಣಶೀಲತೆ ವಿನೋದ ಮುಂತಾದವುಗಳಿಗೆ ಪ್ರೋತ್ಸಾಹನವು ಕೊಡಲ್ಪಡುವದು. ಇದೇ ಮುಖ್ಯವಾಗಿ ಶಿಕ್ಷಣ ಪದ್ಧತಿಯು ಸವಿೂಚೀನವಾದ ವೇಳಾಪತ್ರಿಕೆಯ ಪ್ರಕಾರ ನಿಯವಿತತನದಿಂದ ಜರಗುವದು.

ವಿದ್ಯಾರ್ಥಿಗಳ ಪ್ರಗತಿ ಪತ್ರಿಕೆಯು ಮೂರುತಿಂಗಳಿಗೊಮ್ಮೆ ಕಳಿಸಲ್ಪಡುವದು. ಅದರಲ್ಲಿ, ಅಭ್ಯಾಸ, ನಡತೆ, ಹಾಜರಿ, ತೂಕ, ವಿಶಿಷ್ಟ ವಿಷಯಗಳಲ್ಲಿ ಪ್ರಗತಿ, ಮುಂತಾದವು ತೀಸಲ್ಪಡುವವು. ಹುಡುಗರ ನಿಯಮಿತತನ, ಅಭ್ಯಾಸ ಮಾಡದೇ ಇರೋಣ, ಶಾಲೆಯ ನಿಯಮಗಳನ್ನು ಪಾಲಿಸದಿರೋಣ, ಆಟಮೊದಲಾದವುಗಳಲ್ಲಿ ನಿತ್ಯ ಸೇರದಿರೋಣ ಮೊದಲಾದ ಬಗ್ಗೆ ಪಾಲಕರಿಗೆ ಕಂಪ್ಲೆಂಟು ರಿಪೋರ್ಟ ಕಳಿಸಲ್ಪಡುವದು. ಇದರಮೇಲಿಂದ ವಿದ್ಯಾರ್ಥಿಗಳಿಗೆ ನಿಜವಾದ ಶಿಕ್ಷಣವು ದೊರೆಯುವದೆಂದು ಗೊತ್ತಾಗದೇ ಇರದು:--

ಈ ಬಗ್ಗೆ ಕೆಲವು ತಜ್ಞರ ಅಭಿಪ್ರಾಯಕೊಡದೆ ಇರಲಾರೆವು.

ಸ್ಕೂಲಬೋರ್ಡಿನ ಚೇರಮನ್ನರ ಸಂಗಡ ಶಾಲೆಯನ್ನು ಸಪಾಸಮಾಡಿದೆನು ಶಾಲೆಯ ಕಟ್ಟಡವು ತಕ್ಕಮಟ್ಟಿಗೆ ಚನ್ನಾಗಿ ಅದೆ. ಆದರೆ ಹೆಚ್ಚಿನ ಬೆಳಕಿನ ಸಲುವಾಗಿ ಒಂದೆರಡು ಕಿಡಕಿಗಳನ್ನು ತೆಗೆಯಿಸಬಹುದು. ಅತಿ ಚುರುಕಾದ ಚನ್ನಾಗಿ ಶಿಕ್ಷಣ ಹೊಂದಿದ ಸಾಟ ಚಮು ಒಂದು ಈ ಶಾಲೆಯಲ್ಲಿ ಅದೆ. ಉಗೆ

ಬಂಡಿಯ, ಮೋಟಾರಿನ ಮತ್ತು ಪಕ್ಷಿಗಳ ಧ್ವನಿಯನ್ನು ಅನುಕರಣಮಾಡುವ ಕೆಲವು ಹುಡುಗರ ಶಕ್ತಿಯು ಅತಿ ವಿಸ್ಮಯದಾಯಕವಾಗಿದೆ ಹುರಪಿನಿಂದಲೂ ಚೈತನ್ಯದಿಂದಲೂ, ಶಾಲೆಯು ತುಂಬಿ ತುಳುಕುವದರಿಂದ ಹೆಡ್ ಮಾಸ್ತರರನ್ನು ಮತ್ತು ಉಳಿದ ಶಿಕ್ಷಕರನ್ನು ಅಭಿನಂದಿಸಶಕ್ಯವಾಗಿದೆ.

ತಾ-೨೩-೪-೨೭ Sadarangani.

ಎ. ಇನಸ್ಪೆಕ್ಟರ ದಕ್ಷಿಣಭಾಗ.

ಈ ದಿನ ೩೧ ಘಂಟೆಗೆ ಶಾಲೆಯನ್ನು ನೋಡಲಾಯಿತು. ಶಾಲೆಯಲ್ಲಿ ಸ್ವಚ್ಛತೆಯನ್ನು ಅಚ್ಚಕಟ್ಟುತನವನ್ನು ಬಾಲಕರ ಅಜ್ಞಾಧಾರಕ ಗುಣವನ್ನೂ ಕಂಡು ಆನಂದವಾಯಿತು ಹೆಡ್ ಮಾಸ್ತರ ಶ್ರೀಯುತ ಕಟ್ಟೀಮನಿಯವರು ಉತ್ಸಾಹಿಗಳೂ ಕರ್ತೃತ್ವಶಕ್ತಿಯುಳ್ಳವರು ತಮ್ಮ ಶಾಲೆಯನ್ನು ಮಾದರಿಯ ಶಾಲೆಯನ್ನಾಗಿ ಮಾಡಬೇಕೆಂಬ ಉತ್ಕಟ ಆಶೆಯುಳ್ಳವರು ಅವರ ಪ್ರೋತ್ಸಾಹದಿಂದಲೂ ಪ್ರೇಮದ ವರ್ತನದಿಂದಲೂ ಅಶಿಕ್ಷಂಟರವರಲ್ಲಿ ಸ್ಪೃಹಣೀಯವಾದ ಕರ್ತವ್ಯ ಜಾಗ್ರತೆಯುಂಟಾದುದು ವ್ಯಕ್ತವಾಗುತ್ತದೆ ಪಾಠಗಳನ್ನು ಕಲಿಸುವ ಕ್ರಮವು ಚನ್ನಾಗಿದೆ. ಹುಡುಗರಲ್ಲೂ ಉತ್ಸಾಹವು ತುಂಬಿತುಳುಕುತ್ತಿರುವದು. ಶಿಕ್ಷಕರ ಜಾಗ್ರತೆಯಿಂದ ಹುಡುಗರು ಪಾಠಗಳಲ್ಲಿ ಚನ್ನಾಗಿ ಲಕ್ಷ ಪೂರೈಸುತ್ತಿರುವದು ಕಂಡುಬರುತ್ತದೆ. ಶಿಕ್ಷಕರು ಶಿಕ್ಷಣದ ಉನ್ನತಿಗಾಗಿ ಸಕಲದೃಷ್ಟಿಯಿಂದಲೂ ದುಡಿಯುತ್ತಿರುವರು. ಡ್ರಾಯಿಂಗ, ಕೈಗಾರಿಕೆ ಇವೆಲ್ಲವೂ ದರ್ಶನಿಯವಾಗಿವೆ ಸ್ಕೌಟಶಿಕ್ಷಣವು ಈ ಶಾಲೆಯ ವಿಶೇಷ ಲಕ್ಷಣವಾಗಿರುವದು. ಬಾಲಕರ ಅಕ್ಷರವನ್ನು ಸುಧಾರಿಸುವದರ ಕಡೆಗೆ ಚನ್ನಾಗಿ ಲಕ್ಷ ಪೂರೈಸುತ್ತಿರುವರು. ಶಾಲಾಗೃಹದ ಕಟ್ಟಡವು ಈ ಶಾಲೆಗೆ ತಕ್ಕಂತೆ ಇರದಿದ್ದರೂ ಶಿಕ್ಷಕರ ಚಿತ್ರಕಲೆಯ ಮೂಲಕ ಕೋಣೆಗಳು ಅತ್ಯಂತ ಮನೋಹರವಾಗಿ ಕಾಣುತ್ತವೆ. ಇಂಥಹ ಶಾಲೆಗಳಲ್ಲಿ ಮುನ್ಸಿಪಾಲ್ಟಿಯವರು ಹೆಚ್ಚಿನ ಸೌಲತ್ತುಗಳನ್ನು ಪೂರೈಸಿ ಕೊಟ್ಟು ಇತರ ಶಾಲೆಗಳು ಇದನ್ನು ಅನುಕರಣಮಾಡುವಂತೆ ಮಾಡುವದರಿಂದ ಪ್ರಾಥಮಿಕ ಶಿಕ್ಷಣಕ್ಕೆ ಚನ್ನಾಗಿ ಇಂಬುಕೊಟ್ಟಂತಾಗುವದು. ಒಟ್ಟಿಗೆ ಈ ಶಾಲೆಯು ಮಾದರೀಯ ಶಾಲೆಯಾಗಿರುವದು ಎಂಬದರಲ್ಲಿ ಸಂದೇಹವಿಲ್ಲ ಶಿಕ್ಷಣಕ್ಕೆ ಸಂಬಂಧಪಟ್ಟ ಪ್ರತಿಯೊಬ್ಬ ವ್ಯಕ್ತಿಯು ಈ ಶಾಲೆಯನ್ನು ಸಂದರ್ಶಿಸಿ ಅನುಭವ ಹೊಂದುವದು ಯುಕ್ತವಾಗಿದೆ. ಕಾರಣ ಈ ಶಾಲೆಯು ಎಲ್ಲರ ಪ್ರೋತ್ಸಾಹಕ್ಕೆ ಪಾತ್ರವಾಗಿದೆ.

ತಾ-೨೭-೯-೨೮

ಗಣೇಶ ರಾಮಚಂದ್ರ ಯಾಜಿ
ಸಂಪಾದಕ ಕರ್ನಾಟಕ ಧುರೀಣ
ಮತ್ತು
ಸೂ. ಜೋ. ಮೆಂ. ಉತ್ತರ ಕನ್ನಡ.

ಸಾಲೆಯನ್ನು ನೋಡಿದೆನು. ಶಾಲೆಯ ಪ್ರದರ್ಶನದ ಕಲಾಕೌಶಲ್ಯದ ಒಡವೆಗಳನ್ನು ನೋಡಿದೆನು. ಅವು ಬಹಳ ಮನೋಹರವಾಗಿದ್ದವು. ಇಷ್ಟು ವಿಶೇಷತಃ ಶಿಕ್ಷಣದೃಷ್ಟಿಯಿಂದ ಉಪಯುಕ್ತ ಮತ್ತು ಮನೋಹರ ವಸ್ತುಗಳ ಸುಂದರ ಪ್ರದರ್ಶನವನ್ನು ಏರ್ಪಡಿಸಿದ್ದಕ್ಕೆ ಶಿಕ್ಷಕರು ಬಹಳ ಗೌರವಕ್ಕೆ ಭಾಜನರಿದ್ದಾರೆ. ವಿದ್ಯಾರ್ಥಿಗಳು ತಯಾರಿಸಿದ ಕೆಲವು ಚಿತ್ರಗಳು ಮತ್ತು ಒಡವೆಗಳು ಅಭಿನಂದನೀಯವಾಗಿವೆ. ಶಿಕ್ಷಕನು ಶಾಲೆಯನ್ನು ಶಾರೀರಕ, ಮಾನಸಿಕ, ಮತ್ತು ನೈತಿಕ ವಿಷಯಗಳಲ್ಲಿ ಸುಧಾರಿಸುವದಕ್ಕೆ ತನ್ನಿಂದಾದಷ್ಟು ಪ್ರಯತ್ನಿಸುತ್ತಿರುವದಾಗಿ ಕಂಡುಬರುತ್ತದೆ. ಉತ್ತೇಜನಕ್ಕೆ ಅರ್ಹನಾಗಿರುವನು.

೨೩-೪-೨೯ G. R. Bhandiwad.
ಸೀ ಅ. ಡೆ. ಇನ್ಸಪೆಕ್ಟರ.

ಇನಾಮಿನ ಸಮಾರಂಭದ ಕೆಲಸವನ್ನು ಅಧ್ಯಕ್ಷನಾಗಿ ಮುಗಿಸಿದಮೇಲೆ ಶಾಲೆಯನೆಲ್ಲ ಪರಿಸೀಲಿಸಿ ನೋಡಿದೆನು. ಶಾಲೆಯು ವಿಶೇಷವಾಗಿ ಚಿತ್ರ ಕಲಾಕೌಶಲ್ಯದ ಶಾಲೆಯಂತೆ ಕಂಗೊಳಿಸುವದು. ಶಿಕ್ಷಕರು ತಮ್ಮ ಹೆಚ್ಚಿನ ವೇಳೆಯಲ್ಲಿ ದುಡಿದು ಔದ್ಯೋಗಿಕ ಜ್ಞಾನವನ್ನು ಹುಡುಗರಿಗೆ ಮಾಡಿಕೊಡುವರು ಈ ಬಗ್ಗೆ ಬಹಳೇ ಅಭಿನಂದನಕ್ಕೆ ಭಾಜನರಿದ್ದಾರ. ಕಲಾಕೌಶಲ್ಯದ ವರ್ಗಕ್ಕೆ ಇಷ್ಟು ಲಕ್ಷ್ಯ ಪೂರೈಸಿದ ಈ ತರದ ಪಾಠಮಿಕ ಶಾಲೆಯನ್ನ ನಾನು ಈ ಮುಂಜೆ ನೋಽಲ್ಲ. ಮುನಸಿಪಾಲಟಿಯವರು ಈ ವರ್ಗಗಳ ಬಗ್ಗೆ ಹೆಚ್ಚು ಹಣವನ್ನು ವೆಚ್ಚ ಮಾಡುವದು ಉಹಿತವದೆ ಮತ್ತು ತಮ್ಮ ಆಡಳಿತದಲ್ಲಿದ್ದ ಶಾಲೆಗಳಲ್ಲಿ ಈ ವರ್ಗಗಳನ್ನು ಜೋಡಿಸುವರೆಂದು ಬಯಸುತ್ತೇನೆ. ಸ್ಕೌಟಿಂಗ ಮತ್ತು ಸೂರ್ಯ ನಮಸ್ಕಾರ ಇವುಗಳ ಅಧ್ಯಯನ, ಅಧ್ಯಾಪನಗಳು ಬಹಳ ಉಮೇದಿಯಿಂದ ನಡೆಯುತ್ತವೆ. ಮತ್ತು ಯಶಸ್ವಿಯಾಗಿವೆ ಹೆಡ್ ಮಾಸ್ತರರು, ಮತ್ತು ಕೈಗಾರಿಕೆಯ ವರ್ಗದ ಶಿಕ್ಷಕರಾದ ಶ್ರೀ. ಅಯ್ಯಣ್ಣನವರು ಹೆಚ್ಚಿಗೆ ವೇಳೆ ಕೆಲಸಮಾಡಿ ಈ ಶಾಲೆಯನ್ನು ಮಾದರಿಯನ್ನಾಗಿ ಮಾಡಿರುವರು. ಕಾರಣ ಇವರನ್ನು ಅಭಿನಂದನ ಮಾಡತಕ್ಕದ್ದಾಗಿದೆ.

೨೫-೪-೨೯ M. B. Honnawar, B. SC. LL. B.
ಜಾ. ಸಬ್‌ಜಜ್ಜ ಹುಬ್ಬಳ್ಳಿ.

ಶ್ರೀ. ಅನೇಗುಂದಿ, ಹಿಂದಿನ ಸ್ಕೂಲಬೊರ್ಡ ಚೇರಮನ್ನ, ಶ್ರೀ. ತಂಬದ ಬಿ. ಎ ಎಲ್‌ಎಲ್. ಬಿ. ಸಧ್ಯದ ಚೇರಮನ್. ಮತ್ತು ಆರ್. ಎಸ್. ಕುಲಕರ್ಣಿ, ರಿಟಾಯರ್ಡ ಪ್ರಿನ್ಸಿಪಾಲ ಟ್ರೇನಿಂಗಕಾಲೇಜ ಶ್ರೀ. ರಾಘವೇಂದ್ರರಾವ

ಬ್ಯಾಹಟ್ಟಿ ಹುಬ್ಬಳ್ಳಿ ಇವರೇ ಮೊದಲಾದವರು ಸಹ ಈ ಶಾಲೆಯನ್ನು ಮತ್ತು ಕಲಾಪ್ರದರ್ಶನವನ್ನು ಬಹಳೇ ಸ್ತುತಿಸಿದ್ದಾರೆ.

ಶಿಕ್ಷಣಾಧಿಕಾರಿಗಳು ಈ ಮಾದರಿಯ ಶಾಲೆಗಳಿಗೆ ಹೆಚ್ಚಿನ ಪ್ರೋತ್ಸಾಹವನ್ನು ಕೊಡುವರೆಂದು ಬಯಸುತ್ತೇನೆ. ಶಿಕ್ಷಕರು ಪ್ರತಿಫಲಾಪೇಕ್ಷೆ ಇಲ್ಲದೆ ತಮ್ಮ ಪವಿತ್ರವಾದ ಕಾರ್ಯದಲ್ಲಿ ತುಂಬಾ ಅನುರಾಗ ಮತ್ತು ಅಭಿಮಾನ ಉಳ್ಳವರಾಗಿ ದಕ್ಷತೆಯಿಂದ ಕೆಲಸಮಾಡಿದರೆ ದೇಶದ ದೊಡ್ಡ ಸೇವೆಯನ್ನು ಮಾಡಿದಂತಾಗುವದು. ಹುಬ್ಬಳ್ಳಿ ಮುನಸಿಪಲ್ ಸ್ಕೂಲ್ ಬೋರ್ಡನ್ನು ಈ ವಿಷಯದಲ್ಲಿ ಅಭಿನಂದಿಸುವೆವು.

ಸಂಪಾದಕ.

ಸಾಲೆಗಳ ಸುದ್ದಿ.

ನವಲಗುಂದ ತಾ. ಗುಡಿಸಾಗರ ಗ್ರಾಮದ ಕನ್ನಡ ಶಾಲೆಯ ಪರೀಕ್ಷೆಯನ್ನು ೫ನೇ ಸಪರವಾಯಿಜರ ಸಾಹೇಬರು ತೆಗೆದುಕೊಂಡಮೇಲೆ ಇನಾಮಿನ ಸಮಾರಂಭವು ಖಾನಸಾಹೇಬ ಖುದಾವಂದ ಮೆಂಬರ ಡಿ. ಎಲ್. ಬಿ ಇವರ ಅಧ್ಯಕ್ಷತೆಯಲ್ಲಿ ಜರುಗಿತು. ಸುಮಾರು ೧೦೦೦ ಜನಸಂಖ್ಯೆಯು ಈ ಊರಲ್ಲಿ ೧೬೬ ವಿದ್ಯಾರ್ಥಿಗಳು ಶಾಲೆಯಲ್ಲಿ ಇರುವರು. ಮುಲ್ಕೀ ಪರೀಕ್ಷೆಗೆ ೧೫–೧೬ ವಿದ್ಯಾರ್ಥಿಗಳು ಕೂಡ್ರುವರು. ಹೆಡ್ ಮಾಸ್ತರ ಶ್ರೀಯುತ ಮುವಿಗ್ಗಟ್ಟಿಯವರೂ ಮತ್ತು ಅವರ ಅಸಿಸ್ಟಂಟರೂ ಕಳಕಳಿಯಿಂದ ಕೆಲಸಮಾಡುವರು. ಬೋರ್ಡಿನವರು ಈ ಶಾಲೆಗೆ ಒಂದು ಅಸಿಸ್ಟಂಟಜಾಗೆಯನ್ನು ಕೊಟ್ಟಿದ್ದಕ್ಕೆ ಅವರಿಗೆ ಆಭಾರಿ ಇದ್ದೇವೆ.

ಮಲ್ಲಪ್ಪ ಫಕ್ಕೀರಪ್ಪ ಬೆಣ್ಣೂರ
ಸೆ. ಕೊ. ಕ್ರೆ. ಸೊ. ಗುಡಿಸಾಗರ.

ಹುಬ್ಬಳ್ಳಿ ತಾ॥ ಚಾಕಲಬ್ಬಿ ಕ. ಗಂ. ಶಾಲೆಯ ಪರೀಕ್ಷೆಯು ತಾ ೧೯–೨೧ ನೇ ದಿವಸ ಜರುಗಿತು. ಪೈ.॥ ಬೂದಿಹಾಳ ಸಾಹೇಬರ ಅಧ್ಯಕ್ಷತೆಯಲ್ಲಿ ಭಪ್ಪೀಸ ಸಮಾರಂಭವು ಜರುಗಿ ಹೆಡ್ ಮಾಸ್ತರ ಶ್ರೀಯುತ ಬ. ಬ. ಬಡಿಪ್ಪನವರ ಇವರೂ ಅ. ಮಾಸ್ತರ ಸಿ. ಫ. ಬಡಫಕ್ಕೀರಪ್ಪನವರ ಇವರೂ ಸರಸಾದ ಭಾಷಣವನ್ನು ಮಾಡಿದರು ಇತ್ಯಾದಿ.

ಫಕೀರಪ್ಪ ಹೊನ್ನಿಹಳ್ಳಿ,
ಸ್ಕೂಲ, ಕವಿಂಟಿ ಮೆಂಬರ.

ಧಾರವಾಡ ತಾ. ಮುಗದ ಗ್ರಾಮದ ಕನ್ನಡ ಗಂಡುಹುಡುಗರ ಶಾಲೆಯ ಇನಾಮಿನ ಸಮಾರಂಭವು ೨೨-೪-೨೯ನೆಯ ದಿವಸ ಅಲ್ಲಿಯ ವತನದಾರ ಪಾಟೀಲರಾದ ಪ್ರೊಪೆಸರ ಟಿ. ಎಸ್. ಪಾಟೀಲ ಎಂ. ಎ. ಇವರ ಅಧ್ಯಕ್ಷತೆಯಲ್ಲಿ ಸಂಭ್ರಮದಿಂದ ಜರುಗಿತು. ಶ್ರೀ. ಹಂಪಿಹೊಳಿ ಇವರು ಹೆಡ್ ಮಾಸ್ತರರಿದ್ದ ಹುಡುಗರ ಸಂಖ್ಯೆಯನ್ನು ೧೦೦ ರವರೆಗೆ ಬೆಳೆಸಿದ್ದಾರೆ ಶಾಲೆಯು ಊರ್ಜಿತಾವಸ್ಥೆಯಲ್ಲಿದೆ ಇತ್ಯಾದಿ.

ಹ ನ. ಅಷ್ಟಪುತ್ರಿ,
ಪ್ರೊ. ಪಾಟೀಲ, ಮುಗದ.

ಬಂಕಾಪೂರ ತಾ. ಕುಂದೂರ ಗ್ರಾಮದ ಕನ್ನಡ ಗಂ. ಶಾಲೆಯ ಪರೀಕ್ಷೆಯನ್ನು ಮೆ ೨೦ನೆಯ. ಸುಪರವಾಯಜರರು ತಾ. ೧೪-೫-೨೯ಕ್ಕೆ ತೆಗೆದುಕೊಂಡರು ಪಾಸಾದ ವಿದ್ಯಾರ್ಥಿಗಳಿಗೆ ಶಾಲೆಯ ಪಂಚರು ಮುಂದಿನ ಇಯತ್ತೆಯ ಪುಸ್ತಕಗಳನ್ನು ಇನಾಮಾಗಿ ಕಂದುಕೊಟ್ಟರು. ಸುಪರವಾಯಜರರ ಅಧ್ಯಕ್ಷತೆಯಲ್ಲಿ ಇನಾಮಿನ ಸಮಾರಂಭವು ಜರುಗಿತು ಹೆಡ್ ಮಾಸ್ತರ ಸರ್ವದೆ ಇವರು ಸಮಯೋಚಿತ ಭಾಷಣಮಾಡಿದರು. ಇತ್ಯಾದಿ.

ಗುರುವಪ್ಪ ಸಂಣಪ್ಪ ಕಮ್ಮಾರ.

ಸಾಭಾರ ಸ್ವೀಕಾರ ಹಾಗು ಅಭಿಪ್ರಾಯ.

ಹಿಂದುಸ್ಥಾನದ ಇತಿಹಾಸ.

ಶ್ರೀ ಎಸ್. ಎಸ್ ಬಸವನಾಳ, ಎಂ. ಎ. ಫೆಲೊ ಮುಂಬಯಿ ಯುನಿವರ್ಸಿಟಿ ಇವರು ಮತ್ತು ಶ್ರೀ. ಎಚ್. ಸಿ ಹಲಗಲಿ, ಬಿ. ಎ., ಬಿ. ಟಿ. ಇವರು ಕೂಡಿ ಸುಲಭ ಕನ್ನಡದಲ್ಲಿ ಹಿಂದುಸ್ಥಾನದ ಇತಿಹಾಸವನ್ನು ಬರೆದಿದ್ದಾರೆ. ಇದು ಕ್ಯಾನ್ ೪೦೦ ಪುಟಗಳುಳ್ಳದಿದ್ದು ಸಚಿತ್ರವದೆ. ಈಗ ಬಳಕೆಯಲ್ಲಿದ್ದ ಎಲ್ಲ ಪುಸ್ತಕಗಳಿಗಿಂತಲೂ ಬಹಳ ಚನ್ನಾಗಿದೆ. ಇವರು ಇದನ್ನು ಬಹಳ ಪರಿಶ್ರಮ ಬಟ್ಟು ಬರೆದಿರುವರು. ಕರ್ನಾಟಕದ ಬಗ್ಗೆ ವಿಶೇಷ ಸಂಗತಿಯನ್ನು ವರ್ಣಿಸಿರುವರು. ಇದಕ್ಕೆ ಸಮಾನವಾದ ಬೇರೊಂದು ಪುಸ್ತಕವು ಕನ್ನಡದಲ್ಲಿ ಇಲ್ಲವೆಂದು ಹೇಳಬಹುದು. ಇದು ಹಾಯಸ್ಕೂಲಿನ ಎಲ್ಲ ಇಯತ್ತೆಗಳಿಗೂ ಪ್ರಾಥಮಿಕ ಶಾಲೆಗಳ ಮೇಲಿನ ಇಯತ್ತೆಗಳಿಗೂ ಹೆಚ್ಚಲಿಕ್ಕೆ ತಕ್ಕದ್ದಾಗಿದೆ. ಇದು ವ್ಹನ್ಯಾಕ್ಯುಲರ ಟಿಕ್ಸ್ ಬುಕ್ ಕಮಿಟಿಯಿಂದ ಶಾಲೋಪಯೋಗಕ್ಕಾಗಿ ಮಂಜೂರ

ಆಗಿದೆ. ಬೆಲೆ (೧-೮-೦) ಎ ಆರ್ ಶಿವನಾಗಪ್ಪಾ ಪುಸ್ತಕ ವ್ಯಾಪಾರಿ ಹುಬ್ಬಳ್ಳಿ ಇವರಲ್ಲಿ ದೊರೆಯುತ್ತದೆ. ಬೇಗನೆ ಈ ಪುಸ್ತಕವು ಎಲ್ಲ ಕಡೆಯಲ್ಲಿ ಬಳಕೆಯಲ್ಲಿ ಬರುವದೆಂದು ನಂಬುತ್ತೇವೆ.

* * * *

ಸುಲಭವ್ಯಾಕರಣ.

ಗದಗ ಬೆಟಗೇರಿ ಕನ್ನಡ ಗಂಡುಹುಡುಗರ ಶಾಲೆಯ ಹೆಡ್ ಮಾಸ್ತರರಾದ ಶ್ರೀ. ದತ್ತಾತ್ರಯ ಕೇಶವ ರಂಗಾಪೂರ ಮಾಸ್ತರರು ಸುಲಭ ವ್ಯಾಕರಣವೆಂಬ ಹೆಸರಿಟ್ಟು ಹುಡುಗರಿಗೂ ಶಿಕ್ಷಕರಿಗೂ ಸುಲಭವಾಗಿ ತಿಳಿಯುವಂತೆ ನವೀನ ಪದ್ಧತಿಯಿಂದ ಹೊಸ ಕನ್ನಡ ವ್ಯಾಕರಣವನ್ನು ಬರೆದಿರುವರು. ಇದರಲ್ಲಿ ಉದಾಹರಣೆಗಳನ್ನು ಮೊದಲು ಕೊಟ್ಟು ಆಮೇಲೆ ನಿಯಮಗಳನ್ನು ಹೇಳುವ ಪದ್ಧತಿಯನ್ನು ಪಾಲಿಸಿರುವರು. ಪ್ರಾಥಮಿಕ ಶಾಲೆಯ ೪-೫ನೆಯ ಇಯತ್ತೆಗಳ ವಿದ್ಯಾರ್ಥಿಗಳಿಗೂ ಇಂಗ್ಲಿಷ ಶಾಲೆಯ ೧-೨ ಇಯತ್ತೆಗಳ ವಿದ್ಯಾರ್ಥಿಗಳಿಗೂ ಇದು ತಕ್ಕದ್ದಾಗಿದೆ. ಸ್ಟಾಂಡರ್ಡ್ ಟೆಕ್ಸ್ಟ್ ಬುಕ್ ಕಮಿಟಿಯವರಿಂದ ಪಠ್ಯಪುಸ್ತಕವಾಗಿ ಮಂಜೂರ ಆಗಿದೆ. ಇದು ತೀವ್ರವೇ ಎಲ್ಲ ಶಾಲೆಗಳಲ್ಲಿ ಬಳಕೆಯಲ್ಲಿ ಬರುವದೆಂದು ಆಶಿಸುತ್ತೇನೆ. ಬೆಲೆ ೪ ಆಣೆ. ಇದು ಎ. ಆರ್. ಶಿವನಾಗಪ್ಪಾ ಹುಬ್ಬಳ್ಳಿ ಇವರಲ್ಲಿ ದೊರೆಯುವವು.

× × × ×

ಕನ್ನಡ ಗಣಿತಗನ್ನಡಿ.

ಇದನ್ನು ಗಿಲಗಂಚಿ ಅರ್ಬಾಳ ಹಾಯಸ್ಕೂಲಿನ ಅಧ್ಯಾಪಕರಾದ ಶ್ರೀ. ಚ. ಮು. ತಿಗಡಿಮಠ ಕನ್ನಡ ಮೂರನೆ ವರ್ಷದ ಟ್ರೇಂಡ್ ಶಿಕ್ಷಕ ಇವರು ಬರೆದಿದ್ದಾರೆ. ಇದರಲ್ಲಿ ಗೋಖಲೆ ಕೃತ ಅಂಕಗಣಿತ ೩ನೆಯ ಭಾಗದ ಉದಾಹರಣೆಗಳನ್ನು ಸುಲಭ ಪದ್ಧತಿಯಲ್ಲಿ ವಿದ್ಯಾರ್ಥಿಗಳಿಗೆ ಗಮ್ಮನೆ ತಿಳಿಯುವಂತೆ ಬಿಡಿಸಿರುವರು. ಇದು ಮುಂಗಳೂರಲ್ಲಿ ಅಚ್ಚಾಗಿದೆ. ಕ್ರಯ ೨-೪-೦ ಮುಲ್ಕೀ ಪರೀಕ್ಷೆಯ ವಿದ್ಯಾರ್ಥಿಗಳಿಗೂ ಹಾಯಸ್ಕೂಲಿನ ಕೆಳಗಿನ ಇಯತ್ತೆಯ ವಿದ್ಯಾರ್ಥಿಗಳಿಗೂ ಬಹಳ ಪ್ರಯೋಜನಕಾರಿಯಾಗಿದೆ.

× × × +

ಪುಟ್ಟ ರಾಮಾಯಣ-

ಈ ಗ್ರಂಥವನ್ನು ತೀರ ಸುಲಭ ಶೈಲಿಯಲ್ಲಿ ಚಿಕ್ಕಮಕ್ಕಳಿಗೋಸ್ಕರವಾಗಿ ಶ್ರೀ. ಓಂಕಾರ ಬಾಳಕೃಷ್ಣ ಬೀಳಿ ಪೆನ್ಸನರ ಹೆಡ್ ಮಾಸ್ತರ ಇವರು ಬರೆದಿರುವರು. ಇದು ಹೊಸ್ಪೇಟೆಗಳಲ್ಲಿ ಅಚ್ಚಾಗಿದೆ. ಬಾಲಕರಿಗೆ ಮನೆಯಲ್ಲಿ ಓದಲಿಕ್ಕೆ ಅಮೌಲ್ಯವಾದದ್ದದೆ. ಭಾರತೀಯರ ಪ್ರಪಂಚದಲ್ಲಿ ರಾಮಾಯಣ, ಮಹಾಭಾರತ ಸಂಸ್ಕೃತಿಯು ತುಂಬಿತುಳುಕುವದರಿಂದ ಇಂಥ ಪುಸ್ತಕಗಳನ್ನು ಪಾಲಕರು ತಮ್ಮ ಮಕ್ಕಳಿಗೆ ಶಾಲೆಯ ಅಧ್ಯಯನವಲ್ಲದೆ ಮನೆಯಲ್ಲಿ ಓದಲಿಕ್ಕೆ ಹಚ್ಚುವದು ಕ್ಷೇಮಕರವು. ೧೪೦ ಪುಟದ ಈ ಪುಸ್ತಕದ ಬೆಲೆ ೮ ಆಣೆ. ಬೆಳಗಾವಿ ರಾಮತತ್ವ ಪ್ರಕಾಶ ಪುಸ್ತಕಾಲಯದಲ್ಲಿ ದೊರೆಯುವದು.

× × × ×

ಒಕ್ಕಲತನದ ಅಭ್ಯುದಯ ಎಂಬ ಚಿಕ್ಕ ನಾಟಕವು.

ಈ ಬಾಲಸಂಗೀತ ನಾಟಕವು ಒಕ್ಕಲತನದ ವಿದ್ಯೆಯ ಮಹತ್ವವನ್ನು ನಾಟಕರೂಪವಾಗಿ ಜನರಿಗೆ ಬೋಧಮಾಡುವದಕ್ಕೆ ಕ. ಗೋ. ಗೋಲಪ್ಪನವರು. ಕೃಷಿ ಶಾಲಾಧ್ಯಾಪಕ, ಹುಲಕೋಟಿ ಇವರು ಬರೆದಿರುವರು. ಈ ನಾಟಕದಲ್ಲಿ ದುಂಡಪ್ಪ ಮೊದಲಾದ ಒಕ್ಕಲಿಗರು, ಸುಧಾರಕನೆಂಬ ಅವರ ಹಿತಚಿಂತಕನು ಸಾವಕಾರ, ಸರ್ಕಾರಜಿಷ್ಟರ, ಒಕ್ಕಲತನದ ಖಾತೆಯ ಡೆ. ಡಾಯರೆಕ್ಟರ, ಇನ್ಸಪೆಕ್ಟರ, ಫಾರ್ಮ ಸುಪರಿಂಟೆಂಡೆಂಟ್, ಒಕ್ಕಲತನದ ಶಾಲೆಯ ಮಾಸ್ತರರು, ಹುಡುಗರು ಮೊದಲಾದ ೨೪ ಪಾತ್ರಗಳವೆ ಸಧ್ಯದ ಒಕ್ಕಲತನದ ಸ್ಥಿತಿ, ಒಕ್ಕಲಿಗರಲ್ಲಿ ತಮ್ಮ ಉದ್ಯೋಗದಲ್ಲಿರುವ ಅಜ್ಞಾನ, ಹೊಸ ಹೊಸ ಶೋಧಗಳ ಹೇಳಿಕೆ ಮೊದಲಾದ ವಿಷಯಗಳನ್ನು ಇದ್ದಕಿದ್ದಂತೆ ವರ್ಣಿಸಿರುವರು. ಒಕ್ಕಲಿಗರು ತಮ್ಮ ಸುಧಾರಣೆಯನ್ನು ಹೇಗೆ ಮಾಡಿಕೊಳ್ಳತಕ್ಕದ್ದು, ಪರಾನ್ನ ಪುಷ್ಟರಿಂದ ಆಗುವ ಪೀಡೆಯನ್ನು ಹೇಗೆ ತಪ್ಪಿಸಿಕೊಳ್ಳಬೇಕು, ಒಕ್ಕಲತನ ಖಾತೆಯಿಂದಲೂ, ಪರಸ್ಪರ ಸಹಕಾರ ಖಾತೆಯಿಂದಲೂ, ಆಗತಕ್ಕ ಲಾಭ ಮೊದಲಾದವನ್ನು ಹೃದಯಂಗಮವಾಗುವಂತೆ ಬರೆದಿರುವದು. ಇದು ನಾಟಕವಾದರೂ ವಿಷಯ ವಿವೇಚನೆಯು ಉತ್ತಮವದೆ. ಪದಗಳು ಇಂಪಾಗಿವೆ. ಭಾಷೆಯು ಸುಗಮವದೆ ಆದುದರಿಂದ ಇದನ್ನು ಒಕ್ಕಲಿಗರೂ, ಒಕ್ಕಲಿಗರ ಮಕ್ಕಳೂ ಅವಶ್ಯವಾಗಿ ಓದತಕ್ಕದ್ದು. ಶಾಲಾಪತ್ರಿಕೆಯ ಆಕಾರದ ೬೦ ಪುಟಗಳ ಈ ಪುಸ್ತಕದ ಬೆಲೆ ಕೇವಲ ೪ ಆಣೆ.

ಚಿಕ್ಕ ಬಾಲಕರ ಸಲುವಾಗಿ

"ಕರ್ನಾಟಕ ಬಾಲಕ್ರೀಡಾ ಗೀತೆ"

ರಾಗಃ–ಭೂಪ

ಜಯಃ ಜಯ ಜಯ ಕರ್ನಾಟಕ ಮಾತೆ ।
ಜಯ ಘನ ಭಾಷೆ ಜಗ ಜನ ತೋಷೆ । ಪಲ್ಲ ॥
ಬಾಲರ ಪೊರೆಯೌ ಬಾಲಕ ಲೋಲೆಯೆ ।
ಅಲಸವನ ತೆಗೆ ಸಾಹಸ ಸಂಭ್ರಮೆ ।
ಸೋಲಿಸು ದುಶ್ಚಟ ನಿಕರವ ದೇವಿ ॥ ೧ ॥
ಜಗದಲಿ ಮೆರೆಯುವ ನವಯುವಕರನು ।
ಒಪ್ಪಹರಿ ಜವದಲಿ ಮಾಡೆ ಸುಬೋಧೆ ।
ಹಗಲಿರುಳೊಳು ನಾವ್ ಭಜಿಪೆವು ದೇವಿ ॥ ೨ ॥
ಶಕ್ತಿಯ ನೀಡೆ ನೀ ನಾಟನೋಟ ಊ ।
ಯುಕ್ತಿಯ ನೀಡೆನೀ ಬಾಲಕ ಬುದ್ಧಿಯೊಳ್ ।
ಮುಕ್ತಿಯ ನೀಡೆನೀ ಲಘುತಮಪೂಜೆಯೊಳ್ ॥ ೩ ॥

ಶ್ರೀಮತ ಸಾರ್ವಭೌಮ ಪಂಚಮ ಜಾರ್ಜ ಬಾದಶಹರವರ ಜಯಜಯಕಾರ

ರಾಗಃ–ಭೀಮಪಲಾಸ

ಜಯ್ ಜಯ್ ಜಯ ಜಯ ಜಯ ಜಯ ಜಯ ಜಯ ಗುಣಸಾಂದ್ರಾ ।
ಜಯ ಜಯ ಜಯ ಶ್ರೀ ಜಾರ್ಜ ನರೇಂದ್ರ ॥ ಪಲ್ಲ ॥
ದೈತ್ಯರಾದ ಜಮನಿಯರ ಮುರಿದೊ ।
ಭೃತ್ಯರಾದ ನಮ್ಮೆಲ್ಲರ ಪೊರೆದೊ ।
ಸದಯಾ ಹೃದಯಾ ಮಧುರಾ ಚದುರಾ
ಧೀರಾ ವೀರಾ ಮಾರಾ ಜೈ ಭೂಪೇಂದ್ರ ॥ ೧ ॥
ಸಕಲ ಲೋಕದೊಳು ಖ್ಯಾತಿವಂತನೇ ।
ಅಖಿಲ ಧರ ಧಿಪರಿಂದ ಪೂಜ್ಯನೇ ।
ಸಕಲಾ ಸುಕಲಾ ನಿಪುಣಾ ಚಪಲಾ ।
ಧೀರಾ ವೀರಾ ಮಾರಾ ಜೈ ಭೂಪೇಂದ್ರ ॥ ೨ ॥
ಕ್ಷೇಮದಿಂದ ಚಿರಕಾಲವ ಬಾಳೈ
ಕೋಮಲಾಂಗನೇ ಬಾಲಕ ಪ್ರಿಯನೇ ।
ಕರುಣಾ ಭರಣಾ ತರುಣಾ ಶರಣು ।
ಧೀರಾ ವೀರಾ ಮಾರಾ ಜೈ ಭೂಪೇಂದ್ರ ॥ ೩ ॥

ಪ್ರಥಮ ಸಂಪುಟದ ಕಡೆಯ ನುಡಿ

ಈ ಪತ್ರಿಕೆಯನ್ನು ಹೊರಡಿಸುವ ಭಾರವನ್ನು ನಮ್ಮ ಮೇಲೆ ಇಟ್ಟು ಒಂ
ಸು ವರ್ಷವು ಸಂದಿದಂತಾಯಿತು. ನಾವು ಯಥಾಶಕ್ತಿ ಈ ಕಾರ್ಯವನ್ನು
ಹೊನೆಗಾಣಿಸಿದೆವು. ನಮಗೆ ಲೇಖನಗಳ ಮೂಲಕ ಸಹಾಯವಿತ್ತವರು ಬಹು
ಡಿಮೆ. ಅವರೆಲ್ಲರಿಗೆ ನಾವು ತುಂಬಾ ಆಭಾರಿಯಾಗಿದ್ದೇವೆ. ಶಿಕ್ಷಕ ಜನರು
ಲೇಖನಗಳನ್ನು ಕೊಡುವ ವಿಷಯದಲ್ಲಿ ನಾವು ನಿರೀಕ್ಷಣೆಮಾಡಿದಷ್ಟು ಉತ್ಸುಕತೆ
ಯನ್ನು ತೋರಿಸಲಿಲ್ಲವೆಂದು ವಿಷಾದಪಡಬೇಕಾಗಿದೆ. ಇದರಲ್ಲಿ ಬಂದ ಲೇಖ
ನಗಳಲ್ಲಿ ಕೆಲವಾದರೂ ವಾಚಕರಿಗೂ, ತಜ್ಞರಿಗೂ ಸರಿಹೋಗಿದ್ದರೆ ನಮ್ಮ ಪರಿ
ಶ್ರಮವು ಸಫಲವಾದಂತಾಯಿತು. ಬೋರ್ಡಿನವರೂ ಸಂಪಾದಕ ಮಂಡಲದ
ವರೂ ನಮಗೆ ತುಂಬಾ ಸೌಕರ್ಯಗಳನ್ನೂ ಸಹಾಯವನ್ನೂ ಕೊಟ್ಟಿದ್ದಕ್ಕೆ ಅವ
ರಿಗೆ ಆಭಾರಿಯಾಗಿದ್ದೇವೆ. ಬೋರ್ಡಿನವರು ತಮ್ಮದೊಂದು ಸ್ವತಂತ್ರ ಪತ್ರಿಕೆ
ಯನ್ನು ಹೊರಡಿಸುವ ಸಾಹಸವು ತಕ್ಕಮಟ್ಟಿಗಾದರೂ ಯಶಸ್ವಿಯಾಯಿತೆಂದೂ
ಇದು ಅನ್ಯ ಬೋರ್ಡುಗಳಿಗೆ ಮಾರ್ಗದರ್ಶಕವಾಗುವದೆಂದೂ ನೆರೆನಂಬಿದ್ದೇವೆ.

REGD NO B. 2483.

DHARWAR DISTRICT SCHOOL BOARD PATRIKE.

DHARWAR.

ವಾರ್ಷಿಕ ವರ್ಗಣಿ ೨—೦—೦.
ಬಿಡಿ ಸಂಚಿಕೆ ೦—೪—೦.

ಮುದ್ದಾದ ಮುದ್ರಣ! ಸುಲಭ ದರ!

ತೋಂಟದಾರ್ಯ ವಿದ್ಯಾಲಯ,
ಕಲ್ಲೆ, ಧಾರವಾಡ.

—:೦:—

ಈ ಮುದ್ರಾಲಯದಲ್ಲಿ ಕನ್ನಡ
ಇಂಗ್ಲೀಷ ಮತ್ತು ಮರಾಠಿ ಭಾಷೆಗಳ
ಲ್ಲಿ ವಿವಿಧ ಬಗೆಯ ಮುದ್ರಣವು ಅಚ್ಚು
ಕಟ್ಟಾಗಿಯೂ, ಅಂದವಾಗಿಯೂ, ಸ್ವಲ್ಪ
ಖರ್ಚದರದಿಂದಲೂ ಮಾಡಿಕೊಡಲ್ಪಡುವದು

ಇಲ್ಲಿ ಕಡ್ಡಾಯ, ಶಾಲೆಗಳ, ೨-೩-೪-೫
ಇಯತ್ತ್ರಿಗಳ ಕಾಪಿ ಪುಸ್ತಕಗಳು, ಎಕ್ಸ್ಟ್ರಾ
ಸಾಯಿಜ ಬುಕ್ಕುಗಳು, ಮತ್ತು ನೋಟ
ಬುಕ್ಕುಗಳು ಬಹಳೀ ಸುಲಭದರದಿಂದ
ಸಿಗುತ್ತವ ಶಿಕ್ಷಕರು ಈ ಲಾಭವನ್ನು
ಪಡೆಯುವರೆಂದು ನಂಬಿಗೆ

ಎಚ್. ಎಫ್. ಕಟ್ಟೀಮನಿ, ಬಿ. ಎ
ಮ್ಯಾನೇಜರ.

To
The Head Master,
Kannarese Boys' School,
AT
POST
TAL
The Head Master,
Kannarese Boys' School
Talemoiala.
(Navalgund Tal.)

ವಿಶೇಷ ಸಂಚಿಕೆ.

ಕನ್ನಡ

ಪ್ರಾಥಮಿಕ ಶಿಕ್ಷಣ.

ಸಂಪಾದಕರು— ವೆಂಕಟೇಶ ನರಸಿಂಗರಾವ ಮುಗದಾಳ ಬಿ. ಎ.

ಸಂಪುಟ ೬೯ | ಜೂನ ೧೯೩೨ | ವರ್ಷ ೪

ಭೂಗೋಲ ಶಿಕ್ಷಣ.

ಇತ್ತಲಾಗಿ ಭೂಗೋಲ ಶಿಕ್ಷಣ ಪದ್ಧತಿಯಲ್ಲಿ ಒಳ್ಳೇ ಬದಲಾವಣೆಯಾಗಿರುವದು. ಸದ್ಯಕ್ಕೆ ಈ ವಿಷಯವನ್ನು ಕಲಿಸುವದನ್ನೂ ಹಿಂದೆ ನಾವೆಲ್ಲ ಕಲಿತ ಸಮಯದಲ್ಲಿ ಇದನ್ನು ಕಲಿಸುತ್ತಿದ್ದದ್ದನ್ನೂ ಕುರಿತು ನಾವು ತುಸು ಹೊತ್ತು ವಿಚಾರಿಸಿದರೆ ಈ ಮಾತು ಸ್ಪಷ್ಟವಾಗುವದು. ಹಿಂದೆ ಕೇವಲ ಪುಸ್ತಕದಿಂದ ಭೂಗೋಲದ ಸಂಗತಿಗಳನ್ನು ಬಾಯಿಪಾಠ ಮಾಡುತ್ತಿದ್ದರು; ಈ ವಿಷಯವೆಂದಕೂಡಲೆ ಹುಡುಗರಿಗೂ ಶಿಕ್ಷಕರಿಗೂ ಒಳ್ಳೇ ಬೇಸರಿಕೆ ಬರುತ್ತಿತ್ತು. ಸದ್ಯಕ್ಕೆ ಅಟ್ಲಾಸು, ಚಿತ್ರಗಳು, ಪಟಗಳು, ಮಾಡೆಲುಗಳು ಮೊದಲಾದವುಗಳ ಸಹಾಯದಿಂದ ಈ ವಿಷಯವು ಮನೋರಂಜಕವಾದದ್ದೂ ಉಪಯುಕ್ತವಾದದ್ದೂ ಆಗಿರುವದು. ವಿದ್ಯಾರ್ಥಿಗಳೂ ಶಿಕ್ಷಕರೂ ಒಳ್ಳೇ ಆತುರದಿಂದ ಇದನ್ನು ಅಭ್ಯಾಸಿಸುವರು.

ನಾವು ಸಾಲೆಗಳಲ್ಲಿ ಭೂಗೋಲವನ್ನು ಒಂದು ಶಾಸ್ತ್ರವೆಂದು ಅಭ್ಯಾಸಿಸುವದಿಲ್ಲ. ಭೂಗೋಲವು ಮನುಷ್ಯನ ವಾಸಸ್ಥಾನವಾದ ಭೂಮಂಡಲದ ಕಥೆಯು. ವಾಙ್ಮಯ, ಇತಿಹಾಸಗಳಂತೆ ಇದಾದರೂ ಸಾಲೆಯಲ್ಲಿ ಕಲಿಸುವ ಒಳ್ಳೇ ಮಹತ್ವದ ವಿಷಯಗಳಲ್ಲಿ ಒಂದಾಗಿರುವದು. ಆದರೆ ವಿಷಯವನ್ನು ಅರಿತುಕೊಳ್ಳದೆ ಪುಸ್ತಕದಲ್ಲಿ ಕೊಟ್ಟ ಸಂಗತಿಗಳನ್ನು ಪಾಠವೆನಿಸಿಕೊಳ್ಳುವದಷ್ಟೇ ತಮ್ಮ ಕರ್ತವ್ಯವೆಂದು ಭಾವಿಸಿದ ಶಿಕ್ಷಕರ ಕೈಗೆ ಸಿಕ್ಕು ಈ ವಿಷಯವು ಕಲಿಸುವವರಿಗೂ ಕಲಿಯುವವರಿಗೂ ಕೂಡಿಯೇ ನೀರಸವಾದದ್ದಾಯಿತು. ಶಿಕ್ಷಕರ ಕೆಲಸವನ್ನು ಮೇಲ್ವಿಚಾರಿಸುವ ಪರೀಕ್ಷಕರೂ ಇನ್ಸಪೆಕ್ಟಿಂಗ ಅಧಿಕಾರಸ್ಥರೂ ಶಿಕ್ಷಕರಂತೆಯೇ ಪುಸ್ತಕ ಪಾಠದ ಕಡೆಗೆ ಮಾತ್ರ ಲಕ್ಷ್ಯಕೊಡಲಾರಂಭಿಸಿದ್ದ

ರಿಂದ ಅಲ್ಲಲ್ಲಿ ಕೆಲವು ಶಿಕ್ಷಕರು ಈ ವಿಷಯವನ್ನು ವಿಚಾರಪೂರ್ಣವಾದದ್ದನ್ನೂ ಮನೋರಂಜಕವಾದದ್ದನ್ನೂ ಮಾಡಬೇಕೆಂದು ನಡೆಯಿಸಿದ ಪ್ರಯತ್ನಗಳು ಬಯಲಾದದ್ದರಲ್ಲಿ ಸೋಜಿಗವಿಲ್ಲ.

ಶಿಕ್ಷಕರು ಭೂಗೋಲವನ್ನು ಭೂಮಂಡಲದ ಮೇಲಿರುವ ನದಿ, ಪರ್ವತ ಮೊದಲಾದ ಪ್ರಾಕೃತಿಕ ಸಂಗತಿಗಳ ವರ್ಣನೆಯೆಂದು ಭಾವಿಸುವದಕ್ಕಿಂತ ಮನುಷ್ಯನ ವಾಸಸ್ಥಾನವಾದ ಭೂಮಂಡಲದಲ್ಲಿ ಅವನ ಸುತ್ತಲು ಇರುವ ಪ್ರಾಕೃತಿಕ ಸಂಗತಿಗಳಿಂದ ಅವನ ಜೀವನಕ್ರಮದಲ್ಲಿ ಏನು ಪರಿಣಾಮವಾಗಿರುವದು, ಈ ಪರಿಸ್ಥಿತಿಯನ್ನು ಗೆಲ್ಲಲಿಕ್ಕೆ ಅಂದರೆ ಇದರಿಂದ ತನ್ನ ಸುಖವನ್ನು ಸಾಧಿಸಲಿಕ್ಕೆ ಅವನು ತನ್ನ ಬುದ್ಧಿಯ ಬಲದಿಂದ ಏನೇನು ಮಾಡಿರುವನು ಎಂಬದರ ಕಥೆಯು ಎಂದು ಬಗೆದರೆ ಈ ವಿಷಯವು ಒಳ್ಳೇ ಮನೋರಂಜಕವಾದದ್ದೂ ಉಪಯುಕ್ತವಾದದ್ದೂ ಆಗುವದೆಂದು ನಮ್ಮ ಅಭಿಪ್ರಾಯವು. ಈ ವಿಷಯವು ನಮ್ಮ ಪ್ರತಿ ದಿವಸದ ಜೀವನಕ್ರಮಕ್ಕೆ ನಿಕಟಸಂಬಂಧವುಳ್ಳದ್ದಿರಬೇಕು. ಇದನ್ನು ಅಭ್ಯಾಸಿಸಲಿಕ್ಕೆ ಪಠ್ಯಪುಸ್ತಕಗಳ ಅವಶ್ಯವು ಇರಬಾರದು. ಶಿಕ್ಷಕರಾಗಲಿ ವಿದ್ಯಾರ್ಥಿಗಳಾಗಲಿ ಇವುಗಳನ್ನು ಅಭ್ಯಾಸಕ್ಕಾಗಿ ಉಪಯೋಗಿಸಬಾರದು. ಈ ಕಥೆಯನ್ನು ಕಲಿತ ಬಳಿಕ ತಮಗಾದ ಜ್ಞಾನವನ್ನು ಪೂರ್ಣ ಮಾಡಿಕೊಳ್ಳಲಿಕ್ಕೆ ಕೆಲವು ಪುಸ್ತಕಗಳನ್ನು ನೋಡಿಕೊಳ್ಳಬಹುದು. ಈ ವಿಷಯದ ಆರಂಭವನ್ನು ದಿಕ್ಕುಗಳು ಅಥವಾ ಸಾಲೆಯ ಕೋಣೆಯ ನಕಾಶೆ ಈ ಪಾಠಗಳಿಂದ ಆರಂಭಿಸುವದಕ್ಕಿಂತ ಪ್ರತಿದಿನದ ಊಟದ ಸಾಮಾನುಗಳು; ಇಲ್ಲವೆ ಪೇಯಗಳು; ಸಾಮಾನ್ಯವಾಗಿ ನಾವು ಉಪಯೋಗಿಸುವ ಅರಿವೆ-ಅಂಚಡಿಗಳು, ದಿನಾಲು ಮನೆಯಲ್ಲಿ ಉಪಯೋಗಮಾಡುವ ಅಕ್ಕಿ, ಬೇಳೆ, ಜೋಳ ಇಲ್ಲವೆ ಗೋದಿ, ಕಾಯಿಪಲ್ಲೆ, ನೀರು, ಹಾಲು, ಮೊಸರು, ತುಪ್ಪ, ಚಹ, ಕಾಫಿ, ಸಕ್ಕರೆ, ಬೆಲ್ಲ, ಉರವಲ, ಇದ್ದಲು, ಎಣ್ಣೆ, ಬೆಣ್ಣೆ, ಕಲ್ಲೆಣ್ಣೆ, ಕಡ್ಡಿಯ ಪೆಟ್ಟಿಗೆ, ಗಾದಿ, ಹಚ್ಚಡ, ಧೋತರ, ಪೈರಣಿ, ಟೊಪ್ಪಿಗೆ, ರುಮಾಲು ಇವೇ ಮೊದಲಾದ, ಹುಡುಗರಿಗೆ ತೀರ ಪರಿಚಿತವಾದ ಹಾಗು ಅವರ ದಿನದ ಜೀವನಕ್ಕೆ ನಿಕಟಸಂಬಂಧವುಳ್ಳ ಪದಾರ್ಥಗಳ ಬಗ್ಗೆ ಅವರೊಡನೆ ಮನೋರಂಜನವಾಗುವಂತೆ ಸಂಭಾಷಣೆ ಮಾಡುತ್ತ ಈ ವಿಷಯವನ್ನು ಆರಂಭಿಸುವದು ಯುಕ್ತವಾದದ್ದು. ಈ ಪದಾರ್ಥಗಳ ಬಗ್ಗೆ ಸಣ್ಣ ಹುಡುಗರು ತಮಗೆ ತೋರಿದ ನಾಲ್ಕು ಸಂಗತಿಗಳನ್ನು ಹೇಳಲಿಕ್ಕೆ ಅವರಿಗೆ ಉತ್ತೇಜನ ಕೊಡತಕ್ಕದ್ದು. ವಸ್ತುಪಾಠಗಳಂತೆ ಇವುಗಳ ಬಗ್ಗೆ ಶಿಕ್ಷಕನಿಗೆ ಗೊತ್ತಿರಬಹುದಾದ ಅಥವಾ ದೊರೆಯಬಹುದಾದ ಯಾವತ್ತೂ ಸಂಗತಿಗಳನ್ನು ಅವರ ಮನದಲ್ಲಿ ತುಂಬುವದು ಮಾತ್ರ ಸರಿಯಲ್ಲ. ಆ ಬಳಿಕ ಸಾಲೆಯ ಮನೆ, ಹುಡುಗರ ಮನೆಯಿಂದ ಇದರ ಅಂತರ, ಅದರ ಅಳತೆ, ವರ್ಗಗಳ ಉದ್ದ ಅಗಲ ಮೊದಲಾದ ಅಳತೆಗಳು, ಊರ

ಲ್ಲಿರುವ ಹೆಸರಾದ ಕಟ್ಟಡಗಳಿಂದ ಉದಾ:-ಗುಡಿ, ಮಸೀದಿ, ಧರ್ಮಶಾಲೆ, ಚಾವಡಿ, ಕೆರೆ, ಹೊಳೆ. ಟಪಾಲುಕಚೇರಿ, ರೇಲ್ವೇಸ್ಟೇಶನು, ಪೋಲೀಸಚೌಕಿ ಇವುಗಳಿಂದ ಅದರ ಅಂತರ ಮೊದಲಾದ ಬಗ್ಗೆ ಹುಡುಗರ ಲಕ್ಷ್ಯವನ್ನು ಎಳಿಯಬಹುದು. ಬಳಿಕ ಮೇಲೆ ಹೇಳಿದ ಎಲ್ಲ ಸ್ಥಳಗಳಿಗೂ ಹಳ್ಳಿಯ ಅಥವಾ ಊರ ಜನರ ದಿನದ ಜೀವನಕ್ಕೂ ಸಂಬಂಧಗಳು ಹ್ಯಾಗೆ ಉಂಟಾಗುತ್ತವೆಂಬದನ್ನೂ ಇವುಗಳಿಂದ ಅವರ ಜೀವನವು ಹ್ಯಾಗೆ ನೆಮ್ಮದಿಯುಳ್ಳದ್ದಾಗುವದೆಂಬದನ್ನೂ ಗೊತ್ತು ಹಚ್ಚಬಹುದು. ಹಾಗೆಯೇ ಹಳ್ಳಿಯಲ್ಲಿ ಅಥವಾ ಊರಲ್ಲಿ ವಾಸಿಸುವ ಜನರ ಜಾತಿ, ನಡೆನುಡಿ, ಉಡಿಗೆತೊಡಿಗೆ, ತಿನಿಸುಣಿಸು ಮೊದಲಾದವು; ಹಳ್ಳಿಯ ಇಲ್ಲವೆ ಊರ ಅಧಿಕಾರಸ್ಥರು; ಸ್ಥಾನಿಕ ಪ್ರಾಣಿಗಳು ವನಸ್ಪತಿಗಳು ಮೊದಲಾದವುಗಳ ಅಭ್ಯಾಸವನ್ನು ಮಾಡಿಸಬಹುದು. ಭೂಗೋಲವನ್ನು ಹೀಗೆ ಆರಂಭಿಸುವದರಿಂದ ಮೊದಲಿನ ಪಾಠಗಳು ಹುಡುಗರ ಮನೆಯ ಸುತ್ತಲಿನ ಸಂಗತಿಗಳಿಗೆ ಸಂಬಂಧವುಳ್ಳವಾಗುವವು; ಅವರು ಪ್ರತ್ಯಕ್ಷವಾಗಿ ನೋಡಿ ಅನುಭವದಿಂದ ಭೂಗೋಲದ ಸಂಗತಿಗಳ ಜ್ಞಾನಮಾಡಿಕೊಳ್ಳುವರು. ಪುಸ್ತಕವಿದ್ಯೆಯ ಭೂಗೋಲವು ಅವರಿಗೆ ಅಸಹ್ಯವೆನಿಸಹತ್ತುವದು. ಅವರಿಗೆ ಈ ವಿಷಯದಲ್ಲಿ ನಿಜವಾದ ಮನೋರಂಜನೆಯುಂಟಾಗುವದರಿಂದ ಈ ವಿಷಯದ ಅಭ್ಯಾಸದ ತಳಹದಿಯನ್ನು ದೃಢವಾಗಿ ಹಾಕಿದಂತಾಗುವದು. ನಾವು ಮೇಲೆ ಹೇಳಿದ ಪದಾರ್ಥಗಳ ಬಗ್ಗೆ ಪಾಠ ಹೇಳುವಾಗ ಹುಡುಗರನ್ನು ವರ್ಗದಿಂದ ಹೊರಗೆ ಕರೆದೊಯ್ಯಲೇಬೇಕಾಗುವದು. ಅವರು ತಮ್ಮ ಮನೆ, ತಮ್ಮ ಸಾಲೆ ಹಾಗು ತಮ್ಮ ಹಳ್ಳಿಯ ಸುತ್ತಲಿರುವ ಪದಾರ್ಥಗಳನ್ನೂ ಸಂಗತಿಗಳನ್ನೂ ಮನಮುಟ್ಟಿ ನೋಡುವರು; ಹವೆಯಲ್ಲಿ ಓಡಾಡುತ್ತ ಹುರುಪಿನಿಂದ ಜ್ಞಾನಮಾಡಿಕೊಳ್ಳುವರು; ಸೂಕ್ಷ್ಮವಾಗಿ ಅವಲೋಕನ ಮಾಡುವ ಚಟವು ಅವರಲ್ಲಿ ನೆಲೆಗೊಳ್ಳುವದು. ಒಟ್ಟಿನ ಮೇಲೆ ಹೇಳುವದೆಂದರೆ ಅವರಿಗೆ ಜ್ಞಾನವಾಗುವದಲ್ಲದೆ ಅವರ ಆರೋಗ್ಯವೂ ಹೆಚ್ಚುವದು.

ಊರೊಳಗಿನ ಕಿರಾಣೀ ಅಂಗಡಿಗಳು, ಊರ ಪೋಸ್ಟಆಫೀಸು, ಸವೀಪದಲ್ಲಿರುವ ರೇಲ್ವೆಯಸ್ಟೇಶನು ಈ ಮೊದಲಾದವುಗಳ ಉಪಯೋಗವನ್ನು ಈ ವಿಷಯವನ್ನು ಕಲಿಸುವದರಲ್ಲಿ ಎಷ್ಟು ಮಾಡಿಕೊಳ್ಳಬಹುದೆಂಬದು ಶಿಕ್ಷಕರ ಲಕ್ಷ್ಯಕ್ಕೆ ಬರುವದಿಲ್ಲ. ಕಿರಾಣಿ ಅಂಗಡಿಯಲ್ಲಿ ತುಸು ಹೊತ್ತು ಅಭ್ಯಾಸಿಸಿದರೆ ಊರಲ್ಲಿ ಏನು ಸಿಗುವದು, ಪರ ಊರಿಂದ ಯಾವ ಸಾಮಾನುಗಳನ್ನು ತರಿಸಬೇಕಾಗುವದು ಮೊದಲಾದದ್ದು ತೀವ್ರ ತಿಳಿಯುವದು. ಪೋಸ್ಟುಆಫೀಸಿನಲ್ಲಿ ಹೋದರೆ ಊರ ಜನರ ಹಿತಕ್ಕಾಗಿ ಅಲ್ಲಿ ಯಾವ ಯಾವ ಯೋಜನೆಗಳಿರುವವು, ಯಾವ ಯಾವ ದೂರದ ಊರುಗಳಿಂದ ದಿನಾಲು ಆ ಊರಿಗೆ ಪತ್ರ ಸುದ್ದಿ ಮೊದಲಾದವು ಬರುವವು ಎಂಬದು ಗೊತ್ತಾಗುವದು. ಸ್ಟೇಶನ್ನಿಗೆ

ಹೋಗಿ ಗುಡಸೆಡಿನಲ್ಲಿ ನಿಂತರೆ ಯಾವ ಯಾವ ಕಡೆಯಿಂದ, ಎಷ್ಟು ದೂರದಿಂದ ಆ ಊರಿಗೆ ಯಾವ ಮಹತ್ವದ ಸರಕುಗಳು ಎಷ್ಟು ಪ್ರಮಾಣದಿಂದ ಬರುತ್ತಿರುವವು, ಆ ಊರಿಂದ ಯಾವ ಯಾವ ಸಮೀಪದ ಹಾಗು ದೂರದ ಊರುಗಳಿಗೆ ಅಲ್ಲಿ ಹೆಚ್ಚಾಗಿ ಬೆಳೆಯುವ ಅಥವಾ ತಯಾರಾಗುವ ಸರಕು ಹೋಗುವದು ಎಂಬದು ಕಣ್ಮುಟ್ಟಿ ನೋಡ ಲಾಗುವದು. ಇವರಿಂದ ತಮ್ಮ ಹಳ್ಳಿಯ ಅಥವಾ ಊರ ವ್ಯಾಪಾರ, ಉದ್ಯೋಗ ಮೊದ ಲಾದವುಗಳಲ್ಲಿ ಹುಡುಗರ ಜಿಜ್ಞಾಸೆಯು ತೃಪ್ತವಾಗುವದು.

ಶಿಕ್ಷಕರೂ ವಿದ್ಯಾರ್ಥಿಗಳೂ ಆದಷ್ಟು ಮಟ್ಟಿಗೆ ವರ್ಗದಲ್ಲಿ ಪಠ್ಯಪುಸ್ತಕಗಳನ್ನು ಉಪಯೋಗಿಸದಂತೆ ಭೂಗೋಲ ವಿಷಯದ ಅಭ್ಯಾಸವನ್ನು ಸಾಗಿಸಬೇಕೆಂದು ನಾನು ಸೂಚಿಸುತ್ತೇನೆ. ಈ ವಿಷಯದಲ್ಲಿ ನಮ್ಮ ವಿದ್ಯಾರ್ಥಿಗಳಿಗೆ ನಿಜವಾಗಿ ಮನಸ್ಸಾಗಬೇ ಕಾದರೆ ಈ ಉಪಾಯವು ವೇಲಾದದ್ದೆಂದು ನನ್ನ ಅಭಿಪ್ರಾಯವು. ವರ್ಗದಲ್ಲಿರುವಾಗ ಹುಡುಗರು ಉಪಯೋಗಿಸಬಹುದಾದ ಅಭ್ಯಾಸದ ಸಾಧನಗಳೆಂದರೆ ಅಟ್ಲಾಸು (ನಕಾ ಶದ ಪುಸ್ತಕ), ಪಟಗಳು, ಚಿತ್ರಗಳು, ಮೊದಲಾದವು. ಪುಸ್ತಕಗಳ ಉಪಯೋಗ ಮಾಡದೆ ಕಲಿಸುವದೇ ಶಿಕ್ಷಣದ ರಾಜಮಾರ್ಗವೆಂಬದನ್ನು ಶಿಕ್ಷಕರು ಮರೆಯಲಾಗದು. ನಮ್ಮ ದಿನದ ಪಾಠಗಳಲ್ಲಿ ನಾವು ಈ ದಾರಿಯನ್ನು ಸಾಧಿಸಿದಂತೆ ನಮಗೂ ನಮ್ಮ ವಿದ್ಯಾರ್ಥಿಗಳಿಗೂ ಹಿತವಾಗುವದು.

ವಿದ್ಯಾರ್ಥಿಯ ಜೀವನಕ್ಕೂ ಪರಿಸ್ಥಿತಿಗೂ ಸಂಬಂಧವಿರುವಂತೆಯೇ ಪಾಠಗಳನ್ನು ರಚಿಸಿಕೊಂಡು ಅವರಲ್ಲಿ ವಿಷಯದ ಬಗ್ಗೆ ಜಿಜ್ಞಾಸೆಯನ್ನುಂಟುಮಾಡಲಿಕ್ಕೆ ಯತ್ನಿಸು ವದೂ ಮಹತ್ವವಾದದ್ದು. ನಾವು ಈ ವಿಷಯವನ್ನು ಯಾಕೆ ಕಲಿಯಬೇಕು, ಇದ ರಿಂದ ನಮಗೆ ಏನು ಉಪಯೋಗವು ಎಂದು ಅವರು ಮೇಲಿಂದಮೇಲೆ ಪ್ರಶ್ನಮಾಡಿ ಕೊಳ್ಳಲಿ. ನಮ್ಮ ಪ್ರಾಂತದ ಇಲ್ಲವೆ ದೇಶದ ಭೂಗೋಲವನ್ನು ಆರಂಭಿಸುವಾಗ ನಾವು ನಮ್ಮ ಪ್ರಾಂತದ ಇಲ್ಲವೆ ದೇಶದ ಕಥೆಯನ್ನು ಕಲಿಯುವೆವೆಂದೂ ನಮ್ಮ ನೆರೆ ಹೊರೆಯವರ ಕೂಡ ನಾವು ಬಳಿಕೆಯನ್ನು ಬೆಳಿಸಲು ನಮಗೆ ಬೇಕಾಗುವ ಜ್ಞಾನವನ್ನು ಮಾಡಿಕೊಳ್ಳುವದು ವಿಹಿತವೆಂದೂ ಅವರಿಗೆ ತಿಳಿಸಬೇಕು. ಏಶಿಯವು ನಮ್ಮ ಖಂಡವು; ನಮ್ಮ ಧರ್ಮವೂ ನಮ್ಮೊಡನೆ ವಾಸವಾಡುವ ಇತರ ಜನರುಗಳ ಧರ್ಮಗಳೂ ಇದೇ ಖಂಡದಲ್ಲಿ ಹುಟ್ಟಿದವು; ಯುರೋಪವು ನಮ್ಮನ್ನಾಳುವ ಜನಾಂಗದವರ ಖಂಡವು; ಪೋಷ್ಟು, ರೇಲ್ವೆ, ಟೆಲಿಗ್ರಾಫ ಮೊದಲಾದ ಹೊಸ ಸಂಸ್ಥೆಗಳು ಆ ಖಂಡದಿಂದಲೇ ನಮ್ಮಲ್ಲಿ ಬಂದಿವೆ; ಇವಲ್ಲದೆ ಅಲ್ಲಿ ಆದ ಇತರ ಹಲವು ಶೋಧಗಳಿಂದ ನಮ್ಮ ದಿನದ ಬಾಳು ಸುಖವುಳ್ಳದ್ದಾಗಿದೆ. ಇದಲ್ಲದೆ, ಈ ವಿಷಯದ ಪ್ರತಿಯೊಂದು ಪಾಠವನ್ನು ಹುಡುಗರಿಗೆ ಪರಿಚಿತವಿರುವ ಸ್ಥಾನಿಕ ಭೂಗೋಲಕ್ಕೆ ಸಂಬಂಧಿಸಿ ರಚಿಸತಕ್ಕದ್ದು, ಉದಾ–ಜನರ

ಕುಲಗಳು ಈ ಬಗ್ಗೆ ಪಾಠವಿದ್ದರೆ ಹುಡುಗರ ಕೂಡ ವಾಸವಾಗಿದ್ದು ಅವರು ನೋಡಿರ ಬಹುದಾದ ಬಿಳಿಬಣ್ಣದ, ಕಪ್ಪುಬಣ್ಣದ ಹಾಗು ಹಳದೀಬಣ್ಣದ ಜನರಿಗೆ ಸಂಬಂಧಿಸಿ ಪಾಠವನ್ನು ಹೇಳಬೇಕು. ಕೆಂಪುಬಣ್ಣದ ಹಾಗು ಕಂದೀಬಣ್ಣದ ಜನರನ್ನೂ(ಅಮೇರಿಕದ ರೆಡ್ ಇಂಡಿಯನ್ನರು) ಮಾತ್ರ ನಮ್ಮ ಹುಡುಗರು ನೋಡಿರುವ ಸಂಭವವಿಲ್ಲ; ಇವರ ಬಗ್ಗೆ ಹೇಳುವಾಗ ಇವರ ಮೈಕಟ್ಟು, ಉಡಿಗೆತೊಡಿಗೆ ಆಟಪಾಟಗಳು, ನಡೆನುಡಿ ಗಳು ಮೊದಲಾದವುಗಳನ್ನು ಉದಾಹರಿಸುವ ಚಿತ್ರಗಳನ್ನು ಧಾರಾಳವಾಗಿ ಉಪಯೋಗಿಸ ತಕ್ಕದ್ದು.

ಭೂಗೋಲದ ಪಾಠಗಳನ್ನು ಶಕ್ಯವಿದ್ದಲ್ಲಿ ಇತಿಹಾಸಕ್ಕೆ ಸಂಬಂಧಿಸಬೇಕು. ಅರಬಸ್ತಾನದ ಭೂಗೋಲವನ್ನು ಆರಂಭಿಸುವಾಗ ಮುಸಲ್ಮಾನರ ಧರ್ಮಗುರುಗಳಾದ ಮಹಮ್ಮದ ಪೈಗಂಬರರಿಗೆ ಜನ್ಮನಿತ್ತ ಪವಿತ್ರಭೂಮಿಯೆಂದೂ ಬಿಹಾರದ ಬಗ್ಗೆ ಹೇಳುವಾಗ ಅದು ಭೂಮಂಡಲದ ಮೂರರಲ್ಲಿ ಒಂದು ಪಾಲು ಜನರ ಧರ್ಮವಾದ ಬೌದ್ಧ ಧರ್ಮವನ್ನು ಬೋಧಿಸಿದ ಬುದ್ಧನ ಜನ್ಮಸ್ಥಾನವೆಂದೂ, ಪಾಲಿಸ್ತಾನದ ಬಗ್ಗೆ ಅಭ್ಯಾಸಿಸುವಾಗ ಅದು ಏಸುಕ್ರಿಸ್ತನ ಜನ್ಮಭೂಮಿಯೆಂದೂ ಆರಂಭಿಸತಕ್ಕದ್ದು.

ನೀಲಾಗಿ ಭೂಮಂಡಲದಲ್ಲಿರುವ ಬೇರೆ ಬೇರೆ ಜನಾಂಗಗಳ ಸಾಮಾಜಿಕ, ವಿದ್ಯೋ ಗಿಕ, ರಾಜಕೀಯ ಮೊದಲಾದ ಪರಿಸ್ಥಿತಿಗಳಿಗೆ ಭೂಗೋಲದ ಪ್ರಾಕೃತಿಕ ಸಂಗತಿಗಳು ಹ್ಯಾಗೆ ಕಾರಣೀಭೂತವಾಗಿರುವವೆಂಬದನ್ನು ಈ ವಿಷಯದ ಅಭ್ಯಾಸದಲ್ಲಿ ಸೇರಿಸ ತಕ್ಕದ್ದು. ಉದಾ–ನಮ್ಮ ಸದ್ಯದ ಸ್ಥಿತಿಯು ನಮ್ಮ ಪ್ರಾಕೃತಿಕ ಪರಿಸ್ಥಿತಿಯನ್ನು ಬಹಳವಾಗಿ ಅವಲಂಬಿಸಿರುವದು; ದಕ್ಷಿಣದಲ್ಲಿ ಸಮುದ್ರವೂ ಮಿಕ್ಕದಿಕ್ಕುಗಳಲ್ಲಿ ದುರ್ಗ ಮವಾದ ಪರ್ವತಗಳೂ ನಿಬಿಡವಾದ ಅರಣ್ಯಗಳೂ ಸುತ್ತುಗಟ್ಟಿರುವ ಮೂಲಕ ನಮ್ಮ ವಿಶಾಲವಾದ ದೇಶದ ಬೇರೆ ಬೇರೆ ಭಾಗಗಳ ಜನರ ಜೀವನದ ಕಲ್ಪನೆಗಳೂ ಜೀವನ ಕ್ರಮವೂ ನಿರ್ಬಂಧಿತವಾಗಿರುವವು; ನಾವು ಮುಂದುವರಿಯುವ ಯೋಜನೆಗಳನ್ನು ಸಹಸಾ ಕೈಕೊಳ್ಳುವದಿಲ್ಲ, ಪುರಾಣಮತವಾದಿಗಳಾಗಿ ಬಾಳುತ್ತೇವೆ. ಸೃಷ್ಟಿ ದೇವಿಯು ಹಸನ್ಮುಖದಿಂದ ನಮ್ಮ ದೇಶವನ್ನು ನೋಡುತ್ತಿರುವಳು; ಸೂರ್ಯದೇವನು ನಮಗೆ ವಿಪುಲವಾಗಿ ಬೆಳಕು ಕೊಡುವನು; ನಮಗೆ ಮಳೆಬೆಳೆಗಳ ಕೊರತೆಯಿಲ್ಲ. ಆದ್ದರಿಂದ ನಮ್ಮ ಜನರ ಮುಖ್ಯ ಉದ್ಯೋಗವು ಒಕ್ಕಲತನವಾಗಿದೆ; ಜನರು ಸ್ವಲ್ಪದರಲ್ಲಿ ಸುಖಹಚ್ಚಿ ಕೊಳ್ಳುವರು; ಸುಧಾರಣೆಯನ್ನು ಅಪೇಕ್ಷಿಸುವದಿಲ್ಲ. ಖೈಬರ ಬೋಲನದ ಕಂಡಿಗಳಿ ರುವ ಮೂಲಕ ಸೃಷ್ಟಿಯು ಸಿಟ್ಟಿನಿಂದ ನೋಡಿದ್ದರ ಮೂಲಕವೇ ಕಷ್ಟದಿಂದ ಜೀವಿಸಿ ಗಟ್ಟಿಗರೂ ಸಾಹಸಿಕರೂ ಆದ ಕಾಡು ಜನರು ನಮ್ಮ ದೇಶವನ್ನು ಹೊಕ್ಕು ನಮ್ಮ ನಾಡಿನ ಇತಿಹಾಸವನ್ನು ವಿಲಕ್ಷಣವಾಗಿ ಮಾಡಿರುವರು.

ಭೂಗೋಲವನ್ನು ಅಚ್ಚುಹಾಕಿದ ಪುಸ್ತಕಗಳಲ್ಲಿ ಅಭ್ಯಾಸಿಸುವದಕ್ಕಿಂತ ಪ್ರತ್ಯಕ್ಷ ಪ್ರದೇಶ, ಚಿತ್ರ, ನಕಾಶಗಳಿಂದ ಅಭ್ಯಾಸಿಸುವದಕ್ಕೆ ಯಾರಿಗೆ ತಾನೆ ಮನಸ್ಸಾಗಲಿಕ್ಕಿಲ್ಲ! ನಮ್ಮ ದಿನದ ಬಾಳುವೆಗೆ ಅದನ್ನು ಸಂಬಂಧಿಸಿದರೆ ಯಾರು ಅದನ್ನು ದುರ್ಲಕ್ಷಿಸುವರು ? ನಮ್ಮ ಸುತ್ತಲಿನ ಸಂಗತಿಗಳನ್ನು ತಿಳಿದುಕೊಂಡರೆ ದೂರದ ದೇಶಗಳು, ಜನರು ಇವರ ಭೂಗೋಲವು ಸರಳವೂ ಸ್ಪಷ್ಟವೂ ಆಗುವದೆಂದು ತೋರಿಸಿದರೆ ಈ ವಿಷಯವು ಯಾರಿಗೆ ಬೇಡಾದೀತು ! ಭೂಮಂಡಲದ ವಿಭೂತಿಗಳ ಜನ್ಮಸ್ಥಾನವೂ ನಮ್ಮ ಸದ್ಯದ ರಾಜಕೀಯ ಸಾಮಾಜಿಕ ಔದ್ಯೋಗಿಕ ಸ್ಥಿತಿಗಳ ಮೂಲವೂ ಆದ ಸಂಗತಿಗಳ ಅಭ್ಯಾಸನೇ ಭೂಗೋಲವೆಂದು ತಿಳಿದಬಳಿಕ ಯಾರಿಗೆ ತಾನೆ ಅದನ್ನು ತಿಳಿದುಕೊಂಡು ಕಲಿಯುವದು ಬೇಡೆನಿಸೀತು !

ಇತಿಹಾಸ ಶಿಕ್ಷಣ.

ಇತಿಹಾಸವೆಂದರೆ ಜನತೆಯ ಪ್ರಗತಿಯ ಕಥೆ, ಯಾವದೊಂದು ದೇಶದ ಇತಿಹಾಸವೆಂದರೆ ತೀರ ಪುರಾತನಕಾಲದಿಂದ ಇಂದಿನವರೆಗೆ ಆದ ಆ ದೇಶದ ಜನರ ಪ್ರಗತಿಯ ಕಥೆಯು. ಇದು, ಆ ದೇಶದ ಜನತೆಯು ತೀರ ಪ್ರಾಚೀನಕಾಲದಿಂದ ಇಂದಿನವರೆಗೆ ಹೇಗೆ ಪ್ರಗತಿಯನ್ನು ಹೊಂದುತ್ತ ಬಂದಿತೆಂಬದನ್ನು ತೋರಿಸುವದು. ಹಿಂದುಸ್ಥಾನದ ಅಥವಾ ಇಗ್ಲಂಡದ ಇತಿಹಾಸವೆಂದರೆ ಅದು, ಆ ದೇಶಗಳ ಜನರು ತೀರ ಪ್ರಾಚೀನಕಾಲದಿಂದ ಇಂದಿನವರೆಗೆ ಹೇಗೆ ಹೇಗೆ ಪ್ರಗತಿ ಹೊಂದುತ್ತ ಬಂದು ಇಂದಿನ ಈ ಸ್ಥಿತಿಗೆ ಮುಟ್ಟಿದರು, ಪ್ರಪಂಚದಲ್ಲಿ ಅವರಿಗಿರುವ ಈ ಯೋಗ್ಯತೆಯನ್ನು ಕ್ರಮವಾಗಿ ಹೇಗೆ ಪಡೆದರು ಎಂಬದನ್ನು ಹೇಳುವದು. ಇದರಿಂದ ಇತಿಹಾಸವನ್ನು ಕಲಿಸುವ ಪದ್ಧತಿಯು ಯಾವದೆಂಬದು ಸಹಜವಾಗಿ ತಿಳಿದು ಬರುವಂತೆ ಅವೆ. ಇತಿಹಾಸವನ್ನು ಕಲಿಸುವಾಗ ಕಥೆಯನ್ನು ಹೇಳಿದಂತೆ ಬೇರೆ ಬೇರೆ ಮೆಟ್ಟಿಲುಗಳಿಗೆ ಸಂಬಂಧವನ್ನಿಟ್ಟುಕೊಂಡು ಮನೋರಂಜಕವಾಗಿ ಹೇಳುತ್ತ ಸಾಗಿ ಜನರು ಯಾವ ರೀತಿಯಾಗಿ ಮೆಟ್ಟಿಲು ಮೆಟ್ಟಿಲುಗಳಂತೆ ಸುಧಾರಣೆಯ ದಾರಿಯನ್ನು ಏರುತ್ತ ಬಂದರೆಂಬದನ್ನು ಹೇಳಬೇಕಾಗುವದು. ಕಥೆಯನ್ನು ಹೇಳುವಾಗ ಚಿತ್ರವನ್ನು ಉಪಯೋಗಿಸುವಂತೆ ಯಾವದೊಂದು ವ್ಯಕ್ತಿಯ, ಜನಾಂಗದ, ದೇಶದ, ಯಾವದೊಂದು ಕಾಲಖಂಡದ ಇತಿಹಾಸವನ್ನು ಹೇಳುವಾಗ ಅವುಗಳಿಗೆ ಸಂಬಂಧಿಸಿದ ಚಿತ್ರ, ನಕಾಶ, ಪಟಗಳು ಇವನ್ನು ಉಪಯೋಗಿಸಿಕೊಂಡು ವಿಷಯವನ್ನು ವಿವರಿಸಿದರೆ ಅದು ಹೆಚ್ಚು ಪರಿಣಾಮವಾಗುವದು.

ಸಾಂಪ್ರತಕ್ಕೆ ಶಾಲೆಗಳಲ್ಲಿ ಇತಿಹಾಸಪಾಠಗಳು ತಲೆಬೇಸರವನ್ನುಂಟುಮಾಡುವ ಒಂದು ಸಾಮಾನ್ಯ ಪಾಠದಂತೆ ಸಾಗಿವೆ. ಇದಕ್ಕೆ ಶಿಕ್ಷಕರು ಆ ಪಾಠಗಳನ್ನು ತಪ್ಪು ಪದ್ಧತಿಗಳಿಂದ ಕಲಿಸಲು ಯತ್ನಿಸುವದೇ ಮುಖ್ಯ ಕಾರಣವಾಗಿರುವದು. ಮೊತ್ತಮೊದಲು ಈ ವಿಷಯದಲ್ಲಿ ಶಿಕ್ಷಕರ ಸ್ವಂತ ಜ್ಞಾನವೇ ಸಾಕಾದಷ್ಟಿರದೆ ಅತ್ಯಲ್ಪವಾಗಿರುವದು. ವಿದ್ಯಾರ್ಥಿಗಳ ಪಾಠಕ್ಕೆಂದು ಗೊತ್ತು ಮಾಡಿದ ಪುಸ್ತಕಗಳಲ್ಲಿರುವದಕ್ಕಿಂತ ಹೆಚ್ಚಿನ ವಿಷಯಗಳು ತೀರ ಸ್ವಲ್ಪ ಶಿಕ್ಷಕರಿಗೆ ತೀರ ಕ್ವಚಿತ್ತಾಗಿ ತಿಳಿದಿರುವವೆಂಬ ಮಾತು ಎಲ್ಲರಿಗೂ ಗೊತ್ತಿದೆ. ಆದ್ದರಿಂದ ಅವರು ಆ ಪಾಠಪುಸ್ತಕಗಳನ್ನು ಕೈಯಲ್ಲಿ ಹಿಡಿದುಕೊಂಡು ಅವುಗಳಲ್ಲಿರುವ ವಿಷಯಗಳನ್ನಷ್ಟೇ ಹೇಳುತ್ತ ಹೋಗುವದರ ಹೊರತು ಬೇರೆ ಉಪಾಯವೇ ಇರುವದಿಲ್ಲ. ಈ ಕ್ರಮದಿಂದ ಪಾಠಸಾಗಿಸಿದರೆ ಅದು ಬಾಲಕರ ಮನಸ್ಸಿನಲ್ಲಿ ಅಭಿರುಚಿಯನ್ನು ಹುಟ್ಟಿಸಲಾರದೆಂಬದೂ ಪಾಠದ ಉದ್ದೇಶವನ್ನು ಸರಿಯಾಗಿ ಸಾಧಿಸಲಾರದೆಂಬದೂ ಸಹಜವೇ ಸರಿ. ಪುಸ್ತಕವನ್ನು ಹಿಡಿದುಕೊಂಡು ಒಂದು ಕಥೆಯನ್ನು ಓದಿದರೆ ಅದು ಯಾರಿಗೂ ಮನೋರಂಜಕವಾಗಲಾರದು. ಕಥೆಯು ಮನೋರಂಜಕವಾಗಬೇಕಾದರೆ ಅದನ್ನು ಸ್ವತಂತ್ರವಾಗಿ ಹೇಳಲೇಬೇಕು.

ಇತಿಹಾಸ ಪಾಠವು ಮನೋರಂಜಕವಾಗದಿರಲಿಕ್ಕೆ ಇನ್ನೊಂದು ಕಾರಣವೇನೆಂದರೆ ಶಿಕ್ಷಕನು ಇತಿಹಾಸವನ್ನು ಕಲಿಸುವಾಗ ಆತನ ಪಾಠದ ಕಾಲ ವಿಭಾಗಕ್ಕೆ ಸಂಬಂಧಿಸಿದ ಚಿತ್ರ, ನಕಾಶೆ, ಪಟ ಮುಂತಾದ ಉಪಕರಣಗಳನ್ನು ಉಪಯೋಗಿಸಿ ಪಾಠಸಾಗಿಸಲು ಪ್ರಯತ್ನಪಡುತ್ತಿರುವದಿಲ್ಲ.

ಸರಿಯಾಗಿ ಆರಿಸಿಕೊಂಡ ಪಾಠಪುಸ್ತಕಗಳು ತನ್ನ ಪಾಠದ ಸಿದ್ಧತೆಗೆ ಶಿಕ್ಷಕರಿಗೆ ಮಾರ್ಗದರ್ಶಕವೂ ವಿದ್ಯಾರ್ಥಿಗಳಿಗೆ ತಾವು ಕಲಿತಿರುವ ವಿಷಯಗಳ ಪುನರಾವರ್ತನೆಗೆ ಸಹಾಯಕವೂ ಆಗಬಹುದು. ಮೇಲಿನ ತರಗತಿಗಳ ವಿದ್ಯಾರ್ಥಿಗಳು ಶಿಕ್ಷಕನು ತೋರಿಸಿಕೊಟ್ಟ ಪದ್ಧತಿಯನ್ನೇ ಅನುಸರಿಸಿ ಸ್ವತಂತ್ರವಾಗಿ ಅಭ್ಯಾಸಮಾಡುತ್ತಿರುವಾಗ ಈ ಪುಸ್ತಕಗಳು ಪ್ರಯೋಜನಕಾರಿಯಾಗಬಹುದು.

ಯಾರು, ಎಂದು, ಎಲ್ಲಿ ಮತ್ತು ಯಾಕೆ ಈ ಮಾತುಗಳು ಇತಿಹಾಸ ಪಾಠದೊಳಗಿನ ಮುಖ್ಯ ಮಾತುಗಳಾಗಿರಬೇಕು. ಇತಿಹಾಸವನ್ನು ಕಲಿಸುವಾಗ ಮುಖ್ಯ ಪಾತ್ರವು ಅಥವಾ ಪಾತ್ರಗಳು ಯಾರು ? ಯಾವ ಕಾಲದಲ್ಲಿ ಆ ಕೆಲಸ ನಡೆಯಿತು ? ಎಲ್ಲಿ ನಡೆಯಿತು ? ಯಾಕೆ ನಡೆಯಿತು ? ಎಂಬದನ್ನು ವಿದ್ಯಾರ್ಥಿಗಳು ಸ್ಪಷ್ಟವಾಗಿಯೂ ನಿಃಸಂಶಯವಾಗಿಯೂ ತಿಳಿದುಕೊಂಡಿರಬೇಕು.

ಬೇರೆ ಬೇರೆ ಮಹತ್ವದ ಕಾರ್ಯಗಳು ನಡೆದ ಕಾಲಕ್ರಮದ ಮತ್ತು ಅವುಗಳ ನಡುವಿನ ಕಾಲಾವಧಿಯ ಕಲ್ಪನೆಯು ಸರಿಯಾಗಿ ಆಗಬೇಕಾದರೆ ತಾವು, ಕಲಿಸಬೇಕಾ

ಗಿರುವ ಇತಿಹಾಸದ ಯಾವದೊಂದು ಕಾಲಖಂಡ (Period) ವನ್ನು ಯಾವದೊಂದು ಶತಮಾನದಂತೆ ಇಲ್ಲವೆ ಅರ್ಧಶತಮಾನದಂತೆ ವಿಭಾಗಮಾಡಿಕೊಂಡು ಆಯಾ ವಿಭಾಗಗಳಲ್ಲಿ ಸಂಭವಿಸಿದ ಪ್ರಾಮುಖ್ಯವಾದ ಸಂಗತಿಗಳನ್ನು ವರ್ಷಾನುಕ್ರಮದಂತೆ ಬರೆದ ಒಂದು ಪಟವನ್ನು ಸಿದ್ಧಮಾಡಿಕೊಂಡಿರಬೇಕು.

ಇತಿಹಾಸದ ಪಾಠವು ಉತ್ತಮವಾಗಿ ಸಾಗಬೇಕಾದರೆ ಈ ಕೆಳಗಿನ ಸಂಗತಿಗಳ ಕಡೆಗೆ ಲಕ್ಷ ಕೊಡಲೇಬೇಕು. ವಿದ್ಯಾರ್ಥಿಗಳಿಗೆ ಈ ವೊದಲು ಗೊತ್ತಿದ್ದ ಸಂಗತಿಗಳಿಗೂ ಈಗ ಕಲಿಯುವ ಸಂಗತಿಗಳಿಗೂ ಚೆನ್ನಾಗಿ ಸಂಬಂಧ ಮಾಡಿಕೊಡಬೇಕು. ಒಳ್ಳೆಯ ಪ್ರಶ್ನೆಗಳ ಮೂಲಕವಾಗಿ ವಿದ್ಯಾರ್ಥಿಗಳ ಲಕ್ಷವನ್ನೂ ಅವರ ಜ್ಞಾನವನ್ನೂ ಕ್ರಮವಾಗಿ ಪರೀಕ್ಷಿಸುತ್ತ ಮುಂದೆ ಸಾಗಬೇಕು. ಕೊನೆಗೆ ಅವರು ಕಲಿತಿರುವ ಎಲ್ಲ ವಿಷಯಗಳನ್ನು ಸಂಗ್ರಹವಾಗಿ ಹೇಳಿ ಅವುಗಳ ಪುನರಾವರ್ತನೆ ಮಾಡಿಸಬೇಕು. ಈ ಕೊನೆಯ ಮೆಟ್ಟಿನಲ್ಲಿ ವಿದ್ಯಾರ್ಥಿಗಳು ತಾವು ಕಲಿತಿರುವ ವಿಷಯಗಳನ್ನು ತಮ್ಮ ಸ್ವಂತ ಭಾಷೆಯಲ್ಲಿ ಸಂಗ್ರಹವಾಗಿ ಹೇಳುವದು ಉತ್ತಮವಾದ ಮಾರ್ಗವು. ಇತಿಹಾಸ ಕಲಿಸುವದರಲ್ಲಿ ಪ್ರವೀಣನಾದ ಶಿಕ್ಷಕನು ಯಾವ ಮಾತನ್ನು ಬಿಟ್ಟು ಬಿಡಬೇಕು, ಯಾವದಕ್ಕೆ ಹೆಚ್ಚು ಮಹತ್ವಕೊಡಬೇಕು, ಯಾವದು ಕಡಿಮೆ ಮಹತ್ವದ್ದು ಎಂಬದನ್ನು ಚೆನ್ನಾಗಿ ತಿಳಿದುಕೊಂಡಿರುವನು. ಮತ್ತು ಮಹತ್ವವಾದ ಮಾತುಗಳಿಗಷ್ಟೇ ಹೆಚ್ಚು ಪ್ರಾಧಾನ್ಯವನ್ನು ಕೊಟ್ಟು ಮಿಕ್ಕವುಗಳಿಗೆ ಕಡಿಮೆ ಮಹತ್ವಕೊಡುವನು. ಪಾಠದ ಕೊನೆಗೆ ಕರೇಹಲಿಗೆಯ ಮೇಲೆ ಬರೆಯಬೇಕಾದ ಪಾಠದ ಸಾರಾಂಶವನ್ನಲ್ಲದೆ ಇತಿಹಾಸದ ಟಿಪ್ಪಣಿಯನ್ನು ಬರೆದಿಡುವದು ಮತ್ತು ವಿದ್ಯಾರ್ಥಿಗಳಿಂದ ಬರೆಯಿಸುವದು ಇತಿಹಾಸಪಾಠಗಳಲ್ಲಿ ಪ್ರಬುದ್ಧ ವಿದ್ಯಾರ್ಥಿಗಳಿಗೆ ಕಲಿಸುವಾಗಲೂ ಸಹ ತೀರ ಅನವಶ್ಯಕವಾಗಿವೆ. ಇತಿಹಾಸವನ್ನು ಕಲಿಸುವ ಅನೇಕ ಪದ್ಧತಿಗಳಿರುವವು. ಕಾಲಕ್ರಮವನ್ನು ಅನುಸರಿಸುವ ಪದ್ಧತಿಯಲ್ಲಿ ಪ್ರಾರಂಭದಿಂದಲೂ ಸಂಭವಿಸಿದ ಮಹತ್ವದ ಸಂಗತಿಗಳನ್ನು ಅವುಗಳ ಕಾಲಾನುಕ್ರಮದಂತೆ ಎಲ್ಲ ಮಾತುಗಳಿಗೂ ಅಷ್ಟೇ ಮಹತ್ವ ಕೊಟ್ಟು ಕಲಿಸುತ್ತ ಸಾಗುವನು; ಆಯಾ ಸಂಗತಿಗಳ ಪರಸ್ಪರ ಸಂಬಂಧವನ್ನಾಗಲಿ ಅವುಗಳ ಪರಸ್ಪರ ಮಹತ್ವವನ್ನಾಗಲಿ ಹೇಳುವನು.

ವಿಷಯ ವಿಭಾಗ ಪದ್ಧತಿಯಲ್ಲಿ ಶಿಕ್ಷಕನು ಕೆಲವೊಂದು ಘಟನೆಗಳಿಗೆ ಮಹತ್ವ ಕೊಟ್ಟು ಕೆಲವೊಂದು ಕಾಲಖಂಡದ ಇತಿಹಾಸದಲ್ಲಿ ವಿಭಾಗಮಾಡಿಕೊಳ್ಳುವನು. ಉದಾಹರಣೆಗಾಗಿ ಹಿಂದುಸ್ತಾನದ ಅರ್ವಾಚೀನ ಇತಿಹಾಸವನ್ನು ತೆಗೆದುಕೊಳ್ಳೋಣ. ಅದನ್ನು ಯುರೋಪಿಯನ್ನರು ಈ ದೇಶಕ್ಕೆ ಬಂದದ್ದು, ಇಂಗ್ಲೀಷರಿಗೂ ಫ್ರೆಂಚರಿಗೂ ಆದ ಯುದ್ಧಗಳು, ಮರಾಠರೊಡನೆ ಆದ ಯುದ್ಧಗಳು, ಮೈಸೂರಿನ ಯುದ್ಧಗಳು ಮುಂತಾದ

ಮಹತ್ವದ ಘಟನೆಗಳನ್ನಷ್ಟೇ ಆರಿಸಿಕೊಂಡು ಇತರ ಘಟನೆಗಳಿಗೆ ಸಂಬಂಧಿಸಿದ ವಿಚಾರಗಳನ್ನೆಲ್ಲ ಬಿಟ್ಟುಬಿಡುವರು.

ತುಲನಾತ್ಮಕ ಪದ್ಧತಿಯಲ್ಲಿ ಇಬ್ಬರು ಅರಸರು, ಇಬ್ಬರ ಆಳಿಕೆ ಮುಂತಾದ ಸಂಗತಿಗಳನ್ನು ಪರಸ್ಪರ ತುಲನೆ ಮಾಡಿ ಪಾಠಸಾಗಿಸುವರು. ಉದಾ:–ಬೌದ್ಧಧರ್ಮ ಮತ್ತು ಜೈನ ಧರ್ಮ; ಅಕಬರ ಮತ್ತು ಔರಂಗಜೇಬ; ಹೈದರ ಮತ್ತು ಟೀಪು; ಕ್ಲೈವ ಮತ್ತು ವಾರನ ಹೇಸ್ಟಿಂಗ್ಸ ಈ ರೀತಿಯಾಗಿ ಜೋಡಿ ಜೋಡಿ ಆರಿಸಿಕೊಂಡ ವಿಷಯಗಳನ್ನು ತುಲನೆ ಮಾಡುತ್ತ ಸಾಗುವರು.

ಹಿಂದೆ ಸಾಗುವ ಪದ್ಧತಿಯಲ್ಲಿ ಶಿಕ್ಷಕರು ಸದ್ಯಃಕಾಲದ ಇತಿಹಾಸದಿಂದ ಪ್ರಾರಂಭ ಮಾಡಿ ಹಿಂದೆ ಸಾಗುವರು.

ಕೇಂದ್ರ ಪದ್ಧತಿಯಲ್ಲಿ ಶಿಕ್ಷಕರು ಅದೇ ವಿಷಯವನ್ನು ಬೇರೆ ಬೇರೆ ಇಯತ್ತೆಗಳಲ್ಲಿ ಹೆಚ್ಚು ಹೆಚ್ಚು ವಿವರಣಾತ್ಮಕವಾಗಿ ಕಲಿಸುತ್ತ ವಿದ್ಯಾರ್ಥಿಗಳ ಮುಂದೆ ಇಟ್ಟ ವಿಷಯವನ್ನೇ ಕ್ರಮವಾಗಿ ಪ್ರಶ್ನೆಗಳಿಂದ ಚರ್ಚಿಸುತ್ತ ಸಾಗುವರು. ಈ ಪದ್ಧತಿಯಿಂದ ಸಾಗುವಾಗ ಪಾಠಗಳಲ್ಲಿ ನಾವೀನ್ಯವೇ ಇರುವದಿಲ್ಲ. ಇದೊಂದು ದೊಡ್ಡ ದೋಷ.

ವ್ಯಾಖ್ಯಾನ ಪದ್ಧತಿಯಲ್ಲಿ ಈ ಕೆಳಗಿನ ಕ್ರಮವಿರುವದು. ೧ ಶಿಕ್ಷಕನು ಈ ವಿಷಯವನ್ನು ಹೇಳುತ್ತಿರುವಾಗ ಚಿತ್ರಗಳು ನಕಾಶೆಗಳು ಪಟಗಳು ಮುಂತಾದವುಗಳ ಮೂಲಕ ಅವನ್ನು ವಿವರಿಸುವದು. ೨ ವಿದ್ಯಾರ್ಥಿಗಳು ಅವುಗಳನ್ನು ತಮ್ಮ ಶಬ್ದದಲ್ಲಿ ತಿರುಗಿ ಹೇಳುವದು. ಈ ರೀತಿಯಿಂದ ಪಾಠಸಾಗಿಸುವಾಗ ಶಿಕ್ಷಕರು ಮುಖ್ಯ ಮುಖ್ಯ ಮಾತುಗಳನ್ನು ವಿದ್ಯಾರ್ಥಿಗಳ ಮುಂದೆ ಇಟ್ಟು ಅವುಗಳ ಚಿತ್ರಮುಂತಾದವುಗಳಿಂದ ವಿವರಿಸಿ ಹೇಳಿ ಸ್ಥಲ, ಕಾಲ, ಘಟನೆಗಳು ಮುಂತಾದವುಗಳನ್ನು ಅವುಗಳ ಮಹತ್ವಕ್ಕನುಗುಣವಾಗಿ ವರ್ಣಿಸಿ ಬೇರೆ ಬೇರೆ ಘಟನೆಗಳ ಪರಸ್ಪರ ಸಂಬಂಧವನ್ನು ಹೇಳುವರು.

ಪಾಠಪುಸ್ತಕಗಳೆ ಪದ್ಧತಿ–ಈ ಪದ್ಧತಿಯಲ್ಲಿ ಶಿಕ್ಷಕನು ಪಾಠಪುಸ್ತಕದೊಳಗಿನ ಕೆಲವೊಂದು ಭಾಗವನ್ನು ಮನೆಯಲ್ಲಿ ಓದಿಕೊಂಡು ಬನ್ನಿರೆಂದು ವಿದ್ಯಾರ್ಥಿಗಳಿಗೆ ನೇಮಿಸಿಕೊಟ್ಟು ಅವರು ಪಾಠಮಾಡಿಕೊಂಡು ಬಂದ ಬಳಿಕ ವರ್ಗದಲ್ಲಿ ಆ ವಿಷಯದ ಕೆಲವು ಪ್ರಶ್ನೆಗಳನ್ನು ಕೇಳಿ ಅವರು ಓದಿಕೊಂಡಿರುವರೆಂಬದನ್ನು ಮನಗಾಣುವನು. ಈ ಪದ್ಧತಿಯಲ್ಲಿ ಶಿಕ್ಷಕನಿಗೆ ಓದಿ ಪಾಠಗಳನ್ನು ಗೊತ್ತುಪಡಿಸಿ ಕಲಿಸುವ ಶ್ರಮವಿಲ್ಲ. ವಿದ್ಯಾರ್ಥಿಗಳಿಗೆ ವಿಚಾರಮಾಡಿ ತಿಳಿದುಕೊಳ್ಳುವ ಶ್ರಮವಿಲ್ಲ. ಆದ್ದರಿಂದ ಈ ಪದ್ಧತಿಯೇ ಬಹುತರ ಎಲ್ಲ ಶಾಲೆಗಳಲ್ಲಿ ನಡೆದಿರುವದು. ಈ ಬಗೆಯ ಯಾಂತ್ರಿಕವೂ ನೀರಸವೂ ಆದ ಪದ್ಧತಿಯಿಂದ ಇತಿಹಾಸವನ್ನು ಕಲಿಸಿದರೆ ಪಾಠವು ತಲೆಬೇಸರವನ್ನುಂಟು ಮಾಡುವದು. ವಿದ್ಯಾ

ರ್ಥಿಗಳಿಗೆ ವಿಷಯದಲ್ಲಿ ಅಭಿರುಚಿಯನ್ನು ಹುಟ್ಟಿಸದು ಹಾಗೇ ಪಾಠದಲ್ಲಿ ಪ್ರೀತಿಯೂ ಹುಟ್ಟುತ್ತಿರುವದಿಲ್ಲ.

ಈ ಪದ್ಧತಿಯಲ್ಲಿಯೇ ಇನ್ನೊಂದು ಪ್ರಕಾರವದೆ. ಶಿಕ್ಷಕನು ಯಾವತರವ ಪೂರ್ವ ಸಿದ್ಧತೆ ಇಲ್ಲದೆ ವರ್ಗಕ್ಕೆ ಹೋಗಿ ಪಾಠಪುಸ್ತಕವನ್ನು ಒದರಿ ಓದಿಸಿ ಯಾವಾಗಲೂ ವಿದ್ಯಾರ್ಥಿಗಳಿಗೆ ಕೆಲವು ಪ್ರಶ್ನೆಗಳನ್ನು ಕೇಳಿ ಪಾಠಪುಸ್ತಕದೊಳಗಿನ ಕಠಿಣವಾಕ್ಯಗಳ ಅಥವಾ ಶಬ್ದಗಳ ಅರ್ಥವನ್ನು ತಿಳಿಸಿ ಹೇಳಿ ಪಾಠವನ್ನು ಮುಗಿಸಿ ಬಿಡುವನು. ಉತ್ತಮ ಶಿಕ್ಷಕರು ಇತಿಹಾಸವನ್ನು ಕಲಿಸುವಾಗ ಮುಂದೆ ಹೇಳುವ ಕ್ರಮವನ್ನು ಅನುಸರಿಸುವನು. (೧) ಕಲಿಸಬೇಕಾಗಿರುವ ವಿಷಯದ ವಿವರಣೆ ಇರುವ ಪಾಠಪುಸ್ತಕದೊಳಗಿನ ಅಧ್ಯಾಯದ ಶಿರೋಲೇಖವನ್ನಷ್ಟೇ ಹೇಳಿ ಅದನ್ನು ಅಭ್ಯಾಸ ಮಾಡಿಕೊಂಡಿರಲು ತಿಳಿಸುವನು. (೨) ಪಾಠದಪ್ರಾರಂಭದಲ್ಲಿ ಅಂದಿನ ಪಾಠದ ಮುಖ್ಯವಾದ್ದೆಯ ಮಾತುಗಳನ್ನು ಕಪ್ಪುಹಲಿಗೆಯ ಮೇಲೆ ಬರೆದಿಡುವನು. (೩) ಆ ಮೇಲೆ ಒಂದೊಂದು ಮುದ್ದೆಯ ಮಾತಿನ ಸಂಬಂಧದಿಂದ ವಿದ್ಯಾರ್ಥಿಗಳಿಗೆ ಗೊತ್ತಿರುವ ಸಂಗತಿಗಳನ್ನು ಕೇಳಿ ತಿಳಿದುಕೊಂಡು ಆಯಾ ಮುದ್ದೆಗಳ ಸಂಬಂಧದಿಂದ ತಾನು ಹೇಳಬೇಕಾಗಿರುವ ಹೆಚ್ಚಿನ ಸಂಗತಿಗಳನ್ನು ಹೇಳುವನು. (೪) ಕೊನೆಗೆ ಈ ಹೊತ್ತಿನ ಪಾಠದಲ್ಲಿ ಇಡೀವರ್ಗದ ವಿದ್ಯಾರ್ಥಿಗಳು ದೊರಕಿಸಿದ ಹೆಚ್ಚಿನ ಜ್ಞಾನವನ್ನೆಲ್ಲ ಸಂಗ್ರಹಿಸಿ ಹೇಳಿಸುವನು.

ಉದ್ದೇಶ–ಶಾಲೆಗಳಲ್ಲಿ ಇತಿಹಾಸವನ್ನು ಯಾಕೆ ಕಲಿಸಬೇಕೆಂಬದೊಂದು ಪ್ರಶ್ನೆಯಿದೆ. ಇತಿಹಾಸವು ನಮ್ಮ ಜನರಿಗೂ ನಮ್ಮ ದೇಶಕ್ಕೂ ಸಂಬಂಧಿಸಿದ ಕಥೆಯೆಂದೂ ಅದರಿಂದ ನಾವೂ ನಮ್ಮ ದೇಶವೂ ಹೇಗೆ ಮತ್ತು ಯಾಕೆ ಇಂದಿನ ಈಸ್ಥಿತಿಗೆ ಬಂದಿರುವದೆಂಬವು ಗೊತ್ತಾಗುವದೆಂದೂ ಹಿಂದೆ ಹೇಳಿವೆ. ಇಂದಿನ ಈ ನಮ್ಮ ಮತ್ತು ನಮ್ಮ ದೇಶದ ಸ್ಥಿತಿಯು ಹಿಂದೆ ಇದ್ದಿಲ್ಲ. ಇನ್ನು ಮುಂದೆಯೂ ಉಳಿಯಲಾರದು. ಎರಡು ಸಾವಿರ ವರ್ಷಗಳ ಇಲ್ಲವೆ ಎರಡನೂರು ವರ್ಷಗಳ, ಅಷ್ಟೇಕೆ ಇಪ್ಪತ್ತು ವರ್ಷಗಳ ಹಿಂದೆ ನಮ್ಮ ಪೂರ್ವಜರು ಇದ್ದಸ್ಥಿತಿಯಲ್ಲಿಯೇ ಇಂದು ನಾವು ಇಲ್ಲ. ೧೯೩೨ನೇ ಇಸವಿಯಲ್ಲಿ ಇರುವ ಹಿಂದುಸ್ತಾನದ ಸ್ಥಿತಿಯು ೧೯೧೩ರಲ್ಲಿ ಇದ್ದಿದ್ದಿಲ್ಲ. ಇಂದಿನ ಈ ನಮ್ಮ ಮುಂದಿನ ಚಿಕ್ಕಬಾಲಕರು ನಮ್ಮ ದೇಶದ ನಾಗರಿಕರಾಗುವರು. ಆದ್ದರಿಂದ ಯಾವ ಪರಿಸ್ಥಿತಿಯ ಕಾಲವು ಅವರನ್ನು ಆ ಸ್ಥಿತಿಗೆ ತಂದಿತೆಂಬದನ್ನು ಅವರು ತಿಳಿದಿರಬೇಕು. ಯಾವ ಹಿಂದಿನ ಸ್ಥಿತಿಯಿಂದ ಅವರಿಗೆ ಇಂದಿನ ಈ ಪರಿಸ್ಥಿತಿಯು ಉಂಟಾಗಿರುವದೆಂಬದನ್ನೂ ಇಂದಿನ ಸ್ಥಿತಿಯು ಮುಂದಿನ ಯಾವ ಅವಸ್ಥೆಗೆ ಹೇಗೆ ಕಾರಣವಾಗಬಹುದೆಂಬದನ್ನೂ ಅವರು ತಿಳಿದಿರಬೇಕು. ಇತಿಹಾಸ ಜ್ಞಾನವಿಲ್ಲದಿದ್ದರೆ ಅವರು ತಮ್ಮ ದೇಶವನ್ನು ಸರಿಯಾದ ಮಾರ್ಗದಿಂದ ಸೇವೆಮಾಡಲು ಅಯೋಗ್ಯರಾಗುವರು.

ಆರೋಗ್ಯ ಶಾಸ್ತ್ರಸಮ್ಮತವಾದ ವಾಚನ.

(೧) ವಾಚನವು ಆರೋಗ್ಯ ಶಾಸ್ತ್ರಸಮ್ಮತವಿರಬೇಕಾದರೆ, ಓದುವವರು ತಲೆಯನ್ನು ನೀಟಾಗಿಟ್ಟುಕೊಂಡು ತಕ್ಕ ರೀತಿಯಲ್ಲಿ ನಿಂತಿರುವದು ಇಲ್ಲವೆ ಕುಳಿತಿರುವದು ಅವಶ್ಯವಾದದ್ದು. ಕುಳಿತು ಓದುವದಾದರೆ ಕೂಡುವ ಆಸನಗಳೂ ಡೆಸ್ಕುಗಳೂ ತಕ್ಕಂತೆ ಇರುವದೂ ಅವಶ್ಯವು.

(೨) ಪುಸ್ತಕವನ್ನು ಕಣ್ಣಿನಿಂದ ಏನಿಲ್ಲೆಂದರೂ ೧೨ ಇಂಚು ದೂರದಲ್ಲಿ ಹಿಡಿದಿರಬೇಕು.

(೩) ಕಣ್ಣು ದಣಿಯುವ ವರೆಗೆ ಓದಗೊಡಬಾರದು.

(೪) ಕಾಗದವು ಪಾರದರ್ಶಕವೂ ಹೊಳಪುಳ್ಳದ್ದೂ ಇರಬಾರದು.

ಆರೋಗ್ಯ ಶಾಸ್ತ್ರಸಮ್ಮತವಾದ ಬರಿಹ.

ಸಂಕ್ಷೇಪವಾಗಿ ಹೇಳಬೇಕಾದರೆ, ಬರಿಹಕ್ಕೆ ಕುಳಿತಾಗ ಕೈಗಳಿಗೂ ಮೈಯ ಯಾವ ಭಾಗಕ್ಕೂ ಆಯಾಸವೆನಿಸಬಾರದು. ತಲೆಯು ನೀಟಾಗಿರಬೇಕು; ಎದೆಯು ಬಾಗಿರಬಾರದು.

ಬರಿಹದ ಕಾಗದವು ವಿದ್ಯಾರ್ಥಿಯ ಕಣ್ಣಿಗೆ ತೀರ ಎದುರಾಗಿರತಕ್ಕದ್ದು. ಕಣ್ಣಿಗೂ ಕಾಗದಕ್ಕೂ ನಡುವೆ ೧ ಫೂಟು ಅಂತರವಿರಬೇಕು. ಬೆಳಕು ಅವನ ಎಡಗಡೆಯಿಂದ ಬರಬೇಕಲ್ಲದೆ ಅದು ಸಾಕಷ್ಟು ಇರತಕ್ಕದ್ದು. ಬೆಳಕು ಕಾಗದದಿಂದ ವಿದ್ಯಾರ್ಥಿಯ ಕಣ್ಣಿನ ಕಡೆಗೆ ಪರಾವರ್ತನ ಹೊಂದುತ್ತಿರಬಾರದು; ಮತ್ತು ಕಾಗದದ ಮೇಲ್ಮೈಯು ಬಹಳ ಹೊಳಪುಳ್ಳದ್ದಿರಬಾರದು.

ಪ್ರಾಥಮಿಕ ಶಾಲೆಗಳಲ್ಲಿ ಡೆಸ್ಕುಗಳನ್ನು ಅಪರೂಪವಾಗಿ ಉಪಯೋಗಿಸುವದುಂಟು. ವಿದ್ಯಾರ್ಥಿಯ ಎದುರಿಗೆ ಡೆಸ್ಕು ಇರಬೇಕು. ಅವನು ಎರಡೂ ಪಾದಗಳನ್ನು ನೆಲದ ಮೇಲೆ ಇಟ್ಟುಕೊಂಡು ಆಸನದ ಮೇಲೆ ಸ್ಥಿರವಾಗಿ ಕುಳಿತಿರಬೇಕು. ಎರಡೂ ಮೊಳಕೈಗಳನ್ನು ಡೆಸ್ಕಿನ ಮೇಲೆ ಏನೂ ಆಯಾಸವಾಗದಂತೆ ಇಟ್ಟುಕೊಂಡಿರಬೇಕು. ತಲೆಯು ನೀಟಾಗಿರಬೇಕು. ಆಸನವು ಡೆಸ್ಕಿನ ಕೆಳಗೆ ಎರಡು ಇಲ್ಲನೆ ಮೂರು ಇಂಚು ಒಳಗೆ ಹೋಗಿರಬೇಕು. ಹೀಗಿರುವದರಿಂದ ವಿದ್ಯಾರ್ಥಿಯು ನೀಟಾಗಿ ಕುಳಿತರೂ ಡೆಸ್ಕಿನ ಅಂಚು ಅವನಿಗೆ ಹತ್ತಿಕೊಂಡು ಇರುವದು. ಆಸನವು, ಮೊಳಕೈಗಳು ಡೆಸ್ಕಿಗೆ ತಗಲುವಷ್ಟು ಅಂದರೆ ಅವು ಮೈಯಿಂದ ಎರಡು ಮೂರು ಇಂಚಿಗಿಂತ ದೂರ ಹೋಗದಷ್ಟು ಎತ್ತರವಾಗಿರಬೇಕು.

ಶಾಲೆಯಲ್ಲಿಯ ಆಯಾಸವು.

ಶಾಲೆಯ ವಿದ್ಯಾರ್ಥಿಗಳಿಗೆ ಮಾನಸಿಕ ಆಯಾಸವು– ಶಾಲೆಯಲ್ಲೇ ಆಗಲಿ ಶಾಲೆಯ ಹೊರಗೇ ಆಗಲಿ–ಮೂರು ನಾಲ್ಕು ಕಾರಣಗಳ ಮೂಲಕ ಒದಗುವದೆಂದು ಪ್ರೊ. ಸಿರಿಲ್ ಬರ್ಟ್ ಎಂಬವರು ತೋರಿಸಿಕೊಟ್ಟಿರುವರು.

(೧) ಇದರಲ್ಲಿ ಕೆಲವಂಶವು ನಿಜವಾಗಿ ಶಾರೀರಿಕ ಆಯಾಸವಿರುವದು. ನಮ್ಮ ಶರೀರದಲ್ಲಿ ಸತತವಾಗಿ ನಿರರ್ಥಕದ್ರವ್ಯಗಳು ತಯಾರಾಗುತ್ತಿರುವವು. ಇವುಗಳಿಂದ ಒಂದು ಬಗೆಯ ಸೌಮ್ಯವಿಷವು ಹರಡುವದು. ಈ ಮೂಲಕ ಆಯಾಸವು ಅನಿಸುವದುಂಟು. ವಿದ್ಯಾರ್ಥಿಯು ಕುಳಿತಲ್ಲಿಯೇ ಕುಳಿತು ಬಹಳ ಹೊತ್ತು ಕೆಲಸಮಾಡುತ್ತಿರುವಾಗ ಈ ವಿಷದಾರ್ಥಗಳು ಶರೀರದಲ್ಲಿ ಒತ್ತಟ್ಟಿಗೆ ಕಲೆಬೀಳುವವು ಹೀಗಾದಾಗ, ಹುಡುಗರನ್ನು ಸ್ವಚ್ಛವಾದ ಹವೆಯಲ್ಲಿ ಕರೆದೊಯ್ದು ತುಸು ಹೊತ್ತು ಸೌಮ್ಯ ವ್ಯಾಯಾಮವನ್ನು ಮಾಡಿಸುವದು ಒಳಿತು.

(೨) ಈ ಆಯಾಸದ ಕೆಲವಂಶವು ಬೇರೆ ಕಾರಣಗಳಿಂದಲೂ ಉಂಟಾಗುವದು. ಈ ಮೂಲಕ ಹುಡುಗರು, ಕಲಿಯುವ ವಿಷಯದ ಕಡೆಗೆ ಲಕ್ಷ್ಯಕೊಡದಂತಾಗುವರು. ಅವರಿಗೆ ಕಳವಳವೆನಿಸುವದು; ಅವರು ಬಹಳ ಬೇಸರದಿಂದ ಕೆಲಸಮಾಡಹತ್ತುವರು; ಕೆಲಸವು ಸರಿಯಾಗಿ ಸಾಗದಾಗುವದು. ಈ ಲಕ್ಷಣಗಳು ಶರೀರದ ಕೆಲವು ಸ್ನಾಯುಗಳಲ್ಲಿ, ಉದಾ: – ಧಡದ ಸ್ನಾಯುವಿನಲ್ಲಿ (ಬಹಳ ಹೊತ್ತಿನ ವರೆಗೆ ಒಂದೇ ಸ್ಥಿತಿಯಲ್ಲಿ ಕೂಡುವ ಮೂಲಕ) ಇಲ್ಲವೆ ಕಣ್ಣುಗಳ ಸ್ನಾಯುಗಳಲ್ಲಿ (ಬಹಳಹೊತ್ತು ಓದುವ ಮೂಲಕ) ಇಲ್ಲವೆ ಕೈಯ ಸಣ್ಣ ಸ್ನಾಯುಗಳಲ್ಲಿ (ಬಹಳ ಹೊತ್ತು ಬರೆಯುತ್ತಿರುವ ಮೂಲಕ) ಉಂಟಾಗುವ ಶ್ರಮವನ್ನು ನಿವಾರಿಸಿಕೊಳ್ಳಲಿಕ್ಕೆ ಶರೀರವು ಮಾಡಿಕೊಳ್ಳುವ ಸ್ವಂತದ ಉಪಾಯಗಳಾಗಿವೆ.

(೩) ಬಹುತರವಾಗಿ ಹುಡುಗರು ಮಾಡುತ್ತಿರುವ ಕೆಲಸದಲ್ಲಿ ಅವರಿಗೆ ಮನಸ್ಸಿಲ್ಲದಿರುವದರಿಂದಲೂ ಅಥವಾ ಅವರಲ್ಲಿ ಸ್ವಾಭಾವಿಕವಾಗಿ ಪ್ರಬಲವಾಗಿರುವ ಬೇರೆ ಕೆಲವು ಪ್ರೇರಣೆಗಳನ್ನು ಶಿಕ್ಷಕರು ಸತತವಾಗಿ ಕುಗ್ಗಿಸುವದರಿಂದಲೂ ಆಯಾಸವು ತಲೆದೋರುವದುಂಟು. ಆದ್ದರಿಂದ ಇಂಥ ಪ್ರಸಂಗಗಳಲ್ಲಿ ಹುಡುಗರು ಕಲಿಯುತ್ತಿರುವ ವಿಷಯವನ್ನು ಇಲ್ಲವೆ ಅವನ್ನು ಕಲಿಸುವ ಪದ್ಧತಿಯನ್ನು, ಒಮ್ಮೊಮ್ಮೆ ಶಿಕ್ಷಕನನ್ನು ಸಹ ಬದಲಿಸುವದರಿಂದ ಒಳ್ಳೇ ಪರಿಣಾಮವಾಗುವದುಂಟು. ಅಥವಾ ಅವರಲ್ಲಿ ಹೊಸ ಹುರುಪನ್ನು ಹುಟ್ಟಿಸಲಿಕ್ಕೆ ಶಿಕ್ಷಕನು ಯತ್ನಿಸಬಹುದು. ಇದರಿಂದ ಒಮ್ಮೊಮ್ಮೆ ಮಾನಸಿಕ ಆಯಾಸವು ಕೂಡಲೆ ಇಲ್ಲದಾಗುವದು.

(೪) ಒಮ್ಮೊಮ್ಮೆ ಹುಡುಗನ ಮಿದುಳು ಮಾನಸಿಕಶ್ರಮದಿಂದ ನಿಜವಾಗಿಯೇ ದಣಿದು ಬಳಲಬಹುದು; ಇಲ್ಲವೆ ಅವನಲ್ಲಿರುವ ನರಗಳಾಗಲಿ ನರಗಳ ಕೇಂದ್ರಗಳಾಗಲಿ ದಣಿಯಬಹುದು. ಆದರೆ ಹುಡುಗರು ಅಥವಾ ಹುಡುಗಿಯರು ೧೪ ವರ್ಷದವರಾಗುವ ವರೆಗೆ ಮಿತಿಮೀರಿದ ಮಾನಸಿಕ ದುಡಿತದ ಮೂಲಕವಾಗಿಯೇ ಮಿದುಳಿಗೆ ಬಳಲಿಕೆಯಾಗಿರುವದೆಂದು ನಾವು ಸಾಮಾನ್ಯವಾಗಿ ಬಗೆಯುವದನ್ನು ಶಾಸ್ತ್ರಸಮ್ಮತವಾಗಿ ಸಿದ್ಧ ಮಾಡುವದು ಬಹಳ ಗಡಚಾದದ್ದೆಂದು ಧಾರಾಳವಾಗಿ ಹೇಳಬಹುದು. ಬೌದ್ಧಿಕವ್ಯವಸಾಯದ ಮೂಲಕ ಮಿದುಳು ದಣಿಯುವದೆನ್ನುವದಕ್ಕಿಂತ ಮನೋಭಾವಗಳಿಗೆ ಹೊಡೆತ ಬೀಳುವದರಿಂದ ಅದು ಕೆಲಸಕ್ಕೆ ಬೇಸರಿಯುವದು ಇದು ಸರಿಯೆಂದು ತೋರುವದು. ಬಹುಶಃ ಹುಡುಗನು ಮಾಡುತ್ತಿರುವ ಕೆಲಸದ ಬಗ್ಗೆ ಅವನಿಗೆ ಚಿಂತೆಯು ಭಾರವೆನಿಸುವದು. ಉದಾ:—ಪರೀಕ್ಷೆಯಲ್ಲಿ ನಾಪಾಸಾದೀತೆಂಬ ಭಯವು ಅವನನ್ನು ಆವರಿಸಬಹುದು. ಇಲ್ಲವೆ ಮನೆಯಲ್ಲಿ ನಡೆದಿರುವ ಮನೆತನದ ಕಲಹಾದಿಗಳ ಮೂಲಕ ಅವನಿಗೆ ಆಂತರಿಕವ್ಯಥೆಯಾಗುತ್ತಿರಬಹುದು. ಇವುಗಳಿಂದ ಮನಸಿಗೆ ಆಯಾಸವೆನಿಸುವದುಂಟು. ಈ ಬಗೆಯ ಮಾನಸಿಕ ಆಯಾಸವು ಬಹು ದಿವಸ ಸಣ್ಣ ಪುಟ್ಟ ವ್ಯಾಧಿಗಳಿಗೀಡಾದ ಹುಡುಗರಲ್ಲಿ ಸಾಮಾನ್ಯವಾಗಿ ತೋರುವದುಂಟು. ಇಂಥ ಹುಡುಗರಲ್ಲಿ ನೆಲೆಗೊಂಡ ಅಶಕ್ತತೆಯು ನಿಯಮಿತವ್ಯಾಯಾಮ, ಸೂರ್ಯನ ಬೆಳಕು, ಸ್ವಚ್ಛ ಹವೆ ಇವುಗಳ ಕೊರತೆಯಿಂದ ಹೆಚ್ಚಾಗುವದು. ಇಳಿವಯಸ್ಸಿನವರಲ್ಲಿ ಕಂಡುಬರುವ "ಆಯಾಸದ" ಬಗ್ಗೆಯೂ ಇದೇ ಮಾತು ನಿಜವಿರುವದು.

ಹುಡುಗರ ಕಣ್ಣು ಕವಿಗಳು ಮುಂದವಿರುವದನ್ನು ಕಂಡು ಹಿಡಿಯುವ ಬಗ್ಗೆ.

ಕಳಗೆ ಕಾಣಿಸಿದ ಪ್ರಸಂಗಗಳಲ್ಲಿ ಹುಡುಗನ ಕಣ್ಣಿನಲ್ಲಿ ದೋಷವಿರುವದೆಂದು ಸಂಶಯಗೊಳ್ಳಬಹುದು.

(೧) ವರ್ಗದಲ್ಲಿ ಹಿಂದಿನ ಸಾಲಿನಲ್ಲಿ ಕುಳಿತು ಕರಿಹಲಗೆಯಮೇಲೆ ಬರೆದದ್ದನ್ನು ಓದುವದಾಗದಿದ್ದಾಗ.

(೨) ತುಸು ಅಂತರದಿಂದ ಗಡಿಯಾರ ನೋಡಿ ವೇಳೆ ಹೇಳಲಿಕ್ಕಾಗದಾಗ.

(೩) ಸಾಲು ಹಿಡಿದು ಬರೆಯಲಿಕ್ಕೆ ಬಾರದಾಗ.

(೪) ಓದುವಾಗ ಸಣ್ಣ ಸಣ್ಣ ಶಬ್ದಗಳನ್ನು ಹಾರುವಾಗ.

(೫) ಓದುವಾಗ ಪುಸ್ತಕವನ್ನು ಕಣ್ಣಿನಿಂದ ೧೫ ಇಂಚಿಗಿಂತ ನೆರೆಯಲ್ಲಿ ಹಿಡಿಯುವಾಗ.

(೬) ಅಕ್ಷರಗಳು ಒಂದರಲ್ಲೊಂದು ಕೂಡಿರುವವೆಂದು ಗುಣಗುಟ್ಟುವಾಗ.

(೭) (ಯಾವಾಗಾದರೂ ಒಮ್ಮೆ ಸಹ) ಓರೆ ನೋಟದಿಂದ ನೋಡುವಾಗ.

(೮) ಓದಿದ ಬಳಿಕ ಅಥವಾ ಹೊಲಿಗೆಯು ಕೆಲಸಮಾಡಿದ ಬಳಿಕ ಕಣ್ಣಿಗೆ ಆಯಾಸವಾಗಿದೆ ಎಂದಾಗಲಿ ಮೊದಲೆ ನೋಯುವದೆಂದಾಗಲಿ ಗುಣಗುಟ್ಟುವಾಗ.

ಮುಂದೆ ಕಾಣಿಸಿದ ಪ್ರಸಂಗಗಳಲ್ಲಿ ಹುಡುಗನ ಕಿವಿಗಳು ಮಂದವಿರುವವೆಂದು ತಿಳಿಯಬಹುದು.

(೧) ಬಾಯಿಂದ ಶ್ವಾಸ ಬಿಡುವ ರೂಢಿಯಿರುವಾಗ.

(೨) ಕಿವಿಯು ಸೋರುತ್ತಿರುವಾಗ.

(೩) ಜಾಣನಂತೆ ತೋರಿದರೂ ಪ್ರಶ್ನಕೇಳಲು ಉತ್ತರ ಹೇಳದೆ ಮಡ್ಡನಂತೆ ಸುಮ್ಮನಿರುವಾಗ.

ಇಂಥ ಹುಡುಗನ ಕಿವಿಯು ನಿಜವಾಗಿಯೇ ಮಂದವಿರುವದೋ ಹ್ಯಾಗೆ ಎಂಬ ದನ್ನು ಕಂಡುಹಿಡಿಯಬೇಕಾದರೆ, ೨೦ ಫೂಟು ಅಂತರದಿಂದ ಆರಂಭಿಸಿ ಗಟ್ಟಿಯಾಗಿ ಬಾಯಲ್ಲೇ ಮಾತಾಡುತ್ತಾ ಅವನಿಗೆ ಕೇಳುವವರೆಗೆ ಅವನ ಹತ್ತರ ಹೋಗಬೇಕು. ಎಷ್ಟು ಅಂತರದ ಮೇಲೆ ಅವನಿಗೆ ಕೇಳಹತ್ತುವದೆಂಬದನ್ನು ಬರೆದಿಡಬೇಕು.

ಮನೆಯಲ್ಲಿಯೂ ಶಾಲೆಯಲ್ಲಿಯೂ ಆರೋಗ್ಯಕರವಾದ ಪರಿಸ್ಥಿತಿಯು.

ಮನೆಯಲ್ಲಿ ಹುಡುಗರಿಗೆ ದೊರೆಯುವ ಆಹಾರವು ಅವರು ಆರೋಗ್ಯದಿಂದ ಬೆಳೆಯಲಿಕ್ಕೆ ಸಾಕಷ್ಟು ಇರಬೇಕು. ಅವರು ವಾಸಿಸುವ ಹಾಗು ಮಲಗುವ ಕೋಣೆ ಗಳ ವಿಸ್ತಾರ, ಬೆಳಕು ಹಾಗು ಹವೆ ಈ ಸಂಗತಿಗಳು ತಕ್ಕವಿರಬೇಕು. ಸಾಲೆಯು ಕೋಣೆಯಲ್ಲಿ ಹವೆಯು ಚನ್ನಾಗಿ ಆಡುತ್ತಿರಬೇಕು. ಅಲ್ಲಿಯ ಉಷ್ಣಮಾನವು ಫಾ. ೭೦ ಕ್ಕಿಂತ ಹೆಚ್ಚು ಇರಬಾರದು; ೬೫ ಇಲ್ಲವೆ ೬೫ ಇರುವದು ಮೇಲಾದದ್ದು. ಹವೆಯಲ್ಲಿ ನೂರಕ್ಕೆ ಸುಮಾರು ೫೦ ರಂತೆ ಆರ್ದ್ರತೆಯಿರಬಹುದು. ಹವೆಯು ಸ್ಥಿರವಾಗಿ ಉಳಿಯಬಾರದು, ಸತತವಾಗಿ ಆಡುತ್ತಿರಬೇಕು. ಸಾಲೆಯ ಕೋಣೆಗಳಲ್ಲಿ ಸಾಕಷ್ಟು ಸ್ವಾಭಾವಿಕ ಬೆಳಕು ಇರತಕ್ಕದ್ದು. ಇದು ಕಡಿಮೆಯಾದರೆ ಕೃತ್ರಿಮ ಬೆಳಕು ಬೀಳುವ ವ್ಯವಸ್ಥೆಯಿರಬೇಕು. ಕೋಣೆಗಳ ಗೋಡೆಗಳಿಗೆ ಹಚ್ಚುವ ಬಣ್ಣ ದಿಂದ ಕಣ್ಣಿಗೆ ತೀಡ ಕಡಿಮೆ ಆಯಾಸವಾಗಬೇಕು. ಪರ್ಗದಲ್ಲಿ ಉಪಯೋಗಿಸುವ ಪತ್ಯ ಪುಸ್ತಕಗಳ ಅಕ್ಷರಗಳೂ ಸಾಲುಗಳ ಅಗಲಳತೆಯೂ ಹುಡುಗರು ಯೋಗ್ಯ ರೀತಿಯಿಂದ

ಕುಳಿತು ಓದಲು ತಕ್ಕವಿರಬೇಕು. ಡೆಸ್ಕುಗಳನ್ನು ಉಪಯೋಗಿಸಿದರೆ ಕಣ್ಣಿಗೆ ಶ್ರಮ ಬೀಳದಂತೆಯೂ ಹುಡುಗರು ಪದ್ಧತಿಬಿಟ್ಟು ಕೂಡದಂತೆಯೂ ಅವರ ಅಂಗವಿಕಾರವಾಗ ದಂತೆಯೂ ಎಚ್ಚರಗೊಳ್ಳಬೇಕು. ಗೋಡೆಗಳ ಮೇಲೆಯೂ ನೆಲದ ಮೇಲೆಯೂ ಧೂಳು ಕೂಡಗೊಡಬಾರದು. ವೇಳಾಪತ್ರಿಕೆಯನ್ನು ಮಾಡುವಾಗ ಶರೀರದ ಚಲನ ವಲನಗಳು ಹೆಚ್ಚಾಗುವಂತೆಯೂ ನರಮಂಡಲದ ಮೇಲಿನ ಭಾರವು ಕಡಿಮೆಯಾಗು ವಂತೆಯೂ ಎಚ್ಚರಗೊಳ್ಳಬೇಕು. ಅಂದರೆ, ಆಗಾಗ ವಿದ್ಯಾರ್ಥಿಗಳು ಒಂದು ಕೋಣೆ ಯಿಂದ ಮತ್ತೊಂದು ಕೋಣೆಗೆ ಹೋಗುವದಿರಬೇಕು; ಹಾಗು ಬೇರೆ ಬೇರೆ ತರದ ಕೆಲಸಗಳನ್ನು ಮಾಡುವ ವ್ಯವಸ್ಥೆ ಇರಬೇಕು. ಇಷ್ಟೇ ಅಲ್ಲದೆ ಪ್ರತಿ ದಿವಸ ಎರಡು ಮೂರು ಸಾರೆ, ಮೂರು ನಾಲ್ಕು ನಿನಿಟು ಡ್ರಿಲ್ ಮಾಡಿಸಿದರೆ ಬಹಳ ಉಪಯೋಗ ವಾಗುವದು.

ಕೂಡುವ ಹಾಗು ನಿಲ್ಲುವ ತಪ್ಪು ಕ್ರಮಗಳು.

ವಾಡಿಕೆಯಾಗಿ ಸಾಲೆಗಳಲ್ಲಿ ವಾರದಲ್ಲಿ ಶಾರೀರಿಕ ಶಿಕ್ಷಣದ ಒಂದೆರಡು ಪಾಠ ಗಳನ್ನು ಕೊಡುವದುಂಟು. ಶಾರೀರಿಕ ಶಿಕ್ಷಣವು ಈ ಪಾಠಗಳಲ್ಲಿಯೇ ಆರಂಭವಾಗಿ ಮುಗಿಯುವದಿಲ್ಲೆಂಬದನ್ನು ಶಿಕ್ಷಕರು ಲಕ್ಷ್ಯದಲ್ಲಿಡತಕ್ಕದ್ದು. ಡ್ರಿಲ್ ಮಾಡುವಾಗ ಸರಿಯಾದ ಕ್ರಮದಲ್ಲಿ ನಿಲ್ಲುವದು ಕೂಡುವದು ಮೊದಲಾದ ಕೆಲಸಗಳನ್ನು ಹುಡುಗರು ಮಾಡುವರಷ್ಟೇ. ಹೀಗೆ ವಾರಕ್ಕೆ ಎರಡು ಮೂರು ಸಾರಿ ಡ್ರಿಲ್ ಮಾಡುವದರಿಂದ ವಿಶೇಷ ಲಾಭವಾಗುವದಿಲ್ಲ. ವಾಚನ, ಬರೆಹ, ಡ್ರಾಯಿಂಗ, ಹೊಲಿಗೆ ಮೊದಲಾದ ಪಾಠಗಳಲ್ಲಿ ಹುಡುಗರು ಕೂಡುವ ನಿಲ್ಲುವ ಪದ್ಧತಿಗಳು ಸರಿಯಾಗಿರದಿದ್ದರೆ ಡ್ರಿಲ್ ಪಾಠಗಳಲ್ಲಿ ಮಾತ್ರ ಸರಿಯಾದ ಆಸನಗಳನ್ನು ಅಭ್ಯಾಸಿಸುವದು ನಿರುಪಯುಕ್ತವೇ ಸರಿ. ಆಸನದ ಮೇಲೆ ಮೊಳಕಾಲು ಮಡಿಚಿ ಕೂಡುವದು, ಬಾಗಿ ಡೆಸ್ಕಿನ ಮೇಲೆ ಕೈಯೂರಿ ಕೂಡುವದು, ಹೆಗಲು ಓರೆಮಾಡಿಕೊಂಡು ಕೂಡುವದು, ಮೈಮುರಿದಂತೆ ಕೂಡುವದು ಇವನ್ನು ಎಂದೂ ಮಾಡಗೊಡಬಾರದು. ಇವುಗಳಿಂದ ಎದೆಯು ಗೂಡುಗಟ್ಟಿದಂತಾಗುವದು; ಬೆನ್ನುಹುರಿಯು ಸೊಟ್ಟವಾಗುವದು; ಆದರೆ ಚಿಕ್ಕ ಮಕ್ಕಳು ಬಹಳ ಹೊತ್ತಿನ ವರೆಗೆ ಒಂದೇ ಸ್ಥಿತಿಯಲ್ಲಿ ಕೂಡಲಾರರು; ಹಾಗು ನಿಲ್ಲ ಲಾರರು ಎಂಬದನ್ನು ಲಕ್ಷ್ಯದಲ್ಲಿಡಬೇಕು. ಆದ್ದರಿಂದ ಮೇಲಿಂದ ಮೇಲೆ ಸ್ಥಿತ್ಯಂತರ ವಾಗುವಂತೆ ನೋಡಿಕೊಳ್ಳತಕ್ಕದ್ದು. ಇದಲ್ಲದೆ, ಸಣ್ಣ ಮಕ್ಕಳನ್ನು ಶ್ರಮವಾಗುವಂತೆ ಕೂಡಿಸಲಾಗದು ಹಾಗು ನಿಲ್ಲಿಸಲಾಗದು. ಒಮ್ಮೊಮ್ಮೆ ಕೈಗಳನ್ನು ಹಿಂದೆ ಕಟ್ಟಿ ಕೊಂಡಾಗಲಿ, ಮುಂದೆ ಎದೆಯ ಮೇಲೆ ಮಡಿಚಿಕೊಂಡಾಗಲಿ ನಿಲ್ಲಹೇಳುವದುಂಟು. ಹೀಗೆ ನಿಲ್ಲುವದರಿಂದ ಎದೆಯುಕಾರ್ಯವು ಸುಸೂತ್ರವಾಗಿ ಸಾಗದಾಗುವದು. ಇದು ಸರಿಯಲ್ಲ.

ಯಾವ ಸ್ಥಿತಿಗಳಲ್ಲಿರುವದು ಹುಡುಗರಿಗೆ ತೀವ್ರವಾಗಿ ಆಯಾಸದ್ದೆನಿಸುವದೋ ಅವನ್ನು ಶಿಕ್ಷಕರು ಲಕ್ಷ್ಯಗೊಟ್ಟು ನೋಡುತ್ತಿರಬೇಕು. ಮುಖ್ಯವಾಗಿ ಬಹಳಹೊತ್ತಿನ ವರೆಗೆ ಹುಡುಗರನ್ನು ಒಂದೇಸವನೆ ನಿಲ್ಲಿಸಬಾರದು. ನಿಲ್ಲಬೇಕಾದಾಗ ಒಳ್ಳೇ ಕ್ರಮವೂ ಮೈ, ತಲೆ, ಎದೆ ಇವುಗಳನ್ನು ಸರಿಯಾಗಿ ಇಟ್ಟುಕೊಳ್ಳುವದೂ ಮಹತ್ವವಾದವು. ಆದರೆ ಈ ಸ್ಥಿತಿಯನ್ನು ಬಹಳ ಹೊತ್ತು ಕಾಯ್ದುಕೊಳ್ಳುವದು ಚಿಕ್ಕಮಕ್ಕಳಿಗೆ ಆಗದು. ಆದ್ದರಿಂದ ಆಯಾಸವಾಗಹತ್ತಿದ ಕೂಡಲೆ ಅವರು ತಪ್ಪುಕ್ರಮದಲ್ಲಿ ನಿಲ್ಲಲಾರಂಭಿಸುವರು. ಇದನ್ನು ಎಚ್ಚರಿಕೆಯಿಂದ ತಿದ್ದದಿದ್ದರೆ ತಪ್ಪುಕ್ರಮದಲ್ಲಿ ನಿಲ್ಲುವ (ಹಾಗು ಕೂಡುವ) ಚಟವು ಅವರಿಗೆ ಬೀಳುವದು. ಇದನ್ನು ತಪ್ಪಿಸಲಿಕ್ಕೇಬೇಕು. ನಿಷ್ಕಾರಣವಾಗಿ ಹುಡುಗರನ್ನು ನಿಲ್ಲಿಸುವದು ಸರಿಯಲ್ಲ; ಅವರು ಕೂತಿರುವದು ಒಳ್ಳೇದು.

ಯೋಗ್ಯವಾದ ಶಾರೀರಿಕ ಸ್ಥಿತಿಗಳನ್ನು ನೋಡಿ ನೋಡಿ ಗುರ್ತಿಸಿ ಗುರಿಯಾಗಿಟ್ಟುಕೊಳ್ಳುವದನ್ನು ಶಿಕ್ಷಕರು ರೂಢಿಮಾಡಿಕೊಳ್ಳಬೇಕು; ಹೀಗೆ ಮಾಡುವದರಿಂದ ತಪ್ಪುಕ್ರಮಗಳು ಅವರ ಲಕ್ಷ್ಯದಲ್ಲಿ ಕೂಡಲೆ ಬರುವವು. ಈ ತಪ್ಪುಪದ್ಧತಿಗಳನ್ನು ಶಾರೀರಿಕ ಶಿಕ್ಷಣಕೊಡುವಾಗ ಮಾತ್ರ ಅವಲೋಕನಮಾಡಿದರೆ ತೀರದು. ಸಾಲೆಯು ಯಾವತ್ತು ಹೊತ್ತಿನಲ್ಲಿ ಈ ಬಗ್ಗೆ ಶಿಕ್ಷಕರು ಜಾಗರೂಕರಾಗಿರಬೇಕು. ಸುಮ್ಮನೆ ಕೂತು ಕಲಿಯುವ ಪಾಠಗಳಿಗೂ ಯಾವದೊಂದು ವ್ಯವಸಾಯದಲ್ಲಿ ತೊಡಗಿರುವ ಪಾಠಗಳಿಗೂ ನಡುವೆ ಕೆಲವು ನಿಮಿಟುಗಳ ಅವಧಿಯು ಇರತಕ್ಕದ್ದು. ಈ ಹೊತ್ತಿನಲ್ಲಿ ಹುಡುಗರಿಗೆ ಮನಬಂದಂತೆ ಓಡಾಡಲಿಕ್ಕೆ ಉತ್ತೇಜನ ಕೊಡತಕ್ಕದ್ದು. ಇಲ್ಲವೆ ಹೊಸ ಹುರುಪು ಹುಟ್ಟಿಸುವ ಎರಡು ಮೂರು ವ್ಯಾಯಾಮದ ಎಕ್ಸರ್‌ಸಾಯಿಜಗಳನ್ನು ಚಟುವಟಿಕೆಯಿಂದ ಮಾಡಿಸಬೇಕು. ಇದರಿಂದ ಹುಡುಗರು ಯೋಗ್ಯವಾಗಿ ನಿಲ್ಲಲಿಕ್ಕೂ ಕೂಡಲಿಕ್ಕೂ ಸಹಾಯವಾಡಿದಂತಾಗುವದು.

ಪ್ರಾಥಮಿಕ ಶಾಲೆಗಳಲ್ಲಿ ವಾಚನ ಕಲಿಸುವ ಪದ್ಧತಿಗಳು.

ಪ್ರಾಥಮಿಕ ಶಾಲೆಗಳ ಹುಡಗರಿಗೆ ವಾಚನ ಕಲಿಸುವ ವಾಡಿಕೆಯ ಪದ್ಧತಿಗೆ ವರ್ಣಮಾಲೆಯ ಪದ್ಧತಿಯೆನ್ನಬಹುದು. ಇದರಲ್ಲಿ ಕೆಳಗೆ ಕಾಣಿಸಿದ ಮೆಟ್ಟುಗಳು ಇರುವದುಂಟು.

(೧) ಹುಡುಗರಿಗೆ ಸರಳರೇಷೆ, ವಕ್ರರೇಷೆ, ವರ್ತುಳ ಮೊದಲಾದ ಆಕೃತಿಗಳನ್ನು ತೆಗೆಯಲಿಕ್ಕೆ ಕಲಿಸುವದು. ಈ ಆಕೃತಿಗಳಿಂದಲೇ ಅಕ್ಷರಗಳು ಆಗಿರುವವು.

(೨) ಸುಲಭ ರೂಪವುಳ್ಳ ಅಕ್ಷರಗಳಿಂದ ಆರಂಭಿಸಿ ವರ್ಣಮಾಲೆಯ ಅಕ್ಷರಗಳನ್ನು ಕ್ರಮಗೊಳಿಸುವದು. ಸರಳ ಆಕಾರದ ಮೂಲಕ ಸುಲಭವಾಗಿ ಬರೆಯಬಹುದಾದದ್ದನ್ನು ಮೊದಲು ಕಲಿಸಿ ಬಳಿಕ ಗಡಚಾದ ಆಕಾರವುಳ್ಳದ್ದನ್ನು ಕಲಿಸುವದು.

(೩) ಈ ಅಕ್ಷರಗಳನ್ನು ರ, ಠ, ಈ, ಕ ಮುಂತಾಗಿ ತೋರಿಸಿ, ಅವುಗಳ ಹೆಸರು ಹೇಳಿ, ಕರಿಹಲಗೆಯ ಮೇಲೆ ಬರೆದ ಇಲ್ಲವೆ ಬಾಲಬೋಧೆಯಲ್ಲಿ ಇರುವ, ಹುಡುಗರಿಗೆ ಗೊತ್ತಿರುವ ಇಲ್ಲವೆ ಗೊತ್ತಿರುವದೆಂದು ಕಲ್ಪಿಸಿದ ಪದಾರ್ಥ, ಪ್ರಾಣಿ, ಅಥವಾ ವನಸ್ಪತಿ ಇವುಗಳ ಹೆಸರಿನ ಶಬ್ದದ ಮೊದಲನೆಯ ಅಕ್ಷರಕ್ಕೆ ಇವುಗಳಲ್ಲಿ ಒಂದನ್ನು ಹೊಂದಿಸಿ ನೋಡಹೇಳುವದು.

(೪) ಹೊಸ ಅಕ್ಷರವನ್ನು ಹುಡುಗರಿಗೆ ಹಲವು ಸಾರಿ ಉಚ್ಚರಿಸಿ ತೋರಿಸಿ, ಎಲ್ಲ ಹುಡುಗರಿಂದ ಏಕಕಾಲಕ್ಕೆ ಅದನ್ನು ಅನೇಕ ಸಾರೆ ಉಚ್ಚರಿಸಹಚ್ಚಿ, ಅದರ ಧ್ವನಿಯು ಅವರ ಮನಸ್ಸಿನಲ್ಲಿ ನಡುವಂತೆ ಮಾಡುವದು.

(೫) ಅಕ್ಷರವನ್ನು ರಚಿಸಲಿಕ್ಕೆ ಕಲಿಸುವದು; ಮೊದಲು ಅದರ ಹಲವು ಭಾಗಗಳನ್ನು ತೋರಿಸಿ, ಬಳಿಕ ಭಾಗಗಳನ್ನು ಕೂಡಿಸಿ ಪೂರ್ಣ ಅಕ್ಷರವನ್ನು ಮಾಡಿಸುವದು. ಅಕ್ಷರವನ್ನು ನೆಲದ ಮೇಲೆ ಇಲ್ಲವೆ ಉಸಿಕಿನಲ್ಲಿ ಬರೆಯಿಸುವದು; ದಾರದಿಂದ, ತಂತಿಯಿಂದ, ಕಡ್ಡಿ ಮಣಿ ಕಾಳು ಮೊದಲಾದವುಗಳಿಂದ ರಚಿಸಿ ತೋರಿಸಿ, ಇದರಂತೆಯೇ ಹುಡುಗರಿಂದ ಅವುಗಳನ್ನು ರಚಿಸಹಚ್ಚುವದು.

(೬) ಶಿಕ್ಷಕನು ಕರಿಹಲಗೆಯ ಮೇಲೆ ಅಕ್ಷರವನ್ನು ಬರೆಯುವದು. ಹಾಗು ಹುಡುಗರಿಂದ ಅದನ್ನು ಅವರವರ ಪಾಟಿಗಳ ಮೇಲೆ ಅವರಿಗೆ ಬರೆಯಲಿಕ್ಕೆ ಬರುವ ತನಕ ಬರೆಯಿಸುವದು.

ಹೀಗೆ ಎರಡು ಮೂರು ಅಕ್ಷರಗಳನ್ನು ಹುಡುಗರು ಕಲಿತ ಕೂಡಲೆ ಇವುಗಳಿಂದ ಆಗುವ ಸಣ್ಣ ಸಣ್ಣ ಶಬ್ದಗಳನ್ನು ರಚಿಸಿ ಓದ ಹಚ್ಚುವದು; ಕೊನೆಗೆ ಈ ಶಬ್ದಗಳಿಂದ ಆಗುವ ವಾಕ್ಯಗಳನ್ನು ಹುಡುಗರಿಂದ ಓದಿಸುವದು.

ಈ ಪದ್ಧತಿಯು ಕೇವಲ ಯಾಂತ್ರಿಕವಾದದ್ದಿರುವದು. ಯಾಕಂದರೆ ಈ ಪದ್ಧತಿಯ ಮೂಲಕ ಅರ್ಥವಿಲ್ಲದ ಅಕ್ಷರಗಳ ಹಾಗು ಅವುಗಳನ್ನು ಉಚ್ಚರಿಸುವ ಮಾದರಿಯ ಜ್ಞಾನವನ್ನು ಹುಡುಗರಿಗೆ ಮಾಡಿಕೊಡಲು ಶಿಕ್ಷಕನು ಪ್ರಯತ್ನಿಸುತ್ತಾನೆ. ಅರ್ಥವಾಗುವ ಶಬ್ದಗಳು, ವಾಕ್ಯಗಳು, ಕಥೆಗಳು ಇವುಗಳಲ್ಲಿ ಹುಡುಗರಿಗೆ ಮನೋರಂಜನವೆನಿಸಬಹುದು; ಆದರೆ ಕೆಲವು ಸಣ್ಣ ಧ್ವನಿಗಳು ಅಥವಾ ಅರ್ಥವಿಲ್ಲದ ಗುರುತುಗಳು (ಅಕ್ಷರಗಳು) ಇವುಗಳಲ್ಲಿ ಅವರಿಗೆ ಹ್ಯಾಗೆ ಮನಸ್ಸಾದೀತು ? ಆದ್ದರಿಂದ ಸಣ್ಣ ಹುಡು

ಗರಿಗೆ ವಾಚನಪಾಠದ ಆರಂಭವನ್ನು ಅವರಿಗೆ ಅರ್ಥವಾಗಿ ಮನಸ್ಸಾಗುವಂಥ ಶಬ್ದ, ವಾಕ್ಯ ಹಾಗು ಕಥೆ ಇವುಗಳಿಂದ ಮಾಡುವದು ಯೋಗ್ಯವಾದದ್ದು.

ಶಬ್ದಗಳನ್ನು ಪೂರ್ಣ ಶಬ್ದಗಳಂತೆ ಕಲಿಸುವದು ವಿಹಿತವಾದದ್ದು. ಕೆಲವು ವಿಶಿಷ್ಟ ರೂಪದ ಅಕ್ಷರಗಳಿಂದ ಇವು ಆರಂಭವಾಗಿ ಆಗಿರುವವೆಂದು ಕಲಿಸುವದು ಸರಿಯಲ್ಲ. ಈ ತತ್ವವನ್ನು ಅನುಸರಿಸಿ ಶಬ್ದಗಳಿಂದ ಆರಂಭಿಸಿ ವಾಚನವನ್ನು ಕಲಿಸುವ ಪದ್ಧತಿಯು ರೂಢಿಯಲ್ಲಿ ಬಂದಿರುವದು.

ತೀರ ಸಣ್ಣ ವಿಚಾರವೆಂದರೆ ಒಂದು ಕಲ್ಪನೆಯು; ಒಂದು ಪೂರ್ಣ ಕಲ್ಪನೆಯನ್ನು ಹೇಳುವ ಭಾಷೆಯ ತೀರ ಸಣ್ಣದಾದ ಭಾಗವೆಂದರೆ ವಾಕ್ಯವು. ಈ ತತ್ವಗಳನ್ನು ಅನುಸರಿಸಿ ವಾಕ್ಯಗಳಿಂದ ಆರಂಭಿಸಿ ವಾಚನವನ್ನು ಕಲಿಸುವ ಪರಿಪಾಠವಿರುವದು.

ಇವಲ್ಲದೆ ವಾಚನವನ್ನು ಆರಂಭಿಸಲಿಕ್ಕೆ ಕಥೆಯ ಪದ್ಧತಿಯೊಂದುಂಟು. ಹುಡುಗರಿಗೆ ಮನಸ್ಸಾಗುವಂಥ ಕಥೆಗಳನ್ನು ಆರಿಸಿಕೊಂಡು ಇವನ್ನು ವಾಚನದ ಆರಂಭದ ಪಾಠಗಳನ್ನಾಗಿ ಮಾಡಿಕೊಂಡು, ಕಥೆಗಳಂತೆ ಅವುಗಳನ್ನು ಹುಡುಗರು ಓದಿದ ಬಳಿಕ, ಅವುಗಳೊಳಗಿನ ಶಬ್ದಖಂಡಗಳನ್ನೂ, ಶಬ್ದಗಳನ್ನೂ, ಅಕ್ಷರಗಳನ್ನೂ ಪೃಥಕ್ಕರಿಸುವದುಂಟು. ವಾಚನದ ಆರಂಭದಲ್ಲಿ ಈ ಬಗೆಯಾಗಿ ಮಾಡುವ ಅವಶ್ಯವು ಬಿದ್ದೇ ಬೀಳುವದು, ಆದರೂ ಈ ಕಥೆಯ ಪದ್ಧತಿಯಲ್ಲಿ ಹುಡುಗರ ಸ್ವಾಭಾವಿಕ ಚಲನವಲನಗಳಿಗೆ (ಓಟ, ಹಾಡು ಮೊದಲಾದವುಗಳಿಗೆ) ಉತ್ತೇಜನ ಕೊಟ್ಟು ಪಾಠವು ಮನೋರಂಜಕವಾಗುವಂತೆ ಉಪಾಯ ಮಾಡುವದುಂಟು. ಇದರಿಂದ ಹುಡುಗರು ಪಾಠವನ್ನು ಲಕ್ಷ್ಯಗೊಟ್ಟು ಕಲಿಯುವರು. ಅವರಿಗೆ ಯಾವ ಬಗೆಯ ಮಾನಸಿಕ ಆಯಾಸವೂ ಆಗದು. ಕಥೆಯನ್ನು ಪೃಥಕ್ಕರಿಸುವ ಮೇಲೆ ಹೇಳಿದ ಕೆಲಸವನ್ನು ಸಹ ಹುಡುಗರು ಬೇಸರಗೊಳ್ಳದೆ, ಇಷ್ಟೇ ಅಲ್ಲ ಸಂತೋಷದಿಂದ ಮಾಡುವರು.

ಶಾರೀರಿಕ ಶಿಕ್ಷಣ.

ಮಿದುಳೆಂಬ ಅವಯವವು ನಮ್ಮ ಶರೀರದ ಭಾಗವಿರುವದು. ಇದರಲ್ಲಿ ಮನಸ್ಸು ಇದೆ. ಆದ್ದರಿಂದ ಮನಸ್ಸು ಆರೋಗ್ಯದಿಂದ ಇರಬೇಕಾದರೆ ಶರೀರವು ಆರೋಗ್ಯದಿಂದ ಇರಲಿಕ್ಕೆಬೇಕು. "ನಿರೋಗಿಯಾದ ಶರೀರದಲ್ಲಿ ವಿಶುದ್ಧವಾದ ಮನಸ್ಸು" ಎಂಬ ನುಡಿಯು ಪ್ರಸಿದ್ಧವಿರುವದು.

ಒಬ್ಬ ಹೆಸರಾದ ಶಿಕ್ಷಣಶಾಸ್ತ್ರಜ್ಞನು ಅನ್ನುವದೇನೆಂದರೆ— "ನಾವು ನಮ್ಮ ಹುಡುಗರಿಗೆ ನೀಟಾಗಿ ಕೂಡಲಿಕ್ಕೆ, ನೀಟಾಗಿ ನಿಲ್ಲಲಿಕ್ಕೆ ಹಾಗೂ ನೀಟಾಗಿ ನಡೆಯಲಿಕ್ಕೆ

ಕಲಿಸಿದರೆ, ಶಾರೀರಿಕ ಶಿಕ್ಷಣದಲ್ಲಿ ನಮಗೆ ಎದುರಾಗುವ ಅರ್ಧ ಪ್ರಶ್ನೆಗಳನ್ನು ನಾವು ಬಿಡಿಸಿದಂತಾಗುವದು." ಹುಡುಗರಿಗೆ ಕೊಡುವ ಶಾರೀರಿಕ ವ್ಯಾಯಾಮಗಳು ಸ್ವಾಭಾವಿಕವಾದವೂ ಮನೋರಂಜಕವೆನಿಸುವಂಥವೂ ಪ್ರತಿಯೊಬ್ಬ ಹುಡುಗನ ಶಕ್ತಿಯೊಳಗಿನವೂ ಇರತಕ್ಕದ್ದು.

ಆರಂಭದ ವ್ಯಾಯಾಮದ ಎಕ್ಸರಸಾಯಿಜಗಳು ಸುಲಭವಾದವಿದ್ದು ಮುಂದೆ ಗಡಚಾಗುತ್ತ ಹೋಗಬೇಕು. ಮೊದಲಿನವು ಏನೂ ಶ್ರಮವಿಲ್ಲದೆ ಮಾಡಲಿಕ್ಕೆ ಬರುವಂಥವಿರಬೇಕು. ಮೊದಲಿನವು ಕೈಗಳಿಗೂ ಮುಂದಿನವು ಕಾಲ್ಗಳಿಗೂ ಹಾಗು ಕೊನೆಗೆ ಬರುವಂಥವು ಶರೀರದ ಧಡಕ್ಕೂ ಹಾಗು ಎಲ್ಲಕ್ಕೂ ಕೊನೆಯವು ಇವೆಲ್ಲವುಗಳಿಗೂ ಕೂಡಿಯೇ ವ್ಯಾಯಾಮವನ್ನು ಕೊಡುವಂಥವು ಇರಬೇಕು.

ಈ ಎಲ್ಲ ಎಕ್ಸರಸಾಯಿಜಗಳನ್ನು ಮಾಡುವಾಗ (೧) ಟೊಂಕವೂ ಬೆನ್ನೂ ನೀಟಾಗಿರಬೇಕು (೨) ಎದೆಯು ಮುಂದೆ ಹಾಯ್ದಿರಬೇಕು ಹಾಗು (೩) ತಲೆಯನ್ನು ನೆಟ್ಟಗಿಟ್ಟು ಎದುರಿಗೆ ನೋಡುತ್ತಿರಬೇಕು.

ಡ್ರಿಲ್.

ಪ್ರಾ. ಸಾಲಿಗಳ ಳನೆಯ ಇ॥ ಯ ವರೆಗೆ

(ಪೂರ್ವಸಿದ್ಧತೆ)

ಸಿದ್ಧರಾಗಿರಿ:— ವರ್ಗದ ಎಲ್ಲ ಹುಡುಗರನ್ನು ಎತ್ತರಪ್ರಮಾಣಕ್ಕೆ ಅನುಸರಿಸಿ ಅಂದರೆ ಗಿಡ್ಡ ಹುಡುಗರನ್ನು ಬಲಗಡೆಗೆ, ಎತ್ತರ ಇದ್ದ ಹುಡುಗರನ್ನು ಎಡಕ್ಕೆ ನಿಲ್ಲಿಸುವದು. ಮತ್ತು ಒಬ್ಬೊಬ್ಬರ ನಡುವೆ ಒಂದು ಪಾದದಷ್ಟು ಮತ್ತು ಎರಡೂ ಕಾಲುಗಳ ನಡುವೆ ಒಂದು ಪಾದದಷ್ಟು ಅಂತರಬಿಟ್ಟು ನಿಲ್ಲುವದು. ಕೈಗಳನ್ನು ಹಿಂದೆ ಕಟ್ಟಿರಬೇಕು.

ಎಚ್ಚರಿಕೆ: —ಎರಡೂಕೈಗಳನ್ನು ತೊಡೆಗೆಹಚ್ಚಿ ಎಡಗಾಲನ್ನು ಬಲಗಾಲಿಗೆ ಜೋಡಿಸಿ ನಿಲ್ಲುವದು.

ಎದುರ್:— ಸಾಲಾಗಿನಿಂತ ಎಲ್ಲ ಹುಡುಗರು ಬೇರೆಕಡೆಗೆ ಲಕ್ಷವಿಡದೆ ಎದುರಿಗೆ ದೃಷ್ಟಿ ಇಟ್ಟು ಗದ್ದವನ್ನು ಎತ್ತರಿಸಿ ನಿಲ್ಲುವದು.

ನಂಬರ್:—ಸಾಲಾಗಿ ನಿಂತ ಎಲ್ಲಾ ಹುಡುಗರನ್ನು ೪ ರ ವರೆಗೆ (ನಾಲ್ಕುನಾಲ್ಕರಂತೆ) ನಂಬರುಗಳನ್ನು ಎಣಿಸಲಿಕ್ಕೆ ಹೇಳುವದು.

ಒಂದೇ ಇದ್ದ ಸಾಲನ್ನು ಒಡೆದು ಬೇರೆ ಬೇರೆ ಸಾಲುಗಳನ್ನು ಮಾಡಿಸುವದು:—ಮೇಲೆ ಹೇಳಿದಂತೆ ನಾಲ್ಕುನಾಲ್ಕರಂತೆ ನಂಬರುಗಳನ್ನು ಎಣಿಸಿದ

ಬಳಿಕ ತಮ್ಮ ತಮ್ಮ ನಂಬರನ್ನು ಲಕ್ಷದಲ್ಲಿಟ್ಟುಕೊಂಡು ೧,೨, ೩ ನಂಬರಿನವರು ಅನುಕ್ರಮವಾಗಿ ೪, ೫, ೬ ಹೆಜ್ಜೆಗಳನ್ನು ಮುಂದೆ ಬರುವದು. ನಂಬರ್ ೪ ಇದ್ದವರು ನಿಂತಲ್ಲಿಯೇ ನಿಲ್ಲಬೇಕು. "ಒಂದು" ಎಂದಾಗ ಹೆಜ್ಜೆಗಳನ್ನು ಹಾಕಿ ನಾಲ್ಕುಸಾಲುಗಳಾಗಿ ನಿಲ್ಲಬೇಕು. ಬಲಕ್ಕೆ ನೋಡಿ ಸಾಲು ಸರಿಮಾಡಿಕೊಳ್ಳುವದು:–ಪ್ರತಿಯೊಂದು ಸಾಲಿನವರು ತಮ್ಮ ಬಲಗಡೆಗೆ ಇರುವವರನ್ನು ನೋಡಿಕೊಂಡು ಸಾಲುಗಳನ್ನು ಸರಿಮಾಡಿಕೊಳ್ಳಬೇಕು.

ಒಂದನೆಯ ತರಗತಿ:– ಎರಡೂ ಕೈಗಳನ್ನು ಎದುರಿಗೆ ತಲೆಗೆ ಸಮಾಂತರವಾಗಿ ಎತ್ತುವದು. 'ಒಂದು' ಅಂದಾಗ ಎತ್ತುವದು, 'ಎರಡು' ಅಂದಾಗ ಕೆಳಗೆಬಿಡುವದು. ಕೈಗಳನ್ನು ಕೆಳಗೆಬಿಡುವಾಗ ಹಿಮ್ಮಡಗಳನ್ನು ಎತ್ತರಿಸುವದು. ಇದೇ ಪ್ರಕಾರ ೧ ರಿಂದ ೮ ರವರೆಗೆ ಆಪ್ಪಣೆ ಕೊಟ್ಟಂತೆ ಮಾಡುವದು.

ಎರಡನೆಯ ತರಗತಿ:– ಕಾಲುಗಳನ್ನು ಎದುರಿಗೆ ಕಾಟಕೋನಮಾಡಿ ಎತ್ತರಿಸುವದು. 'ಒಂದು' ಎಂದಾಗ ಎತ್ತರಿಸುವದು, 'ಎರಡು' ಅಂದಾಗ ಊರುವದು. ಎಡಗಾಲಿನಿಂದ ಪ್ರಾರಂಭಮಾಡಿ ೧ ರಿಂದ ೮ ರವರೆಗೆ ಮಾಡಿಸುವದು.

ಮೂರನೆಯ ತರಗತಿ:– ಟೊಂಕದ ಮೇಲೆ ಕೈಗಳನ್ನಿಡುವದು. 'ಒಂದು' ಎಂದ ಕೂಡಲೇ ಟೊಂಕದ ಮೇಲ್ಭಾಗವನ್ನು ಮುಂದೆ ಮಣಿಸುವದು. 'ಎರಡು' ಎಂದ ಕೂಡಲೇ ಕೈಗಳು ಹಾಗೇ ಇದ್ದು ಮೊದಲಿನಂತೆ ನಿಟೆದುನಿಲ್ಲುವದು. ಇದೇ ಪ್ರಕಾರ ೧ರಿಂದ ೮ರವರೆಗೆ ಆಪ್ಪಣೆಕೊಟ್ಟಂತೆ ಮಾಡುವದು.

ನಾಲ್ಕನೆಯ ತರಗತಿ:–ನಿಂತಲ್ಲಿಯೇ ನಾಲ್ಕುಸಾರಿ ಕಾಲುಗಳನ್ನು ಬಡಿಯುವದು. ಎಡಗಾಲಿನಿಂದ ಪ್ರಾರಂಭಮಾಡಿ 'ಒಂದು' ಎಂದ ಕೂಡಲೇ ಎಲ್ಲರೂ ಒಮ್ಮೆಲೇ ಬಡಿಯಲಿಕ್ಕೆ ಪ್ರಾರಂಭಮಾಡುವದು.

ಐದನೆಯ ತರಗತಿ:– ಎರಡೂ ಕೈಗಳನ್ನು ಎರಡೂ ಮಗ್ಗಲಿಗೆ ತಲೆಯ ಸಮಾಂತರವಾಗಿ ಎತ್ತರಿಸುವದು. ಕೈಗಳನ್ನು ಕೆಳಗೆ ಬಿಡುವಾಗ ಹಿಮ್ಮಡಗಳನ್ನು ಎತ್ತರಿಸುವದು. 'ಒಂದು' ಎಂದಾಗ ಕೈಗಳನ್ನು ಎತ್ತರಿಸುವದು. 'ಎರಡು' ಅಂದಾಗ ಕೆಳಗೆ ಬಿಡುವದು. (ಕೈಗಳನ್ನು ಬಿಡುವಕಾಲಕ್ಕೆ ಸಪ್ಪಳವಾಗಬಾರದು.) ಹೀಗೆ ೧ ರಿಂದ ೮ ರವರೆಗೆ ಮಾಡುವದು.

ಆರನೆಯ ತರಗತಿ:– ಟೊಂಕದಮೇಲೆ ಕೈಗಳನ್ನಿಟ್ಟು 'ಒಂದು' ಎಂದ ಕೂಡಲೇ ಹಿಮ್ಮಡವನ್ನು ಎತ್ತರಿಸುವದು. 'ಎರಡು' ಅಂದಕೂಡಲೇ ಮೊದಲಿನಂತೆ ನಿಲ್ಲುವದು. ಇದೇ ಪ್ರಕಾರ ೧ರಿಂದ ೮ರವರೆಗೆ ಮಾಡುವದು.

ಏಳನೆಯ ತರಗತಿ:— ಟೊಂಕದಮೇಲೆ ಕೈಗಳನ್ನಿಡುವದು. ಟೊಂಕದ ಮೇಲ್ಭಾಗವನ್ನು ಹಿಂದೆಮಣಿಸುವದು. 'ಒಂದು' ಅಂದಕೂಡಲೆ ಹಿಂದೆ ಮಣಿಸುವದು. 'ಎರಡು' ಅಂದಕೂಡಲೇ ಕೈಗಳನ್ನು ಹಾಗೆಯೇ ಇಟ್ಟುಕೊಂಡು ಮೊದಲಿನಂತೆ ನೀಟಾಗಿ ನಿಲ್ಲುವದು. ಹೀಗೆ ೧ರಿಂದ ೮ರವರೆಗೆ ಮಾಡಿಸುವದು.

ಎಂಟನೆಯ ತರಗತಿ:—ನಿಂತಲ್ಲಿಯೇ ಎಂಟುಸಾರೆ ಕಾಲುಗಳನ್ನು ಬಡಿಯುವದು. 'ಒಂದು' ಎಂದಕೂಡಲೇ ಎಡಗಾಲು ಬಡಿಯಬೇಕು. 'ಎರಡು' ಅಂದಕೂಡಲೇ ಬಲಗಾಲು ಬಡಿಯಬೇಕು. ಇದರಂತೆ ೩, ೪, ಇತ್ಯಾದಿ ಸಂಖ್ಯೆಗಳಿಗೆ ಕ್ರಮತಪ್ಪದೇ ಬಡಿಯಬೇಕು.

ಒಂಭತ್ತನೆಯ ತರಗತಿ :— ಎರಡೂ ಕೈಬೆರಳುಗಳನ್ನು ಸೆಟೆಸಿ (ಎಡದಿಂದಲೂ ಬಲದಿಂದಲೂ) ತಲೆಯಮೇಲೆ ಇಡುವದು. 'ಒಂದು' ಅಂದಕೂಡಲೇ ತಲೆಯ ಮೇಲೆ ಇಡುವದು. 'ಎರಡು' ಅಂದಕೂಡಲೇ ಬಿಡುವದು. ಬಿಡುವಕಾಲಕ್ಕೆ ಹಿಮ್ಮಡಗಳನ್ನು ಎತ್ತರಿಸುವದು. ಹೀಗೆ ೧ರಿಂದ ೮ರವರೆಗೆ ಮಾಡಿಸುವದು.

ಹತ್ತನೆಯ ತರಗತಿ:— ಟೊಂಕದಮೇಲೆ ಕೈಗಳನ್ನಿಡುವದು. ಎರಡೂ ಮೊಣಕಾಲುಗಳನ್ನು ಕೂಡಿಸಿ ಕೂಡ್ರುವದು. ಏಳುವದು. ಹೀಗೆ ೧ರಿಂದ ೮ರವರೆಗೆ ಮಾಡುವದು.

ಹನ್ನೊಂದನೆಯ ತರಗತಿ:— ಟೊಂಕದಮೇಲೆ ಕೈಗಳನ್ನಿಡುವದು. ಟೊಂಕವನ್ನು ಎಡಕ್ಕೂ ಬಲಕ್ಕೂ ಮಣಿಸುವದು. 'ಒಂದು' ಅಂದಕೂಡಲೇ ಎಡಗಡೆಯಿಂದ ಪ್ರಾರಂಭಮಾಡಿ 'ಎರಡು' ಅಂದಕೂಡಲೇ ನೀಟಾಗಿ ನಿಲ್ಲುವದು. 'ಮೂರು' ಎಂದಕೂಡಲೇ ಬಲಕ್ಕೆ ಮಣಿಸುವದು. ಇದೇಪ್ರಕಾರ ೧ರಿಂದ ೮ರವರೆಗೆ ಮಾಡುವದು.

ಹನ್ನೆರಡನೆಯ ತರಗತಿ:— ನಿಂತಲ್ಲಿಯೇ ಹನ್ನೆರಡುಸಾರೆ ಕಾಲುಗಳನ್ನು ಬಡಿಯುವದು. ಎಡಗಾಲಿನಿಂದ ಪ್ರಾರಂಭಮಾಡುವದು.

ಸೂಚನೆ:—ಹೆಚ್ಚು ವ್ಯಾಯಾಮವಾಗಬೇಕಾಗಿದ್ದಾಗ ಅಪ್ಪಣೆಗಳನ್ನು ೧ರಿಂದ ೮ರ ವರೆಗೆ ಕೊಟ್ಟಂತೆಯೇ ತಿರುತಿ ೯, ೨, ೬, ೫, ೪, ಈ ರೀತಿ ೧೨ ತನಕ ಬರುವವರೆಗೂ ಮಾಡಿಸುವದು.

೫–೬–೭ ಇಯತ್ತೆಗಳಿಗಾಗಿ

ಒಂದನೆಯ ತರಗತಿ:—ಎರಡೂ ಕೈಗಳನ್ನು ಸೆಟೆಸಿ ಎದುರಿನಿಂದ ತಲೆಯ ಮೇಲೆ ಎತ್ತುವದು. ೧ ಅಂದಾಗ ಎತ್ತುವದು; ೨ ಅಂದಾಗ ಕೆಳಗೆ ಬಿಡುವದು.

ಕೈಗಳನ್ನು ಕೆಳಗೆ ಬಿಡುವಾಗ ಹಿಮ್ಮಡಗಳನ್ನು ಎತ್ತರಿಸುವದು ಹಾಗು ಊರುವದು. ೧ ರಿಂದ ೮ರ ವರೆಗೆ ಮಾಡುವದು.

ಎರಡನೇ ತರಗತಿ :—ಎರಡೂ ಕೈಗಳನ್ನು ಎರಡೂ ಅಂಗೈಗಳು ಮೊಳಕೈಗೆ ಹತ್ತುವಂತೆ ಬೆನ್ನ ಹಿಂದೆ ಕಟ್ಟುವದು. ೧ ಅಂದಕೂಡಲೆ ಎಡಗಾಲು ಸೆಟೆಸಿ ಮುಂದೆ ಚಾಚುವದು. ೨ ಅಂದಕೂಡಲೆ ಬಲಗಾಲಿನ ಹಿಮ್ಮಡ ಎತ್ತರಿಸಿ ಎಡಗಾಲು ಬಲಗಾಲಿಗೆ ಕೂಡಿಸುವದು ೩ ಅಂದಕೂಡಲೆ ಬಲಗಾಲು ಸೆಟೆಸಿ ಮುಂದೆ ಚಾಚುವದು. ೪ ಅಂದಕೂಡಲೆ ಎಡಗಾಲಿನ ಹಿಮ್ಮಡ ಎತ್ತರಿಸಿ ಬಲಗಾಲು ಎಡಗಾಲಿಗೆ ಕೂಡಿಸಬೇಕು. ೧ರಿಂದ ೮ರ ವರೆಗೆ.

ಮೂರನೇ ತರಗತಿ :— ೧ ಅಂದಕೂಡಲೆ ಟೊಂಕವನ್ನು ಮುಂದೆ ಮಣಿಸಿ ಎರಡೂ ಕೈಬೆರಳುಗಳನ್ನು ಕಾಲಿನ ಬೆರಳುಗಳಿಗೆ ಮುಟ್ಟಿಸುವದು. ೨ ಅಂದಕೂಡಲೆ ಮೊದಲಿನಂತೆ ಆಗುವದು. ೧ರಿಂದ ೮ರ ವರೆಗೆ

ನಾಲ್ಕನೇ ತರಗತಿ :—ನಿಂತಲ್ಲಿಯೇ ನಾಲ್ಕು ಸಾರೆ ಕಾಲು ಬಡಿಯುವದು, ೧ ಅಂದಾಗ ಚಪ್ಪಾಳೆ ಹಾಗು ಎಡಗಾಲು ಹೊಡೆಯುವದು, ೨ ಅಂದಾಗ ಬಲಗಾಲು, ೩ ಅಂದಾಗ ಎಡಗಾಲು ಹಾಗು ೪ ಅಂದಾಗ ಬಲಗಾಲು ಈ ಪ್ರಕಾರ ಎಡಗಾಲಿನಿಂದ ಆರಂಭಮಾಡಿ ಹೊಡೆಯುವದು. ಚಪ್ಪಳಿಯನ್ನು ೧ ಅಂದಾಗ ಮಾತ್ರ ಹೊಡೆಯಬೇಕು. ೧ರಿಂದ ೪ರ ವರೆಗೆ ಮಾಡುವದು.

ಐದನೇ ತರಗತಿ :—೧ ಅಂದಾಗ ಎರಡೂ ಕೈಗಳನ್ನು ಸೆಟೆಸಿ ಮಗ್ಗಲಿನಿಂದ ತಲೆಯ ಮೇಲಕ್ಕೆ ನಿಲ್ಲಿಸುವದು. ೨ ಅಂದಾಗ ಹಿಮ್ಮಡ ಎತ್ತರಿಸಿ ಕೈಗಳನ್ನು ತೊಡೆಗೆ ಹಚ್ಚುವದು. ೧ರಿಂದ ೮ರ ವರೆಗೆ.

ಆರನೆಯ ತರಗತಿ :—೨ನೇ ತರಗತಿಯಲ್ಲಿ ಹೇಳಿದಂತೆ ಕೈಕಟ್ಟುವದು. ೧ ಅಂದಕೂಡಲೆ ಎಡಗಾಲು ಸೆಟೆಸಿ ಮುಗ್ಗಲಿಗೆ ಎತ್ತುವದು; ೨ ಅಂದಾಗ ಬಲಗಾಲಿಗೆ ಕೂಡಿಸುವದು. ಹೀಗೆ ಎಡಗಾಲು ಬಲಗಾಲು ಮಾಡುತ್ತ ೧ರಿಂದ ೮ರ ವರೆಗೆ ಸಾಗಬೇಕು.

ಏಳನೇ ತರಗತಿ:— ೧ ಅಂದಕೂಡಲೆ ಎರಡೂ ಕೈಬೆರಳುಗಳನ್ನು ಎಡಗಾಲಿನ ಹಿಮ್ಮಡಕ್ಕೆ ಮುಟ್ಟಿಸುವದು. ೨ ಅಂದಕೂಡಲೆ ಮೊದಲಿನಂತೆ ನಿಲ್ಲುವದು. ಹೀಗೆ ಎಡಕ್ಕೂ ಬಲಕ್ಕೂ ಮಾಡುತ್ತ ೧ ರಿಂದ ೮ರ ವರೆಗೆ ಸಾಗಬೇಕು.

ಎಂಟನೇ ತರಗತಿ: — ೪ನೇ ತರಗತಿಯಂತೆ, ಆದರೆ ೮ ಸಾರೆ ಕಾಲು ಬಡಿಯುವದು. ೧ ಹಾಗು ೫ ಅಂದಾಗ ಚಪ್ಪಾಳೆ ಹೊಡೆಯುವದು. ೧ ರಿಂದ ೮ರ ವರೆಗೆ ಎಣಿಸುವದು.

ಒಂಬತ್ತನೇ ತರಗತಿ:— ೧ ಅಂದಾಗ ಎರಡೂ ಕೈಗಳನ್ನು ಮಗ್ಗಲಿನಿಂದ ಗೋಣಿನ ಮೇಲೆ ಇಡುವದು. ಮೊಳಕೈಗಳು ಆದಷ್ಟು ಭುಜಕ್ಕೆ ಸರಿಯಾಗಿ ಇರಬೇಕು. ೨ ಅಂದಾಗ ಕೈಗಳನ್ನು ಮಗ್ಗಲಿನಿಂದ ತೊಡೆಗೆ ಹಚ್ಚುವದು. ೧ರಿಂದ ೮ರ ವರೆಗೆ ಎಣಿಸುವದು.

ಹತ್ತನೇ ತರಗತಿ:— ೬ನೇ ತರಗತಿಯಲ್ಲಿಯಂತೆ ಕೈಗಳನ್ನು ಹಿಂದಕ್ಕೆ ಕಟ್ಟುವದು. ೧ ಅಂದಕೂಡಲೆ ಎಡಗಾಲು ಪಿಟಿಸಿ ಹಿಂದೆ ಚಾಚುವದು. ೨ ಅಂದಕೂಡಲೆ ಬಲಗಾಲಿಗೆ ಕೂಡಿಸುವದು. ಹೀಗೆ ಎಡಗಾಲು ಬಲಗಾಲು ಮಾಡುತ್ತ ೧ರಿಂದ ೮ರ ವರೆಗೆ ಸಾಗುವದು.

ಹನ್ನೊಂದನೇ ತರಗತಿ:— ಎರಡು ಕೈಗಳನ್ನು ಗೋಣಿನ ಮೇಲೆ ಇಡುವದು. ೧ ಅಂದಕೂಡಲೆ ಟೊಂಕದ ಮೇಲ್‌ಭಾಗವನ್ನು ಹಿಂದಕ್ಕೆ ಮಣಿಸುವದು. ೨ ಅಂದಕೂಡಲೆ ಮೊದಲಿನಂತೆ ನಿಲ್ಲುವದು. ಹೀಗೆ ೧ರಿಂದ ೮ರ ವರೆಗೆ ಸಾಗುವದು.

ಹನ್ನೆರಡನೇ ತರಗತಿ:— ನಿಂತಲ್ಲಿಯೇ ಹನ್ನೆರಡು ಸಾರೆ ಕಾಲು ಬಡಿಯುವದು. ೧, ೫, ೯ ಕ್ಕೆ ಚಪ್ಪಾಳೆ ಹಾಕುವದು.

ಶ್ವಾಸೋಚ್ಛ್ವಾಸದ ತರಗತಿಗಳು:— (ಎಲ್ಲ ವಯಸ್ಸಿನ ಹುಡುಗರಿಗೆ) ೧ ಅಂದಾಗ ಕೈಗಳನ್ನು ಮಗ್ಗಲಿಗೆ ಚಾಚಿ ತಲೆಗೆ ಸಮಾಂತರವಾಗಿ ಎತ್ತುತ್ತ ಉಸಿರು ತೆಗೆದುಕೊಳ್ಳುವದು. ೨ ಅಂದಾಗ ಕೆಳಗೆ ಬಿಡುತ್ತ ಉಸಿರು ಬಿಡುವದು. ಈ ಪ್ರಕಾರ ೧ ರಿಂದ ೬ರ ವರೆಗೆ ಮಾಡುವದು. (ಮೊಳಕೈಗಳನ್ನು ನೀಟಾಗಿ ಇಡಬೇಕು).

ಟೀಪು:— ಉಸಿರನ್ನು ಮೂಗಿನಿಂದಲೇ ಒಳಗೆ ತೆಗೆದುಕೊಳ್ಳಬೇಕು; ಮೂಗಿನಿಂದ, ಬಾಯಿಂದ ಅಥವಾ ಇವೆರಡರಿಂದಲೂ ಹೊರಗೆ ಬಿಡಬಹುದು.

ಶಿಕ್ಷಕರಿಗೆ ಸಾಮಾನ್ಯ ಸೂಚನೆಗಳು.

೧. ಹುಡುಗರಿಗೆ ತಾವಾಗಿ ಮಾಡಿಕೊಳ್ಳಲಿಕ್ಕೆ ಬರುವಂಥ ಯಾವ ಕೆಲಸವನ್ನೇ ಆಗಲಿ ಶಿಕ್ಷಕರು ಅವರಿಗಾಗಿ ಎಂದೂ ಮಾಡಬಾರದು.

೨. ಉಡಿಗೆತೊಡಿಗೆಯ ಬಗ್ಗೆ ಶಿಕ್ಷಕರು ಎಚ್ಚರದಿಂದಿರಬೇಕು; "ಉಡಿಗೆಯಿಂದ ಮನುಷ್ಯನ ಯೋಗ್ಯತೆಯನ್ನು ತಿಳಿಯಬಹುದು."

೩. ನಿಮ್ಮ ಸಾಲೆಯಲ್ಲಿ ಒಳ್ಳೇ ಶಿಸ್ತು ಇರಲಿ; ವಿಶೇಷ ಶ್ರಮುಗೊಳ್ಳದೆ ಇದನ್ನು ನೆಲೆಗೊಳಿಸಲಿಕ್ಕೆ ಯತ್ನಿಸಿರಿ.

೪. ನಿಮ್ಮ ಕಣ್ಣುಗಳ ಉಪಯೋಗವನ್ನು ಈ ಸಂಗತಿಯಲ್ಲಿ ಚನ್ನಾಗಿ ಮಾಡಿರಿ. ಬಹಳ ಮಾತಾಡುವದಕ್ಕಿಂತ ತೀಕ್ಷ್ಣವಾದ ಒಂದು ನೋಟದಿಂದ ಹೆಚ್ಚು ಕೆಲಸ ವಾಗುವದು.

೫. ಶಿಕ್ಷಕನು ವರ್ಗದ ಎದುರಿಗೆ ಇರತಕ್ಕದ್ದು; ಹುಡುಗರ ನಡುವೆ ಓಡಾ ತ್ತಿರುವದು ಅಷ್ಟು ಮೇಲಾದದ್ದಲ್ಲ. ಯಾಕೆಂದರೆ ಹೀಗೆ ಮಾಡುವದರಿಂದ ಶಿಸ್ತು ಕೆಡುವ ಸಂಭವವುಂಟು; ಮೇಲಾಗಿ ಇದರಿಂದ ಕಲಿಸಿದ್ದರ ಪರಿಣಾಮವು ಚನ್ನಾಗಿ ಆಗಲಾರದು.

೬. ಕಲಿಸುತ್ತಿರುವ ಪಾಠದ ಬಗ್ಗೆ ಬಾಲಕರಿಗೆ ಗೊತ್ತಿದ್ದದ್ದನ್ನೆಲ್ಲ ಹೇಳಲಿಕ್ಕೆ ಅವರಿಗೆ ಉತ್ತೇಜನ ಕೊಡಬೇಕು; ಆ ಒಳಿಕ ನೀವು ಹೇಳತಕ್ಕದ್ದನ್ನು ಹೇಳಬಹುದು. ತಮಗೆ ಗೊತ್ತಿರುವದನ್ನು ಹೇಳುವಾಗ ಹುಡುಗರಿಗೆ ಆನಂದವೆನಿಸುವದು; ಹಾಗು ಅವರು ಹೇಳಿದ್ದರಲ್ಲಿ ಏನಾದರೂ ತಪ್ಪುತಡೆಗಳಿದ್ದರೆ ಅವುಗಳನ್ನು ತಿದ್ದಬಹುದು; ಎಲ್ಲಕ್ಕೂ ಹೆಚ್ಚಿನ ಸಂಗತಿಯೆಂದರೆ ಅವರಿಗೆ ಪಾಠದಲ್ಲಿ ಅಭಿರುಚಿಯುಂಟಾಗುವದು. ಹುಡುಗರಿಗೆ ನಡೆದ ವಿಷಯದ ಬಗ್ಗೆ ಗೊತ್ತಿರುವದನ್ನೆಲ್ಲ ಅವರು ಹೇಳಿದ ಬಳಿಕ ಶಿಕ್ಷಕ ನಿಗೆ ತನ್ನ ಕೆಲಸವನ್ನು ಮಾಡಲು ಸರಿಯಾದ ಹೊತ್ತು ಒದಗುವದು. ಈ ಪ್ರಸಂಗ ವನ್ನು ಅವರು ಜಾಣತನದಿಂದ ಉಪಯೋಗಿಸಬೇಕು. ತಮ್ಮ ಪ್ರಚಂಡವಾದ ಜ್ಞಾನ ವನ್ನು ತೋರಿಸಲಿಕ್ಕೆ ಹೋಗಬಾರದು; ಮುಖ್ಯವಾಗಿ ಅವರ ಮುಂದೆ ವ್ಯಾಖ್ಯಾನ ಹೇಳುತ್ತ ನಿಲ್ಲಬಾರದು. ನೂಹಿತಿಕೊಡುವದೆಂದರೆ ಕಲಿಸುವದು ಅಥವಾ ಶಿಕ್ಷಣ ಕೊಡುವದು ಎಂಬ ತಪ್ಪುಗ್ರಹಿಕೆಯನ್ನು ಮಾಡಿಕೊಳ್ಳಬೇಡಿರಿ.

ವ್ಯಾಖ್ಯಾನ ಪದ್ಧತಿಯಿಂದ ಆದಷ್ಟು ಕಡಿಮೆ ಮಾಹಿತಿಯನ್ನು ಹೇಳಬೇಕೆಂಬ ಒಂದು ನಿಯಮವನ್ನು ಹಾಕಿಕೊಳ್ಳಿರಿ. ಸೂಚಕ ಪ್ರಶ್ನಗಳನ್ನು ಕೇಳಿರಿ. ಗೊತ್ತಿದ್ದ ಸಂಗತಿಗಳಿಂದ ಅಥವಾ ಪಾಠದಲ್ಲಿ ಗೊತ್ತುಮಾಡಿಕೊಂಡ ಸಂಗತಿಗಳಿಂದ ಸಹಜವಾಗಿ ಹೊರಡುವ ಸಿದ್ಧಾಂತಗಳನ್ನು ಹುಡುಗರು ತೆಗೆಯಲಿ. ಹೀಗೆ ಹೊಸ ಮಾಹಿತಿಯನ್ನು ಮಾಡಿಕೊಟ್ಟರೆ ಹುಡುಗರು ಅದನ್ನು ಮರೆಯಲಾರರು; ಮೇಲಾಗಿ ಹುಡುಗರಪ್ರಯತ್ನ ದಿಂದ ಅವರಿಗೆ ಒಳ್ಳೇ ಶಿಕ್ಷಣವು ಉಂಟಾಗುವದು.

೭. ಕೂಡಲೆ ತಾತ್ಕಾಲಿಕ ಪರಿಣಾಮಗಳನ್ನು ಉಂಟುಮಾಡುವದಕ್ಕಿಂತ ಹುಡು ಗರ ಭಾವಿ ಹಿತವನ್ನುದ್ದೇಶಿಸಿ ಕೆಲಸಮಾಡಲು ಪ್ರಯತ್ನಪಡಿರಿ. ಸ್ಮರಣದಲ್ಲಿ ಸಂಗತಿ ಗಳನ್ನು ಕಲೆಹಾಕುವದಕ್ಕೆ ಹೆಣಗಬೇಡಿರಿ. ಹುಡುಗರ ವಿಚಾರಶಕ್ತಿಯನ್ನು ಬಲಪಡಿಸ ಲಿಕ್ಕೆ ಶ್ರಮುಪಡಿರಿ.

೮. ನೀವು "ಕಲಿಸುವದು" ಸಂಯಿರುವ ಬಗ್ಗೆ ಬಹಳ ಎಚ್ಚರದಿಂದ ಇರ್ರಿ. ಈ ಮಾತು ನೀವು ಕಲಿಸುವ ಸಂಗತಿಗಳಿಗೂ ಅವುಗಳಿಂದ ಸಿದ್ಧವಾಡುವ ತತ್ವಗಳಿಗೂ ಅನ್ವಯಿಸುವದು. ಆದರೆ ಇವುಗಳನ್ನು ಹ್ಯಾಗೆ ಕಲಿಸಬೇಕೆಂಬ ಬಗ್ಗೆ ಬಹಳ ಎಚ್ಚರ ದಿಂದ ಇರ್ರಿ.

ಮನುಷ್ಯನ ನಾಲ್ಕು ವಯೋಮಾನಗಳು.

ಶಿಕ್ಷಣವನ್ನು ನಾಲ್ಕು ಅವಧಿಗಳಲ್ಲಿ ಹಂಚಿ ಹೇಳುವದುಂಟು. (೧) ಹುಟ್ಟಿನಿಂದ ೫॥ ವರ್ಷದ ವರೆಗೆ (೨) ೫॥ ವರ್ಷದಿಂದ ೭ ವರ್ಷದ ವರೆಗೆ (೩) ೭ ವರ್ಷದಿಂದ ೨೧ ವರ್ಷದ ವರೆಗೆ (೪) ೨೧ ವರ್ಷದ ಮುಂದೆ.

ಮೊದಲಿನ ಕಾಲಖಂಡದಲ್ಲಿ ಹುಡುಗರೊಡನೆ ವಿಚಾರ ವಿನಿಮಯ ಮಾಡುವ ದಾಗದು. ಆದ್ದರಿಂದ ಆಗ ಯೋಗ್ಯವಾದ ಚಟಗಳು ಹತ್ತುವ ಕಡೆಗೆ ಲಕ್ಷ್ಯಕೊಡ ತಕ್ಕದ್ದು. ಎರಡನೆಯ ಕಾಲಖಂಡದಲ್ಲಿ ಹುಡುಗರಿಗೆ ನಾವು ಕೊಟ್ಟ ಅಪ್ಪಣೆಗಳು ತಿಳಿಯುವಷ್ಟು ಮಾತ್ರ ತಿಳುವಳಿಕೆಯು ಇರುವದು. ಈ ಅವಧಿಯಲ್ಲಿ ಅಜ್ಞೆಗಳನ್ನು ಪಾಲಿಸಲಿಕ್ಕೆ ಹಚ್ಚಿ ಅವರ ಶೀಲವನ್ನು ಸರಿಯಾದ ಮಾರ್ಗಕ್ಕೆ ಹಚ್ಚಬೇಕು. ಮೂರ ನೆಯ ಕಾಲಖಂಡವಲ್ಲಿ ಅವರ ಮಾನಸಿಕ ಶಕ್ತಿಗಳು ಬಲಪಟ್ಟಿರುವವು. ಅವರಿಗೆ ಸ್ವಂತ ಹಿತಾಹಿತಗಳು ತಿಳಿಯುವವು. ಆಗ ಅವರ ಬಗ್ಗೆ ಒಳ್ಳೇ ಮಾತುಗಳನ್ನಾಡಿ ಶಿಕ್ಷಣವನ್ನು ಸಾಗಿಸಬೇಕು. ಅಂದರೆ ಮೆಚ್ಚಿಗೆಯ ಮಾತುಗಳ ಉಪಯೋಗವನ್ನು ಮಾಡಬೇಕು. ಕೊನೆಯ ಕಾಲಖಂಡದಲ್ಲಿ ಆತ್ಮಶಿಕ್ಷಣವೇ ಶಿಕ್ಷಣದ ಗುರಿಯಾಗಿರಬೇಕು.

ಆದರೂ ಒಳ್ಳೇ ಚಟಗಳನ್ನು ಹಚ್ಚುವ ಬಗ್ಗೆ ಶಿಕ್ಷಣವು ಮೊದಲಿನಿಂದ ಕೊನೆಯ ವರೆಗೆ ಸಾಗುತ್ತಿರಬೇಕು; ಮೂರನೆಯ ಹಾಗು ನಾಲ್ಕನೆಯ ಕಾಲಖಂಡಗಳಲ್ಲಿ ಅಪ್ಪಣೆ ಗಳನ್ನು ಪಾಲಿಸುವ ಬಗ್ಗೆ ಜಾಗ್ರತೆಯಿಂದಿರಬೇಕು; ನಾಲ್ಕನೆಯ ಕಾಲಖಂಡದಲ್ಲಿ ಮೆಚ್ಚಿಗೆಯನ್ನು ಮರೆಯಲಾಗದು. ಅಂತೂ ಹೆಚ್ಚುಕಡಿಮೆ ಈ ನಾಲ್ಕು ಪದ್ಧತಿಗಳು ನಾಲ್ಕು ಕಾಲಖಂಡಗಳಲ್ಲಿ ಅನುಸರಿಸಿರಬೇಕಾಗುವದು; ಪ್ರತಿಯೊಂದರಲ್ಲಿ ಆಯಾ ಗುಣ ಗಳ ಕಡೆಗೆ ಹೆಚ್ಚು ಲಕ್ಷ್ಯಕೊಡಬೇಕಾಗುವದು.

ಸ್ವಭಾವವೂ ಶಿಕ್ಷಣವೂ.

ಹುಡುಗನ ವಿಕಾಸದಲ್ಲಿ ಸ್ವಭಾವ, ಶಿಕ್ಷಣ ಇವೆರಡೂ ಮಹತ್ವವಾದವಿರುವವು. ಸ್ವಭಾವಸಿದ್ಧವಾಗಿ ಹುಡುಗನ ವಿಕಾಸವು ಇಂತಿಷ್ಟು ದಿಶೆಗಳಲ್ಲಿ ಇಂತಿಷ್ಟು ಪ್ರಮಾಣದ ಮೇಲೆ ನಡೆಯಬಹುದಾಗಿರುವದು. ಆದರೆ ಇವುಗಳಲ್ಲಿ ಶಿಕ್ಷಣದಿಂದ ಕೆಲವು ಮಾತ್ರ ಕೆಲವಂಶದಿಂದ ಸಾಧ್ಯವಾಗಬಹುದಾಗಿದೆ. ಅವನ ಶಿಕ್ಷಣವು ಯೋಗ್ಯವಾದದ್ದಿದ್ದರೆ ಮಾತ್ರ ಅವನು ಸಾಧ್ಯವಾಗಬಹುದಾದ ಮಟ್ಟಿಗೆ ವಿಕಾಸ ಹೊಂದಬಹುದು.

ಪ್ರತಿಯೊಂದು ಕೂಸು–ಅದರ ತಾಯ್ತಂದೆಗಳು ಯಾವ ಸ್ಥಿತಿಯಲ್ಲಿಯೇ ಇರಲಿ–ಅಸಂಖ್ಯ ದಿಶೆಗಳಲ್ಲಿ ವಿಕಾಸಹೊಂದಬಹುದಾದ ಶಕ್ತಿಯುಳ್ಳದ್ದಾಗಿ ಜನ್ಮವೆತ್ತುವದು; ಅದರಲ್ಲಿ ಅನೇಕ ಒಲವುಗಳು ಅಡಗಿರುವವು. ಇವುಗಳಲ್ಲಿ ಕೆಲವು ಒಳ್ಳೆಯವಿರುವವು; ಕೆಲವು ಕೆಟ್ಟವಿರುವವು. ಇದೆಲ್ಲ ಅವನ ಸ್ವಭಾವದ ಭಾಗವು. ಆದರೆ ಇವುಗಳಲ್ಲಿ ಯಾವವು ವಿಕಾಸ ಹೊಂದತಕ್ಕದ್ದು, ಯಾವವನ್ನು ವಿಕಾಸ ಹೊಂದಗೊಡಬಾರದು ಇದನ್ನು ಶಿಕ್ಷಣವು ನಿರ್ಣಯಿಸತಕ್ಕದ್ದು. ಸಮಾಜದ ಹಿತಾಹಿತಗಳನ್ನು ಸಾಧ್ಯಗೊಳಿಸುವಂಥ ಅನೇಕ ಪ್ರಬಲವಾದ ಒಲವುಗಳೊಡನೆ ಒಬ್ಬನು ಹುಟ್ಟಿರುವನೆಂದು ನಾವು ತಿಳಿಯೋಣ. ಅವನನ್ನು ಸಮಾಜದಿಂದ ದೂರದಲ್ಲಿಟ್ಟು ಒಬ್ಬಂಟಿಗನನ್ನಾಗಿ ಬೆಳೆಸಿದರೆ ಒಲವುಗಳೆಲ್ಲ ಕುಗ್ಗಿ ಹೋಗುವವು. ಸಮಾಜದ ಬೇರೆ ಬೇರೆ ಸ್ಥಿತಿಗಳಲ್ಲಿ ಅವನನ್ನು ಬೆಳೆಯಗೊಟ್ಟರೆ ಅವನು ಸಮಾಜದಲ್ಲಿ ಹೌದೆನಿಸಿಕೊಳ್ಳುವನೂ ಲೋಕಕಲ್ಯಾಣಕಾರಿಯೂ ಇಲ್ಲವೆ ಅರಾಜಕವ್ಯಕ್ತಿಯೂ ಆಗಬಹುದೆಂಬದು ಸ್ಪಷ್ಟವು.

ನಿಬಂಧ ಶಿಕ್ಷಣ.

ನಿಬಂಧವೆಂದರೆ ಕೂಡಿಸಿ ಕಟ್ಟುವದು. (ನಿ=ಹತ್ತಿರ, ಬಂಧ=ಕಟ್ಟುವದು) ಸಾಲೆಯಲ್ಲಿ ಹುಡುಗರು ಕೊಟ್ಟ ವಿಷಯದ ಬಗ್ಗೆ ತಮಗೆ ತಿಳಿದ ವಿಚಾರಗಳನ್ನು ಒತ್ತಟ್ಟಿಗೆ ಮಾಡಿ ಅವನ್ನು ಶುದ್ಧವಾದ ಮಾತಿನಲ್ಲಿ ಇಲ್ಲವೆ ಬರೆಹದಲ್ಲಿ ವ್ಯಕ್ತಪಡಿಸುವದೇ ನಿಬಂಧವು.

೧. ಈ ಪಾಠದಲ್ಲಿ ಶಿಕ್ಷಕನು ವಿಷಯವನ್ನು ಕೊಡುವನು. ಹುಡುಗರು ಆ ಬಗ್ಗೆ ತಮಗೆ ಗೊತ್ತಿರುವ ಸಂಗತಿಗಳನ್ನು ಕೂಡಿಸಿ ತಮ್ಮ ಭಾಷೆಯಲ್ಲಿ ಶುದ್ಧವಾಗಿ ಹೇಳುವರು; ಇಲ್ಲವೆ ಬರೆಯುವರು. ಹುಡುಗರ ಬರೆಹವು ಶುದ್ಧವಿರುವದೆಂಬುದನ್ನು ನೋಡುವದಕ್ಕಾಗಿ ಶಿಕ್ಷಕನು ಅದನ್ನು ಓದಿ ನೋಡಿ ಅವಶ್ಯವಿರುವಲ್ಲಿ ತಿದ್ದಬೇಕು. ಅಂದರೆ ಶಿಕ್ಷಕನ ಕೆಲಸಗಳು ಎರಡು. (೧) ವಿಷಯವನ್ನು ನೇಮಿಸುವದು. (೨) ಬರೆಹವನ್ನು ತಿದ್ದುವದು. ವಿದ್ಯಾರ್ಥಿಗಳ ಕೆಲಸವು ಶಿಕ್ಷಕನು ತೋರಿಸಿದ ಕ್ರಮವನ್ನು ಅನುಸರಿಸಿ ತಾವಾಗಿಯೇ ಬಾಯಿಂದ ಅಥವಾ ಬರೆಹದ ಮೂಲಕ ನಿಬಂಧವನ್ನು ರಚಿಸುವದಿರುವದು. ಆದರೆ ಅವರ ನಿಬಂಧವು ಇನ್ನೊಬ್ಬನ ವಿಚಾರವನ್ನು ಅಥವಾ ಭಾಷೆಯನ್ನು ಸ್ವಲ್ಪ ಹೆಚ್ಚುಕಡಿಮೆ ಮಾಡಿ ತಿರುಗಿ ಬರೆದದ್ದಾಗದೆ ಬಾಲಕನ ಸ್ವಂತದ್ದೇ ಆಗಿರಬೇಕು.

೨. ನಿಬಂಧ ರಚನೆಯು ಸಾಲೆಯ ತೀರ ಕೆಳಗಿನ ಇಯತ್ತೆಯಲ್ಲಿ ಆರಂಭವಾಗತಕ್ಕದ್ದು. ಬಾಲಕರ ವರ್ಗದ ಹುಡುಗರು ಸಹ ನಿಬಂಧರಚನೆ ಮಾಡಬಹುದು.

ಉದಾ:—ಅವರು ಶಾಲೆಯಲ್ಲಿ ಇಲ್ಲವೆ ಆಟದ ಬೈಲಿನಲ್ಲಿ ತಾವು ಮಾಡುವದನ್ನು ವರ್ಣಿಸ ಬಹುದು. ಬೆಕ್ಕು ನಾಯಿ ಮೊದಲಾದವು ಹ್ಯಾಗೆ ಕಾಣುವವು, ಏನು ಮಾಡುವವು, ಏನು ತಿನ್ನುವವು, ಮೊದಲಾದ ಬಗ್ಗೆ ಸಂಭಾಷಣೆ ಮಾಡಬಹುದು. ಆರಂಭದಲ್ಲಿ ಇದು ಮಾತಿನಿಂದಲೇ ಸಾಗುವದು; ಮೇಲಿನ ಇಯತ್ತೆಗಳಲ್ಲಿ ಮಾತಿನಿಂದಲೂ ಬರಿಹ ಮೂಲಕವಾಗಿಯೂ ನಡೆಯುವದು. ಮೊದವೆಂದಲು ಈ ಪಾಠದಲ್ಲಿ ವಾಚನ ಪುಸ್ತಕ ದಲ್ಲಿ ಬಂದ ಇಲ್ಲವೆ ಶಿಕ್ಷಕನು ಹೇಳಿದ ಕಥೆಯ ಸಾರಾಂಶವನ್ನು ಅಥವಾ ನಿತ್ಯದ ಅನುಭ ವಗಳನ್ನು ಹೇಳುವದಿರುವದು. ಬರಬರುತ್ತ ಇದೇ ಪತ್ರ ಅಥವಾ ನಿಬಂಧ ಬರಿಹದ ರೂಪಕ್ಕೆ ಬರುವದು.

೩. ಹುಡುಗರ ನಿಬಂಧ—ಬರಿಹವನ್ನು ವ್ಯಕ್ತಿಶಃ ತಿದ್ದಬೇಕು. ಮತ್ತು ಈ ತಿದ್ದುವಿಕೆಯು ಪರಿಣಾಮಕಾರಕವಾಗಬೇಕಾದರೆ, ಅಂಥ ತಪ್ಪುಗಳನ್ನು ಅವರು ತಿರುಗಿ ಮಾಡದಂತಾಗಬೇಕಾದರೆ, ಪ್ರತಿಯೊಬ್ಬ ವಿದ್ಯಾರ್ಥಿಯ ತಪ್ಪನ್ನು ಅವನಿಗೆ ಪ್ರತ್ಯಕ್ಷ ತಿಳಿಸಿ ತಿದ್ದಬೇಕು.

ಸೂಚನೆಗಳು:—

೧. ನಿಬಂಧದ ವಿಷಯವನ್ನು ನೀವು ಕೇಳಿದ ಕೂಡಲೇ ನಿಮ್ಮ ಮನದಲ್ಲಿ ಬರುವ ವಿಚಾರಗಳನ್ನು **ಸಂಗ್ರಹಿಸಿ** ಸಂಕ್ಷಿಪ್ತದಲ್ಲಿ ಬರೆದಿಟ್ಟುಕೊಳ್ಳಿರಿ.

೨. ಟೀಪು:—ನಿಬಂಧದ ವಿಷಯವು ವಿದ್ಯಾರ್ಥಿಗಳ **ಪೂರ್ಣ** ಪರಿಚಯದ್ದಿ ರುವ ಬಗ್ಗೆ ಶಿಕ್ಷಕರು ಎಚ್ಚರಗೊಳ್ಳಬೇಕು.

೩. ಬರೆದಿಟ್ಟುಕೊಂಡ ವಿಚಾರಗಳಲ್ಲಿ ವಿಷಯಕ್ಕೆ ಒಳ್ಳೇ ಸಂಬಂಧವುಳ್ಳವನ್ನು ಆರಿಸಿಟ್ಟುಕೊಳ್ಳಿರಿ. ಮಿಕ್ಕವುಗಳನ್ನು ಬಿಟ್ಟುಬಿಡಿರಿ.

೪. ಆರಿಸಿದ ವಿಚಾರಗಳಲ್ಲಿ ಹೆಚ್ಚು ಮಹತ್ವವಾದವುಗಳನ್ನು ಅಥವಾ ಹೆಚ್ಚು ಲಕ್ಷ್ಯಕೊಡಬೇಕಾದವುಗಳನ್ನು **ಗುರ್ತಿಸಿಡಿರಿ.** ಇವಕ್ಕೆ ನಿಮ್ಮ ನಿಬಂಧದಲ್ಲಿ ಹೆಚ್ಚು ಸ್ಥಳ ಸಿಕ್ಕಬೇಕು.

೪. ಆರಿಸಿದ ವಿಚಾರಗಳನ್ನು ಸ್ವಾಭಾವಿಕ **ಕ್ರಮದಲ್ಲಿ ಇಟ್ಟುಕೊಳ್ಳಿರಿ.** ಅಂದರೆ ಸಿಕ್ಕುಸಿಕ್ಕಂತೆ ಬರೆಯದೆ ಕ್ರಮದಿಂದ ಬರೆಯಲಿಕ್ಕೆ ಬರುವದು.

೫. ಹೀಗೆ ಕ್ರಮಗೊಳಿಸಿಟ್ಟುಕೊಂಡ ವಿಚಾರಗಳನ್ನು ನಿಮ್ಮ ಸ್ವಂತವಾದ ಸುಬಗ ಹಾಗು ಶುದ್ಧ ಭಾಷೆಯಲ್ಲಿ ಬರೆಯಿರಿ.

೬. ನೀವು ಬರೆದ ನಿಬಂಧವನ್ನು ತಿರುಗಿ ಓದಿಕೊಳ್ಳಿರಿ.

ಪಾಠವು ೪೦ ನಿ. ನದಿದ್ದರೆ ಬೇರೆ ಬೇರೆ ಭಾಗಕ್ಕೆ ಕೆಳಗೆ ಕಾಣಿಸಿದಂತೆ ಹೊತ್ತು ಕೊಡಬಹುದು.

೧೦ ನಿಮಿಷ—ವಿಚಾರಗಳನ್ನು ಸಂಗ್ರಹಿಸುವದು.
೫ ,, ಆರಿಸುವದು; ಗುರ್ತಿಸುವದು; ಹಾಗು ಕ್ರಮಪಡಿಸುವದು.
೨೦ ,, ನಿಬಂಧ ಬರೆಯುವದು.
೫ ,, ತಿರುಗಿ ಓದಿಕೊಳ್ಳುವದು.

೪ನೆಯ ಇಯತ್ತೆಯಲ್ಲಿ ಕರ್ನಾಟಕದ ಇತಿಹಾಸವನ್ನು ಕಲಿಸುವ ಬಗ್ಗೆ ಸೂಚನೆಗಳು.

೧. ಹಿಂದಕ್ಕೆ ಹೋಗುವ—ಈಗಿನ ಕಾಲದಿಂದ ಹಿಂದಿನ ಕಾಲಕ್ಕೆ ಸಾಗುವ—ಪದ್ಧತಿಯಿಂದ ನಡೆಯಿರಿ; ಅಂದರೆ ಸದ್ಯದ ಇತಿಹಾಸದ ಸಂಗತಿಗಳಿಂದ ಹಿಂದಿನಕಾಲದ ಸಂಗತಿಗಳ ಕಡೆಗೆ ಸಾಗಿರಿ. ಉದಾ:—ಸ್ಥಾನಿಕ ಸಾಲೆಗಳು, ನುಸೀದೆಗಳು, ಗುಡಿಗಳು, ಇನಾಮು ಭೂಮಿಗಳು, ಕೆರೆಗಳು, ಕೋಟೆಗಳು ಮೊದಲಾದ ಹುಡುಗರಿಗೆ ಪರಿಚಿತವಾದ ವಸ್ತುಗಳಿಂದ ಆರಂಭಿಸಿರಿ. ಈ ಮೇರೆಗೆ ಅರ್ವಾಚೀನ ಬ್ರಿಟಿಷರ ಕಾಲಖಂಡದಿಂದ ಇದರ ಹಿಂದಿನ ಮಹಾರಾಷ್ಟ್ರರ ಕಾಲಖಂಡ (೧೭೬೦–೧೪೧೪), ಮೊಗಲರ (೧೬೪೬–೧೭೬೦), ವಿಜಾಪುರದ ಸುಲ್ತಾನರ (೧೫೬೫–೧೬೪೬), ವಿಜಯನಗರದ ಅರಸರ (೧೩೩೬–೧೫೬೫), ಹೊಯ್ಸಳರ, ಚಾಲುಕ್ಯರ, ರಾಷ್ಟ್ರಕೂಟರ ಮೊದಲಾದ ಕಾಲಖಂಡಗಳು.

ಈ ಕಾಲಖಂಡಗಳು ವಿದ್ಯಾರ್ಥಿಗಳ ಮನಸ್ಸಿನಲ್ಲಿ ನಿಲ್ಲಬೇಕಾದರೆ ಅವನ್ನು ಕೆಳಗೆ ಕಾಣಿಸಿದಂತೆ ಹುಡುಗರಿಗೆ ತೋರಿಸಿರಿ.

ಚಾಲುಕ್ಯರು, ಹೊಯ್ಸಳರು ಮೊದಲಾದವರು (ತೀರ ಪ್ರಾಚೀನ ಕಾಲದಿಂದ ೧೩೩೬ರ ವರೆಗೆ)

ವಿಜಯನಗರದ ಹಿಂದೂ ಅರಸರು (೧೩೩೬–೧೫೬೫)
ವಿಜಾಪುರದ ಸುಲ್ತಾನರು (೧೫೬೫–೧೬೪೬)
ಮೊಗಲ್ ಬಾದಶಹರು (೧೬೪೬–೧೭೬೦)
ಮಹಾರಾಷ್ಟ್ರದ ಪೇಶ್ವೆಗಳು; ಹೈದರ ಹಾಗು ಟೀಪು (೧೭೬೦–೧೪೧೪)

ಬ್ರಿಟಿಷರ ಕಾಲಖಂಡ (ಗಿಲಗಿಲರಿಂದ)

ಹಾಗು ಕೆಳಗೆ ಕಾಣಿಸಿದಂಥ ಕಾಲಪಟ್ಟಿದಿಂದಲೂ ತೋರಿಸಿರಿ.

೧೪ ಶತಮಾನ	೨ ಶತಮಾನ	೧ ಶತಮಾನ	ಅರ್ಧ ಶತಮಾನ	೧ ಶತಮಾನ	ಬ್ರಿಟಿಷರು
ಪ್ರಾಚೀನ ಹಿಂದೂ ರಾಜ್ಯಗಳು ಚಾಲುಕ್ಯರು ಹೊಯ್ಸಳರು ಇತರರು—ವಿಜಯನಗರದ ಏಳ್ಗೆಯವರೆಗೆ	ವಿಜಯನಗರದ ರಾಜ್ಯ	ವಿಜಾಪುರದ ಸುಲ್ತಾನರು	ಮೊಗಲ್ ಬಾದಶಹರು	ಮಹಾರಾಷ್ಟ್ರದ ಪೇಶ್ವೆಗಳು	೧೬೧೪ ರಿಂದ ಸದ್ಯದ ವರೆಗೆ

ಭಾಷೆಯ ಪಾಠ.

ಸಾಮಾನ್ಯ ವಿಚಾರ:—ನಾವು ಸಾಮಾನ್ಯವಾಗಿ ವಾಚನ ಪಾಠವೆಂದು ಹೇಳುವುದರಲ್ಲಿ ಎರಡು ಭಾಗಗಳಿರುವವು. (೧) ಭಾಷೆಯ ಪಾಠ—ಅದನ್ನು ಓದಿ ಅರ್ಥ ತಿಳಿದುಕೊಳ್ಳುವದು. (೨) ವಾಚನಪಾಠ:—ಅದನ್ನು ಅರ್ಥಬೋಧನಾಗುವಂತೆ ಪರರಿಗೆ ಓದಿತೋರಿಸುವದು. ಮೊದಲನೆಯ ಭಾಗದಲ್ಲಿ ವಿದ್ಯಾರ್ಥಿಗಳು ಆ ಪಾಠವನ್ನು ತಾವೇ ಓದಿ ಅರ್ಥ ತಿಳಿದುಕೊಳ್ಳಲು ಪ್ರಯತ್ನಿಸುವರು; ಅದಕ್ಕೆ ಶಿಕ್ಷಕರು ಸಹಾಯ ಮಾಡುವರು. ಈ ಹೊತ್ತು ಈ ಭಾಷೆಯ ಪಾಠವನ್ನು ಕಲಿಸತಕ್ಕದ್ದಿರುವದು. ಇದರಲ್ಲಿ ಈ ಕೆಳಗಿನಂತೆ ಮೆಟ್ಟಿಲುಗಳಿರುವವು.

೧. **ಉಪೋದ್ಘಾತ:**—ಕಲಿಯಬೇಕಾಗಿರುವ ವಿಷಯದ ಕಡೆಗೆ ವಿದ್ಯಾರ್ಥಿಗಳ ಮನಸ್ಸನ್ನು ಎಳೆದುಕೊಳ್ಳುವುದಕ್ಕಾಗಿ ಈ ವಿಷಯದಲ್ಲಿ ಅವರಿಗೆ ತಿಳಿದಿರುವ ಕೆಲವು ಮಾತುಗಳನ್ನು ಕೇಳಿಕೊಳ್ಳುವದು. ಮತ್ತು ಮುಂದಿನ ವಿಷಯವನ್ನು ಸಂಕ್ಷೇಪವಾಗಿ ಸೂಚಿಸುವುದು. ತೀರ ಅಪರಿಚಿತ ವಿಷಯವಿದ್ದು ಹೆಚ್ಚು ಕಠಿಣವಾದದ್ದಿದ್ದರೆ ಪಾಠದ ಸಾರಾಂಶವನ್ನು ಇಲ್ಲಿ ಹೇಳಬಹುದು.

೨. **ವಾಚನ** :—ಶಿಕ್ಷಕನು ಪೂರ್ಣಪಾಠವನ್ನು ಭಾವಬೋಧಕವಾಗಿ ಓದಿ ತೋರಿಸುವದು.

೩. **ಮೌನವಾಚನ** :—ವಿದ್ಯಾರ್ಥಿಗಳು ಮನಸ್ಸಿನಲ್ಲಿಯೇ ಪಾಠವನ್ನು ಓದಿ ಕೊಳ್ಳುವದು. ಆಗ ಶಿಕ್ಷಕನು ಅವರಿಗೆ ನೆರವಾಗಬೇಕು. ಪಾಠದಲ್ಲಿ ಕಠಿಣ ಶಬ್ದಗಳು ಕಿಚ್ಚಾಗಿದ್ದರೆ ಹಾಗು ಅವುಗಳಿಗೆ ಪ್ರತಿಶಬ್ದ ಹೇಳಿ ಅರ್ಥಜ್ಞಾನ ಮಾಡಿಕೊಡುವದು ಸಾಧ್ಯವಿದ್ದರೆ ಅದನ್ನು ಕರೇಹಲಗೆಯ ಮೇಲೆ ಬರೆದಿಡುವದು, ಬಾಲಕರು ಅದನ್ನು ತೋಶದಂತೆ ಉಪಯೋಗಿಸಿಕೊಳ್ಳಬೇಕು.

೪. **ಅರ್ಥವಿವರಣೆ**:— ಶಿಕ್ಷಕನು ಬಾಲಕರಿಗೆ ಕಠಿಣವೆನಿಸಬಹುದಾದ ಮುಖ್ಯ ಮಾತುಗಳನ್ನು ಗೊತ್ತುಮಾಡಿಕೊಂಡು ಆ ವಿಷಯದಲ್ಲಿ ಅವರಿಗಿರುವ ಜ್ಞಾನವನ್ನು ತಿಳಿದುಕೊಂಡು ಅವರ ಜ್ಞಾನದಲ್ಲಿರುವ ಕೊರತೆಗಳನ್ನು ದೂರವಾಡುವದು.

೫. **ಉಪಸಂಹಾರ**:— ಈ ಪಾಠದಲ್ಲಿ ಕಲಿತಿರುವ ಹೆಚ್ಚಿನ ಸಂಗತಿಗಳನ್ನು ಬಾಲಕರ ಲಕ್ಷ್ಯಕ್ಕೆ ತಂದುಕೊಟ್ಟು ಅದನ್ನು ದೃಢಪಡಿಸುವದು. ಈ ಮೆಟ್ಟಿನಲ್ಲಿ ಅವಶ್ಯವಿದ್ದಾಗ ಪಾಠದ ಸಾರಾಂಶವನ್ನು ಹುಡುಗರಿಂದ ಕೇಳಿಕೊಳ್ಳಬಹುದು. ಮಹತ್ವದ ಕಠಿಣ ಶಬ್ದಗಳನ್ನೂ, ವಾಕ್ಯಖಂಡಗಳನ್ನೂ ಉಪಯೋಗಿಸಿ ವಾಕ್ಯಗಳನ್ನು ರಚಿಸಲು ಹೇಳಬಹುದು. ಹೆಚ್ಚು ಮಹತ್ವದ ವಿಷಯವಿದ್ದಾಗ ಪಾಠದ ಸಾರಾಂಶವನ್ನೂ ಬರೆದು ಕೊಂಡು ಬರಲು ಹೇಳಬಹುದು.

ಸಂಜೆಯ ರವಿ.

ಸಂಜೆಯ ರಂಜಿಪ ಸೂರ್ಯನ ತರುವೆನು । ಕೈಬಿಡು ಹೋಗುವೆ ನಾನಮ್ಮ,
ಚಿನ್ನದ ಚಂಡನು ಕೈವಶಮಾಡುವೆ । ಅಂಜದೆ ಅನುಮತಿಯೀಯಮ್ಮ ॥೧॥
ಉದಯಾಕಾಶದೊಳಾತನು ಶೋಭಿಸೆ । ಬೇಡಿದೆನಾನಿನ್ನನುಮತಿಯ
ಚಳಿಯಿದೆ, ಮಂಜಿದೆ, ಕಲ್ಲಿದೆ, ಮುಳ್ಳಿದೆ, ಘೋರಾರಣ್ಯಗಳಿವೆಯೆಂದೆ ॥೨॥
ಹಗಲೊಳಗಾತನು ಬೆದರುತಲೇರಿದ । ಬರುವೆನು ನಾನೆಂಬಾಭಯಕೆ
ಗಿರಿಗಳನಿಳಿದಿಳಿದಡಗಲು ಪೋಪನು । ಮುಖಕಂಪಾಗಿದೆ ನೋಡಮ್ಮ ॥೩॥
ಬುತ್ತಿಯ ಕೊಡು ಮೇಣೊಂದೇಣೆಯ ಕೊಡು । ಬಂಧಿಸಲೀಯೌಪಾಶಗಳ
ಸೇವಕರೇತಕೆ! ಒರ್ವನೆ ಹೋಗುವೆ । ತೃಣಕಾರ್ಯವನಾ ಸಾಧಿಸೆನೆ ॥೪॥
ಹೊಲಗಳ ದಾಟುವೆ ನದಿಗಳನೀಜುವೆ । ಗಿರಿಗಳನೇರುತ ಹೋಗುವೆನು
ದಾರಿಯಬಂಧಿಪ ಮೃಗಗಳ ಸದೆಯುತ । ಅಸ್ತಮಗಿರಿಯನು ಸೇರುವೆನು ॥೫॥

ಏಣಿಯಮೇಲೇರುತಲಾ ಸೂರ್ಯನ । ಕರಗಳಬಂಧಿಸುತೆಳೆತರುವೆ
ನಮ್ಮನೆಯಲ್ಲಿಯೇ ಆಮೇಲಿರುವನು । ಎನ್ನೊಡನಾಡುತ ನಲಿಯುವನು ॥೬॥

ನಿನ್ನನು 'ಅವ್ವಾ' ಎನ್ನುತಕರೆವನು । ನನ್ನನು 'ಅಣ್ಣಾ' ಎನ್ನುವನು
ನಾವೀರ್ವರು ಒಂದೇ ಹಾಸಿಗೆಯೊಳು । ಮಲಗುತಲೇಳುವೇನೇನಮ್ಮ ॥೭॥

ತಾಯಿಯು ಮಗನಾ ಮುದ್ದಿನನುಡಿಗಳ । ಲಾಲಿಸಿ ಚುಂಬಿಸುತುಸುರಿದಳು
ಕಂದಾ! ಎನ್ನಯ ಸೂರ್ಯನು ನೀನಿರೆ । ಜಗದಾಸೂರ್ಯನು ಎನಗೇಕೆ ॥೮॥

ಈ ಕವಿತೆಯು "ಕೊಳಲು" ಎಂಬ ಗ್ರಂಥದಲ್ಲಿ ಪ್ರಕಟವಾಗಿರುವದು. ಅದನ್ನು ಆಧುನಿಕ ಕವಿತಾಕೋವಿದರಾದ ಶ್ರೀಮಾನ್ ಕೆ. ವ್ಹಿ. ಪುಟ್ಟಪ್ಪನವರು ರಚಿಸಿರುವರು. ಇದು ರಸಭಾವಗಳಿಂದ ಪರಿಪೂರ್ಣವಾಗಿರುವದಲ್ಲದೆ ಚಿಕ್ಕಮಕ್ಕಳಿಗೂ ಮನೋರಂಜಕವಾಗಿರುವದು.

ಈ ಕವಿತೆಯನ್ನು ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜಕ್ಕೆ ಹೊಂದಿದ್ದ ಪ್ರಾಕ್ಟಿಸಿಂಗಸ್ಕೂಲಿನಲ್ಲಿರುವ ಶ್ರೀಮತಿ ಪಾರ್ವತೆವ್ವಾ ಕಟ್ಟೀಮತ ಎಂಬವರು ಳನೇ ಇಯತ್ತೆಯ ಬಾಲಕಿಯರಿಗೆ ಕಲಿಸಿದರು. ಇಂಥ ಸುಲಭ ಕವಿತೆಗಳನ್ನು ಮಕ್ಕಳಿಗೆ ಬೋಧವಾಗುವಂತೆಯೂ ಮನೋರಂಜನವಾಗುವಂತೆಯೂ ಹೇಗೆ ಕಲಿಸಬೇಕೆಂಬದನ್ನು ಇವರು ಚೆನ್ನಾಗಿ ನಿದರ್ಶಿಸಿದರು.

ಈ ಪಾಠಕ್ಕಾಗಿಯೇ ಅವರೊಂದು ಚಿತ್ರವನ್ನು ತಯಾರಿಸಿಕೊಂಡಿದ್ದರು. ಅದರಲ್ಲಿ ಸೂರ್ಯನು ಪಶ್ಚಿಮಗಿರಿಯನ್ನೇರಿ ಆಡಗುವ ನೋಟವು ಒಳ್ಳೇ ಚೆನ್ನಾಗಿ ತೋರುತ್ತಿತ್ತು. ಗಿರಿ, ನದಿ, ಹೊಲ ಮೊದಲಾದವುಗಳನ್ನು ಯಥಾಯೋಗ್ಯವಾಗಿ ಚಿತ್ರಿಸಿದ್ದರು. ಮನೆಯ ಹೊರಗಿನ ಕಟ್ಟೆಯ ಮೇಲೆ ತಾಯಿಯು ತನ್ನ ಚಿಕ್ಕ ಮಗನನ್ನು ಬಳಿಯಲ್ಲಿಯೇ ನಿಲ್ಲಿಸಿಕೊಂಡು ಮಾತಾಡುವದನ್ನೂ ಚಿತ್ರನಲ್ಲಿ ತೋರಿಸಿದ್ದರು.

ಶಿಕ್ಷಿಕೆಯರು ಈ ಕವಿತೆಯ ಎಲ್ಲ ನುಡಿಗಳನ್ನು ೨ ಸಾರೆ ಒಳ್ಳೇ ಸುಸ್ವರದಿಂದ ಹಾಡಿ ತೋರಿಸಿದರು. ಬಳಿಕ ಬಾಲಕಿಯರ ಕಡೆಯಿಂದ ಸ್ವರ ಸಮ್ಮೇಲನದಿಂದ ಅನ್ನಿಸಿಕೊಂಡರು. ಆಗ ಮಕ್ಕಳು ನಡುನಡುವೆ ಅಭಿನಯಗಳಿಂದ ತಮಗೆ ತಿಳಿದ ಭಾವವನ್ನು ತೋರ್ಪಡಿಸಿದರು.

ಆ ಮೇಲೆ ಮಗನೂ ತಾಯಿಯೂ ಆಡಿದ ಬೇರೆ ಬೇರೆ ಮಾತುಗಳ ಸಾರಾಂಶವನ್ನು ಕುರಿತು ಮಕ್ಕಳನ್ನು ಕೇಳಲು ಅವರು ತಮ್ಮ ಸ್ವಂತ ಮಾತಿನಲ್ಲಿ ಸಮರ್ಪಕವಾಗಿ ಉತ್ತರಗಳನ್ನು ಕೊಟ್ಟರು. ಆದರೂ ಅನುಮತಿ, ಉದಯಾಕಾಶ, ಘೋರಾರಣ್ಯ ಏಣಿ, ತೃಣಕಾರ್ಯ, ಅಸ್ತಮಗಿರಿ, ಕರಗಳ ಬಂಧನೆ, ಉಸುರು ಮೊದಲಾದ ಶಬ್ದಗಳ

ಅರ್ಥವನ್ನು ಸ್ಪಷ್ಟವಾಡಿ ಹೇಳಿ ವಿಷಯವನ್ನು ತಿಳಿಸಿಕೊಟ್ಟರು. ಬಳಿಕ ಇಡೀ ಕವಿತಾ ಕಥೆಯನ್ನು ಒಬ್ಬಿಬ್ಬರ ಕಡೆಯಿಂದ ಹೊರಡಿಸಿಕೊಂಡರು. ಕೊನೆಗೆ ತಾಲಕ್ಕೂ ಸ್ವರಕ್ಕೂ ಅನುಸರಿಸಿ ಸ್ವರಸಮ್ಮೇಲನದಿಂದ ಮಕ್ಕಳಿಂದ ಮತ್ತೊಮ್ಮೆ ನುಡಿಗಳನ್ನು ಎನ್ನಿಸಿಕೊಂಡು ಪಾಠವನ್ನು ಮುಗಿಸಿದರು.

ಇನ್ನು ಕವಿತೆಗಳನ್ನು ಇದು ವರೆಗೆ ನಾವು ಪದಚ್ಛೇದ-ಶಬ್ದಾರ್ಥ-ವಾಕ್ಯಾರ್ಥ-ಭಾವಾರ್ಥಗಳನ್ನು ತಿಳಿಸಿಕೊಟ್ಟು ಕಲಿಸುತ್ತಿದ್ದೆವು. ಈ ಪದ್ಧತಿಯಲ್ಲಿ ವಿಶೇಷವಾಗಿ ಮಕ್ಕಳು ಸ್ವತಃ ಕಲಿತುಕೊಳ್ಳಲು ಪ್ರಯತ್ನಮಾಡುವ ರೂಢಿಯಿರುವದಿಲ್ಲ. ಶಿಕ್ಷಕರು ಹೇಳಿಕೊಟ್ಟದ್ದನ್ನು ಮಾತ್ರ ಮಕ್ಕಳು ಕಂಠಪಾಠ ಮಾಡಿ ಮಾಡಿ ಕವಿತೆಗಳನ್ನು ಕಲಿಯುವರು. ಆದರೆ ಈ ಹೊಸ ಪದ್ಧತಿಯಿಂದ ಕವಿತೆಯೊಳಗಿನ ಭಾವಗಳನ್ನು ಮಕ್ಕಳು ತಾವಾಗಿಯೇ ಅರಿತುಕೊಳ್ಳಲು ಶ್ರಮಬಡುವರು. ಈ ರೀತಿಯೇ ಮಾನಸಶಾಸ್ತ್ರಕ್ಕೂ ಶಿಕ್ಷಣಶಾಸ್ತ್ರಕ್ಕೂ ಸಮ್ಮತವಾದ ಸಂಗತಿಯೆಂಬದು ಈಗ ಎಲ್ಲರಿಗೂ ಮನವರಿಕೆಯಾಗಿರುವದು. ತಮ್ಮ ಮಕ್ಕಳಿಗೆ ಈ ಪದ್ಧತಿಯು ಸರಿಯಾಗುವದೆಂದು ಕಂಡುಬಂದ ಶಿಕ್ಷಕ ಶಿಕ್ಷಿಕೆಯರು ಇದನ್ನು ಅನುಸರಿಸಬಹುದು.

ಶಿಕ್ಷಕರಿಗಾಗಿ ಮಾನಸಶಾಸ್ತ್ರ.

ಲೇಖಕರು:— ಮೆ॥ ಕೆ. ಎಸ್. ವಕೀಲ ಬಿ. ಏ., ಎಲ್. ಟಿಡಿ. (ಲೀಡ್ಸ್)
ಎಫ್. ಆರ್. ಜಿ. ಎಸ್. ಐ. ಇ. ಎಸ್. ಎಜ್ಯುಕೇಶನಲ್ ಇನ್ಸಪೆಕ್ಟರ, ದ. ಭಾಗ.

ಸಾಲೆಯಲ್ಲಿ ಅಭ್ಯಾಸಪತ್ರಿಕೆಯಲ್ಲಿ ಹೇಳಿದಂತೆ ಇಂತಿಷ್ಟು ವಿಷಯಗಳನ್ನು ಕಲಿಸುವದಿರುವದಷ್ಟೇ. ಇದೇ ಶಿಕ್ಷಣವು ಎಂದು ಈ ವರೆಗೆ ಭಾವನೆ ಇತ್ತು. ಆದರೆ ಇತ್ತಲಾಗಿ ಈ ನಮ್ಮ ತಿಳುವಳಿಕೆಯಲ್ಲಿ ಬದಲಾವಣೆಯಾಗಿರುವದು. ಈಗ ಶಿಕ್ಷಣವೆಂದರೆ ವಿಷಯಗಳನ್ನು ಕಲಿಸುವದು ಎಂಬ ಸಂಕುಚಿತ ಅರ್ಥವು ಆಗುವದಿಲ್ಲ. ಶಿಕ್ಷಕನು ವಿಷಯಗಳನ್ನು ಮಾತ್ರ ಕಲಿಸುವದಿಲ್ಲ; ಹುಡುಗನಿಗೂ ಕಲಿಸುತ್ತಿರುವನು ಎಂಬದು ಲಕ್ಷ್ಯದಲ್ಲಿ ಬರತಕ್ಕದ್ದು. ಈ ಮಾತು ಈಗಿನ ಕಾಲದ ಪ್ರತಿಯೊಬ್ಬ ಶಿಕ್ಷಕನಿಗೆ ಗೊತ್ತೇ ಇರುವದು. ಅಂದರೆ ಸದ್ಯದ ಶಿಕ್ಷಕನಿಗೆ ತಾನು ಕಲಿಸಬೇಕಾದ ವಿಷಯಗಳು ಇಂತಿಷ್ಟು ಇರುವವು ಎಂಬದು ಗೊತ್ತಾದರೆ ತೀರಲಿಲ್ಲ. ತಾನು ಕಲಿಸಬೇಕಾಗಿರುವ ಹುಡುಗನ ಬಗ್ಗೆಯೂ ಅವನಿಗೆ ಮಾಹಿತಿಯಿರಬೇಕು. ಇನ್ನು ಹುಡುಗನ ಬಗ್ಗೆ ಮಾಹಿತಿಯೆಂದರೆ ಅವನ ಹೆಸರು, ತಂದೆಯ ಹೆಸರು, ಮನೆಹೆಸರು, ಅವನಿರುವ ಊರು ಇಷ್ಟೇ ಅಲ್ಲ;

ಆದರೆ ಅವನ ಮನಸ್ಸು ಸಾಮಾನ್ಯವಾಗಿ ಯಾವ ಯಾವ ಕಾರ್ಯಗಳನ್ನು ಹ್ಯಾಗೆ ಮಾಡುವದು ? ಎಂಬದರ ಜ್ಞಾನವು. ಅಂದರೆ ಹುಡುಗನ ಮನಸಿಗೂ ಅವನು ಕಲಿಯುವ ವಿಷಯಕ್ಕೂ ಶಿಕ್ಷಕನು ಸಂಬಂಧವನ್ನು ಏರ್ಪಡಿಸಬೇಕು. ಇಷ್ಟರಿಂದಲೂ ಅವನ ಕೆಲಸವು ಪೂರ್ಣವಾಗುವದಿಲ್ಲ. ಅವನು ತನ್ನ ಮನಸಿಗೂ ಆ ಹುಡುಗನ ಮನಸಿಗೂ ಸಂಬಂಧವನ್ನು ಉಂಟುಮಾಡಬೇಕಾಗುವದು. ಹೀಗೆ ಮಾಡುವದರಿಂದ ಇವರಿಬ್ಬರ ಮನಸುಗಳ ನಡುವೆ ಕ್ರಿಯೆಪ್ರತಿಕ್ರಿಯೆಗಳ ನಿಕಟ ಸಂಬಂಧವು ಉಂಟಾಗುವದು. ಈ ಕ್ರಿಯೆಪ್ರತಿಕ್ರಿಯೆಗಳು ವರ್ಗದಲ್ಲಿ ಶಿಕ್ಷಣ ಕಾರ್ಯವು ನಡೆದಿರುವ ವರೆಗೆ ಒಂದೇಸವನೆ ಸಾಗಿರಬೇಕು. ಸರ ಜಾನ್ ಆಡಾಮ್ಸ ಎಂಬ ಶಿಕ್ಷಣಶಾಸ್ತ್ರಜ್ಞನು ಈ ಮಾತನ್ನು ಮನದಟ್ಟಾಗುವಂತೆ ಹೇಳಿರುವನು. ಅತನು ಅಂದದ್ದೇನೆಂದರೆ:— ಶಿಕ್ಷಕನು ತನ್ನ ಮನಸು ಹಾಗು ವಿದ್ಯಾರ್ಥಿಯ ಮನಸು ಇವುಗಳನ್ನು ಎರಡು ಜ್ಞಾನವಾಹಕ ಕೇಂದ್ರಗಳಾಗಿ ಮಾಡತಕ್ಕದ್ದು. ಅಂದರೆ ಜ್ಞಾನವೆಂಬದು ಶಿಕ್ಷಕನೆಂಬ ಕೇಂದ್ರದಿಂದ ವಿದ್ಯಾರ್ಥಿಯ ಕೇಂದ್ರಕ್ಕೆ ಹರಿದುಹೋಗಿ, ವಿದ್ಯಾರ್ಥಿ ಕೇಂದ್ರದಿಂದ ಮರಳಿ ಶಿಕ್ಷಕ ಕೇಂದ್ರಕ್ಕೆ ಹರಿದು ಬರುತ್ತಿರಬೇಕು. ಇದನ್ನು ಲಕ್ಷ್ಯಕ್ಕೆ ತಂದು ಕೊಂಡರೆ ಶಿಕ್ಷಕನು ದಿನಾಲು ತೊಡಗಿರುವ ಶಿಕ್ಷಣಕಾರ್ಯವು ಅಂದರೆ ಕಲಿಸೋಣವು ಸಂಬಂಧಗಳನ್ನು ಉಂಟುಮಾಡುವ ಕೆಲಸವೆಂಬದು ಸ್ಪಷ್ಟವಾಗುವದು. ಈ ಸಂಬಂಧಗಳು ಎರಡು ತರದವಿರುವವು. (೧) ಕಲಿಸಬೇಕಾದ ವಿಷಯ ಹಾಗು ವಿದ್ಯಾರ್ಥಿಯ ಮನಸ್ಸು ಇವುಗಳ ನಡುವಿನ ಸಂಬಂಧ (೨) ಶಿಕ್ಷಕನ ಮನಸ್ಸು ಹಾಗು ವಿದ್ಯಾರ್ಥಿಗಳ ಮನಸ್ಸು ಇವುಗಳ ನಡುವಿನ ಸಂಬಂಧ.

ಇನ್ನು ಇವುಗಳಲ್ಲಿ ಮೊದಲಿನ ಸಂಬಂಧವನ್ನು ಅಂದರೆ ವಿದಾರ್ಥಿಗಳ ಮನಸ್ಸು ಹಾಗು ಕಲಿಸಬೇಕಾದ ವಿಷಯ ಇವುಗಳಲ್ಲಿ ಸಂಬಂಧವನ್ನು ಉಂಟುಮಾಡಬೇಕಾದರೆ ಶಿಕ್ಷಕನು ತಾನು ಕಲಿಸುತ್ತಿರುವ ವಿಷಯದ ಬಗ್ಗೆ ಒಳ್ಳೇ ಜ್ಞಾನವನ್ನು ಮಾಡಿಕೊಂಡಿದ್ದರೆ ತೀರದು. ಆ ವಿಷಯದ ಬಗ್ಗೆ ಹುಡುಗನಿಗೆ ಈ ಮೊದಲೇ ಏನೇನು ಗೊತ್ತಿರುವದೆಂಬದನ್ನು ಶಿಕ್ಷಕನು ಅರಿತಿರಲಿಕ್ಕೆಬೇಕು. ಅಂದರೆ ತಾನು ಹೊಸ ವಿಷಯವನ್ನು ಯಾವ ಮೆಟ್ಟಿನಲ್ಲಿ ಆರಂಭಿಸಬೇಕೆಂಬದು ಅವನಿಗೆ ಗೊತ್ತಾಗುವದು. ಇದರಿಂದ ಶಿಕ್ಷಣದ ಮೊದಲನೆಯ ಹಾಗು ಸಾರಭೂತವಾದ ತತ್ವವು ನಮಗೆ ಗೊತ್ತಾಗುವದು. ಅದು ಯಾವದೆಂದರೆ:— " ಗೊತ್ತಿರುವದರಿಂದ ಗೊತ್ತಿಲ್ಲದ್ದರ ಕಡೆಗೆ ಸಾಗಿರಿ; " ಆದರೆ ಗೊತ್ತಿರುವದರಿಂದ ಆರಂಭಿಸಿ ಗೊತ್ತಿಲ್ಲದ್ದರ ಕಡೆಗೆ ಸಾಗಿ ಹೊಸ ಜ್ಞಾನವನ್ನು ಸಂಪಾದಿಸಲು ಹುಡುಗನಿಗೆ ಅನುವು ಮಾಡಿಕೊಡಬೇಕಾದರೆ ಶಿಕ್ಷಕನು ತಾನು ಉಪಯೋಗಿಸುವ ಉತ್ತೇಜಕಗಳನ್ನು ನಿಶ್ಚಯಿಸಿಕೊಳ್ಳಬೇಕು; ಅಂದರೆ ಈ ಉತ್ತೇಜಕಗಳು

ಸರಿಯಾದ ಪ್ರತಿಕ್ರಿಯೆಗಳನ್ನು ಹೊರಡಿಸುವಂಥವಿರಬೇಕು. ಉದಾಹರಣಾರ್ಥವಾಗಿ ತಾನು ಮಾಡಿಕೊಡಬೇಕಾದ ಮಾಹಿತಿಯು ಹುಡುಗರಿಗೆ ನಿಶ್ಚಿತವಾಗಿ ಆಗಬೇಕಾದರೆ ಅವರ ಮುಂದೆ ಅವಲೋಕನಾರ್ಥವಾಗಿ ಯಾವ ಪದಾರ್ಥಗಳನ್ನು ಇಡಬೇಕು, ಯಾವ ಪದಾರ್ಥಗಳನ್ನು ಅವರು ಉಪಯೋಗಿಸಿ ನೋಡಬೇಕು; ಈ ಅವಲೋಕನವನ್ನೂ ಉಪಯೋಗವನ್ನೂ ಅವರು ಕ್ಯಾಗೆ ಮಾಡಬೇಕು ಎಂಬವನ್ನು ಅಧ್ಯಾಪಕನು ಮೊದಲೇ ನಿಷ್ಕರ್ಷೆಮಾಡಿಕೊಳ್ಳಬೇಕಾಗುವದು.

ಇವರಿಂದ, ಶಿಕ್ಷಣಕ್ಕೆ ಆಧಾರಭೂತವಾದ ಇತರ ತತ್ವಗಳು ಹೊರಡುವವು. ಇವು ಯಾವವೆಂದರೆ— " ಸುಲಭವಾದದ್ದರಿಂದ ಕಠಿಣವಾದದ್ದಕ್ಕೂ ಸರಳವಾದದ್ದರಿಂದ ತೊಡಕುಳ್ಳದ್ದಕ್ಕೂ ಮೂರ್ತವಾದದ್ದರಿಂದ ಅಮೂರ್ತವಾದದ್ದಕ್ಕೂ ವಿಶೇಷ ಉದಾಹರಣಗಳಿಂದ ಸಾಮಾನ್ಯ ತತ್ವಕ್ಕೂ ಸಾಗಿರಿ. " ಈ ತತ್ವಗಳು ತೀರ ಸಾಮಾನ್ಯವಾದವು ಎಂದು ಅನಿಸುವವಷ್ಟೇ. ಆದಾಗ್ಯೂ ಇವು ಶಿಕ್ಷಣದ ಮೂಲತತ್ವಗಳೆಂದು ನಿಃಸಂಶಯವಾಗಿ ಹೇಳಬಹುದು. ಮನುಷ್ಯನ ಮನಸ್ಸು ಯಾವ ನಿಯಮಗಳಿಗನುಸಾರವಾಗಿ ಕೆಲಸಮಾಡುವದೆಂಬದನ್ನು ನಿರೀಕ್ಷಿಸಿ ಇವುಗಳನ್ನು ಗೊತ್ತುಮಾಡಿರುವರು.

ಮಗುವು ತನ್ನ ಸುತ್ತಲಿರುವ ಸೃಷ್ಟಿಯ ಬಗ್ಗೆ ಆರಂಭದ ಜ್ಞಾನವನ್ನು ತನ್ನ ಇಂದ್ರಿಯಗಳ ಮುಖಾಂತರವಾಗಿಯೇ ದೊರಕಿಸುವದೆಂಬದು ಎಲ್ಲರಿಗೂ ಗೊತ್ತಿರುವ ಮಾತು. ಅದು ತನ್ನ ಸುತ್ತಲಿರುವ ಸಂಗತಿಗಳಲ್ಲಿ ಕೆಲವನ್ನು ಲಕ್ಷ್ಯಕೊಟ್ಟು ನೋಡುವದು. ಇದರಿಂದ ಅದರ ಮನಸಿನಲ್ಲಿ ಕೆಲವು ಗ್ರಹಿಕೆ (ಪ್ರತ್ಯಕ್ಷಜ್ಞಾನ) ಉಂಟಾಗುವವೆಂದು ಮಾನಸಶಾಸ್ತ್ರಜ್ಞರು ಅನ್ನುವರು. ಈ ಗ್ರಹಿಕೆಗಳು ಮುಂದೆ ಅದರ ಮನಸಿನಲ್ಲಿ ಒಂದರಲ್ಲೊಂದು ಕೂಡಿ ಹೋಗುವವು. ಹೀಗಾಗುವದರಿಂದ ಜ್ಞಾನಾರ್ಜನೆಯು ವತ್ತೊಂದು ಹೆಚ್ಚಿನ ಮೆಟ್ಟಿಗೆ ಅದು ಬರುವದು; ಇದಕ್ಕೆ (appererception ಅಂದರೆ) ಪೂರ್ವಾಪರಜ್ಞಾನ ಸಂಗತಿ ಎಂಬ ಹೆಸರು; ಅಂದರೆ ಒಂದು ಪದಾರ್ಥವು ಇದೇ ಎಂದು ತಿಳಿದುಕೊಳ್ಳುವದು. ಉದಾಹರಣಾರ್ಥವಾಗಿ ನನ್ನ ಮುಂದೆ ಇರುವ ಈ ಸಾಮಾನು ಮೇಜು; ಮೇಜಿನಂತೆ ಕಾಣುತ್ತಿರುವ ಅಂದರೆ ಮೇಜನ್ನು ಹೋಲುವಂಥ ಆಕಾರ, ಪ್ರಮಾಣ ಮೊದಲಾದ ಲಕ್ಷಣಗಳಿಂದ ಕೂಡಿದ ಡೆಸ್ಕು ಮೊದಲಾದ ಪದಾರ್ಥಗಳಂತೆ ಕಂಡರೂ ಇದು ಡೆಸ್ಕು ಅಲ್ಲ ಡೆಸ್ಕಿನಿಂದ ಭಿನ್ನವಾದ ಮೇಜು ಎಂದು ತಿಳಿದುಕೊಳ್ಳುವದು. ಹೀಗೆ ಮಗುವಿನ ಮನಸ್ಸು ಸಾಮಾನ್ಯ ಕಲ್ಪನೆಗಳನ್ನು ಮಾಡಿಕೊಳ್ಳುತ್ತಿರುವಾಗ ಯಾವತ್ತೂ ಜ್ಞಾನದ ತಳಹದಿಯು ತಯಾರಾಗುತ್ತಿರುವದು. ಆದ್ದರಿಂದ ಹುಡುಗನು ಸಾಲೆಗೆ ಬರುವದಕ್ಕಿಂತ ಪೂರ್ವದ ಸ್ಥಿತಿಯಲ್ಲಿಯೂ ಸಾಲೆಗೆ ಬಂದ ಕೂಡಲೆಯೂ ಅವನು ಲಕ್ಷ್ಯಪೂರ್ವಕವಾಗಿಯೂ ಸ್ಪಷ್ಟವಾಗಿಯೂ ಪದಾರ್ಥಗಳನ್ನು

ಅವಲೋಕನ ಮಾಡುವ ಬಗ್ಗೆ ಬಹಳ ಎಚ್ಚರದಿಂದ ಇರಬೇಕು. ಈ ಜಾಗ್ರತೆಯನ್ನು ತೆಗೆದುಕೊಂಡರೆ ಆರಂಭದಿಂದ ಅವನಿಗಾಗುವ ಪದಾರ್ಥಗಳ ಗ್ರಹಿಕೆಗಳು ಪೂರ್ಣ ಸ್ಪಷ್ಟವಾದವಿದ್ದು ಅವನ್ನು ಹೋಲುವ ಭಾವನೆಗಳಿಂದ ಭಿನ್ನವಾದವು ಆಗುವವು. ಆದ್ದರಿಂದ ಹುಡುಗರು ಸಾಲೆಗೆ ಬಂದ ಆರಂಭದ ವರುಷಗಳಲ್ಲಿ ನಾವು ಕಲಿಸುವ ವಿಷಯಗಳನ್ನು ಅವರು ಅವಷ್ಟು ಮಟ್ಟಿಗೆ ನೋಡಿ ಕಲಿಯುತಕ್ಕದ್ದು ಅಂದರೆ ಪ್ರತ್ಯಕ್ಷ ಪದಾರ್ಥಗಳನ್ನೂ ಮೂರ್ತಸ್ವರೂಪದ ದೃಷ್ಟಾಂತಗಳನ್ನೂ, ನಕಾಶಗಳು, ಪಟಗಳು, ಚಿತ್ರಗಳು, ಲ್ಯಾಂಟರ್ನದ ಸ್ಲಾಯಿಡಗಳು ಹಾಗು ಸಿನೇಮಾದ ಚಿತ್ರಗಳು ಇವುಗಳನ್ನೂ ಅವಲೋಕನ ಮಾಡಿಸಿ ಆರಂಭದ ಪಾಠಗಳನ್ನು ಸಾಗಿಸಬೇಕು.

ಜ್ಞಾನವನ್ನು ಸಂಪಾದಿಸುವಾಗ ಮನುಷ್ಯನ ಮನಸ್ಸು ಮಾಡುವ ಇದಕ್ಕೂ ಹೆಚ್ಚಿನ ಕಾರ್ಯವೆಂದರೆ ಕಲ್ಪನೆಯು. ಇದು ಹಿಂದೆ ಗ್ರಹಣಮಾಡಿ ನಿಶ್ಚಯ ಮಾಡಿಕೊಂಡ ಪ್ರತ್ಯಕ್ಷಜ್ಞಾನಗಳ ನೆರವಿನಿಂದ ನಿಜವಾಗಿ ಇರುವ ಇಲ್ಲವೆ ಇಲ್ಲದಿರುವ ವಸ್ತುಗಳ ಚಿತ್ರಗಳನ್ನು ರೇಖಿಸುವಮ್. ಹುಡುಗನು ದಿವಸಾನುದಿವಸ ತನ್ನ ಸುತ್ತಲಿರುವ ಮೂರ್ತವಾದ ಸೃಷ್ಟಿಯಲ್ಲಿ ಕಾಣುತ್ತಿರುವ ವಸ್ತುಗಳ ಜ್ಞಾನವನ್ನು ದೊರಕಿಸುತ್ತಿರುವನು. ಈ ಕೆಲಸದಲ್ಲಿ ಕಲ್ಪನೆಯ ಭಾಗವು ಬಹಳ ಮಹತ್ವದ್ದಿರುವದು. ತನ್ನ ಸುತ್ತಲಿರುವ ವಸ್ತುಗಳ ಜ್ಞಾನವನ್ನು ಕೂಸು ದಿವಸಾನುದಿವಸ ಹೆಚ್ಚಿಸುತ್ತ ಹೋಗುವಷ್ಟೇ. ಈ ಕಾರ್ಯವು ಹ್ಯಾಗೆ ನಡೆಯುವದೆಂದರೆ, ಅದು ತನಗಾದ ಗ್ರಹಿಕೆಗಳ ನೆನಪು ಮಾಡಿಕೊಂಡು ಅವುಗಳ ಸಹಾಯದಿಂದ ಹೊಸ ಕಲ್ಪನೆಗಳನ್ನು ಕಟ್ಟಿಕೊಳ್ಳುವದು; ಅಂದರೆ ಅದರ ಕಲ್ಪನಾಶಕ್ತಿಯು ಹಿಂದೆ ಆದ ಜ್ಞಾನವನ್ನು ಮತ್ತೊಮ್ಮೆ ಮನಸಿನ ಮುಂದೆ ತರಲಿಕ್ಕೂ ಇವುಗಳಿಂದ ಹೊಸ ಕಲ್ಪನೆಗಳನ್ನು ರಚಿಸಿಕೊಳ್ಳಲಿಕ್ಕೂ ಸಹಾಯವಾಗುವದು. ಹುಡುಗರಲ್ಲಿರುವ ಈ ಕಲ್ಪನಾಶಕ್ತಿಯ ಉಪಯೋಗವನ್ನು ಶಿಕ್ಷಕನು ಅವಷ್ಟು ಹೆಚ್ಚಿಗೆ ಮಾಡಿಕೊಳ್ಳತಕ್ಕದ್ದು; ಹಾಗು ಚಿತ್ರಕಲೆ (ಡ್ರಾಯಿಂಗ), ವರ್ಣಲೇಖನ (ಬಣ್ಣ ಕೊಡೋಣ), ಕಥೆ ಹೇಳೋಣ, ಬಾಯಿಂದ ಹಾಗು ಬರಹ ರೂಪವಾಗಿ ನಿಬಂಧಗಳನ್ನು ರಚಿಸಹಚ್ಚೋಣ, ಒಳ್ಳೇ ಗದ್ಯ ಪದ್ಯಗಳ ಭಾಗಗಳನ್ನು ಓದಿಸೋಣ ಇವೇ ಮೊದಲಾದ ಕಾರ್ಯಗಳನ್ನು ಮಾಡಿಸಿ ಕಲ್ಪನಾಶಕ್ತಿಯು ಅಭಿವೃದ್ಧಿ ಹೊಂದಲಿಕ್ಕೆ ಉತ್ತೇಜನ ಕೊಡತಕ್ಕದ್ದು. ಜ್ಞಾನವನ್ನು ಗಳಿಸುವ ಕ್ರಮದಲ್ಲಿ ಮನಸ್ಸು ಮಾಡುವ ಕಾರ್ಯದ ಮೂರನೆಯ ಮೆಟ್ಟಿಗೆ 'ವಿಚಾರ' ಅನ್ನುವರು. ಅಂದರೆ ಈ ಮೊದಲೇ ಕೂಡಿಹಾಕಿದ ಗ್ರಹಿಕೆಗಳನ್ನೂ ಸಾಮಾನ್ಯ ಕಲ್ಪನೆಗಳನ್ನೂ ಹೋಲಿಸಿ ನೋಡಿ ಅಥವಾ ಅವುಗಳಲ್ಲಿರುವ ವ್ಯತ್ಯಾಸವನ್ನು ಲಕ್ಷ್ಯಕ್ಕೆ ತಂದು ಹಾಗು ಅವುಗಳ ಅನ್ಯೋನ್ಯ ಸಂಬಂಧವನ್ನು ಗೊತ್ತು ಹಚ್ಚಿ ವಿಶೇಷ ಉದಾಹರಣಗಳಿಂದ ಸಾಮಾನ್ಯ ಸಂಗತಿಗಳನ್ನೂ ಸಾಮಾನ್ಯ ಸಂಗತಿಗಳಿಂದ ಅವುಗಳಲ್ಲಿ ಅಡಗಿದ ವಿಶೇಷ ಸಂಗತಿಯನ್ನೂ ಅನುಮಾನ

ದಿಂದ ಕಂಡುಹಿಡಿಯೋಣವು. ಜ್ಞಾನವನ್ನು ಸಂಪಾದಿಸುವ ಕಾರ್ಯದಲ್ಲಿ ಇದು ಕೊನೆಯ ಮೆಟ್ಟಿಲಾಗಿರುವದು. ಆದ್ದರಿಂದ ಆರಂಭದ ಮೆಟ್ಟಿಲುಗಳಾದ ಗ್ರಹಿಕೆ ಕಲ್ಪನೆ ಇವುಗಳ ಸಹಾಯದಿಂದ ನಿಶ್ಚಯಾತ್ಮಕವಾದ ಸಾಮಾನ್ಯ ಕಲ್ಪನೆಗಳನ್ನು ಮಾಡಿಕೊಳ್ಳಲಿಕ್ಕೂ ಈ ಜ್ಞಾನವನ್ನು ತಮ್ಮ ಪ್ರತಿನಿತ್ಯದ ಅನುಭವದಲ್ಲಿ ಒದಗುವ ಹೊಸ ಹೊಸ ಸಂಗತಿಗಳಲ್ಲಿ ಉಪಯೋಗ ಮಾಡಿಕೊಳ್ಳಲಿಕ್ಕೂ ಹುಡುಗರಿಗೆ ಅನುವು ಮಾಡಿಕೊಡುವದು ಅತ್ಯಂತ ಮಹತ್ವದ ಮಾತಾಗಿರುವದು. ಆದ್ದರಿಂದ ಒಂದು ಪಾಠದ ಕೊನೆಯಲ್ಲಾಗಲಿ ಇಲ್ಲವೆ ಪಾಠದ ಒಂದು ಮೆಟ್ಟಿನಲ್ಲಾಗಲಿ ಹುಡುಗರು ಕಲಿತ ಹೊಸ ಜ್ಞಾನದ ಉಪಯೋಗವನ್ನು ಹೊಸ ಹೊಸ ಸಂಗತಿಗಳಿಗೆ ಸಂಬಂಧಿಸಿ ಉಪಯೋಗಮಾಡಿಕೊಳ್ಳಲಿಕ್ಕೆ ಅವರಿಗೆ ಪ್ರಸಂಗಗಳನ್ನು ತಂದುಕೊಡತಕ್ಕದ್ದು. ಇಷ್ಟೇ ಅಲ್ಲ; ಸಾಲೆಯಲ್ಲಿಯೂ ಮನೆಯಲ್ಲಿಯೂ ಹೊರಗೆ ಜಗತ್ತಿನಲ್ಲಿಯೂ ದಿನಾಲು ಅವರಿಗೆ ಉಂಟಾಗುತ್ತಿರುವ ಹೊಸ ಪರಿಸ್ಥಿತಿಗಳಲ್ಲಿ ಈ ಜ್ಞಾನವನ್ನು ಉಪಯೋಗ ಮಾಡಿಕೊಳ್ಳಲಿಕ್ಕೆ ಅನುವು ಮಾಡಿಕೊಡಬೇಕು. ಹೀಗೆ ಮಾಡುವದರಿಂದ ಹುಡುಗರಲ್ಲಿ ಸ್ವತಂತ್ರಬುದ್ಧಿ ಚಟುವಟಿಕೆಗಳನ್ನು ಉಂಟುಮಾಡಲಿಕ್ಕೆ ಬರುವದು. ಅವರ ವಿಚಾರಗಳು ಸರಳವಾದವಾಗುವವು. ವಿಲಕ್ಷಣವಾದ ಪ್ರಸಂಗಗಳಲ್ಲಿಯೂ ಹೊಸ ಹೊಸ ಪರಿಸ್ಥಿತಿಗಳಲ್ಲಿಯೂ ನಿಶ್ಚಯಾತ್ಮಕವಾದ ಕಾರ್ಯಪ್ರವೃತ್ತಿಯಲ್ಲಿ ಉದ್ಯುಕ್ತರಾಗಲಿಕ್ಕೆ ಅವರಿಗೆ ಬರುವದು. ಹುಡುಗರ ವಿಚಾರಶಕ್ತಿಯನ್ನು ಬಲಪಡಿಸಲಿಕ್ಕೆ ಶಿಕ್ಷಕನು ಸಾಲೆಯಲ್ಲಿ ಕಲಿಸುವ ಎಲ್ಲ ವಿಷಯಗಳಲ್ಲಿ ಇತಿಹಾಸ ಭೂಗೋಲ, ಗಣಿತ, ಶಾಸ್ತ್ರೀಯ ವಿಷಯ ಇವು ಬಹಳ ಮಹತ್ವವಾದವಿರುವವು. ಆದ್ದರಿಂದ ತಾವು ಪ್ರತ್ಯಕ್ಷವಾಗಿ ನೋಡಿದಂಥ ಅಥವಾ ನೋಡಬಹುದಾದಂಥ ಎಲ್ಲ ಸಂಗತಿಗಳ ಬಗ್ಗೆ ಸ್ವತಂತ್ರ ರೀತಿಯಿಂದ ವಿಚಾರ ಮಾಡಲು ಹುಡುಗರಿಗೆ ಬೇಕಾದಷ್ಟು ಅನುವು ದೊರೆಯುವಂತೆ ಈ ವಿಷಯಗಳನ್ನು ಶಿಕ್ಷಕನು ವರ್ಗದಲ್ಲಿ ಸಾಗಿಸತಕ್ಕದ್ದು.

ಮೇಲಿನ ವಿವರಣೆಯಲ್ಲಿ ಜ್ಞಾನವರ್ಧನೆಯ ಕೇವಲ ಸಾಮಾನ್ಯ ರೂಪರೇಷೆಯು ಮಾತ್ರ ಬಂದಿರುವದು. ಇನ್ನು ಹುಡುಗರು ವರ್ಗದಲ್ಲಿ ಸ್ವಪ್ರಯತ್ನದಿಂದ ಕಲಿಯುವಂತೆ ಮಾಡಲಿಕ್ಕೆ ಅವರಲ್ಲಿ ಸ್ವಾಭಾವಿಕವಾಗಿ ತೋರುತ್ತಿರುವ ಹುಟ್ಟುಭಾವನೆಗಳನ್ನೂ ಪ್ರೇರಣೆಗಳನ್ನೂ ಶಿಕ್ಷಕನು ಹೆಚ್ಚಾಗಿ ಹ್ಯಾಗೆ ಉಪಯೋಗಿಸಬಹುದೆಂಬದನ್ನು ಹೇಳಬೇಕಾಗಿದೆ. ಈ ಹುಟ್ಟುಭಾವನೆಗಳೂ ಪ್ರೇರಣೆಗಳೂ ಹಲವು ಬಗೆಯವಿರುವವು. ಇವುಗಳಲ್ಲಿ ಶಿಕ್ಷಣಕಾರ್ಯದಲ್ಲಿ ಅತೀಯ ಮಹತ್ವವಾದವು ಕೆಲವಿರುವವು. ಇವು ಯಾವವೆಂದರೆ, ಸ್ವಾಭಿಮಾನ ಅಥವಾ ಆತ್ಮಪ್ರೀತಿ, ಯಾಜಮಾನ್ಯ ಅಥವಾ ಸ್ವತ್ತಿನಮೇಲೆ ಪ್ರೀತಿ, ನಾಯಕತ್ವ ಅಥವಾ ಒಡೆತನದ ಆಶೆ, ಹೊಡೆದಾಟದ ಹುರುಪು ಹಾಗು ಭಯ. ತಾನು, ತನ್ನದು, ತನ್ನ ನೇತೃತ್ವದಲ್ಲಿ ಇರುವಂಥದು, ತಾನು ಗೆದ್ದು ತಂದದ್ದು ಇವೆಲ್ಲ

ಹೆಚ್ಚಿನವು; ತನ್ನ ಅಪಾಯಕ್ಕೆ ಕಾರಣೀಭೂತವಾದದ್ದರಿಂದ ದೂರವಿರುವದು ಒಳಿತು ಎಂಬೀ ಭಾವನೆಗಳೂ ಪ್ರೇರಣೆಗಳೂ ಹುಡುಗರಲ್ಲಿ ಪ್ರಬಲವಾಗಿರುವವೆಂಬದು ಪ್ರತಿಯೊಬ್ಬ ಶಿಕ್ಷಕನಿಗೆ ಗೊತ್ತಿದ್ದ ಸಂಗತಿಯು. ಶಿಕ್ಷಕನು ಈ ಪ್ರೇರಣೆಗಳ ಉಪಯೋಗವನ್ನು ಮಾಡಿಕೊಂಡರೆ ಹುಡುಗರಲ್ಲಿ ಅವರ ನಿತ್ಯದ ಕಾರ್ಯಗಳಲ್ಲಿ ತಮ್ಮ ಪರಿಕರಲ್ಲಿ ಮೇಲಿನಿಸಿಕೊಳ್ಳಬೇಕೆಂಬ ಲವಲವಿಕೆಯನ್ನು ಉಂಟುಮಾಡಬಹುದು; ಅನೇಕ ತರದ ವಸ್ತುಗಳನ್ನು ಕೂಡಹಾಕುವದು, ಅವುಗಳನ್ನು ಜೋಕೆಯಿಂದ ರಕ್ಷಿಸಿಡುವದು, ಇಷ್ಟೇ ಅಲ್ಲದೆ ಅವುಗಳನ್ನು ಸುಧಾರಿಸುವದು ಈ ಅಭಿಲಾಷೆಗಳನ್ನು ಹುಟ್ಟಿಸಬಹುದು. ತಾನೂ ತನ್ನ ಸಂಗಡಿಗರೂ ಕೂಡಿಮಾಡುವ ಕೆಲಸಗಳಲ್ಲಿ ತನ್ನ ಹೆಚ್ಚಳವನ್ನು ಉಂಟುಮಾಡಿಕೊಳ್ಳಲಿಕ್ಕೆ ಉತ್ತೇಜನ ಕೊಡಬಹುದು. ತನ್ನಸ್ವಂತ ಆಶೆಗಳಿಗೂ ಹೆಗ್ಗುರಿಗಳಿಗೂ ಎಡರಾಗುವವರೊಡನೆ ಗಟ್ಟಿತನದಿಂದ ಹೋರಾಡಲಿಕ್ಕೆ ಎಲ್ಲುವಂತೆ ಮಾಡಬಹುದು. ಹಾಗೂ ತನಗೆ ಕೇಡು ಅಥವಾ ಸಂಕಟವು ಒದಗುವಂತೆ ಕಾಣುವ ಕಾರ್ಯಗಳಿಂದ ದೂರವಿರಲಿಕ್ಕೆ ಕಲಿಸಬಹುದು. ಆದರೆ ಶಿಕ್ಷಕನು ಜಾಗ್ರತೆಗೊಳಿಸಬಹುದಾದ ಮಹತ್ವದ ಪ್ರೇರಣೆಯುಂದರೆ ಹುಡುಗರ ಸ್ವಪ್ರಯತ್ನವು. ಇನ್ನೊಬ್ಬರ ನೆರವನ್ನು ಅಪೇಕ್ಷಿಸದೆ ತಾನಾಗಿ ಮಾಡಬಹುದಾದ ಕಾರ್ಯಗಳನ್ನು ಮಾಡುವದರಲ್ಲಿ ಈ ಪ್ರೇರಣೆಯ ಉಪಯೋಗವನ್ನು ಪೂರ್ಣವಾಗಿಯೂ ಅಭ್ಯಂತರವಿಲ್ಲದೆಯೂ ಮಾಡಗೊಟ್ಟರೆ ಇದು ಆತನಲ್ಲಿ ಸ್ವಶಿಕ್ಷಣಪಚಟವನ್ನು ನೆಲೆ ಗೊಳಿಸಲಿಕ್ಕೆ ಸಹಾಯವಾಗುವದರಲ್ಲಿ ಸಂದೇಹವಿಲ್ಲ. ಈ ಆತ್ಮಶಿಕ್ಷಣವೇ ಸರ್ವಾಂಗ ಸುಂದರವಾದ ಶಿಕ್ಷಣದ ಹೆಗ್ಗುರಿಯೆಂದು ಈಗ ಎಲ್ಲರೂ ಒಪ್ಪಿಕೊಳ್ಳುವರು. ಆಟಗಳ ಮುಖಾಂತರವಾಗಿ ಕಲಿಸುವದು; ಕೆಲಸಕ್ಕೆ ಹಚ್ಚಿ ಕಲಿಸುವದು, ನಿರ್ದಿಷ್ಟವಾದ ಕಾರ್ಯವನ್ನು ಕೊನೆಗಾಣಿಸಲಿಕ್ಕೆ ಹುರಿದುಂಬಿಸಿ ಕಲಿಸುವದು ಇವೆಲ್ಲ ಪದ್ಧತಿಗಳು ಹುಡುಗರಲ್ಲಿ ತಲೆದೋರುತ್ತಿರುವ ಆತ್ಮಪ್ರವೃತ್ತಿಯನ್ನು ನಿಶ್ಚಯವಾದ ಉದ್ದೇಶಗಳನ್ನು ನೆರವೇರಿಸಿಕೊಳ್ಳಲಿಕ್ಕೆ ಉಪಯೋಗಿಸುವ ಮಾರ್ಗಗಳಾಗಿವೆ.

ಪ್ರತಿಯೊಬ್ಬ ಶಿಕ್ಷಕನು ತನ್ನ ಕೆಲಸದ ಪ್ರತಿಯೊಂದು ಮೆಟ್ಟಿಲಲ್ಲಿ ಅನುಸರಿಸಬೇಕಾದ ಮಾನಸಶಾಸ್ತ್ರದ ಆಧಾರದಿಂದ ನಿಜವಾದ ಶಿಕ್ಷಣದ ಮೂಲತತ್ವಗಳನ್ನು ತೀರ ಸಂಕ್ಷೇಪದಲ್ಲಿ ಬೇಳಲು ಇಲ್ಲಿ ಯತ್ನಿಸಿರುವೆವು. ಆದರೆ ಶಿಕ್ಷಣದಲ್ಲಿ ಸದ್ಯಕ್ಕೆ ಹೊಸ ಹೊಸ ಶೋಧಗಳು ಆಗುತ್ತಿರುವವು. ಬುದ್ಧಿಶಕ್ತಿಯ ಅಳತೆ; ಪಾಂಡಿತ್ಯದ ಅಳತೆ, ಉದ್ಯೋಗದ ಒಲವಿನ ಅಳತೆ ಈ ಪ್ರಯೋಗಗಳು ಶಿಕ್ಷಣದಲ್ಲಿ ಹೊರಟಿರುವವು. ಇವುಗಳ ಮೂಲಕ ಸದ್ಯದ ಶಿಕ್ಷಣವ್ಯವಸ್ಥೆಯಲ್ಲಿ ಒಳ್ಳೇ ಹೆಚ್ಚುಕಡಿಮೆಗಳಾಗುತ್ತಿರುವವು. ಈ ಸಂಗತಿಗಳ ಮಹತ್ವವನ್ನು ನಾವು ಒಡೆದು ಹೇಳದಿದ್ದರೆ ಈ ವಿವರಣವು ಅಪೂರ್ಣವಾಗಿ ಉಳಿಯುವದೆಂಬದರಲ್ಲಿ ಸಂದೇಹವಿಲ್ಲ.

ಕೊನೆಯುಮಾತೇನೆಂದರೆ, ಎಲ್ಲ ಶಿಕ್ಷಕರು ಸದ್ಯದ ಶಿಕ್ಷಣವಾಙ್ಮಯದಲ್ಲಿ ಪ್ರಸಿದ್ಧ ವಾಗುತ್ತಿರುವ ತೀರ ಹೊಸ ಹೊಸ ಪುಸ್ತಕಗಳನ್ನು ಓದಿ, ಹೊಸ ಹೊಸ ಪ್ರವೃತ್ತಿಗಳ ಜ್ಞಾನವಾಡಿಕೊಂಡು ಮುಂದುವರಿಯುತ್ತಿರುವವರಲ್ಲಿ ಸೇರಲಿಕ್ಕೆ ಯತ್ನಿಸಬೇಕೆಂದು ಆಗ್ರಹದಿಂದ ಹೇಳಬೇಕಾಗಿದೆ. ಬರೇ ಮಾನಸಶಾಸ್ತ್ರದ ದೊಡ್ಡ ದೊಡ್ಡ ಹೊತ್ತಿಗೆಗಳನ್ನು ಅಭ್ಯಾಸಿಸಬೇಕೆಂದು ನಾವು ಹೇಳುವದಿಲ್ಲ.

ಬ್ರ್ಯಾಡ್‌ಫರ್ಡ್ ಲಿಲಿಕ್ರಾಫ್ಟ್‌ನರ್ಸರಿ ಸ್ಕೂಲಿನ ದಿನದ ಕಾರ್ಯಕ್ರಮವು.

ಸುಧಾರಕಪತ್ರದ ಸಂಪಾದಕರ ಅನುಮತಿಯಿಂದ ಮುದ್ರಿಸಿದ್ದು.

ಬ್ರ್ಯಾಡ್‌ಫರ್ಡ ಶಿಕ್ಷಣಸಮಿತಿಯವರಿಂದ ೨ ರಿಂದ ೫ ವರ್ಷದ ಪಯಸ್ಸಿನವರ ಸಲುವಾಗಿ ಸ್ಥಾಪಿಸಲ್ಪಟ್ಟ ಈ ಸಾಲೆಯು ಇಂಗ್ಲಂಡದೊಳಗಿನ ಅತ್ಯುತ್ತಮವಾದ ಶಿಶು ಮಂದಿರಗಳಲ್ಲಿ ಒಂದಾಗಿರುವದು.

೮-೫೦ (ಮುಂಜಾನೆ). ಮಕ್ಕಳು ಬರಹತ್ತುವರು.

ಸಾಲೆಯು ಮುಂಜಾನೆ ೮ ಘಂಟೆಗೆ ಆರಂಭವಾಗಿ ೫ ಘಂಟೆಗೆ ಮುಗಿಯುವದು, ಸಾರಕ್ಕೊಮ್ಮೆ ರಾತ್ರಿ ೧೦ ಘಂಟೆಯತನಕ ನಡೆಯುವದು. ಯಾಕೆಂದರೆ ಯಾವನೊಬ್ಬ ಮಡುಗನ ತಾಯಿತಂದೆಗಳು ಏನಾದರೊಂದು ಕೆಲಸದ ಬಗ್ಗೆ ಸಾಲೆಯು ಮೇಲ್ವಿಚಾರಕನಿಗೆ ಭೆಟ್ಟಿಯಾಗುವದಕ್ಕೆ ಇದರಿಂದ ಅನುಕೂಲವಾಗುವದು.

ದೇಹಾರೋಗ್ಯ:—ಮಕ್ಕಳು ಸಾಲೆಗೆ ಬರುತ್ತಿರುವಾಗ ಸಣ್ಣಪುಟ್ಟ ಬೀನೆಯಾಗಲಿ ಸಾಂಸರ್ಗಿಕರೋಗದ ಬೀಜಾಂಕುರವಾಗಲಿ ಆಗಿರುವದೋ ಹ್ಯಾಗೆಂಬದನ್ನು ಪರೀಕ್ಷಿಸುವದಕ್ಕೆ ಮೇಲ್ವಿಚಾರಕನು ಅವರನ್ನು ದಿನಾಲು ನೋಡುವನು. ನೆಗಡಿ, ಸಣ್ಣಜ್ವರ, ನಾತದ ಉಸಿರು, ಹೊಲಸು ಕೂತಿರುವ ನಾಲಿಗೆ, ಕಣ್ಣಿನಿಂದಲೂ ಮೂಗಿನಿಂದಲೂ ಕಿವಿಯಿಂದಲೂ ಕೀವು ಸುರಿಯುವದು, ಗಂಟುಗಳೇಳುವದು, ಜಾಡ್ಯಮುಂತಾದವುಗಳನ್ನು ಕಂಡುಹಿಡಿಯುವದು ಇವು ಶಿಶುಮಂದಿರದಲ್ಲಿ (ನರ್ಸರಿ) ಬಹು ಮಹತ್ವದ ವಿಷಯವೆ. ಯಾಕಂದರೆ ಮಕ್ಕಳು ಸಣ್ಣವರಿರುವಾಗ ಪರಸ್ಪರ ಸಂಪರ್ಕವು ಬಹಳವಾಗಿ ಆಗುವದರಿಂದ ಅಂಟುರೋಗಗಳು ತೀವ್ರವಾಗಿ ಹಬ್ಬುತ್ತವೆ. ಸಂಶಯಾಸ್ಪದವಿರುವ ಮಕ್ಕಳನ್ನು, ಅವರ ತಾಯಂದಿರು ಹಾಗು ಡಾಕ್ಟರರು ಬರುವ ತನಕ ಜೋಪಾ ಇಡುವರು.

ಮಕ್ಕಳ ತಲೆಯನ್ನು ದಿನಾಲು ಪರೀಕ್ಷೆಮಾಡುವರು. ಹಾಗು ಅವಶ್ಯವಿದ್ದಲ್ಲಿ ಸ್ವಚ್ಛ ಮಾಡುವರು. ಅವರ ತಲೆಯಲ್ಲಿ ಯಾವುದಾದರೊಂದು ತರದ ಕ್ರಿಮಿಯು ಆಗಿದ್ದರೆ ಮೇಲ್ವಿಚಾರಕನು ಮಕ್ಕಳ ತಾಯಿತಂದೆಗಳಿಗೆ ಸ್ವತಃ ಭೆಟ್ಟಿಯಾಗಿ ಅವರಿಗೆ ಯೋಗ್ಯ ಉಪದೇಶ ಮಾಡುವನು. ಹಾಗು ಸಹಾಯಮಾಡುವನು. ಒಮ್ಮೊಮ್ಮೆ ಅವರ ಮೇಲೆ ಸಿಟ್ಟಾಗುವನು.

ಬಹುತರವಾಗಿ ಎಲ್ಲ ಮಕ್ಕಳಿಗೆ ಮೂಗು ಸ್ವಚ್ಛವಾಗಿಟ್ಟುಕೊಳ್ಳಲಿಕ್ಕೆ ಕಲಿಸ ಬೇಕಾಗುವದು. ಈ ರೂಢಿಯು ಅವರಲ್ಲಿ ನೆಲೆಗೊಳ್ಳುವವರೆಗೆ ಪ್ರತಿಯೊಬ್ಬನ ಕಡೆಗೆ ಲಕ್ಷ್ಯವನ್ನು ಪೂರೈಸಬೇಕಾಗುವದು. ಮೂಗಿನಿಂದಲೇ ಸರಿಯಾಗಿ ಉಸುರಾಡಿಸಬೇ ಕೆಂಬದರ ಮಹತ್ವವು ಇಷ್ಟೇ ಎಂದು ಹೇಳಲಾಸಲ್ಲ.

ಹುಡುಗರ ಮಾನಸಿಕ ವಿಕಾರಗಳ (Nervous condition) ಸಂಬಂಧ ದಿಂದ ಒಳ್ಳೆಯ ತೀಕ್ಷ್ಣವಾದ ಕಾವಲು ಇಡುವರು. ಇದಕ್ಕೆ ಹುಡುಗರ ಬೇರೆ ಬೇರೆ ತರದ ಸ್ವಭಾವಗಳ ಸಂಪೂರ್ಣ ಜ್ಞಾನವೂ ಪರೀಕ್ಷೆಯೂ ಚೆನ್ನಾಗಿ ಇರಬೇಕಾಗುವದು. ಅಸಾಧಾರಣವಾದ ಸ್ಥಿತಿಯೇನಾದರೂ ಕಂಡುಬಂದರೆ ಕೂಡಲೆ ಡಾಕ್ಟರರಿಗೆ ತಿಳಿಸುವರು. ಹುಡುಗರು ಅಂಜಿಕೆ, ಆವೇಶ, ಸಂಕಟ ಮುಂತಾದವುಗಳಿಗೆ ಒಳಗಾಗಿದ್ದರೆ ಈ ಸ್ಥಿತಿಗಳ ಕಾರಣವನ್ನು ಹುಡುಕಲಿಕ್ಕೂ ಅವುಗಳನ್ನು ದೂರಮಾಡಲಿಕ್ಕೂ ಪ್ರತಿಯೊಂದು ರೀತಿಯಿಂದ ಪ್ರಯತ್ನಮಾಡುವರು.

ಹೊಸದಾಗಿ ಬಂದ ಹುಡುಗರನ್ನು ಡಾಕ್ಟರರ ಕಡೆಯಿಂದ ಪೂರ್ಣವಾಗಿ ಪರೀಕ್ಷಿಸಿಕೊಳ್ಳುವರು. ಆ ಮೇಲೆ ಅವರ ತೂಕವನ್ನೂ ಎತ್ತರವನ್ನೂ ಬೇರೆ ಬೇರೆ ಅವಯವಗಳ ಅಳತೆಯನ್ನೂ ಮಾಡಿ ಒಂದು ಕಾರ್ಡಿನ ಮೇಲೆ ಬರೆದಿಡುವರು. ಈ ಕಾರ್ಡಿನ ಮೇಲೆ ಅವರ ಮುಂದಿನ ಅಳತೆಗಳನ್ನೂ ಅವುಗಳಲ್ಲಾಗುವ ಹೆಚ್ಚುಕಡಿಮೆಗಳನ್ನೂ ಮೇಲೆ ಮೇಲೆ ಸಂಕ್ಷಿಪ್ತವಾಗಿ ಬರೆದಿಡುವರು. ಪ್ರಥಮದ ಪರೀಕ್ಷೆಯ ಕಾಲಕ್ಕೆ ಹುಡುಗರ ತಾಯಂದಿರನ್ನು ಕರೆಯಿಸಿ ಡಾಕ್ಟರರ ಕಡೆಗೆ ಭೆಟ್ಟಿಮಾಡಿಸುವರು. ಹಾಗು ಅವರಿಗೆ ಆ ಹುಡುಗರ ಆರೋಗ್ಯದ ಬಗ್ಗೆ ಏನು ವ್ಯವಸ್ಥೆ ಮಾಡಬೇಕೆಂಬದನ್ನು ತಿಳಿಸುವರು. ಹುಡುಗರ ಪ್ರಕೃತಿಯಲ್ಲಿ ಕಂಡುಬರುವ ಕೊರತೆಗಳನ್ನು ದೂರಮಾಡಲಿಕ್ಕೆ ಕೈಕೊಳ್ಳಬೇಕಾಗುವ ಚಿಕಿತ್ಸೆಯು ಸಾದಾ ತರದ್ದಿದ್ದರೆ ಅದನ್ನು ಡಾಕ್ಟರರ ಸೂಚನೆಯು ಮೇರೆಗೆ ಸಾಲೆಯಲ್ಲಿ ಮಾಡುವರು. ಚಿಕಿತ್ಸೆಯು ಗಡಚಾಗಿದ್ದರೆ ಅದನ್ನು ಶಾಲೆಗೆ ಜೋಡಿಸಿರುವ ಚಿಕಿತ್ಸಾಗೃಹದಲ್ಲಿ ನಡೆಯಿಸುವರು.

ಯಾವದೊಂದು ತರದ ಚಿಕಿತ್ಸೆಯನ್ನು ತಾಯಿತಂದೆಗಳಿಗೆ ತಿಳಿಸದೆ, ಇಲ್ಲವೆ ಅವರ ಸಮ್ಮತಿಯನ್ನು ಪಡಕೊಳ್ಳದೆ ಮಾಡುವದಿಲ್ಲ.

ಶಾಲೆಯು ಕಾರ್ಯಕ್ರಮದಲ್ಲಿ ಔಷಧೋಪಚಾರದ ಕೆಲಸದಷ್ಟು ಮಹತ್ವದ್ದು ಇನ್ನಾವದೂ ಇಲ್ಲ. ಯಾಕೆಂದರೆ ಬಹತರ ಯಾನತ್ತು ರೋಗಗಳು ೫ ವರ್ಷದ ವಯಸ್ಸಿನೊಳಗಾಗಿಯೇ ಹುಡುಗರಲ್ಲಿ ನೆಲೆಗೊಳ್ಳುತ್ತವೆಂಬ ಡಾಕ್ಟರರುಗಳ ಖಂಡಿತ ಅಭಿಪ್ರಾಯವಿರುವದು. ದೇಶದ ಅಡಳತೆಯಲ್ಲಿ ಶಿಶುಮಂದಿರದಷ್ಟು ಲಾಭಕರವಾದ ಸಂಸ್ಥೆಯು ಬೇರೆ ಯಾವದು ಇಲ್ಲವೆಂದರೂ ಅಡ್ಡಿ ಇಲ್ಲ. (Nurseries are the Wisest National Economics) ಮುಂದೆ ದೇಶಕ್ಕೆ ಭಾರವಾಗಬಹುದಾದ ಹುಡುಗರನ್ನು ಒಳ್ಳೆಯ ಪ್ರಜೆಗಳನ್ನಾಗಿ ಮಾಡುವ ಕೆಲಸವನ್ನು ಶಿಶುಮಂದಿರಗಳು ಮಾಡುವವು.

ಮುಖಮಾರ್ಜನ ಇತ್ಯಾದಿ (toilet):—ಮುಖಮಾರ್ಜನದ ದೆಸೆಯಿಂದ ಪ್ರತ್ಯೇಕವಾಗಿ ಕಾದಿಟ್ಟ ಕೋಣೆಗಳಲ್ಲಿ ಗೋಡೆಗಳಿಗೆ ಚೀನೀಮಣ್ಣಿನ ಅಗಲಬಾಯಿಯ ಪಾತ್ರೆಗಳನ್ನು ಹೊಂದಿಸಿಟ್ಟಿರುವರು. ಮತ್ತು ಅಲ್ಲಿ ಬೇಕಾದಷ್ಟು ತಣ್ಣೀರನ್ನೂ ಇಟ್ಟಿರುವರು. ದೊಡ್ಡ ಹುಡುಗರು ಅನ್ಯರ ಸಹಾಯವಿಲ್ಲದೆ ತಮ್ಮ ವೋರೆಯನ್ನು ತೊಳೆದುಕೊಳ್ಳುವರು. ಸಣ್ಣ ಮಕ್ಕಳಿಗೆ ಅವರವರ ಯೋಗ್ಯತೆಯ ಪ್ರಕಾರ ಸಹಾಯ ಮಾಡಬೇಕಾಗುವದು.

ತಮ್ಮ ತಮ್ಮ ಜವಾಬುದಾರಿಯನ್ನೂ ಕೆಲಸವನ್ನೂ ಸಾಕಷ್ಟು ತಿಳಿದುಕೊಂಡಿರುವ ಹುಡುಗರಿಗೆ ಅವರವರ ಬ್ರುಶ್ಶು, ಬ್ರುಶ್ಶಿನಚೀಲ, ಹಲ್ಲಿನಬ್ರುಶ್ಶು, ಟುವಾಲ ಅವುಗಳನ್ನು ತೂಗಹಾಕಲಿಕ್ಕೆ ಬೇಕಾಗುವ ಮೊಳೆ ಅಥವಾ ಕೊಂಡಿ ಮುಂತಾದ ಸಾಮಾನುಗಳನ್ನು ಕೊಡುವ ವ್ಯವಸ್ಥೆಯು ಇರುವದು.

ಸಾನ್ನದಮನೆ:—ಇಲ್ಲಿ ಹನಿಗಳ ರೂಪದಲ್ಲಿ ಮೇಲಿಂದ ಕೆಳಗೆ ಬೀಳುವ ತಣ್ಣೀರು, ಉಗುರುಬೆಚ್ಚಗಿನ ನೀರು, ಹಾಗು ಬಿಸಿನೀರು ಬರುವಂಥ ಕಾರಂಜಿಗಳೂ ಈಸಾಡಲಿಕ್ಕೆಂದು ಮಾಡಿದ ಸೀವೆಂಟ ಹಚ್ಚಿದ ಚಚ್ಚೌಕಾದ ಹೊಂಡಗಳೂ ಇರುವವು. ಈ ಹೊಂಡಗಳು ಒಂದೇ ಆಳವುಳ್ಳವು ಇರದೆ ಒಂದು ಅಂಚಿಗೆ ಆಳವು ಕಿರಿದಾಗಿಯೂ ವಿರುದ್ಧ ಅಂಚಿಗೆ ಆಳವು ಹೆಚ್ಚಾಗಿಯೂ ಇರುವಂತೆ ಮಾಡಿದವಿರುತ್ತವೆ. ಆಳವು ಕಡಿಮೆಯೆಂದರೆ ೯ ಇಂಚೂ ಹೆಚ್ಚಿಗೆ ಅಂದರೆ ೧೬ ಇಂಚೂ ಇರುವವು. ಹೊಂಡಗಳು ೯ ಫೂಟು ಉದ್ದವಾಗಿಯೂ ೩ ಫೂಟು ಅಗಲವಾಗಿಯೂ ಇರುವವು. ಇದರಲ್ಲಿ ೫-೬ ಹುಡುಗರು ಸಹಜವಾಗಿ ಈಸಬಹುದು. ಈ ಕೋಣೆಯ ಹವೆಯನ್ನು ಯಾವಾಗಲೂ ಬೆಚ್ಚಗಿಟ್ಟಿರುವರು.

ಅತಿ ಸಣ್ಣ ಹುಡುಗರ ಹಾಗು ಅಂಜುಬುರುಕರ ಸ್ನಾನದ ಬಗ್ಗೆ ಎರಡು ಚೀನೀಮಣ್ಣಿನ ಹೌದುಗಳನ್ನು ಇಟ್ಟಿರುವರು.

ಇಡೀ ದಿವಸದ ಕಾರ್ಯಕ್ರಮದಲ್ಲಿ ಸ್ನಾನದ ಮನೆಯಷ್ಟು ಆನಂದದಾಯಕ ಸಂಗತಿಯು ಹುಡುಗರಿಗೆ ಇನ್ನಾವುದೂ ಇಲ್ಲ. ವಿಶೇಷವಾಗಿ ದೊಡ್ಡ ಹುಡುಗರು ಇದರಿಂದ ಹಿರಿ ಹಿರಿ ಹಿಗ್ಗುವರು. ಹಾಗು ತಮ್ಮ ಈಸುವ ಪಾಳಿಯನ್ನು ಒಳ್ಳೆಯ ಕುತೂಹಲದಿಂದ ನಿರೀಕ್ಷಿಸುವರು. ಸರತಿಗೆ ೫–೬ ಹುಡುಗರು ಈಸುವರು.

ಹೊಲಸು ಹುಡುಗರು ಯಾರಾದರೂ ಇದ್ದರೆ ಅವರ ದೆಸೆಯಿಂದ ಪ್ರತ್ಯೇಕವಾಗಿ ಒಂದು ಹೌದು ಇಟ್ಟಿರುವರು.

ಹುಡುಗರು ತಾವೇ ಸ್ವತಃ ಸ್ನಾನಮಾಡಿಕೊಳ್ಳಬೇಕಾಗಿರುವದರಿಂದಲೂ ತಮ್ಮ ಉಡುಪನ್ನು ತಾವೇ ತೆಗೆಯಲೂ ತಿರುಗಿ ಹಾಕಿಕೊಳ್ಳಲೂ ಬೇಕಾಗುವದರಿಂದಲೂ ಅವರಿಗೆ ಇಂದ್ರಿಯ ಶಿಕ್ಷಣವು ಚನ್ನಾಗಿ ಆಗುವದು.

ಒಮ್ಮೊಮ್ಮೆ ದೊಡ್ಡ ಹುಡುಗರಿಗೆ ಸಣ್ಣ ಹುಡುಗರ "ಪಾಲನೆ"ವನ್ನು ಒಪ್ಪಿಸುವರು. ಇಂಥ ಪ್ರೀತಿಯ ಜೊತೆಗಾರರಲ್ಲಿ ಅಂಜುಬುರುಕ ಹುಡುಗರು ಸಪ ನೀರಿನ ಅಂಜಿಕೆಯನ್ನು ಕಳಕೊಂಡು ತಾವೂ ಆ "ತಮಾಸೆ"ಯಲ್ಲಿ ಸೇರುವರು. ಇಂಥವರಿಗೆ ಮೊದಲು ಆಳವು ಕಡಿಮೆ ಇದ್ದಲ್ಲಿ ಕಾಲು ಬಡಿಯಲಿಕ್ಕೆ ಬಿಡುವರು. ಮೊಟ್ಟ ಮೊದಲು ಎಲ್ಲರೂ ತಮ್ಮ ತಮ್ಮ ಮೈಯನ್ನು ಉಜ್ಜಿ ಸ್ವಚ್ಛಮಾಡಿಕೊಳ್ಳಬೇಕು. ಇದಾದಬಳಿಕ ಆಟ ವಿನೋದಗಳನ್ನು ಮಾಡಬಹುದು. ಅಹಾ! ಎಂಥ ಆನಂದವು! ಒಮ್ಮೆ ಒಬ್ಬ ಹುಡುಗನು ಮೇಲ್ವಿಚಾರಕನಿಗೆ–ಈ ಹೊತ್ತು ನಾನು ೫ ಸಾಮಾನ ಗಳಾಗಿದ್ದೆನು "ಒಳ್ಳೇದು ಏನವು." ಅಹಾ! ಏನು ಹೇಳಲಿ, ಒಮ್ಮೆ ನಾನು, ಒಮ್ಮೆ ಮುಳುಗುವವ, ಒಮ್ಮೆ ಮೋಟಾರ ಬೋಟ, ಒಮ್ಮೆ ಜಲದೇವತೆ, ಒಮ್ಮೆ ಸಬ್‌ಮರೀನ್ ಹೀಗೆ.

ಹುಡುಗರಿಗೆ ನೆಗಡಿಯಾಗದಂತೆ ಮುಂಜಾಗ್ರತೆಯಾಗಿ ಅವರಿಗೆ ತಣ್ಣೀರಿನ ಹನಿ ಗಳ ಸ್ನಾನವನ್ನಾಗಲಿ ತಣ್ಣೀರಿನ ಸ್ಪಂಜ ಸ್ನಾನವನ್ನಾಗಲಿ ಕೊನೆಯಲ್ಲಿ ಮಾಡಿಸಿ ಕೂಡಲೆ ಬೆಚ್ಚಗಿನ ಬಿರುಸು ಟುವಾಲಿನಿಂದ ಅವರ ಮೈಯನ್ನು ಕಸುವಿನಿಂದ ಒರಿಸುವರು.

ಸ್ನಾನದ ಮನೆಯಲ್ಲಿ ಹುಡುಗರ ಸ್ವಚ್ಛತೆ ಅವರ ಪೋಷಾಕು ಅವರ ಪ್ರಕೃತಿ ಇವುಗಳ ಸಂಬಂಧವಾಗಿ ಶಿಕ್ಷಕರಿಗೆ ಉತ್ತಮವಾದ ಜ್ಞಾನವುಂಟಾಗುತ್ತದೆ.

ಶಾಲೆಯ ಕೋಣೆಯ ತಯಾರಿಯು:— ಶಾಲೆಯ ಕೆಲಸಗಳು ನಡೆಯು ತಕ್ಕ ಕೋಣೆಗಳ ತಯಾರಿಯನ್ನು ಹುಡುಗರು ಸ್ವತಃ ಮಾಡುವರು. ಅಲ್ಲಿ ಬೇಕಾಗುವ ಸಾಮಾನುಗಳನ್ನು ಒಯ್ಯುವದು, ಸರಿಸಾಡುವದು ಮುಂತಾದ ಕೆಲಸಗಳನ್ನು ಹುಡು ಗರೇ ಮಾಡುವರು. ಮೇಜು ಖುರ್ಚಿ ಮುಂತಾದ ಸಾಮಾನುಗಳೆಲ್ಲ ಹಗುರಾದಂಥ ವಿರುವವು. ಮಲಗುವ ಮಂಚಗಳು ಮಡಿಚಲಿಕ್ಕೆ ಬರುವಂತಿದ್ದು ಹಗುರಾಗಿರುವ

ಶೀಘ್ರ ಒಯ್ಯಲಿಕ್ಕೆ ಬರುವಂಥವೂ ಇರುವವು. ಕಪಾಟುಗಳು ತಗ್ಗಾದವೂ ಅವುಗಳ ಶಿಟ್ಟ, ಆಟದ ಸಾಮಾನು ಮುಂತಾದವುಗಳನ್ನು ಸುಲಭವಾಗಿ ತೆಗೆಯಲಿಕ್ಕೆ ಬರು ವಂಥವೂ ಇರುವವು,

೯-೩೦ ಮುಂಜಾನೆಯ ಗುಂಪು:— ಗಾಯನ, ಹಾಡುವದು ಕುಣಿಯುವದು, ಆಟಿಗಳು:— ಸ್ನಾನದನಂತರ ಈ ತಾಸಿನಷ್ಟು ಪ್ರೀತಿಯುಳ್ಳದ್ದು ಹುಡುಗರಿಗೆ ಬೇರೆ ಯಾವದೂ ಇಲ್ಲ. ಇದರಲ್ಲಿ ಕಲಿಯುವ ವಿಷಯ ಕಡಿಮೆ, ಆದರೆ ಆನಂದಕ್ಕೆ ಮಾತ್ರ ಕೊರತೆ ಇಲ್ಲ. ತಾಳಬದ್ಧವಾದ ಅಂಗಚಲನೆಯೂ ಗಾಯನ ಪ್ರೀತಿಯೂ ಎಲ್ಲ ಹುಡುಗರ ಪ್ರೀತಿಯ ವಿಷಯವಾಗಿರುವದು. ಆಗ ಹುಡುಗರು ಅತ್ಯಂತ ಆಹ್ಲಾದ ದಿಂದ ಒತ್ತಟ್ಟಿಗೆ ಆಡುವರು, ಹಾಡುವರು ಹಾಗು ಕುಣಿಯುವರು.

೧೦-೧೫ ಫಲಾಹಾರ:— ಹಾಲು, ಹಾಲಿನಿಂದ ಮಾಡಿದ ಕೋಕೊ, ಬಿಸ್ಕಿಟ ಮತ್ತು ಹಣ್ಣು ಹಂಪಲಗಳು (ತಾಯಿ ತಂದೆಗಳು ಪೂರೈಸಿದ್ದರೆ)

೧೦-೩೦ ರಿಂದ ೧೧-೩೦ ಉದ್ಯೋಗ:— ಕೈಕೆಲಸ, ಮಾಂಟೆಸೋರಿ ಉಪಕರಣಗಳು.

ಮಾಂಟೆಸೋರಿ ಉಪಕರಣಗಳಿಂದ ಇಂದ್ರಿಯಶಿಕ್ಷಣವು ಪ್ರತ್ಯಕ್ಷರೀತಿಯಿಂದ ಆಗುವದು. ಆದರೆ ಸಾಲೆಯ ಚಟುವಟಿಕೆಗಳಲ್ಲಿ ಸಾವಿರಾರು ರೀತಿಯಿಂದ ಈ ಕೆಲಸವು ಅಪ್ರತ್ಯಕ್ಷವಾಗಿ ಆಗುತ್ತಿರುವದು. ಅನೇಕ ಪ್ರಕಾರದ ಪದಾರ್ಥಗಳನ್ನು ಉಪಯೋಗಿಸುವದರಿಂದ ಇಂದ್ರಿಯ ಶಿಕ್ಷಣಕ್ಕೂ ಇಂದ್ರಿಯಗಳ ಅನುಭವಕ್ಕೂ ಉತ್ತಮವಾದ ಸಂಧಿಯು ದೊರೆಯುವದು. ಉದಾ:— ಜಿಗಟುಮಣ್ಣು, ಉಸಬು, ಕಾಗದ ಇಟ್ಟಿಂಗಿಯ ಕೊರಡುಗಳು, ಬಣ್ಣದ ಒಡವೆಗಳು, ಮಣಿಗಳು, ಸಿಂಪು, ಕೋಲು, ಬೂಚು, ಬಣ್ಣ, ಬ್ರುಶ್ಶು, ನೀರು ಇತ್ಯಾದಿ. ಮಾಂಟೆಸೋರಿ ಉಪಕರಣಗಳನ್ನು ಕಾಲ್ಪನಿಕ ಆಟಗಳಲ್ಲಿಯೂ ರಚನಾಶೀಲ ಕೆಲಸಗಳಲ್ಲಿಯೂ ಉಪಯೋಗಿಸುವರು.

ಡ್ರಾಯಿಂಗ ತೆಗೆಯುವ ಬಗ್ಗೆ ಖಡು, ಕರೇಹಲಿಗೆ, ಬಣ್ಣದ ಕಡ್ಡಿಗಳು, ಬ್ರೌನ್ ಪೇಪರ ಮುಂತಾದವುಗಳನ್ನು ಹುಡುಗರ ಉಪಯೋಗದದೆಸೆಯಿಂದ ಇಟ್ಟಿರುವರು.

ಡ್ರಾಯಿಂಗ ತೆಗೆಯುವದರಲ್ಲಿ ಹುಡುಗರು ತಮಗೆ ಸೇರುವ ಬೇಕಾದ ವಸ್ತುವಿನ ಚಿತ್ರವನ್ನು ತೆಗೆಯಬಹುದಾದರೂ ಆರಂಭಿಸಿದ ಬಳಿಕ ಅದನ್ನು ಮುಗಿಸಲೇಬೇಕೆಂದು ಶಿಕ್ಷಕರು ಆಗ್ರಹ ಮಾಡುವರು. ತಮ್ಮ ಕೆಲಸವಾದಬಳಿಕ ಯಾವತ್ತೂ ಸಾಮಾನು ಗಳನ್ನು ಬೇರೆ ಹುಡುಗರ ಬಗ್ಗೆ ಶಿಸ್ತಿನಿಂದ ಇಡಬೇಕು.

"ಪ್ರಕೃತಿವಿಮರ್ಶೆ"ಹಾಗೂ "ಶಾಲೆಯ ತೋಟ" ಇವುಗಳ ಸಂಬಂಧವಾಗಿ ವಿಶೇಷ ಪಾಠಗಳನ್ನು ಹೇಳುವದಿಲ್ಲ. ಅವುಗಳ ಅವಶ್ಯಕತೆಯೂ ಅಲ್ಲಿ ಇರುವದಿಲ್ಲ. ಯಾಕಂದರೆ ಶಿಶುಮಂದಿರದಂಥ ಸೃಷ್ಟಿಮಯವಾದ ಬೈಲುಸ್ಥಳದಲ್ಲಿ ಎಲ್ಲಕ್ಕೂ ಶ್ರೇಷ್ಠವಾದ "ಪ್ರಕೃತಿ"ಯೆಂಬ ಶಿಕ್ಷಕನಿಂದಲೇ ಹುಡುಗರು ತಮಗೆ ಗೊತ್ತಿಲ್ಲದಂತೆಯಾದರೂ ಸಂಪೂರ್ಣವಾಗಿ ತಮ್ಮ ಪ್ರಕೃತಿವಿಮರ್ಶೆಯ ಪಾಠವನ್ನು ಚನ್ನಾಗಿ ಕಲಿಯುವರು.

ದೊಡ್ಡ ಹುಡುಗರು ಬೀಜವನ್ನು ಬಿತ್ತುವುದು, ಸಸ್ಯಗಳನ್ನು ಹಚ್ಚುವದು ಮುಂತಾದ ತೋಟದ ಕೆಲಸಗಳನ್ನು ಮಾಡುವರು. ಹೂಗಳಿಂದ ಹುಡುಗರಿಗೆ ಹಿಡಿಸಲಾರದಷ್ಟು ಆನಂದವಾಗುವದು.

ಮೊಲ, ಬೆಕ್ಕು ಮುಂತಾದ ಪ್ರಾಣಿಗಳನ್ನೂ ಅವುಗಳ ಮರಿಗಳನ್ನೂ ಶಿಶು ಮಂದಿರಗಳಲ್ಲಿಡುವರು. ಅವುಗಳಿಗೆ ತಿನ್ನಲಿಕ್ಕೆ ಹಾಕುವುದು ಅವುಗಳ ಸ್ಥಳಗಳನ್ನು ಸ್ವಚ್ಛಮಾಡುವದು ಮುಂತಾದ ಕೆಲಸಗಳನ್ನು ಮಾಡುವದರಲ್ಲಿ ಹುಡುಗರು ಸ್ವತಃ ಸಹಾಯಮಾಡುವರು.

೧೧-೩೦ ರಿಂದ ೧೧-೪೫ ಊಟದ ತಯಾರಿಯು:— ದೊಡ್ಡ ಹುಡುಗರು ಖುರ್ಚಿ, ಊಟದ ಮೇಜುಗಳನ್ನು ವ್ಯವಸ್ಥಿತವಾಗಿಡುವರು. ಮತ್ತು ಕಪಾಟಿನಿಂದ ಅರಿವೆಗಳನ್ನು ಹೊರಗೆ ತೆಗೆದು ಮೇಲೆ ಹಾಸುವರು. ಈ ಕೆಲಸವನ್ನು ಪಾಳಿಯಿಂದ ಮಾಡುವರು.

೧೧-೪೫ ಊಟ:— ಡಾಕ್ಟರರು ಹಾಕಿಕೊಟ್ಟ ಪತ್ರಿಕೆಯ ಮೇರೆಗೆ ೧ ವಾರದ ತನಕ ನಡೆಯುವ ೨ ಪತ್ರಿಕೆಗಳು ಇರುವವು. ಒಂದಾದಬಳಿಕ ಇನ್ನೊಂದು ಹೀಗೆ ಕ್ರಮದಿಂದ ಅವು ೧೫ ದಿನಕ್ಕೊಮ್ಮೆ ಬರುವವು. ಪ್ರತಿ ಊಟಕ್ಕೆ 'ರಸ್ಕ' ಎಂಬ ಒಂದು ಬಗೆಯ ಒಣದಾದ ಬಿಸುಪು ರೊಟ್ಟಿಗಳನ್ನು ನೀಡುವರು. ಇವುಗಳನ್ನು ತಿನ್ನುವದರಿಂದ ಹಲ್ಲು ಬರಲಿಕ್ಕೂ ಲಾಲಾರಸವು ಸಾಕಷ್ಟು ಹರಿದುಬರಲಿಕ್ಕೂ ಅನುಕೂಲವಾಗುವದು.

ಊಟಬಂದಕೂಡಲೆ ಹುಡುಗರಿಗೆ ಹಿಡಿಸಲಾರದಷ್ಟು ಆನಂದವಾಗುವದು. ಅವರು ಅದನ್ನು ಒಳ್ಳೇ ರುಚಿಮಾಡಿಕೊಂಡು ಉಣ್ಣುವರು. ರುಚಿಕರವಾದ ಪದಾರ್ಥದ ಬೇಡಿಕೆಯು ಬಹಳ ಇರುವದು. ಅದನ್ನು ಎರಡು ಮೂರಾವರ್ತಿ ಅಥವಾ ಅದು ಪೂರ್ಣ ಖರ್ಚಾಗುವವರೆಗೆ ಬಡಿಸಬೇಕಾಗುವದು. ಹುಡುಗರ ಕಣ್ಣ ಮುಂದೆಯೇ ಪಾತ್ರೆಗಳನ್ನು ಬರಿದು ಮಾಡಿದ ಹೊರತು ಅವರಿಗೆ ಸಮಾಧಾನವಾಗುವದಿಲ್ಲ. ಹುಡುಗರು ತಮ್ಮ ಪಾಳಿಯ ಪ್ರಕಾರ ಬಡಿಸುವ ಕೆಲಸವನ್ನು ಕೈಕೊಳ್ಳುವರು. ಇಡೀ ಪಟ್ಟಣದಲ್ಲಿ ಎಷ್ಟು ಶಾಲೆಗಳಿರುವವೋ (ಶಿಶು ಮಂದಿರಗಳು) ಅವೆಲ್ಲವುಗಳಿಗೂ ಬೇಕಾಗುವಷ್ಟು ಆಹಾರ

ವನ್ನು ಒಂದೇ ಮುಖ್ಯ ಅಡಿಗೆಮನೆಯಲ್ಲಿ ತಯಾರಿಸುವರು, ಬಳಿಕ ಬೇರೆ ಬೇರೆ ಶಾಲೆಗಳಿಗೆ ಬೇಕಾಗುವಷ್ಟು ಆಹಾರವನ್ನು ಮೋಟಾರ ಲಾರಿಗಳಲ್ಲಿ ತುಂಬಿ ಆ ಆ ಶಾಲೆಗಳಿಗೆ ಕಳುಹಿಸುವರು. ಊಟವಾದ ಬಳಿಕ ಹುಡುಗರು ತಮ್ಮ ತಮ್ಮ ಪಾಳಿಯ ಪ್ರಕಾರ ಚಮಚೆ ಚಾಕು ಮುಂತಾದ ಸಾಮಾನುಗಳನ್ನು ಒಟ್ಟುಗೂಡಿಸುವದು, ನೆಲದಮೇಲೆ ಬಿದ್ದಿರುವ ಕಸಕಡ್ಡಿಗಳನ್ನೂ ಆಹಾರದ ಚೂರುಗಳನ್ನೂ ತೆಗೆದು ಸ್ವಚ್ಛವಾಗಿ ಉಡುಗುವದು ಮುಂತಾದ ಕೆಲಸಗಳನ್ನು ಸ್ವತಃ ಮಾಡಬೇಕಾಗುವದು.

೧೨–೩೦ ರಿಂದ ೨–೩೦ ನಿದ್ರೆಗಾಗಿ: ಊಟವಾದ ಬಳಿಕ ಪ್ರತಿ ಒಬ್ಬ ಹುಡುಗನನ್ನು ಮಧ್ಯಾನ್ಹದ ನಿದ್ರೆಗಾಗಿ ಅವನವನ ಹಾಸಿಗೆಗೆ ಕಳುಹಿಸುವರು.

೨–೩೦ ಕಥೆ, ಜಟಿ ಅಥವಾ ಜಟಿಗೆಗಳು: — ಬ್ಯಾಲನ್ಸ (ಸಮತೋಲ) ಹಿಡಿಯುವ ಆಟಗಳ ಬಗ್ಗೆ "ಬ್ಯಾಲನ್ಸ ಬೋರ್ಡ" ಹಚ್ಚಿಟ್ಟಿದ್ದಿರುವದು. ಉಸುಬಿನ ಮಾಡೆಲ್ ಮಾಡುವ ಬಗ್ಗೆ ಉಸುಬು ತಯಾರು ಮಾಡಿದ್ದಿರುವದು. ಶರೀರ ಚಲನೆಗಳ ಬಗ್ಗೆ ಈ ಕೆಳಗಿನ ಸಾಮಾನುಗಳನ್ನು ಇಟ್ಟಿರುವರು.

ಜೋಕಾಲಿಗಳು, ಆಂದೋಲನ ನಾವೆ (ತೂಗುವ ಡೋಣಿ,) ಆಂದೋಲನ ಮನೆ (ತೊಟ್ಟಿಲು), ಸಣ್ಣ ದೊಡ್ಡ ಗಾಡಿಗಳು, ಸಣ್ಣ ದೊಡ್ಡ ವ್ಹೀಲ್‌ಬ್ಯಾರೋ (ಒಂಟಿಗಾಲಿಯ ಕೈಬಂಡಿ) ಸಣ್ಣಮನೆ, ಎಂಜಿನ್.

ಗೊಂಬೆಯಮನೆ, ಅರಿವೆಯ ಗೊಂಬೆಗಳು, ಗಾಡಿ, ಗೊಂಬೆಯ ಹಾಸಿಗೆ, ತೊಟ್ಟಿಲು, ಅಡಿಗೆಯ ಪಾತ್ರೆಗಳು, ಡೋಣಿಗಳು, ಚಂಡು.

ಬ್ಯಾಟ್, ಫುಟ್‌ಬಾಲ್, ಜಿಗಿಯುವ ಜಗ್ಗ, ಶಕ್ತಿ ಪರೀಕ್ಷೆಯ ಹಗ್ಗ, (Tug of war-rope) ಶಟಲ್ ಕಾರ್ಕ, ಲಗಾಮುಗಳು, ಚಬಕ, ಗುದ್ದಲಿ, ಬಕೇಟುಗಳು, ಕಪ್, ಸಾಸರ (ಬಟ್ಟಲು-)

ಹುಡುಗರಿಗೆ ಸರಿದಾಡುವ ಆಟದ ಸಾಮಾನುಗಳ ಮೇಲೆಯೂ, ಯಾವದೊಂದು ಸರಿದಾಡುವ ಸಾಮಾನಿನಂತೆ ಸರಿಸಲಿಕ್ಕೆ ಬರುವ ಸಾಮಾನುಗಳ ಮೇಲೆಯೂ, ಪ್ರೀತಿ ಬಹಳ. ಆದುದರಿಂದ ಶಿಶುಮಂದಿರದಲ್ಲಿ ಇಂಥವುಗಳ ಪೂರೈಕೆಯನ್ನು ಮಾಡಲು ಹಚ್ಚಿನ ಪ್ರಯತ್ನವನ್ನು ಮಾಡುವರು.

೩–೧೫ ರಿಂದ ೩–೩೦ ಚಹಾ:— ಹಾಲು ಅಥವಾ ಹಾಲಿನಿಂದ ಮಾಡಿದ ಕೋಕೋ, ಬ್ರೆಡ್ ಮತ್ತು ಮಾರ್ಗರೀನ್ (ಮೋರಂಬಾ) ಬ್ಯಾಮಶ್ ಅಥವಾ ಕಾಕಂಬಿ ಮತ್ತೂ ಹೋಳಿಗೆ ಅಥವಾ ಕಡಬು ಇವೇ ಮೊದಲಾದ ಹುಡುಗರಿಗೆ ತಿನ್ನಲಿಕ್ಕೆ ಕೊಡುವ ಆಹಾರ ಪದಾರ್ಥಗಳ ಖರ್ಚಿಗಾಗಿ ಸಾಲಕೊಳ್ಳುವೆ. ಪ್ರತಿಯಬ್ಬರಿಗೆ ತಿಂಗಳಿ

ರಾ|| ಗುರಯ್ಯ ನಂಜಯ್ಯ ಮಠದ ೧ನೇ ಲಿ. ಮೊಸ್ತರ ಹಳ್ಳೀಕೇರಿ (ಗದಗ) ಇವರು ಸದರೀ ಊರ ಪರಸ್ಪರ ಸಹಾಯಕಾರಕ ಸಂಘದವರು ತಾ|| ೨೮-೪-೧೯೧೫ನೆಯ ದಿವಸ ಕೂಡಿದ ಅನರ ವಾರ್ಷಿಕ ಸಭೆಯಲ್ಲಿ ಸಂಘದ ರಿಝರ್ವ ಫಂಡಿನಿಂದ ಪ್ರತಿವರ್ಷ ೧೦ ರೂಪಾಯಿಗಳನ್ನು ವಿದ್ಯಾಭಿವೃದ್ಧಿಗೆ ಉಪಯೋಗಿಸಬೇಕೆಂದು ಠರಾವು ಮಾಡಿದರೆಂತಲೂ, ಸಹಕಾರೀ ಸಂಘಗಳಿದ್ದ ಎಲ್ಲ ಹಳ್ಳಿಯವರೂ ಅವರ ಅನುಕರಣ ಮಾಡಿ ತಮ್ಮ ತಮ್ಮ ಶಾಲೆಗಳಿಗೆ ಸಹಾಯ ಪಡೆಯಬಹುದೆಂತಲೂ ಬರೆಯುತ್ತಾರೆ.

ರಾ|| ಸದಾಶಿವ ಭೀಮಾರಾವ ಕುಲಕರ್ಣಿ ಯರರ್ಯುರವಿ ತಾ. ಪರಸಗಡ ಎಂಬವರು, ಸದರೀ ಊರ ಶಾಲೆಯ ಹುಡುಗರಿಗೆ ೭ ರೂಪಾಯಿಯ ೨೩ ಟೊಪ್ಪಿಗೆಗಳನ್ನೂ ಹುಡುಗಿಯರಿಗೆ ೩ ರೂಪಾಯಿದ ೫ ಕುಬಸಗಳನ್ನೂ ಅಲ್ಲಿಯ ಸ್ಕೂಲ ಪಂಚರೂ ಪ್ರಸಿದ್ಧ ಸಾವುಕಾರರೂ ಆದ ಮ. ರಾ. ಬಸಪ್ಪಾ ಎಸ್ ತುಪ್ಪದ ಎಂಬವರು ಶಾಲೆಯ ಬಕ್ಷೀಸ ಸಮಾರಂಭದ ಕಾಲಕ್ಕೆ ಉತ್ತೇಜನಾರ್ಥವಾಗಿ ಕೊಟ್ಟರೆಂದು ಬರೆಯುತ್ತಾರೆ.

ಶಾಲಾಪತ್ರಕದ ವರ್ಗಣಿ ಬಂದದ್ದು.

ಫೆಬ್ರುವರಿ ೧೯೧೫

(ಎಪ್ರಿಲ್ ತಿಂಗಳ ಸಂಚಿಕೆಯಿಂದ ಮುಂಚೆ ಸಾಗಿದ್ದು.)

ಹೆಡ್‌ಮಾಸ್ತರ ಶಾಳಾ-ದೊಡ್ಡ ಬಾಳಾಪೂರ ಇವರ ಕಡೆಯಿಂದ ದ ೧೯೧೪ನೇ ದರ ಬಗ್ಗೆ	೧-೮-೦
ಹೆಡ್‌ಮಾಸ್ತರ ಶಾಳಾ-ಹೆಬ್ಬಾಳ (ಮಿರಜ) ಇವರ ಕಡೆಯಿಂದ ೧೯೧೪ನೇ ದರ ಬಗ್ಗೆ	೧-೮-೦
ರಾ|| ಸಾ|| ಪ್ರೆಸಿಡೆಂಟ ಮ್ಯುನಿಸಿಪಾಲಿಟಿ ಕಾರವಾರ ಇವರ ಕಡೆಯಿಂದ ೧೯೧೩-೧೯೧೪ ನ ೧೯೧೪ನೇ ಇಸವಿಗಳ ಬಗ್ಗೆ	೩೧-೮-೦
ಪೆ|| ೩ನೇ ಅಸಿಸ್ಟಂಟ ಡಿ|| ಎ|| ಇನಸ್ಪೇಕ್ಟರ ಜಿಲ್ಹಾ ಧಾರವಾಡ ಇವರ ಕಡೆಯಿಂದ ೧೯೧೪ನೇ ದರ ಬಗ್ಗೆ	೧-೮-೦

ಮಾರ್ಚ ೧೯೧೫.

ರಾ|| ರಾ|| ಸೆಕ್ರೆಟರಿ, ಸಿಸಿ ಮ್ಯುನ್‌ಸಿಪ್ಯಾಲಿಟಿ ಇವರ ಕಡೆಯಿಂದ ೧೯೧೪ನೇ ಇಸವಿಯ ಬಗ್ಗೆ	೨-೮-೦
ಹೆಡ್‌ಮಾಸ್ತರ ಶಾಳಾ-ಕಲ್ಹಾಳ (ರಾಮದುರ್ಗ) ಇವರ ಕಡೆಯಿಂದ ೧೯೧೪ನೇ ದರ ಬಗೆ	೧-೮-೦

ರಾ|| ಗುರಯ್ಯ ನಂಜಯ್ಯ ಮಠವ ೧ನೇ ಅ. ವೂಸ್ತರ ಹಳ್ಳೀಕೇರಿ (ಗದಗ) ಇವರು ಸದರೀ ಊರ ಪರಸ್ಪರ ಸಹಾಯಕಾರಕ ಸಂಘದವರು ತಾ|| ೨೮-೪-೧೯೧೫ನೆಯು ದಿವಸ ಕೂಡಿದ ಅವರ ವಾರ್ಷಿಕ ಸಭೆಯಲ್ಲಿ ಸಂಘದ ರಕ್ಷಣಾ ನಿಧಿಯಿಂದ ಪ್ರತಿವರ್ಷ ೧೦ ರೂಪಾಯಿಗಳನ್ನು ವಿದ್ಯಾಭಿವೃದ್ಧಿಗೆ ಉಪಯೋಗಿಸಬೇಕೆಂದು ಠರಾವು ಮಾಡಿದರೆಂತಲೂ, ಸಹಕಾರೀ ಸಂಘಗಳಿದ್ದ ಎಲ್ಲ ಹಳ್ಳಿಯವರೂ ಅವರ ಅನುಕರಣ ಮಾಡಿ ತಮ್ಮ ತಮ್ಮ ಶಾಲೆಗಳಿಗೆ ಸಹಾಯ ಪಡೆಯುಬಹುದೆಂತಲೂ ಬರೆಯುತ್ತಾರೆ.

ರಾ|| ಸದಾಶಿವ ಭವಾನಿರಾವ ಕುಲಕರ್ಣಿ ಯರಝುರವಿ ತಾ. ಪರಸಗಡ ಎಂಬವರು, ಸದರೀ ಊರ ಶಾಲೆಯ ಹುಡುಗರಿಗೆ ೭ ರೂಪಾಯಿಯ ೨೩ ಟೊಪ್ಪಿಗೆಗಳನ್ನೂ ಹುಡುಗಿಯರಿಗೆ ೩ ರೂಪಾಯಿದ ೫ ಕುಬಸಗಳನ್ನೂ ಅಲ್ಲಿಯ ಸ್ಕೂಲ ಪಂಚರೂ ಪ್ರಸಿದ್ಧ ಸಾವುಕಾರರೂ ಆದ ಮ. ರಾ. ಬಸಪ್ಪಾ ಎಸ್ ತುಪ್ಪದ ಎಂಬವರು ಶಾಲೆಯ ಬಕ್ಷೀಸ ಸಮಾರಂಭದ ಕಾಲಕ್ಕೆ ಉತ್ತೇಜನಾರ್ಥವಾಗಿ ಕೊಟ್ಟರೆಂದು ಬರೆಯುತ್ತಾರೆ.

ಶಾಲಾಪತ್ರಿಕದ ವರ್ಗಣಿ ಬಂದದ್ದು

ಫೆಬ್ರುವರಿ ೧೯೧೫.

(ಎಪ್ರೆಲ್ ತಿಂಗಳ ಸಂಚಿಕೆಯಿಂದ ಮುಂದೆ ಸಾಗಿದ್ದು.)

ಹೆಡ್‌ಮಾಸ್ತರ ಶಾಳಾ-ದೊಡ್ಡಬಾಳಾಪೂರ ಇವರ ಕಡೆಯಿಂದ ೧೯೧೫ನೇ ದರ ಬಗ್ಗೆ	೧-೮-೦
ಹೆಡ್‌ಮಾಸ್ತರ ಶಾಳಾ-ಹೆಬ್ಬಾಳ (ವಿರಜ) ಇವರ ಕಡೆಯಿಂದ ೧೯೧೫ನೇ ದರ ಬಗ್ಗೆ	೧-೮-೦
ರಾ|| ಸಾ|| ಪ್ರೆಸಿಡೆಂಟ ಮ್ಯುನಿಸಿಪಾಲಿಟಿ ಕಾರವಾರ ಇವರ ಕಡೆಯಿಂದ ೧೯೧೩-೧೯೧೪ ವ ೧೯೧೪ನೇ ಇಸವಿಗಳ ಬಗ್ಗೆ	೩೧-೮-೦
ವೆ|| ೩ನೇ ಅಸಿಸ್ಟಂಟ ಡಿ|| ಎ|| ಇನಸ್ಪೇಕ್ಟರ ಜಿಲ್ಲಾ ಧಾರವಾಡ ಇವರ ಕಡೆಯಿಂದ ೧೯೧೫ನೇ ದರ ಬಗ್ಗೆ	೧-೮-೦

ಮಾರ್ಚ ೧೯೧೫.

ರಾ|| ರಾ|| ಸೆಕ್ರೆಟರಿ, ಸಿರ್ಸಿ ಮ್ಯುನ್‌ಸಿಪ್ಯಾಲಿಟಿ ಇವರ ಕಡೆಯಿಂದ ೧೯೧೫ನೇ ಇಸವಿಯ ಬಗ್ಗೆ	೭-೮-೦
ಹೆಡ್‌ಮಾಸ್ತರ ಶಾಳಾ-ಕಲ್ಲಾಳ (ರಾಮದುರ್ಗ) ಇವರ ಕಡೆಯಿಂದ ೧೯೧೫ನೇ ದರ ಬಗ್ಗೆ	೧-೮-೦

ಶಾಸ್ತ್ರೀಯ ತಿಕ್ಷ್ಣಣದ ಬಗ್ಗೆ ಉಪಕರಣಗಳು.

ಕೆಳಗೆ ಕೊಟ್ಟ ಉಪಕರಣಗಳು ನಮ್ಮ ಕಾರಖಾನೆಯಲ್ಲಿ ತಯಾರಾಗುತ್ತವೆ. ನಮ್ಮ ಕಾರ್ಯಾಲಯದ ವಿಳಾಸಕ್ಕೆ ಬರೆದಲ್ಲಿ, ನಾವು ನಮ್ಮ ಗಿರಾಕಿಗಳಿಗೆ ಅವನ್ನು ಕಳಿಸಿಕೊಡುವೆವು:—

ಸೂರ್ಯ ಮಾಲೆಯನ್ನೂ ಹಗಲುರಾತ್ರಿಗಳನ್ನೂ ವಿಸ್ತಾರಗಳ ಕಾರಣಗಳನ್ನೂ ತೋರಿಸುವ ಯಂತ್ರಗಳು. ಗ್ರಹಗಳ ಗುಂಪು, ಬೇರೆ ಬೇರೆ ವ್ಯಾಸಗಳುಳ್ಳ ಪ್ರಥ್ವಿಯ ಗ್ಲೋಬುಗಳು, ಸೊನ್ನೆ, [illegible] ಸಿಕ್ಕಿ, ಇಳಾಕಲು, ನಕಾಶಗಳು, ಭೂಗೋಲದೊಳಗಿನ [illegible]ನ್ನು ಸ್ಪಷ್ಟೀಕರಿಸುವ ರಿಲೀಫ್ ನಕಾಶಗಳು, ಕಿಂಡರಗಾರ್ಟನ ಒಡವೆಗಳು, ಕಾರಂಬಿ, ಬೇರೆ ಬೇರೆ ಕಾರಖಾನೆಗಳಲ್ಲಿ ಉಪಯೋಗಿಸಲ್ಪಡುವ ಯಂತ್ರಗಳುಳ್ಳ ಪೆಟ್ಟಿಗೆ, ಕಿರಣ ವರ್ತಾವರ್ತನೆಯಂತ್ರ, ಸೈಫನ (ನಲಿಕಾಯಂತ್ರ), ನೀರಿನ ಸೆಳವಿನಿಂದ ತಿರುಗುವ ಯಂತ್ರ, ವಿದ್ಯುತ್ಯಂತ್ರ, ಉಷ್ಣತೆಯ ಪ್ರಸರಣವನ್ನು ತೋರಿಸುವ [illegible]ಬಳಿ-ಗುಂಡು, ಕಲ್ಲಿನ್ದಲಿಯ ಗ್ಯಾಸ, ಚಿಕ್ಕಮಕ್ಕಳಿಗಾಗಿ ಮಾಡಿದ ಹಲಿಗೆಗಳು, ಕಬ್ಬಿನ ಹಾಲನ್ನು ತೆಗೆಯುವ ಯಂತ್ರ, ಕ್ಯಾಟಲಾಗಗಳು, ಬುದ್ಧಿಚಮತ್ಕೃತಿಗಳುಳ್ಳ ಪೆಟ್ಟಿಗೆ, ಹಿತ್ತಾಳೆಯ ಗುಂಡು ಕಬ್ಬಿಣದ ಉಂಗರುಗಳು ಸಹಿತವಾಗಿ, ಬೇರೆ ಬೇರೆ ಬಣ್ಣಗಳುಳ್ಳ ಪೆಟ್ಟಿಗೆ, ಗುರುತ್ವಮಧ್ಯ ಪಿಂಡುವನ್ನು ತೋರಿಸುವ ಯಂತ್ರ, ವರ್ಣಮಾಲೆಯ ಅಪೆಯುವಗಳ ಮಾದರಿಗಳು, ಇವಲ್ಲದೆ, ಜ್ಯೋತಿಷ, ರಸಾಯನ, ಗಣಿತ ಮೊದಲಾದ ವಿಷಯಗಳನ್ನು ಕಲಿಸುವದಕ್ಕೆ ಉಪಯುಕ್ತವಾದ ಉಪಕರಣಗಳೂ ನಮ್ಮಲ್ಲಿ ದೊರೆಯುವವು.

ಇದಕ್ಕೂ ಹೆಚ್ಚಿನ ಮಾಹಿತಿಯ ಬಗ್ಗೆ ನಮ್ಮ ಕ್ರಯದ ಪಟ್ಟಿಯನ್ನು ಕಳಿಸುವದಕ್ಕೆ ನಮಗೆ ಬರೆದರೆ ಅದನ್ನು ಪುಕ್ಕಟೆಯಾಗಿ ಕಳಿಸುವೆವು. ವರ್ತಮಾನವಹಾರವನ್ನು ಇಂಗ್ಲಿಷದಲ್ಲಿ ಮಾಡಬೇಕು.

ನಮ್ಮ ಪೂರ್ಣ ವಿಳಾಸ:—

ಪಟೇಲ ಕಾಶೀಭಾಯಿ ಭಗವನದಾಸ

ಮ್ಯಾನೇಜರ, ಶಿಕ್ಷಣ ಸಾಹಿತ್ಯ ಕಾರ್ಯಾಲಯ,

ನಂದೋಲ

ಅಹಮದಾಬಾದ-ಪ್ರಾಂತಿಜ ರೇಲ್ವೆ.

1930ರ ಸಂಚಿಕೆ

ಇದು ಪುಟಿಲ್ಲ.